ಸಂಕ್ಷಿಪ್ತ

ಸ್ವಾತಂತ್ರ್ಯ ದಿನಾಂಕ ಗಳು 15,16-8-1957

ಭಾಗ 1 | ಬಳ್ಳಾರಿಯ ಸ್ವಾತಂತ್ರ್ಯ ಚರಿತ್ರೆ | ಸಂಪಾದಕರು ಮತ್ತು ಪ್ರಕಾಶಕರು
ಸಂಚಿಕೆ 1- 11 | ಅಚ್ಚಳಿಯದ ಹೆಜ್ಜೆಗುರುತುಗಳು !!! | ಓ. ಬಿ. ಈಶ್ವರಪ್ಪ





ಈ ಸ್ವಾತಂತ್ರ್ಯ ಪುಟಗಳನ್ನವಲೋಕಿಸಿ ಎಲ್ಲರಿಗೂ ನಮ್ಮ ಶುಭಾಶಯಗಳು

— ಮುಂದಿನ ಪುಟಕ್ಕಾಗಿ ನೋಡಿ —

ಪೂರ್ಣಚಂದ್ರ ಗೊಬ್ಬರ

— ಹಿಂಪೂನ್ತಾನ್ ಟ್ರೇಡಿಂಗ್ ಕಾರ್ಪೊರೇಷನ್ ಕೊಡುಗೆಯಾಗಿದೆ —

(1) ಮಾನವ ಜೀವನದ ಅನ್ನ, ವಸ್ತ್ರ ಮತ್ತು ಗೃಹಗಳನ್ನು ಉಂಟುಮಾಡಲು ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬೇಕಾಗಿದೆ. ಈ ಉದ್ದೇಶವನ್ನು ಸಾಧಿಸಲು ಪೂರ್ಣಚಂದ್ರ ಗೊಬ್ಬರವನ್ನು ಉಪಯೋಗಿಸಿರಿ. ಇದರಿಂದ ಬೆಳೆಯು ಹೆಚ್ಚಾಗಿ ಬರುವುದಲ್ಲದೆ ಭೂಮಿಯ ಫಲವತ್ತತೆಯೂ ಹೆಚ್ಚುತ್ತದೆ.

(2) ಇತರ ಗೊಬ್ಬರಗಳಿಗಿಂತಲೂ ಪೂರ್ಣಚಂದ್ರ ಗೊಬ್ಬರವು ಹೆಚ್ಚು ಲಾಭದಾಯಕವಾಗಿದೆ. ಏಕೆಂದರೆ ಇದರಲ್ಲಿ ಸಾರಜನಕ, ರಂಜಕಾಮ್ಲ ಮತ್ತು ಪೊಟ್ಯಾಷ್ ಈ ಮೂರು ಪೋಷಕಾಂಶಗಳು ಸಮಪ್ರಮಾಣದಲ್ಲಿ ಇರುವುದರಿಂದ ಬೆಳೆಗಳಿಗೆ ಅವಶ್ಯಕವಾದ ಪೋಷಕಾಂಶಗಳು ಸಮಪ್ರಮಾಣದಲ್ಲಿ ದೊರೆಯುತ್ತವೆ. ಈ ಗೊಬ್ಬರವು ಪೈರಿಗೆ ಅವಶ್ಯಕವಾದಷ್ಟು ಮಾತ್ರ ಪೋಷಕಾಂಶಗಳನ್ನು ಕೊಡುವುದರಿಂದ ಪೈರು ಹೆಚ್ಚು ಸೊಂಪಾಗಿ ಬೆಳೆಯುವುದಿಲ್ಲ. ಆದ್ದರಿಂದ ಪೈರಿಗೆ ರೋಗ ಬರುವ ಸಂಭವವು ಕಡಿಮೆ.

(3) ಕಿಸಾನ್ ಪ್ರಚಾರ ಪಡೆಯವರು ಅಲ್ಲಲ್ಲಿ ಪ್ರವಾಸ ಮಾಡಿ ಪೂರ್ಣಚಂದ್ರ ಗೊಬ್ಬರವನ್ನು ಉಪಯೋಗಿಸುವ ವಿಧಾನವನ್ನು ರೈತರಿಗೆ ತಿಳಿಸಿಕೊಡುತ್ತಾರೆ. ಪೂರ್ಣಚಂದ್ರ ಗೊಬ್ಬರವನ್ನು ಉಪಯೋಗಿಸಿ ಅಧಿಕ ಲಾಭವನ್ನು ಪಡೆದಿರುವ ರೈತರ ಹೆಸರುಗಳನ್ನು ಎಲ್ಲರಿಗೆ ತಿಳಿಸಲಾಗುವುದು. ಇದಕ್ಕಾಗಿ ಪ್ರತಿವರ್ಷ ಬಹುಮಾನ ಕೊಡುವ ಏರ್ಪಾಡು ಮಾಡಲಾಗಿದೆ.

(4) 221 160 ಕಾರ್ಖಾನೆಯ ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ಉತ್ಪಾದಿಸಿರುವ ಪೂರ್ಣಚಂದ್ರ ಗೊಬ್ಬರವು ಇತರರಿಗಿಂತ ಆಕರ್ಷಕವಾಗಿದೆ

ಬಳ್ಳಾರಿಯ ಸಂಗ್ಯಾಡಿಕೇರಿ ಎರ್ರಪ್ಪ ಎಂಬ ಮಹಾಮಾನ್ ಸಜ್ಜನವಂತ ಭಾವಿ ಸ್ವಾತಂ

ನಮ್ಮ ಮಾತೃ ಭೂಮಿಯ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿ, ವೀರಸ್ವರ್ಗ ಪಡೆದ ಯೋಧರಿಗೆಲ್ಲಾ ನಮ್ಮ ಶ್ರದ್ಧಾಂಜಲಿಗಳು!!

—ಆದರೆ—

- ನಮ್ಮ ಜೀವನ ಮಟ್ಟದ ಏರಿಕೆಗಾಗಿ....
- ವ್ಯಾಪಾರೋದ್ಯಮಗಳ ಬೆಳವಣಿಗೆಗಾಗಿ....
- ನಿರುದ್ಯೋಗದ ನಿವಾರಣೆಗಾಗಿ....
- ಮಕ್ಕಳ ಉತ್ತಮ ವಿದ್ಯಾಭ್ಯಾಸಕ್ಕಾಗಿ....
- ಉತ್ತಮ ಮಟ್ಟದ ವಸತಿ ಸೌಕರ್ಯ ಹಾಗೂ ಆರೋಗ್ಯ ಭಾಗ್ಯಗಳಿಗಾಗಿ....
- ರಾಷ್ಟ್ರದ ಬೆಂಗೋಲಾಗಿರುವ ಹಲವಾರು ವಿದ್ಯುತ್ ಹಾಗೂ ನೀರಾವರಿ ಯೋಜನೆಗಳಿಗಾಗಿ....
- ಪ್ರತಿವರ್ಷವೂ ಉಕ್ಕಿ ಬರುವ ನದಿಗಳ ನೀರಿನಿಂದಾಗುವ, ಜನ-ಜಾನುವಾರು ಹಾಗೂ ಸ್ವತ್ತುಗಳ ನಷ್ಟವನ್ನು ತಪ್ಪಿಸಿ, ಅಂಥ ನೀರನ್ನು ದೇಶದ ಕಲ್ಯಾಣಕ್ಕಾಗಿ ಪರಿವರ್ತಿಸಲು ಅನೇಕ ಅಣೆಕಟ್ಟುಗಳ ನಿರ್ಮಾಣಕ್ಕಾಗಿ....
- ಸಮೂಹಾಚಾರ, ಸಂಚಾರ ಮತ್ತು ಸಾರಿಗೆ ಸೌಕರ್ಯಗಳನ್ನು ಶೀಘ್ರಗೊಳಿಸಲಿಕ್ಕಾಗಿ....
- ನಿಗರ್ಗ, ಕಡಲ ಹಾಗೂ ಪ್ರಾಣಿಸಂಪತ್ತುಗಳ ಸಂವೃದ್ಧಿಗಾಗಿ....
- ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳ ಉದ್ಧಾರಕ್ಕಾಗಿ....

— ಚುಟುಕಾಗಿ —

- ನಮ್ಮ ರಾಷ್ಟ್ರದಲ್ಲಿ ಮನೆಮಾಡಿರುವ ಕಡು-ಬಡತನವನ್ನು ಜಾಡಿಸಿ, ರಾಷ್ಟ್ರದ ಸರ್ವಾಂಗೀಣ ಬೆಳವಣಿಗೆಗಾಗಿ....

ನಮ್ಮ ಜನತಾ ಸರ್ಕಾರದ ಪಂಚವಾರ್ಷಿಕ ಯೋಜನೆಗಳಿಗೆ ನಮ್ಮ ಅಳಿಲು ಸೇವೆ ಸಲ್ಲಿಸುವುದೇ ನಮ್ಮ ಈಗಿನ ಆದ್ಯಕರ್ತವ್ಯ;—

ಇದಕ್ಕೆ ಅತ್ಯುತ್ತಮ ಸಾಧನವೇ ಬೇಂಕುಗಳು- ಅವುಗಳು ಕೈಗೊಳ್ಳುವ ಹಲವಾರು ಉಳಿತಾಯ ಯೋಜನೆಗಳಲ್ಲಿ ಯೋಗ್ಯವಾದುದೊಂದನ್ನು ಆರಿಸಿ, ಕೂಡಿದಷ್ಟು ಹಣ ಸಂಗ್ರಹಿಸಿ ಮಾತೃ ಭೂಮಿಗಾಗಿ ನಿಮ್ಮ ಕರ್ತವ್ಯ ಪಾಲನೆಯ ಪಣವನ್ನು ಇಂದೇ ತೊಡಿರಿ!

ಇದಕ್ಕಾಗಿ ನೀವು ಬಯಸುವ ಯಾವತ್ತು ಸಹಾಯ-ಸಹಕಾರಗಳನ್ನು ನಿಮಗೆ ಸಂತೋಷ ಪೂರ್ವಕ ಸಲ್ಲಿಸಲು "ಕಾರ್ಪೋರೇಶನ್" ಬೇಂಕು ತನ್ನ 48 ಶಾಖೆಗಳ ರಾಷ್ಟ್ರವ್ಯಾಪ್ತಿಯಂತ ಏಜೆನ್ಸಿ ವಿಭಾಗಗಳ ಮೂಲಕ ಯಾವಾಗಲೂ ಸಿದ್ಧವಿದೆ! ಇಂದೇ ನಿಮಗೆ ಸೇವೆ ಸಲ್ಲಿಸುವ ಸದವಕಾಶವನ್ನು ಈ ಬೇಂಕಿಗೆ ದಯವಿಟ್ಟು ಒದಗಿಸಿರಿ!!

ದಿ ಕೆನರಾ ಬೇಂಕಿಂಗ್ ಕಾರ್ಪೋರೇಷನ್ ಲಿಮಿಟೆಡ್ [ಸ್ಥಾಪನೆ ೧೯೦೬]

ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

೫೧ ವರ್ಷಗಳ ಅಗಾಧ ಅನುಭವ ಮತ್ತು ೬,೦೦,೦೦,೦೦೦ ರೂಪಾಯಿಗಳಿಗೂ ಮಿಗಿಲಾದ ಶಕ್ತ-ಸಂಪತ್ತುಗಳು ಈ ಬೇಂಕಿಗಿದ್ದು, ನಮ್ಮ ಕರ್ನಾಟಕದ ಪೆಡೂಲ್ಡ್ ಬೇಂಕುಗಳಲ್ಲೆಲ್ಲಾ ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟ ಕೀರ್ತಿಯು ಇದರದಾಗಿದೆ!!

ಇದರ ಬಳ್ಳಾರಿ ಶಾಖೆ—ಜುಮ್ಮಾಮಸೀದಿ ರಸ್ತೆ, ಬ್ರೂಸ್‌ಪೇಟೆ.

Nava Bharat
EDITOR—T. B. KESHAVA RAO.

ಸೋಮವಾರ, 12—8—57

— ಭಾರತ ಸ್ವಾತಂತ್ರ್ಯ—ಪತ ವರ್ಷಿಕೋತ್ಸವ —

ಇಂದಿನ ರಲ್ಲಿ ಮುಖ್ಯವಾದ ಸಂತರ ಆಡಳಿತದಿಂದ ಮುಕ್ತವಾಗಬೇಕೆಂ ಸ್ವಾತಂತ್ರ್ಯವೀರರೂ, ಪ್ರತಿಪಕ್ಷದ ಯರೂ ಆದ ರಫಾಸ್ಲಿಲಕ್ಷ್ಮೀಬಾಯಿ. ಶಾತ್ಮಾಜೋಷಿ, ನಾ ನಾ ಸಾ ಹೇ ಸಂ ದೆ ಮಹಪೀಯರ ನೇ ತೃತ್ವದಲ್ಲಿ ಸ್ವಾತಂತ್ರ್ಯಯುದ್ಧವು ವ್ಯಾಪಂಭವಾಗಿ 1857 ರಲ್ಲಿ ಅಂದರೆ 90 ವರ್ಷಗಳ ತರ ನಮಗೆ ಸ್ವಾತಂತ್ರ್ಯವು ಲಭ್ಯವಾ ಗಿ, 1957 ರಲ್ಲಿ ಸ್ವಾತಂತ್ರ್ಯೋದ್ಯಮ ತವಾರ್ಷಿಕೋತ್ಸವವನ್ನು ನೆಂಬೇನಸ ಂದು ಶ್ರೀ ನೆಹರ್ರು ಸರ್ಕಾರವು ನಿರ್ಧ ರಿಸಿರುವುದು ಯೋಗ್ಯವೂ ಆದರ್ಶದ ಯಕ ವೂ ಆಗಿದೆ. ನಾಡಿನ ಮುಕ್ತಿಗಾಗಿ 1857-1957 ರ ಶತಮಾನದಲ್ಲಿ ಸರ್ವ ಪ್ರಯತ್ನಗಳಿಂದ ಶ್ರಮಿಸಿ ತ್ಯಾಗ ಮಾಡಿ, ಬಲಿದಾನ ಮಾಡಿ, ಸ್ವಾತಂತ್ರ್ಯವನ್ನು ತಂದುಕೊಟ್ಟ ಮಹಾನುಭಾವರಿಗೆ ನಮ್ಮ ಪಾಮಿಕ ಶ್ರದ್ಧಾಂಜಲಿಗಳನ್ನು ಸಮರ್ಪಿಸುತ್ತೇವೆ.

ರಕ್ತಪೂತ ಕ್ರಾಂತಿಯಿಂದಾರಂಭವಾಗಿ ಗಾಂಧೀಜೀಯ ಅಹಿಂಸಾತ್ಮಕವೂ ಆದ ಕ್ರಾಂತಿಯಿಂದ ನಮಗೆ ಸ್ವರಾಜ್ಯವು ದೊರೆತಿದ್ದು, ವಿಶ್ವದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿರಲು ಯೋಗ್ಯವಾಗಿದೆ. ಶಕ್ತ ಸುಸಜ್ಜಿತವಾದ ಬ್ರಿಟಿಷ್ ಸಾಮ್ರಾಜ್ಯದ ಎದುರಾಗಿ ಸತ್ಯಾಗ್ರಹ ಮಾರ್ಗವನ್ನು ಅನುಸರಿಸಿ ಸ್ವಾತಂತ್ರ್ಯವನ್ನು ಗಳಿಸಿದ ಭಾರತೀಯರು ನಮ್ಮ ನಾಯಕರಾದ ನೆಹರೂರವರಿಗೇ ಪಟ್ಟಾಭಿಷೇಕ ಗಿದೆ. ಭಗವಂತನು ಅವರಿಗೆ ದೀರ್ಘಾಯುವನ್ನು ಕೊಟ್ಟು ಅವರ ಸೇವೆಯು ಬಹು ಕಾಲ ಧಾರಕ್ಕೆ ಪ್ರಾಪ್ತವಾಗುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಈ 10 ವರ್ಷಗಳಲ್ಲಿ ಪ್ರಥಮ ಪಂಚವಾರ್ಷಿಕ ಪ್ರಣಾಳಿಕೆಯು ಮುಗಿದು, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 1 ವರ್ಷವು ಕಳೆದಿದೆ. ರಾಷ್ಟ್ರದ ಆರ್ಥಿಕ ಪ್ರಗತಿಯು ಭಿನ್ನ-ಭಿನ್ನ ರಂಗಗಳಲ್ಲಿ ಮುಂದುವರಿದಿದೆ. ಪರದೇಶಗಳಿಂದ ನಮ್ಮ ದೇಶಕ್ಕೆ ಒರುತ್ತಿದ್ದ ಕೈಗಾರಿಕಾ ರಂಗಸಾಮಗ್ರಿಗಳ ಆಂದಾಮಟ್ಟಿಗೆ ತಗ್ಗಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಅಂದರೆ ಒಟ್ಟಿನ ಶಾಲೆಗಳು, ಶಿಕ್ಷಕರು, ಎಲಿಮೆಂಟರಿ ಸಾಮಗ್ರಿಗಳನ್ನು ಪೂರೈಸಿ ಬೇಡಿಕೆಗಳಿಗೆ ನಿಯರ್ಗತವಾಗಿ ನಮ್ಮ ಆರ್ಥಿಕದಲ್ಲಿ ವಿಶೇಷ ಪರಿಣಾಮವು ರೂಪುಗೊಳ್ಳುತ್ತಿದೆ. ಇನ್ನು 10-15 ವರ್ಷಗಳಲ್ಲಿ ಭಾರತವು ಆರ್ಥಿಕ ದೃಷ್ಟಿಯಿಂದ ಪೂರ್ಣ ಸ್ವಾವಲಂಬಿಯಾಗಿ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವೂ ಪೂರ್ಣವಾಗುತ್ತದೆ. ಭಾರತವು ಭಿನ್ನ ಭಿನ್ನ ಪಾಡ ಸಂಸ್ಥಾನೀ ಅರಸರ ಆಡಳಿತದಿಂದ ಮುಕ್ತವಾಗಿ ಏಕಸೂತ್ರತೆಯನ್ನು ಹೊಂದಿ, ಭಾಷಾವಾರು ದೃಷ್ಟಿಯಿಂದ ನಿರ್ಮಾಣವಾದ ಪ್ರಾಂತಗಳನ್ನು ಹೊಂದಿ ಕೇಂದ್ರವು ಸುಭದ್ರವಾದ ಮತ್ತು ಪುಷ್ಟವಾದ ಆಡಳಿತ ಶಕ್ತಿಯನ್ನು ಹೊಂದಿದೆ.

ಈ ಹತ್ತು ವರ್ಷಗಳಲ್ಲಿ ನಾವು ಸಾಧಿಸಿದುದು ಎಷ್ಟು ಮಹತ್ವವಾಗಿರುವುದೋ, ಉದ್ಭವವಾಗಿರುವ ಸಮಸ್ಯೆಗಳೂ ಅಷ್ಟೇ ಮಹತ್ವವಾಗಿವೆ. ರಾಷ್ಟ್ರ ವಿಘಾತಕ ಶಕ್ತಿಗಳು ಬಲಗೊಳ್ಳುತ್ತಿವೆ. ಯಾವ ಕಾಂಗ್ರೆಸ್ ಸಂಸ್ಥೆಯಿಂದ ಸ್ವರಾಜ್ಯ ಸಂಪಾದನೆಯಾಯಿತೋ, ಆ ಸಂಸ್ಥೆಯಲ್ಲಿ ಸ್ವಾರ್ಥಸಾಧಕರು ಹೆಚ್ಚಿ ಎಲ್ಲಪ್ರಾಂತಗಳಲ್ಲೂ ಯಜಮಾನಿಕೆಗಾರಂಭವಾಗಿವೆ. ಜಾತೀಯತೆ, ಧರ್ಮಾಂಧತೆಗಳು ಗಾಂಧೀಜೀಯ ಕಾಲದಲ್ಲಿ ಮಾಯವಾಗಿದ್ದು ಅವರ ಕಾಲಾನಂತರ ಈಗ ಪ್ರತಿಯೊಂದು ಊರಿನಲ್ಲೂ ತಲೆಯೆತ್ತಿವೆ. ಸರ್ಕಾರದ ಭಿನ್ನ ಭಿನ್ನ ಇಲಾಖೆಗಳಲ್ಲಿ ಸಡಿಲತೆ, ಔದಾಸೀನ್ಯ, ಕರ್ತವ್ಯ ಪರಾಂಗ ಮುಖತೆ, ತಮ್ಮ ನೇಲಧಿಕಾರಿಗಳ ಮೇಲೆ ಸಂಧೆಯ ಪ್ರವೃತ್ತಿಯು ಹೆಚ್ಚಿ ಲಂಚ ರುಶ್ವತ್ತುಗಳಂತೂ ಕೆಲಸವನ್ನು ಸಾಗುವಂತೆ ನ್ಯಗ್ರೋಧರವಾಗುತ್ತಿವೆ. ಪ್ರಜೆಗಳಲ್ಲಿ ಪರಸ್ಪರ ಸಹಕಾರ, ಸಹಾನುಭೂತಿಗಳು ಕಡಮೆಯಾಗಿ ಎಲ್ಲವೂ ಸರ್ಕಾರದಿಂದಲೇ ಸಾಧಿಸಿಕೊಡಬೇಕೆಂಬ ಭಾವನೆಯು ಬೇರೂರುತ್ತಿದೆ. ನಮ್ಮ ವಿದ್ಯಾವಂತ ಯುವಕರು ನಿರುದ್ಯೋಗಿಗಳಾಗಿ ದಿಕ್ಕೆಟ್ಟು ಆಲೆಯುತ್ತಿರುವುದು ಭಾರತದಲ್ಲಿ ಜನ ಸಂಖ್ಯೆಯು ಅಮಿತವಾಗಿ ಬೆಳೆಯುತ್ತಲಿದೆ.

ಈ ರಾಷ್ಟ್ರ ವಿಘಾತಕ ಶಕ್ತಿಗಳನ್ನೆಲ್ಲ ಸಮರ್ಥವಾಗಿ ಎದುರಿಸಿ ಸಹಕಾರ ಮತ್ತು ಜನತೆಯಲ್ಲಿ ಪರಸ್ಪರ ವಿಶ್ವಾಸ, ತಿಳಿವಳಿಕೆ, ಸಹಕಾರ ವೃತ್ತಿಯನ್ನುಗ್ರಾಮಾಂತರ ಸಮಾಜ ಮುಖಂಡರು ಕಾರ್ಯಪ್ರವೃತ್ತರಾಗಬೇಕು. ಸರ್ಕಾರದಿಂದ ಜನಜೀವನವು ಮುಕ್ತವಾಗಿ ಸ್ವಾಮಿಗಳ ಜೀವನವು ಬಿಡದಂತಿಗೂ, ಮನೆಯವರಿಗೂ ಕಷ್ಟಕರವಾಗಿ ಭಾಸವಾಗುತ್ತಲಿದೆ. ಹಣದುಬ್ಬರತೆಯಾಗಬೇಕೆಂದೆ ಜನರು ತಮ್ಮ ಜೀವನಾವಶ್ಯಕ ಬೇಡಿಕೆಗಳನ್ನು ಕಡಮೆಮಾಡಿಕೊಂಡು ಹಣವನ್ನೆಳಸುತ್ತ ಹೋಗಬೇಕು. ಸರ್ಕಾರದ ಕಾಗದ ಹಣ (Paper Currency)ಕ್ಕೂ ಸಂಗ್ರಹದಲ್ಲಿನ ಭೂಮಿಯಾರಕ್ಕೂ ತಾರತಮ್ಯವಿಲ್ಲದೆ ಭಾರತದ ರೂಪಾಯಿ ಬೆಲೆಯು ಇಳಿಮುಖವಾಗಿ ನಡೆದಿದೆ. ಉತ್ಪನ್ನವು ಹೆಚ್ಚಿ ಉಳಿತಾಯ ಜನಜೀವನದ ಪಟ್ಟಿಯು ಸುಸ್ಥಿರವಾಗಿ, ದ್ವಿತೀಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿಯು ಸರ್ಕಾರ ಮತ್ತು ಜನತೆಯ ಮೇಲಿರಬೇಕು.

Telephone: Office 37 Residence 37 Tel Varalakshmi Bellary

Vattam Narayanappa Chetty & Sons
BANGALORE ROAD BRUCEPETTAH
BELLARY 2

IRON HARDWARE & CEMENT MERCHANTS
Registered Stock-Holders of: Iron & Steel
Stockists: The Cement Marketing Co. of India (private) Ltd.
FOR BALLARY DISTRICT & ANANTAPUR
Asbestos Cement (Private) Limited
The Standard Brick & Tile Co., (Yelahanka) LTD
The Avery Co., LTD (For Beam Scales)
Dealers in Sanitary & Building Materials

ಕ್ರೋಧ ಹಾಗೂ ಅದರ ದಮನದ ಪರಿಣಾಮ

ಅನುವಾದ: ಬಳ್ಳೂರು ಸುಬ್ರಾಯ ಆಡಿಗ, ಗಂಗೊಳ್ಳಿ

["ಬಡವನ ಕೋಪದವಡೆಗೆ ತಾಪ" ಎಂಬೊಂದು ಅಂಬೋಣವಿದೆ. ಪ್ರಬಲ ಕೋಪದ ಪ್ರಖರ ಪ್ರಭಾವದ ಪ್ರಕರ್ಷ ಪರಿಣಾಮ ಪ್ರಕಾಂಡಾನಂತರದಲ್ಲಿಯೇ ಪ್ರಜ್ಞೆಗೆ ಬರುವಂತಹದ್ದಾದರೂ ಅದುತ್ಪನ್ನ ಕ್ರೋಧದ ಕುರಿತಾದ ಕಠಿಜ್ಞಾನ ಹಾಗೂ ಅದರ ದಮನದ ದಾರಿಯ ಪರಿಣಾಮಗಳ ಪರಿಜ್ಞಾನ ಅವರ ಬರೆಹವಿದು ಪ್ರಶಸ್ತವಾಗಿದ್ದು, ಪಠನೀಯವಿದೆ. —ಸಂ.]

ಕ್ರೋಧವೆಂಬುದು ವಿನಾಶಕಾರೀ ಮನಸಿನ ಭಾವನೆ. ಕ್ರೋಧವು ಒಮ್ಮೆ ಕಾಟ್ಟಿತೆಂದರೆ ಅದು ಯಾವ ದಾದ ರೊಂದು ರೀತಿಯಲ್ಲಿ ಯಾರ ಮೇಲಾದರೂ ಪ್ರಕಟವಾಗಲೇ ಬೇಕು ತ್ತದೆ. ಕೋಪವು ವಿವಿಧವಾದ ಕಲವೊಮ್ಮೆ ಬದಲಾಗುವುದೂ ಉಂಟು ನೇವಕನು ತನ್ನ ಯಜಮಾನನಿಂದ ಬೈಸಿಕೊಂಡಾಗ, ತನ್ನ ಕೋಪವನ್ನು ಹೆಂಡತಿಯ ಮೇಲೆ ತೀರಿಸಿಕೊಳ್ಳುತ್ತಾನೆ. ಸಯಗಳೆರಡು ಪರಸ್ಪರರಾಗಿ ಕಾದಾಡುತ್ತ ನಿಟ್ಟುಗೊಂಡಾಗ ಅವುಗಳಲ್ಲೊಂದು ತಪ್ಪಿಸಿಕೊಂಡರೆ ಎರಡನೇ ನ[illegible] ಸಂಯಕ್ಷಾಸ್ತ್ರವು ಮತ್ತೊಬ್ಬನಿಗೇ ಬಿಚ್ಚಬಹುದಷ್ಟೆ. ಕೋಪವನ್ನು ಪ್ರಾಣಿಕ ಸಡಿಸಲು ಬೇರಾವ ಆಧಾರವೂ ದೊರೆಯದಿದ್ದಾಗ ಅದನ್ನು ಮನುಷ್ಯನು ತನ್ನ ಮೇಲೆಯೇ ಎರೆದುಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿ ಅವನು ಸ್ವತಃ ತನ್ನ ದೇಹಕ್ಕಾಗಲೀ ಮನಸ್ಸಿಗಾಗಲೀ ಹಾನಿಯನ್ನುಂಟುಮಾಡಿಕೊಳ್ಳುತ್ತಾನೆ. ಎಷ್ಟೋ ಜನರು ನಿಷ್ಠುರವೇಳೆ ತಮ್ಮ ತಲೆಯನ್ನು ಕೈಗಳಿಂದ ಜಜ್ಜಿಕೊಳ್ಳುವುದುಂಟು. ಅನೇಕರು ತಲೆಯನ್ನು ನೆಲಕ್ಕೆ ಅಪ್ಪಳಿಸಿಕೊಳ್ಳುವರು. ಅಂಥಾ ಗ್ಗೆ ಕೋಪ ತಾಳುವ ಮನುಷ್ಯ ತನ್ನ ದೌರ್ಬಲ್ಯವನ್ನು ಇತರರ ಮೇಲೆ ಅದನ್ನು ಪ್ರಯೋಗಿಸಲು ಸಮರ್ಥನಾದರೆ ಆಗ ಅವನು ಶರೀರದಿಂದಲೂ ಮರ್ಕಟನಾಗುತ್ತಾನೆ. ಹೀಗೆ ಅವನ ಕ್ರೋಧವು ಅವನನ್ನೇ ತಿನ್ನಲಾರಂಭಿಸುತ್ತದೆ.

ಕೆಲವೊಮ್ಮೆ ಕೋಪ ಪ್ರಕಟನೆಗೆ ಸಂದರ್ಭವೇ ಸಿಗದಿದ್ದರೆ ಮನುಷ್ಯನಿಗೆ ಭಯಂಕರ ಶಾರೀರಿಕ ರೋಗವಾಗುತ್ತದೆ. ಇದರಿಂದ ಆಗಾಗ್ಗೆ ಮೂರ್ಛೆ ಬರುವುದೂ ಉಂಟು. ಈ ವಿಚಾರವಾಗಿ ಲೇಖಕನ 10 ವರ್ಷ ವ್ಯಾಯದ ತಂಗಿಯ ಕೋಪ ಉಲ್ಲೇಖನೀಯವಾಗಿದೆ.

ಲೇಖಕನಿಗೆ 10 ವರ್ಷದ ಶಾಂತಿಯೆಂಬ ತಂಗಿಯಿದ್ದಳು. ಕೊಸ ಬಟ್ಟೆ ತೊಟ್ಟು ಶಾಲೆಗೆ ಹೋಗಬಯಸಿದಳು. ಅದರೆ ಅವಳೊಮ್ಮೆ ಬಳಿಯಲ್ಲಿ ಹಣವಿರಲಿಲ್ಲ. ತಾಯಿಯೆಷ್ಟು ಸಮಜಾಯಿಸಿದರೂ ಅವಳೊಪ್ಪಲಿಲ್ಲ. ಲೇಖಕನು ಯಾವ ಕೋಪವನ್ನು ತಡೆಹಿಡಿಯಲಾಗುತ್ತದೆಂದು ಮೇಲಿನ ಉದಾಹರಣೆಗಳಿಂದ ನೀವೆಲ್ಲರಿತಿರಬಹುದು- ಈ ತೆರದ ದಮನದಿಂದ ಹೀಗೆ ಕೈ ಹೆಚ್ಚಿನ ಧಕ್ಕೆ ತಗಲುತ್ತದೆ. ಆದರೆ ನೈತಿಕತೆಯಿಂದುಂಟಾದ ಕೋಪವನ್ನು ತಡೆಹಿಡಿದರೆ ಅದರಿಂದ ಮನಸ್ಸು ಪ್ರಕ್ಷಿಪ್ತವಾಗಿ ಅನೇಕತರದ ಮಾನಸಿಕ ಚಿಕಿತ್ಸೆಯು ಲೇಖಕನೊಬ್ಬನ ಅನುಭವ ಉಲ್ಲೇಖನೀಯವಾಗಿದೆ:

ಲೇಖಕನ ನಿರೋಗಿ ಶಿಷ್ಯೆಯೊಬ್ಬಳು ಅವನ ಬಳಿ ತನ್ನ ಮಾನಸಿಕ ವ್ಯಥೆಯನ್ನು ಹೇಳಬಂದಳು. ತನಗೆ ಕ್ಷಯರೋಗ ತಗಲುವುದೆಂದು ಅವಳ [illegible] ತ್ತು. ಅವಳು ತನ್ನ ದೇಹವನ್ನು ಅನೇಕ ಡಾಕ್ಟರರಿಂದ ಪರೀಕ್ಷೆ ಮಾಡಿಸಿದಳು. ಆದರೆ ಯಾರೂ ಕ್ಷಯರೋಗವುಂಟಾದೀ ತೆಂಬ ಸಂದೇಹ ಸೂಚಿಸಲಿಲ್ಲ. ಅದರೂ ಕ್ಷಯರೋಗದ ವಿಚಾರ ಅವಳ ಮನದಿಂದ ದೂರಾಗಲಿಲ್ಲ. ಅವಳು ತನ್ನೊಬ್ಬ ಸಂಗಾತಿಯೊಂದಿಗೆ ಜಗಳಾಡಿದ್ದರೆಂದೂ ಶಿಷ್ಟಾಚಾರಕ್ಕಾಗಿ ಅವಳು ತನ್ನ ಕೋಪವನ್ನು ಗೆಳತಿಯ ಮೇಲೆ ಪ್ರಕಟಿಸದಾದ ಕೆಂದೂ ಅವಳ ಮನಸ್ಸಿನ ಅಧ್ಯಯನದಿಂದ ಲೇಖಕನಿಗೆ ಗೊತ್ತಾಯಿತು. ಅಷ್ಟೇ ಅಲ್ಲದೆ ಅವಳಿಗೆ ಆತ್ಮಗ್ಲಾನಿಯೂ ಉಂಟಾಗತೊಡಗಿತು. ಈ ಆತ್ಮಗ್ಲಾನಿಯ ಭಂವನೆಯನ್ನು ಕಡಿಮೆಮಾಡಿದುದರಿಂದ ಕ್ಷಯರೋಗದ ವಿಚಾರವು ಸಂದೇಹರೂಪವಾಗಿ ಅವಳ ಮನದಲ್ಲುಂಟಾಯಿತು. ಅವಳು ಆ ಕುವಿಚಾರವನ್ನು ತನ್ನ ಮನದಿಂದ ಕೊರದೂಡಲು ಯತ್ನಿಸಿದಷ್ಟೂ ಅದು ಹೆಚ್ಚು ಹೆಚ್ಚು ಪ್ರಬಲವಾಗುತ್ತ ಹೋಗುತ್ತಿತ್ತು.

ಈ ಮಹಿಳೆಯನ್ನು ಉಪಚರಿಸುವುದಕ್ಕಾಗಿ ಮೊತ್ತ ಮೊದಲು ಗೆಳತಿಯ ಮೇಲೆ ಕೋಪಗೊಳ್ಳುವುದು ಸ್ವಾಭಾವಿಕವಾದುದೆಂದೂ ಅದಕ್ಕಾಗಿ ಆತ್ಮಗ್ಲಾನಿ ಮಾಡಿಕೊಳ್ಳಬಾರದೆಂದೂ ತಿಳಿಸಲಾಯಿತು. ಮನುಷ್ಯನೇನೂ ದೇವತೆಯಲ್ಲ. ಆದ್ದರಿಂದ ಪ್ರಕೃತಿ ನಿಯಮವನ್ನು ಲಂಘಿಸಲಾರ. 'ನಮಗೆ ಯಾರಾದರೂ ಪೆಟ್ಟುಕೊಡದಿದರೆ ಅವನ ಮೇಲೆ ಕೋಪಿಸುವುದು ಸ್ವಾಭಾವಿಕವೇ'—ಎಂದೂ ತಿಳಿಯಹೇಳಿ ಶಾಂತಾಯ ವಿಷಯವಾಗಿ ಮೈತ್ರೀಧಾವನೆಯನ್ನು

ಳಕೆಯಬೇಕೆಂದು ಸೂಚಿಸಲಾಯಿತು. ಇದರಿಂದ ಅವಳ ಮಾನಸಿಕರೋಗ ಕೊನೆಗೊಂಡಿತು.

ಇನ್ನೊಬ್ಬ ಹೆಂಗಸಿನ ಕಾಲು ವಿಪರೀತ ಸುಡುತಿತ್ತು. ಅದಕ್ಕೆ ಬಾಹ್ಯ ಕಾರಣವೇನೂ ಕಾಣಿಸುತ್ತಿರಲಿಲ್ಲ. ಆ ವಿಚಾರವಾಗಿ ಹಿಂದಿನ ಅನುಭವಗಳಿದ್ದರೆ ಹೇಳಬೇಕೆಂದು ಆಜ್ಞಾಪಿಸಲಾಯಿತು. ತಾನು ಬೇರೊಬ್ಬ ಮಹಿಳೆಯನ್ನು ಪುತ್ಸರಿಸುತ್ತಿದ್ದೇನೆಂದು ಆತ್ಮಪರೀಕ್ಷೆಯಿಂದ ಅವಳಿಗೆ ತಿಳಿಯಿತು. ಅವಳು ಆ ಮತ್ಸರವನ್ನು ತಡೆದಿಟ್ಟುಕೊಂಡಿದ್ದಳು. ಅದನ್ನವಳು ಒಪ್ಪಿದ ಮೇಲೆ ಆ ನೋವು ಮಾಯವಾಯಿತು.

ಮೇಲಿನ ಉದಾಹರಣೆಗಳಿಂದ ಕೋಪವು ಮನದಲ್ಲುಳಿಂಟಾಗುವುದೇ ಕೆಡುಕೆಂದು ಗೊತ್ತಾಗುತ್ತದೆ. ಆದರೆ ಕೋಪದ ವಿಕಾರವು ಒಮ್ಮೆ ಮನದಲ್ಲುಂಟಾಯಿತೆಂದರೆ ಅದು ಯಾವುದಾವರೂ ರೀತಿಯಿಂದ ಹೊರಹೊಮ್ಮುವುದೇ ಒಳಿತು. ಇದರಿಂದ ಮನುಷ್ಯನಿಗೆ ಹಾನಿ ಸಂಭವಿಸುವುದಾದರೂ ಅದನ್ನು ತಡೆಹಿಂಡಿಯುವುದರಿಂದುಂಟಾಗುವಷ್ಟು ಹಾನಿಯಾಗುವುದಿಲ್ಲ. ತಡೆಹಿಡಿದ ಸಿಟ್ಟು ವ್ಯಕ್ತಿಯು ಮಾನಸಿಕ ಹಾಗೂ ಕಾರ್ಯಿಕ ಹಾನಿಗೆ ಕಾರಣವಾಗುತ್ತದೆ. ಇದರಿಂದಲೇ ಮನುಷ್ಯನು ನಿರುತ್ಸಾಹಿಯೆನಿಸುತ್ತಾನೆ.

ಕೋಪದ ದುಷ್ಪರಿಣಾಮಗಳನ್ನು ತಪ್ಪಿಸಿಕೊಳ್ಳಬಯಸುವ ಮನುಷ್ಯರು ಅದನ್ನು ಬರಗೊಡಿಸಲೇ ಬಾರದು. ಅದಕ್ಕಾಗಿ ವಿಷಯಭೋಗಗಳ ತ್ಯಾಗ ಮೂಲಕ ವ್ಯಷ್ಟಿಪಂಚಾಗ್ನಿಗಳಲ್ಲಾ ಪ್ರಾಣಿಗಳ ಕುರಿತು ವೈಶ್ವಾನರಾಗ್ನಿಯು ಅದನ್ನು ನಂದಿಸುವ ನೀರಿನ ಟಾಂಕಿ. ಟಾಂಕಿಯಲ್ಲಿ ನೊಪಲೇ ನೀರಿದ್ದರೆ ಸಿಂಕಿತಗಲಿದೊಡನೆಯೇ ನಂದಿಸಬಹುದಷ್ಟೆ. ಸಾಧಾರಣ ಜನರು 'ಮನೆಗೆ ಬೆಂಕಿ ಹತ್ತಿದಾಗ ಬಾವಿಕೋಡು ವಂತೆ' ಕೋಪವುಂಟಾದ ಮೇಲೆಯೇ ಅದನ್ನು ತಡೆಯಲೆತ್ನಿಸುತ್ತಾರೆ. ಇದೇ ಎಲ್ಲ ಅನರ್ಥಗಳಿಗೂ ಕಾರಣವಾಗಿದೆ.

ಧಾನ್ಯಗಳ ಬೆಲೆ ಮತ್ತು ಚಲನೆ ಮೇಲೆ ಹತೋಟಿ ಅಗತ್ಯ

"ನಮ್ಮ ದೇಶದಲ್ಲಿ ಆಹಾರ ಧಾನ್ಯಗಳ ಬೆಲೆಯು ಮಿತಿಯ ಅಂಚಿನಲ್ಲಿಯೇ ಉಳಿದಿರುವಷ್ಟು ಕಾಲವೂ ಧಾನ್ಯಗಳ ಬೆಲೆ, ವಾಸಾಮ ಮತ್ತು ಸಾಗಾಣಿಕೆ ಇವುಗಳ ಮೇಲೆ ಒಂದು ರೀತಿಯ ಹತೋಟಿ ಇದ್ದೇ ಇರಬೇಕಾಗುವುದು"

—ಎಂಬುದಾಗಿ ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸಿದರು

ಪತ್ರಿಕಾ ಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳು, ಕಾರ್ಮಿಕ ಮುಖಂಡರುಗಳು ಇವರುಗಳ ಸಭೆಯೊಂದನ್ನು ಸಚಿವರು ತಮ್ಮ ನಿವಾಸದಲ್ಲಿ ಕರೆದಿದ್ದರು. ಆ ಸಭೆಯಲ್ಲಿ ಅವರು ಮಾತನಾಡುತ್ತಾ "ಕೆಳಮಟ್ಟದ ಮಧ್ಯಮ ವರ್ಗದ ಜನರೂ, ಕಾರ್ಮಿಕ ವರ್ಗದ ಜನರೂ ಆಹಾರ ಧಾನ್ಯಗಳ ಮತ್ತು ಅಗತ್ಯ ಪದಾರ್ಥಗಳ ಮೇಲಿನ ಹತೋಟಿಗೆ ಪೂರ್ಣವಾಗಿ ಬೆಂಬಲವಾಗಿ ನಿಲ್ಲಿದಿದ್ದಲ್ಲಿ ಸರಕಾರ ಹತೋಟಿಯನ್ನು ಜಾರಿಗೆ ತರಲು ಸಾಧ್ಯವಾಗುವುದಿಲ್ಲ" ಎಂದು ನುಡಿದರು.

ಮಧ್ಯಮ ವರ್ಗದ ಜನರ ಕರ್ತವ್ಯ

"ಇಂದು ಮಧ್ಯಮವರ್ಗದ ಜನರು ಆಹಾರ ಧಾನ್ಯಗಳ ಹತೋಟಿಗೆ ವಿರೋಧವಾಗಿದ್ದಾರೆ. ಸಂಕ, ತೆರಿಗೆ, ಹಣದುಬ್ಬರ ಮುಂತಾದುವುಗಳ ಬಗ್ಗೆ ಅವರು ಸರಕಾರವನ್ನು ಆಕ್ಷೇಪಿಸುತ್ತಾ ಕೂಡುವ ಬದಲು ಆಹಾರ/ಧಾನ್ಯಗಳ ಬೆಲೆಯ ಹತೋಟಿ ಮಾಡುವಂತೆ ಸರಕಾರವನ್ನು ಒತ್ತಾಯ ಪಡಿಸಿದಲ್ಲಿ ಸರ್ಕಾರದಿಂದ ಅವರ ಕಡೆಗೆ ಅನುಕೂಲವಾದ ಪ್ರತಿಕ್ರಿಯೆ ಬರುವುದು. ಹತೋಟಿಯೆಂದೆ ಕೇವಲ ಬೆಲೆಯ ಮೇಲಿನ ಪರಿಣಾಮವಷ್ಟೇ ಮಾತ್ರವಲ್ಲ. ವಲಯಗಳಲ್ಲಿ ಧಾನ್ಯಗಳ ಚಲನೆಯ ಬಗ್ಗೆ ಹತೋಟಿ, ಧಾನ್ಯ ಸಂಗ್ರಹಣೆ ಮೇಲೆ ಹತೋಟಿ, ಮುಂತಾದವೂ ಸೇರುವುವು.

ಬೆನ್ನು ಪತ್ತಿದ ಭೂತವೇನು !

"ಹತೋಟಿಗೆ ಮಧ್ಯಮ ವರ್ಗದ ಮತ್ತು ಕಾರ್ಮಿಕ ವರ್ಗದ ಜನರು ಹಿಂದಿದ್ದಲ್ಲಿ ಆ ಭೂತವನ್ನೆದಿನಿಗೂ ನಿವಾರಿಸಲು ಸಾಧ್ಯವಾಗದು. ಒಂದಲ್ಲ ಒಂದು ಸಾರಿ ಅದನ್ನು ಎದುರಿಸಲೇ ಬೇಕಾಗುವುದು". ಎಂದು ಶ್ರೀ ಟಿ. ಕೆ. ತಿಳಿಸಿದರು.

ಆಹಾರ ಧಾನ್ಯಗಳ ಬೆಲೆಯನ್ನು ನಿರ್ಧರಿಸಿ, ಸಾರ್ವಜನರುಗಳಿಗೆ ತುಟ್ಟಿ ಭತ್ಯೆ ಹೆಚ್ಚಿಸಬೇಕೆಂದು ಒಂದು ಸೂಚನೆ ಬಂದಿತ್ತು. ಆ ಸೂಚನೆ ಬಗ್ಗೆ ಸಚಿವರು ಪ್ರಸ್ತಾಪಿಸುತ್ತಾ, ಹಾಗೆ ಮಾಡುವ ಬದಲು ಧಾನ್ಯಗಳ ಬೆಲೆಯನ್ನು ಕೆಳಮಟ್ಟದಲ್ಲಿ ನಿರ್ಧರಿಸಿ ಹತೋಟಿಯಲ್ಲಿಡುವುದು ಯುಕ್ತ ಮಾರ್ಗ" ಎಂದು ಹೇಳಿದರು.

ಧಾನ್ಯಗಳ ಬೆಲೆ ಹೆಚ್ಚುವುದರಿಂದ ಕಾರ್ಮಿಕರ ಮತ್ತು ಕೆಳ ಮಧ್ಯಮ ವರ್ಗದ ಜನರ ಜೀವನ ವಿಚಿತ್ರ ಹೆಚ್ಚುತ್ತದೆ. ಈಗ ಬೆಲೆ ಹೆಚ್ಚಾಗಿರುವುದೇನೋ ನಿಜ. ಆದರೆ ಕಳೆದ ಸೆಪ್ಟೆಂಬರ್‌ನಿಂದ ಅದು ಅಷ್ಟಾಗಿ ಹೆಚ್ಚಿಲ್ಲ—ಎಂದವರು ತಿಳಿಸಿದರು.

ಸಕ್ಕರೆ ಮೇಲೆ ಹತೋಟಿ

ಸದ್ಯಕ್ಕೆ ಸಕ್ಕರೆಯ ಮೇಲೆ ಒಂದು ರೀತಿಯ ಹತೋಟಿಯನ್ನು ತರಲು ಸರಕಾರ ಆಲೋಚಿಸುತ್ತಿದೆಯೆಂದು ಅವರು ಸೂಚನೆಯಿತ್ತರು.

ಹಣದುಬ್ಬರವು ಆಹಾರ ಧಾನ್ಯದ ಪರಿಸ್ಥಿತಿಯಿಂದ ಉಂಟಾಗುವ ಸೂಚನೆ ಕಾಣಬರುತ್ತಿದೆಯೆಂದೂ ಸರಕಾರವು ಅದಕ್ಕಾಗಿ ಈಗ ಸಾಕಷ್ಟು ಧಾನ್ಯಗಳನ್ನು ಹೊಂದಿರುವಂತೆ ಆಮದು ಮಾಡುತ್ತಿದೆಯೆಂದೂ ಹೇಳಿದರು.

ಆದರೆ ಆಕ್ಕಿಯನ್ನು ಹೊರದೇಶಗಳಿಂದ ತರಿಸುವುದು ಕಷ್ಟವೆಂದವರು ಸ್ಪಷ್ಟಪಡಿಸಿದರು.

ನಿವೆಂಗಿದು ಗೊತ್ತೆ?

(1) 1955–56 ರಲ್ಲಿ ಭಾರತ ಸರಕಾರದ ಒಟ್ಟು ತೆರಿಗೆ ಹಣವು (ಅದಾಯ ತೆರಿಗೆಗಳ ರಾಜ್ಯಗಳ ಭಾಗ ಮತ್ತು ಎಸ್ಟೇಟ್ ತೆರಿಗೆಯನ್ನುಳಿದು) 428 ಕೋಟಿ ರೂಗಳಷ್ಟಿದ್ದಿತು. 1956–57 ರ (ಪರಿಷ್ಕೃತ ಮತ್ತು 57–58 (ಬಜೆಟ್) ಒಟ್ಟು ತೆರಿಗೆಯ ಅಂದಾಜುಗಳು ಕ್ರಮವಾಗಿ 495 ಮತ್ತು 515 ಕೋಟಿ ರೂಗಳು

(2) 55–56 ರಲ್ಲಿ ಭಾರತ ಸರಕಾರವು ತೆರಿಗೆ ಹಣವಷ್ಟೆ ಆ ವರ್ಷದಲ್ಲಿ ಒಟ್ಟು ರೆವಿನ್ಯೂನಲ್ಲಿ ಶೇ. 85 ರಷ್ಟಿತ್ತು. ಇದು 1938–39 ರಲ್ಲಿ ಶೇ. 89 ರಷ್ಟು 44–45 ರಲ್ಲಿ ಶೇ. 79 ರಷ್ಟು ಮತ್ತು 1950–51 ರಲ್ಲಿ ಶೇ. 87 ರಷ್ಟು ಇತ್ತು

(3) ತೆರಿಗೆಯಲ್ಲದ ರೆವಿನ್ಯೂನಲ್ಲಿ ಸ್ವಾರಸ್ಯವಾದ ಅಂಗವೆಂದರೆ! "ಸರಕಾರಿ ಸಂಸ್ಥೆಗಳ ನಿವ್ವಳ ಚಂದಾ" (ರೈಲ್ವೇಗಳು, ಅಂಚೆ ಮತ್ತು ತಂತಿ, ಕರೆನ್ಸಿ ಮತ್ತು ಟಂಕಸಾಲೆ ಇತ್ಯಾದಿಗಳೂ ಸೇರಿ). ಇದು 1938–39 ರಲ್ಲಿ 1 8 ಕೋಟಿ ರೂಗಳು 44–45 ರಲ್ಲಿ 42 2 ಕೋಟಿ ರೂಗಳು 55–56 ರಲ್ಲಿ 26 7 ಕೋಟಿ ರೂಗಳು ಮತ್ತು 56–57 ರಲ್ಲಿ 23 ಕೋಟಿ ರೂಗಳೂ ಇದ್ದಿತು.

೧೮೫೭ ರ ಸ್ವಾತಂತ್ರ್ಯ ಸಂಗ್ರಾಮದ ಮಹಾ ವೀರ:

ತಾತ್ಯಾ ಟೋಪಿ

ತಾನಾಗಿ ಗಲ್ಲಿನ ಮರ ಹತ್ತಿ ವೀರಸ್ವರ್ಗ ವೇರಿದ ಕೆಚ್ಚೆದೆಯ ಹುತಾತ್ಮ

ಅವರ ಮರಣ ದಂಡನೆ ರದ್ದಿಗಾಗಿ ಬ್ರಿಟಿಷ್ ಮಹಿಳೆಯರೇ ಅಪೀಲು ಹೂಡಿದ್ದರು

ಭಾರತದ ಸ್ವಾತಂತ್ರ್ಯ ಕೋಟಾಟದ ವೀರರಲ್ಲಿ ತಾತ್ಯಾ ಟೋಪಿಯ ವ್ಯಕ್ತಿತ್ವವು ಉನ್ನತ ಮಟ್ಟದಲ್ಲಿ ಮೆರೆಯುತ್ತಿದೆ. ಅವರ ಜೀವನ ಚರಿತ್ರೆಯೇ ಒಂದು ಸ್ಫೂರ್ತಿದಾಯಕ ಸಾಹಸದ ಕಥೆ.

ತಾತ್ಯಾ ಟೋಪಿಯವರ ಜೀವನ ಘಟನೆಗಳು ಸ್ವಾತಂತ್ರ್ಯದ ಇತಿಹಾಸದ ಮೇಲೆ ಶಾಶ್ವತವಾದ ಪ್ರಭಾವವನ್ನು ಬೀರಿವೆ. ಮಿಲಿಟರಿ ಕುಶಾಗ್ರಮತಿಗಳಾದ ಅವರು, ತಮ್ಮ ಸಾಹಸ ದಂಡಯಾತ್ರೆಗಳಿಂದಲೂ ಅದ್ಭುತ ಪರಾಕ್ರಮದಿಂದಲೂ, ಸೈನ್ಯ ಕಲೆಯಲ್ಲಿ ಸುಶಿಕ್ಷಿತರೂ ಅನುಭವಿಶಾಲಿಗಳೂ ಆಗಿದ್ದ ಬ್ರಿಟಿಷ್ ಜನರಲ್‌ಗಳನ್ನೇ ದಂಗುಬಡಿಸಿದರು.

ಗ್ವಾಲಿಯರ್‌ಗೆ ಕೆಲವು ಮೈಲುಗಳ ದೂರದಲ್ಲಿ ಪಿಪ್ರಿ ಎಂಬ ಸಣ್ಣ ಪಟ್ಟಣವಿದೆ. ಇಲ್ಲಿ 1859 ರ ಏಪ್ರಿಲ್ 18 ನೇ ತಾರೀಕು ಸಂಜೆ 5 ಗಂಟೆ ಸುಮಾರಿನಲ್ಲಿ ತಾತ್ಯಾ ಟೋಪಿಯನ್ನು ಗಲ್ಲಿಗೇರಿಸಲಾಯಿತು. ಆತ ಸೈರ್ಯದಿಂದಲೂ ಗಾಂಭೀರ್ಯದಿಂದಲೂ ಗಲ್ಲಿಗೆ ಏರವನ್ನೇರಿದರು. ಹಾಗೆ ಅಂತ್ಯಪಡೆಮೆಟ್ಟಿಲನ್ನವರು ಏರುತ್ತಿದ್ದಾಗ, ತಮ್ಮ ಜೀವನವನ್ನು ಸಾರ್ಥಕವಾಗಿ ಬಾಳಿರುವೆನೆಂಬ ಆತ್ಮ ವಿಶ್ವಾಸ ಅವರಲ್ಲಿದ್ದಿತು.

'ಸಾವಿನ ಮರವನ್ನು ನಾನೇ ಏರುತ್ತೇನೆ'

ತಾತ್ಯಾ ಟೋಪಿಯ ಕೈಗೆ ಕಟ್ಟಿದ್ದ ಸಂಕೋಲೆಗಳನ್ನೂ ಮೈಗೆ ಕಟ್ಟಿದ್ದ ಸರಪಣಿಗಳನ್ನೂ ಬಿಚ್ಚಿದಾಗ "ನಾನೇ ಗಲ್ಲಿನ ಮರವನ್ನು ಏರುತ್ತೇನೆ; ನನ್ನ ತೆರೆದ ಕಣ್ಣುಗಳನ್ನು ಬಟ್ಟೆ ಕೊಂಡೇ ನನ್ನ ಅಂತ್ಯವನ್ನು ಆಲಂಗಿಸುತ್ತೇನೆ" ಎಂದು ದೃಢವಾಗಿ ಅವರು ಹೇಳಿದರು.

ತಾಳೆ ಅವರು ತೆರೆದ ಕೈಗಳಿಂದ ಸಾವನ್ನಪ್ಪಿದಾಗ ಸಹಸ್ರಾರು ಜನರು—ಅವರಲ್ಲಿ—ಅನೇಕ ಇಂಗ್ಲೀಷಿನವರೂ ಇದ್ದರು; ಅವರಿಗೆ ವೀರಸಹಜ ಶ್ರದ್ಧಾಂಜಲಿ ಸಲ್ಲಿಸಿದರು. ಅವರನ್ನು ಜನರಲ್ ಮಿಡ್ಲ್‌ಟನ್ ರವರು ಗಲ್ಲಿಗೇರಿಸುತ್ತಿದ್ದಾಗ ಕೆಲವು ಇಂಗ್ಲೀಷ್ ಮಹಿಳೆಯರು ಅವರಿಗೆ ಸದ್ಗತಿ ದೊರಕಲೆಂದು ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡಿದರು.

ಮಿಡ್ ಮತ್ತು ಅವರ ಸೈನಿಕರು ಕಳೇಬರವನ್ನು ಅಲ್ಲಿಯೇ ಬಿಟ್ಟು, ಸ್ಥಳದಿಂದ ಹೊರಟುಹೋದಾಗ, ಇಂಗ್ಲೀಷ್ ಮಹಿಳೆಯರು ಶವದ ಬಳಿ ತೆರಳಿ ತಾತ್ಯಾ ಟೋಪಿಯ ತಲೆಗೂದಲಿನ ಕುರುಳನ್ನು ಕತ್ತರಿಸಿಕೊಂಡು, ಈ ಮಹಾ ವ್ಯಕ್ತಿಯ ಚಿರಸ್ಮರಣೆಗಾಗಿ ತಮ್ಮ ಹಾರದಲ್ಲಿ ಧರಿಸುವ ಸ್ವರ್ಣ ಸಂಪುಟದಲ್ಲಿಟ್ಟುಕೊಂಡರು.

ಈ ವೀರ ಸಹಜ ಅಂತ್ಯಕ್ಕೆ ಮೊದಲು ನಡೆದ ಘಟನಾವಳಿಗಳು ರೋಮಾಂಚಕವಾದವು.

ಸಾಬೀತು ಮಾಡಲಾಗದ ಆಪಾದನೆಗಳು

ಮಿಲಿಟರಿ ಕೋರ್ಟಿನ ಮುಂದೆ ತಾತ್ಯಾ ಟೋಪಿಯವರನ್ನು ವಿಚಾರಣೆ ಮಾಡಿದಾಗ ಅವರ ಮೇಲೆ ಹೊರಿಸಿದ ಆಪಾದನೆಗಳು ಮೂರು: (1) ರಾಜದ್ರೋಹ; (2) ಯುದ್ಧ ಹೂಡಿದರೆಂಬ ಆಪಾದನೆ; (3) ಕಾನ್‌ಪುರದಲ್ಲಿ ನಿರಪರಾಧಿ ಇಂಗ್ಲೀಷ್ ಹೆಂಗಸರನ್ನೂ ಮಕ್ಕಳನ್ನೂ ಕೊಲೆ ಮಾಡಿದರೆಂಬ ಆರೋಪ.

ಮೊದಲನೆಯ ಎರಡು ಆಪಾದನೆಗಳಿಗೆ ಶ್ರೀ ತಾತ್ಯಾ ಟೋಪಿಯವರು ಕೊಟ್ಟ ಉತ್ತರ ದೇಶಭಕ್ತರಿಗೆ ಸಹಜವಾದುದು; ಮೂರನೆಯ ಆಪಾದನೆಯನ್ನು ಸಾಬೀತು ಮಾಡಲು ಸಾಕ್ಷ್ಯವಾವುದೂ ದೊರಕದೆ, ಜನರಲ್ ಮಿಡ್ಲ್‌ಟನ್‌ರೇ ಹಿಂತೆಗೆದುಕೊಳ್ಳಬೇಕಾಯಿತು. ಅಷ್ಟೇ ಅಲ್ಲ, ಈ ಆಪಾದನೆ ಸುಳ್ಳೆಂದು ರುಜುವಾತು ಮಾಡುವ ಸಾಕ್ಷ್ಯವನ್ನು ಕೊಡಲು ಇಂಗ್ಲೀಷ್ ಮಹಿಳೆಯರು ತಾವಾಗಿಯೇ ಮುಂದೆ ಬಂದರು.

ತಾತ್ಯಾ ಟೋಪಿಯವರು ಮೊದಲನೆ ಎರಡು ಆಪಾದನೆಗಳಿಗೆ ಕೊಟ್ಟ ಉತ್ತರಗಳು ಇಂದಿಗೂ ಬಹಳ ಸ್ವಾರಸ್ಯಪೂರ್ಣವಾಗಿವೆ; ಮೊದಲನೆ ಆಪಾದನೆಗೆ ಅವರು ಕೊಟ್ಟ ಉತ್ತರವು ವಿ. ಎ. ಎ. ಬಂದಿಗಳ ಮೇಲಿನ ಆಪಾದನೆಗೆ ದಿವಂಗತ ಭೂಲಾಭಾಯ್ ದೇಸಾಯಿಯವರು ಕೊಟ್ಟ ಪ್ರಖ್ಯಾತ ಉತ್ತರವನ್ನು ನೆನಪಿಗೆ ತರುವುದು.

ತಾತ್ಯಾ—ಟೋಪಿಯವರು ಹೇಳಿದ್ದು ಹೀಗೆ:

"ನಾನೆಂದಿಗೂ ಬ್ರಿಟಿಷ್ ಪ್ರಜೆಯಲ್ಲ; ಬ್ರಿಟಿಷರು ನನ್ನ ಯಜಮಾನರೆಂದು ನಾನೆಂದಿಗೂ ಒಪ್ಪಿಕೊಂಡಿಲ್ಲ. ಬ್ರಿಟಿಷರೇ ನೋ ದೇಶ ಆಕ್ರಮಿಸಿಕೊಂಡಿರಬಹುದು ಆದರೆ ಅವರ ಆಡಳಿತಾಧಿಕಾರವನ್ನು ನಾನು ಯಾವಾಗಲೂ ಒಪ್ಪಿಕೊಂಡಿಲ್ಲ. ನನ್ನ ನಿಷ್ಠೆಯಿರುವುದೆಲ್ಲಾ ಪೇಷ್ವೆಗಳಿಗೇ ಹೊರತು, ಬ್ರಿಟಿಷರಿಗಲ್ಲ. ಆದ್ದರಿಂದ ನನ್ನ ಮೇಲೆ ರಾಜದ್ರೋಹದ ಆಪಾದನೆ ಹಾಕುವಂತೆಯೇ ಇಲ್ಲ."

ಎರಡನೆ ಆಪಾದನೆಗೆ ಅವರು ಕೊಟ್ಟ ಉತ್ತರವು ಪ್ರಭಾವಶಾಲಿಯಾಗಿತ್ತು. "ಯುದ್ಧ ಹೂಡಿದೆನೆಂದು ನೀವು ನನ್ನನ್ನು ಆಪಾದಿಸುವುದು, ನಿಮಗೂ ಅನ್ಯೇ; ಅನ್ಯಾಯಿಸುತ್ತದೆ. ನೀವೇನು ನನ್ಮ ಮೇಲೆ ಯುದ್ಧ ಹೂಡಿಲ್ಲವೇನು? ಹಾಗಿದ್ದರೆ, ನನಗೆ ಕೊಡುವ ಶಿಕ್ಷೆಯನ್ನೇ ನಿಮಗೂ ವಿಧಿಸಿಕೊಳ್ಳಿ".

ಫಿರಂಗಿ ಬಾಯಿಗೆ ಕಟ್ಟಿ ಕೊಲ್ಲಿರೆಂದು ಕೋರಿಕೆ

"ನಾನು ತಪ್ಪು ಮಾಡಿದ್ದೇನೆಂದು ನೀವು ತೀರ್ಮಾನಿಸಿ ಮರಣದಂಡನೆ ವಿಧಿಸುವುದಾದರೆ, ನನ್ನನ್ನು ಫಿರಂಗಿಯ ಬಾಯಿಗೆ ಕಟ್ಟಿ ಗುಂಡುಹಾರಿಸಿ ಬಿಡಿ" ಎಂದು ದಾಗಿ ವೀರೋಚಿತವಾದ ಮರಣ ಭಿಕ್ಷೆಯನ್ನು ದೈರ್ಯದಿಂದ ಕೇಳಿಕೊಂಡರು ತಾತ್ಯಾ ಟೋಪಿ.

ಅವರ ವಿರುದ್ಧವಾಗಿ ಮಿಲಿಟರಿ ಕೋರ್ಟಿನ ಮುಂದೆ ಮಂಡಿಸಲಾದ ಕೇಳಿಕೆಯು ಅವರ ಮೇಲಿನ ಯಾವ ಆಪಾದನೆಯನ್ನೂ ರುಜುವಾತು ಮಾಡಲಿಲ್ಲ.

ತಾತ್ಯಾ ಟೋಪಿಯವರು ಕೊಟ್ಟ ಅಲ್ಲಗಳೆಯಲಾದ ಉತ್ತರಗಳಿಗೆ ಏನು ಜವಾಬು ಕೊಡಬೇಕೆಂಬುದೇ ಜನರಲ್ ಮಿಡ್ಲ್‌ಟನ್‌ರಿಗೆ ತೋಚದಂತಾಯಿತು. ತಾತ್ಯಾ ಟೋಪಿಯವರ ಮಿಲಿಟರಿ ಚಾಣಾಕ್ಷತೆಯ ಬಗ್ಗೆ ಇಂಗ್ಲೀಷ್ ಮಹಿಳೆಯರೇ ತೋರಿಸುತ್ತಿದ್ದ ಮೆಚ್ಚುಗೆ ಅಭಿಮಾನಗಳೂ ಮತ್ತು ವಿಚಾರಣೆಯ ಕಾಲದಲ್ಲಿ ತಾತ್ಯಾ ಟೋಪಿಯವರು ಪ್ರದರ್ಶಿಸಿದ ಧೈರ್ಯಸ್ಥೈರ್ಯಗಳೂ ಮಿಡ್ ರನ್ನು ಚಿಂತಾಸಂತಪ್ತರನ್ನಾಗಿ ಮಾಡಿದವು.

ಮಂತ್ರಗಾರರೆಂಬ ಹೆದರಿಕೆ!

ತಾತ್ಯಾ ಟೋಪಿಯವರಿಗಿದ್ದ ವರ್ಚಸ್ಸು, ಶಕ್ತಿಯನ್ನು ಕಂಡು ಮಿಡ್‌ರಿಗೆ ಗಾಬರಿಯಾಗಿತ್ತು. ಭಾರತೀಯ ಸೈನಿಕರ ಮೇಲೆ ಅವರೇನೋ ಮಂತ್ರ ಶಕ್ತಿ ಬೀರುತ್ತಿದ್ದಾರೆಂದೂ, ಅದ್ದರಿಂದಲೇ ಬಂಡಾ

ಯವೆದ್ದ ಸೈನಿಕರು ಅವರ ನಾಯಕತ್ವಕ್ಕೆ ಒಳಗಾಗುತ್ತಿದ್ದಾರೆಂದೂ, ಹೀಗಿರುವಾಗ ತಾತ್ಯಾ ಟೋಪಿಯವರನ್ನು ಮುಗಿಸಿದ ಹೊರತು ಬ್ರಿಟಿಷರಿಗೆ ಉಳಿಗಾಲವಿಲ್ಲವೆಂದೂ ಮಿಡ್ ಟೌನ್ ಕೈಬಂದರು.

ಆದ್ದರಿಂದ ಮಿತಿಮೀರಿದ ಆತುರದಿಂದ ಮಿಡ್ ವರ್ತಿಸಿದರು. ಯಾವ ಆಪಾದನೆಯನ್ನೂ ಸಾಕಷ್ಟು ರುಜುವಾತು ಮಾಡಲು ಮಿಡ್ ಆಶಕ್ತರಾಗಿದ್ದರೂ ಸಹಾ, ತಾತ್ಯಾ ಟೋಪಿಗೆ ಮರಣ ದಂಡನೆಯನ್ನು ಅವರು ವಿಧಿಸಿಯೇ ಬಿಟ್ಟರು. ಅಷ್ಟೇ ಅಲ್ಲ, ಅವರನ್ನು ಗಲ್ಲಿಗೇರಿಸುವುದಕ್ಕೂ ತರಾತುರಿ ಮಾಡಿದರು.

ಅನೇಕ ಇಂಗ್ಲೀಷ್ ಮಹಿಳೆಯರು ಮಿಡ್‌ರ ಬಳಿ ಹೋಗಿ, ತಾತ್ಯಾ ಟೋಪಿಗೆ ವಿಧಿಸಲಾದ ಶಿಕ್ಷೆ ಕ್ರೂರವಾದುದೆಂದೂ ಅನ್ಯಾಯವಾದುದೆಂದೂ ಪ್ರತಿಭಟಿಸಿ, ಅದನ್ನು ರದ್ದುಪಡಿಸುವಂತೆ ಮನವಿ ಮಾಡಿಕೊಂಡರು. ಆದರೆ ಮಿಡ್ ನಿರ್ಧಾರ ಬದಲಾಯಿಸಲಿಲ್ಲ. ಅನಂತರ ಮಹಿಳೆಯರು ಆಗಿನ ಗವರ್ನರ್-ಜನರಲ್ ಲಾರ್ಡ್ ಕ್ಯಾನಿಂಗ್‌ರ ಬಳಿಗೆ ನಿಯೋಗ ಹೋಗಿ ಮರಣ ದಂಡನೆಯ ರದ್ದಿಗಾಗಿ ಪ್ರಾರ್ಥಿಸಿಕೊಂಡರು.

ಗಲ್ಲಿಗೇರಿದ ಆದರೆ ಮಾನವೀಯ ಹೋರಾಟಗಾರ ಹೃದಯವೊಂದು!

ಗವರ್ನರ್-ಜನರಲ್‌ರು ಮರಣ ದಂಡನೆಯನ್ನೇನೋ ರದ್ದು ಮಾಡಿದರು; ಆದರೆ ಅಷ್ಟರಲ್ಲಿ ಮಿಡ್ ತಾತ್ಯಾ ಟೋಪಿಯವರನ್ನು ಗಲ್ಲಿಗೇರಿಸಲ್ಪಟ್ಟು ಎರಡು ದಿನಗಳ ನಂತರ!

ಇಂಗ್ಲೀಷ್ ಮಹಿಳೆಯರು ನಿಯೋಗ ಬಂದು ಬ್ಲಿಸಿದ್ದ ಮನವಿಗೆ ಲಾರ್ಡ್ ಕ್ಯಾನಿಂಗ್‌ರಿಂದ ಉತ್ತರ ಬರುವವರೆಗೆ ಕಾಯಲೂ ಮಿಡ್‌ರು ಸಿದ್ಧರಾಗಿರಲಿಲ್ಲ; ಅತುರಾತುರವಾಗಿ ತಾತ್ಯಾ ಟೋಪಿಯನ್ನು ಗಲ್ಲಿಗೇರಿಸಿದರು. ಅನಂತರ ಅವರ ಶಿಕ್ಷೆಯ ರದ್ದಿಗೆ ಆಜ್ಞೆ ಹೊರಟಿತೆಂಬ ಸುದ್ದಿ ಕೇಳಿದ ಮೇಲಂತೂ ಇಂಗ್ಲೀಷ್ ಜನರಲ್ಲಿ ತಾತ್ಯಾ ಟೋಪಿಯ ಬಗ್ಗೆ ಗೌರವ ಸಹಾನುಭೂತಿಗಳು ಅಧಿಕವಾದವು.

ಇಂತಹ ಐತಿಹಾಸಿಕ ಹಿನ್ನೆಲೆಯಲ್ಲಿ ತಾತ್ಯಾ ಟೋಪಿಯವರ ವ್ಯಕ್ತಿತ್ವದ ವಿಮರ್ಶೆ ಮಾಡಿದಾಗ ಅವರ ಅಪಾರ ಮಾನವೀಯತೆ, ಅಪ್ರತಿಮ ಪರಾಕ್ರಮ ಮತ್ತು ಶೌರ್ಯ ಸಾಹಸಗಳ ಬಗ್ಗೆ ಸಮಗ್ರ ಭಾರತೀಯರಿಗೂ ಅಭಿಮಾನ ಮೂಡುವುದು; ದೇಹ ಪುಲಕಿತವಾಗುವುದು.

ಮಾನವೀಯತೆಯ ಸಾಗರ

ತಾತ್ಯಾ ಟೋಪಿಯವರು ಎಲ್ಲದಕ್ಕಿಂತಲೂ ಹೆಚ್ಚಾಗಿ ಮಾನವೀಯತೆಯ ಸಾಗರವಾಗಿದ್ದರು. ಮಾನವಾಂತಃಕರಣದ ಪ್ರತಿಪಾದಕರಾಗಿದ್ದರು. ಅಂದಿನ ರಕ್ತ ಸಿಂಚಿತ ಕಾನ್‌ಪುರ ಪ್ರಕರಣದ ಉದ್ರೇಕದ ವಾತಾವರಣದಲ್ಲೂ ಸಹಾ ಅವರು ಮಾನವೀಯತೆಯ ಧ್ವಜವನ್ನು ಎಷ್ಟು ಧೈರ್ಯದಿಂದ ಮೇಲೆತ್ತಿ ಹಿಡಿದಿದ್ದರೆಂಬುದನ್ನು ಸತ್ಯಾಂಶಗಳು ರುಜುವಾತುಪಡಿಸುವುವು.

ಇಂಗ್ಲೀಷ್ ಹೆಂಗಸರು ಮಕ್ಕಳ ರಕ್ಷಣೆಯ ಬಗ್ಗೆ ನರ್ ಹ್ಯೂ ವೀಲರ್‌ರ ಜತೆಯಲ್ಲಿ ತಾತ್ಯಾ ಟೋಪಿಯವರು ಮಾಡಿಕೊಂಡ ಒಪ್ಪಂದವು ನಿಜವಾಗಿಯೂ ಅವರ ಅಪ್ರತಿಮ ಸಾಧನೆ. ಸ್ವಾತಂತ್ರ್ಯ ಸಂಗ್ರಾಮಕ್ಕೂ, ಸಾಮೂಹಿಕ ಕಗ್ಗೊಲೆ, ಅತ್ಯಾಚಾರ, ಹಿಂಸಾಚರಣೆಗಳಿಗೂ ಸಂಬಂಧ ಇರಬಾರದೆಂಬುದನ್ನು ಅವರು ಎತ್ತಿ ಹಿಡಿದು ಅದೇ ರೀತಿ ಕಾರ್ಯ ಪ್ರವೃತ್ತರಾದರು.

ತಾತ್ಯಾ ಟೋಪಿಯವರು ಮಾನವೀಯ ಅತ್ಯಾಚಾರ ಕೃತ್ಯಗಳಿಂದ ಖಂಡಿತ ದೂರವಿದ್ದರೆಂಬುದಕ್ಕೆ ಇಂಗ್ಲೀಷ್ ಮಹಿಳೆಯರೇ ಸಾಕ್ಷ್ಯವಿತ್ತಿದ್ದಾರೆ. ಇದರಿಂದ ಭಾರತದ ಆ ಪ್ರಥಮ ಮಹಾ ಸಂಗ್ರಾಮದ ಅಂತಸ್ತು ಉಜ್ವಲ ಹಂತಕ್ಕೇರಿದೆ. ಕಾನ್‌ಪುರದಲ್ಲಿ ದಂಗೆ ಎದ್ದ ಭಾರತೀಯ ಸೈನಿಕರು ಅಲ್ಲಿನ ಆಸ್ಪತ್ರೆಯ ಸುತ್ತಲೂ ಮುತ್ತಿಗೆ ಹಾಕಿ ಇಂಗ್ಲೀಷ್ ಹೆಂಗಸರು ಮಕ್ಕಳನ್ನು ಹೊರಗೆ ಬಿಡದಂತೆ ಮೂರು ವಾರದವರೆಗೆ ಸುತ್ತುವರಿದಿದ್ದ ಕ್ಷುಬ್ಧ ವಾತಾವರಣದಲ್ಲಿ ಅವಿಚ್ಛಿನ್ನವಾಗಿ ಸುರಕ್ಷಿತವಾಗಿ ಹೊರ ಸಾಗಿಸುವ ಮಹಾ ಜವಾಬ್ದಾರಿ ತಾತ್ಯಾ ಟೋಪಿಯವರ ಮೇಲೆ ಬಿದ್ದಿತು. ಅಂದರೆ ಸಂಗ್ರಾಮದ ನಾಯಕತ್ವ ವಹಿಸಿದ್ದ ನಾನಾ ಸಾಹೇಬರೂ ಆದನ್ನೆದುರಿಸುತ್ತಿದ್ದ ಬ್ರಿಟಿಷರೂ ತಾತ್ಯಾ ಟೋಪಿಯವರಲ್ಲಿ ಎಷ್ಟು ನಂಬಿಕೆ ಇಟ್ಟಿದ್ದರೆಂಬುದು ಚೆನ್ನಾಗಿ ವ್ಯಕ್ತಪಡುವುದು. ಹೀಗೆ ಈ ನಾನೂರ ಐವತ್ತು ಮಂದಿ ಇಂಗ್ಲೀಷ್ ಹೆಂಗಸರು ಮಕ್ಕಳನ್ನೆ ತಾತ್ಯಾ ಟೋಪಿಯವರು ಶ್ರಮಪಟ್ಟು ರಕ್ಷಿಸಿದರಾದರೂ ಆ ಇಡೀ ತಂಡವನ್ನು ಗಂಗಾ ನದಿಯ ದಡದಲ್ಲಿ ಉದ್ರಿಕ್ತ ಜನರು ಕೊಂದುದು ವಿಷಾದದ ಸಂಗತಿ ಆದರೆ ಆ ಕಗ್ಗೊಲೆಗೆ ತಾತ್ಯಾ ಟೋಪಿಯವರ ಸಂಬಂಧವೇನೂ ಇರಲಿಲ್ಲವೆಂದು ಸ್ವತಃ ಇಂಗ್ಲೀಷ್ ಜನತೆಯು ಅವರ ವಿಚಾರಣೆ ಕಾಲದಲ್ಲಿ ಸಾಕ್ಷ್ಯವಿತ್ತಿತು.

ಮಿಲಿಟರಿ ಬುದ್ಧಿವಂತಿಕೆ

ತಾತ್ಯಾ ಟೋಪಿಯವರ ಕೈಯಲ್ಲಿ ಜನರಲ್ ವಿಂಡ್‌ಹ್ಯಾಮ್‌ರವರು ಹೃದಯವಿದ್ರಾವಕ ಸೋಲನ್ನು ಅನುಭವಿಸಿದುದು, ಅವರ ಮಿಲಿಟರಿ ಚಾಣಾಕ್ಷತೆಗೆ ಸಾಕ್ಷಿಯಾಗಿದೆ. ಈ ಬಗ್ಗೆ ಬ್ರಿಟಿಷ್ ಇತಿಹಾಸಕಾರರೇ ಮುಕ್ತಕಂಠದ ಪ್ರಶಂಸೆ ಸಲ್ಲಿಸಿದ್ದಾರೆ. ಅವರು ಈ ಮಿಲಿಟರಿ ಗ್ರಾಧಿಮೆಯನ್ನು ಎಲ್ಲಿ ಸಾಧಿಸಿದರೆಂಬುದು ಗೊತ್ತಿಲ್ಲ. ಏಕೆಂದರೆ ವೇಷ್ಟೆಯವರೆಗೆ ಉಳಿದೇರಿಯಲ್ಲಿ ಕೇವಲ ಒಬ್ಬ ಗುಮಾಸ್ತರಾಗಿದ್ದವರು ತಾತ್ಯಾ ಟೋಪಿ. ಆದರೆ ಅವರ ಗುಣ ಸಾಮರ್ಥ್ಯಗಳಿಗೆ ಮೆಚ್ಚಿ ಬಾಜೀರಾವ್ ಪೇಷ್ವೆಯವರು ಒಂದು ದಿನ ಒಂಭತ್ತು ಅಮೂಲ್ಯ ರತ್ನಗಳನ್ನು ಹಾಕಿದ ಟೋಪಿಯೊಂದನ್ನು ಅವರಿಗೆ ಇನಾಮಾಗಿ ಕೊಟ್ಟರು. ಅಂದಿನಿಂದಲೇ ಅವರ ಹೆಸರು ತಾತ್ಯಾ "ಟೋಪಿ" ಎಂದಾಯಿತು.

ಅವರು ಬಹು ಬೇಗ ಉನ್ನತ ಹುದ್ದೆಗೇರುತ್ತಾ ಹೋದರು. 1857 "ಸಿಪಾಯಿದಂಗೆ"ಯ ಸಿಪಾಯಿಗಳ ಬಲವೆಲ್ಲಾ ಮೂರು ತಿಂಗಳಲ್ಲಿ ಅಡಗಿಹೋಯಿತು. ಕಡೆಪಕ್ಷ ಕಾಮವಾಗಿ "ದಂಗೆ"ಯ ಹಿಂದಿದ್ದ ಪೇಷ್ವೆಗಳು ಕಾನ್ಪುರದಲ್ಲಿ ಇನ್ನು ಹೆಚ್ಚು ಕಾಲ ಉಳಿಯುವುದು ಸಾಧ್ಯವಿಲ್ಲವಾಯಿತು. ಇಂತಹ ವಿಷಮ ಕಾಲದಲ್ಲಿ ತಾತ್ಯಾ ಟೋಪಿ ಮುಂದಕ್ಕೆ ಬಂದು ತಾವೇ ಶಿಪಾಯಿದಂಗೆಗಳ ಜನರಲ್ ಎಂಬ ಅಧಿಕೃತ ಘೋಷಣೆಯನ್ನು ಪ್ರಕಟಿಸಿದರು. ಸ್ವತಃ ತಾವೇ ಸೈನಿಕರಾಗಿ ಯಾವ ಸೈನ್ಯವೂ ಇರಲಿಲ್ಲವಾದರೂ, ಚತುರತೆಯಿಂದ ದಂಗೆಕೋರ ಸೈನಿಕರನ್ನು ಸಂಘಟಿಸಿ ಅವರಿಗೆ ಶಿಸ್ತು ಕಲಿಸಿ ಅವರಲ್ಲಿ ಸ್ಫೂರ್ತಿ ತುಂಬಿ ಅವರನ್ನು ಸಮರೋತ್ಸಾಹಿಗಳನ್ನಾಗಿ ಮಾಡಿದರು. ಅವರ ಸೈನ್ಯವನ್ನು ಬ್ರಿಟಿಷ್ ಸೈನ್ಯವು ಎಲ್ಲೆಲ್ಲಿ ಎದುರಿಸಿತೋ ಅಲ್ಲೆಲ್ಲಾ ಅದನ್ನು ಸೋಲಿಸಿ ಹಿಮ್ಮೆಟ್ಟಿಸಿತು.

ಗೆರಿಲ್ಲಾ ಯುದ್ಧ ಕೌಶಲ್ಯ

ಇಂಗ್ಲೀಷ್ ಜನರಲ್‌ಗಳು ತಬ್ಬಿಬ್ಬಾದರು. ಸಮಯದ ಕಾಲ್ಪನಿಕೆಯನ್ನು ತಾತ್ಯಾ ಟೋಪಿ ಅರ್ಥಮಾಡಿಕೊಂಡಿದ್ದ ರೀತಿ ಅವರನ್ನೆಲ್ಲಾ ಸೋಲಿಸಿತು. ಅನಂತರ ಧೈರ್ಯ ಆವರಿಸಿದುಗ್ರವಾದ ಸೋಲಿಯಾನೆ ಕಾಲ್ಪನಿಕತೆಯನ್ನು ಹಿಡಿದ ಶಕ್ತಿಶಾಲಿ ತಾತ್ಯಾ ಟೋಪಿಯವರು ಅಲ್ಲಲ್ಲಿ ಸಜ್ಜಾಡಳಿತವನ್ನು ವಿಸ್ತರಿಸಿದ್ದರು. ಈ ಪುಟ್ಟ ರಾಜ್ಯವನ್ನು ಸ್ವಪರಿಪೂರ್ಣವಾಗಿ ಮಾಡಿ, ಪ್ರಜಾ ಮತ್ತು ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿದರು. ಅವರ ಮುಂದಿನ ಗುರಿ ಕಾನ್ಪುರವನ್ನು ಮತ್ತೆ ಗೆಲ್ಲುವುದೇ ಆಗಿತ್ತು.

ಎರಡು ವರ್ಷಗಳ ಕಾಲ ಅವರು ಪ್ರಬಲ ಬ್ರಿಟಿಷ್ ಸೈನ್ಯದವಿರುದ್ಧ ಪ್ರಭಾವಶಾಲಿ ಹೋರಾಟ ನಡೆಸಿದರು. ಯೂರೋಪಿನ ದಂಡಯಾತ್ರೆಗಳಲ್ಲಿ ಹೆಸರಾಗಿದ್ದ ಪ್ರಖ್ಯಾತ ಬ್ರಿಟಿಷ್ ಜನರಲ್ ವಿಂಡ್‌ಹ್ಯಾಮ್‌ರನ್ನು ಸೋಲು ಗೆಲುವಿಗೆ ನಡುವೆ

ತಾತ್ಯಾ ಟೋಪಿಯವರು ಆಟ ಆಗಿನ ರು. ಈ ದೇಶೆ ಆದನ ಕಾಲದಲ್ಲಿ ಎಷ್ಟೋ ಸಲ ತಾತ್ಯಾ ಟೋಪಿ ಜತೆಗಾರರಾರೂ ಇಲ್ಲದೆ ಒಂಟಿ ಸೈನಿಕರಾಗಿ ಬ್ರಿಟಿಷರನ್ನು ಎದುರಿಸಿದ್ದುಂಟು; ಎಷ್ಟೋ ಸಲ ಅವರ ಸೈನ್ಯ 30,000ದಷ್ಟು ಸೈನಿಕರನ್ನು ಹೊಂದಿದ್ದೂ ಉಂಟು.

ರಾಷ್ಟ್ರಧ್ವಜ

ರೈತರು ಜಾರು ಮತ್ತು ವ್ಯಾಪಾರಿ ಸಂಸ್ಥೆಗಳು ಅಜ್ಜುಮೋಂ ಕಾಗದದ ಚೀಲ ಪ್ಲಾಸ್ಟಿಕ್ಕುಗಳನ್ನು ಸಾರ್ವಜನಿಕ ಸಂಚುಸ್ತ ಸಾರ್ವಜನಿಕ ಕಾಣಿಕೆ ಎತ್ತುತ್ತಿರುವ ಉದಾಹರಣೆಗಳು ಸರ್ಕಾರದ ಗಮನಕ್ಕೆ ಬಂದಿದೆ. ಇವೆಲ್ಲ ರಾಷ್ಟ್ರಧ್ವಜದ ಘನತೆಗೆ ಕುಂದು ತರುವಂತಹವಾಗಿದೆ. ರಾಷ್ಟ್ರಧ್ವಜವು ರಾಷ್ಟ್ರದ ಪ್ರತೀಕವಾಗಿದ್ದು, ಎಂಥ ಪ್ರಸಂಗದಲ್ಲಿಯೂ ಅದರ ಘನತೆಯನ್ನು ಕಾಪಾಡಬೇಕು. ಮೇಲೆ ಹೇಳಿದ ವ್ಯಾಪಾರದಲ್ಲಿ ತೊಡಗಿರುವ ವ್ಯಕ್ತಿಗಳಾಗಲಿ ಅಥವಾ ಸಂಸ್ಥೆಗಳಾಗಲಿ ಅದನ್ನು ಮನಗಂಡು ತಮ್ಮ ವ್ಯಾಪಾರವನ್ನು ನಿಲ್ಲಿಸಬೇಕೆಂದು ಭಾರತ ಸರ್ಕಾರವು ಕೇಳಿಕೊಳ್ಳುತ್ತದೆ. ರಾಷ್ಟ್ರಧ್ವಜವನ್ನು ಯಾವುದೇ ವ್ಯಾಪಾರ, ವಾಣಿಜ್ಯ ಯಾ ಲಾಭದ ಉದ್ದೇಶಕ್ಕಾಗಿ ಬಳಸಲಾಗುವುದು. ಹಾಗೆ ಮಾಡಿದರೆ ಅವರ ಘನತೆಯು ಕಡಮೆಯಾಗುತ್ತದೆ.

ರಾಷ್ಟ್ರಧ್ವಜವನ್ನು ಗೌರವಿಸುವುದು ಮತ್ತು ಅದರ ಮಾನವನ್ನು ರಕ್ಷಿಸುವುದೂ ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ ಎಂಬುದನ್ನು ಸರ್ಕಾರವು ಪುನಃ ಹೇಳುವ ಅಗತ್ಯವಿಲ್ಲ. ಸಾರ್ವಜನಿಕರು ರಾಷ್ಟ್ರಧ್ವಜದ ಪ್ರತಿಷ್ಠೆಗೆ ಕುಂದುಬರುವಂಥ ಯಾವ ಕೃತಿಗಳಿಗೂ ಎಡೆಗೊಡಬಾರದು. ಈ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಉಪಯೋಗಿಸುವ ಬಗ್ಗೆ ಸಾಮಾನ್ಯವಾಗಿ ಈ ಕೆಳಗಿನ ನಿಯಮಗಳನ್ನು ಪರಿಪಾಲಿಸಬೇಕು:—

(1) ವ್ಯಾಪಾರ, ವಾಣಿಜ್ಯ ಅಥವಾ ಲಾಭದ ಉದ್ದೇಶಕ್ಕಾಗಿ ರಾಷ್ಟ್ರಧ್ವಜವನ್ನು ಉಪಯೋಗಿಸಬಾರದು.

(2) ಅದನ್ನು ಬುಡ ಮೇಲುಮಾಡಿ ಹಾರಿಸಬಾರದು.

(3) ಹಂದು ಗದ್ದುಗೆಯ ಮೇಲಿನ ಕುರ್ಚಿ ಅಥವಾ ಆಸನಗಳಿಗಿಂತ ತಗ್ಗಾದ ಮಟ್ಟದಲ್ಲಿ ರಾಷ್ಟ್ರಧ್ವಜವನ್ನು ಪ್ರದರ್ಶಿಸಕೂಡದು.

(4) ಧ್ವಜವನ್ನು ನಿತ್ಯದಕೆಡೆ ಬಿಸಾಡುವುದರಿಂದ ಅದು ಕಾಲ್ತೆಳಗೆ ತುಳಿಯಲ್ಪಡುವಂತೆ ಮಾಡಬಾರದು.

(5) ಹರಿದುಹೋದ ಅಥವಾ ಬಣ್ಣ ಮಾಸಿದ ಧ್ವಜವನ್ನು ಹಾಗೆಸಬಾರದು.

(6) ಯಾವತ್ತೂ ಮಂಗಲ ಕಾರ್ಯಗಳಲ್ಲಿ ಧ್ವಜವು ಕಂಬದ ತುಟ್ಟ ತುದಿಗೆ ಮುಟ್ಟಿರುವಂತೆ ಏರಿಸಬೇಕು.

ರಾಷ್ಟ್ರಧ್ವಜದ ಪ್ರತಿಷ್ಠೆ ಮತ್ತು ಗೌರವಗಳನ್ನು ಕಾಯುವಲ್ಲಿ ಜನರ ಸಹಕಾರವು ಅಧಿಕ ಪ್ರಮಾಣದಲ್ಲಿ ದೊರೆಯುವುದೆಂದು ಸರ್ಕಾರಕ್ಕೆ ವಿಶ್ವಾಸವಿದೆ.

೧೯೫೮-೫೯ ರ ಸಾಲಿನ ರಾಜ್ಯದ ಬಜೆಟ್ ವಿವಿಧ ಇಲಾಖೆಗಳಿಗೆ ಸರ್ಕಾರದ ಸೂಚನೆ

ಮೈಸೂರು ರಾಜ್ಯದ 1958-59 ನೇ ಸಾಲಿನ ಬಜೆಟ್ ತಯಾರಿಕೆಗಳನ್ನು 57 ನೇ ಸೆಪ್ಟೆಂಬರ್ 30 ರಿಂದ ಆರಂಭಿಸಬೇಕೆಂದು, ಮೈಸೂರು ಸರ್ಕಾರದ ತಾಲೂಕಾ ಸಿಸ ಕಾರ್ಯದರ್ಶಿಗಳು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ಇತ್ತಿರುವರು.

ಈಗ ಪ್ರಕಟವಾಗಿರುವ ಕಾರ್ಯಕ್ರಮದ ಮೇರೆಗೆ, 1958 ನೇ ಜನವರಿ 24 ರಿಂದ 31 ರವರೆಗೆ ರಾಜ್ಯದ ಮಂತ್ರಿಮಂಡಲವು ಸರ್ಕಾರದ ವಿವಿಧ ಇಲಾಖೆಗಳಿಂದ ಬಂದ ಅಂಕಿ-ಅಂಶಗಳನ್ನು ಪರಿಶೀಲಿಸಿ, ಬಜೆಟ್‌ನ್ನು ಪೂರೈಸುವುದು. ಫೆಬ್ರವರಿ 15 ರ ವೇಳೆಗೆ ಬಜೆಟ್‌ನ್ನು ಮುದ್ರಣಗೊಳಿಸಿ, ಮುದ್ರಣವನ್ನು ಮುಗಿಸಬೇಕೆಂದೂ ಸರ್ಕಾರ ತಿಳಿಸಿದೆ.

ನಿಮಗಿದು ಗೊತ್ತೆ?

(1) 55-56 ರಲ್ಲಿ 428 ಕೋಟಿ ರೂಗಳ ಒಟ್ಟು ತೆರಿಗೆ ಹಣದಲ್ಲಿ ಸುಮಾರು ½ ರಷ್ಟನ್ನು (167 ಕೋಟಿ ರೂಗಳು) ಕಸ್ಟಂಸ್ (ಅಮದು ಮತ್ತು ರಫ್ತು) ಸುಂಕಗಳಿಂದಲೂ, ಸುಮಾರು ¼ ಭಾಗ ರಷ್ಟು (145 ಕೋಟಿರೂಗಳು) ಕೇಂದ್ರ ಅಬ್ಕಾರಿ ಸುಂಕದಿಂದಲು, ¼ ರಷ್ಟಕ್ಕಿಂತ ಸ್ವಲ್ಪ ಹೆಚ್ಚಾಗಿ (131 ಕೋಟಿರೂಗಳು) ಆದಾಯ ಕಾರ್ಪೋರೇಷನ್ ತೆರಿಗೆಗಳಿಂದ ಪಡೆಯಲಾಯಿತು. ಈ ಮೂರು ಬಾಬುಗಳಿಂದಲೂ ಸೇರಿ ೬ ವರ್ಷ ಒಟ್ಟು ತೆರಿಗೆ ಹಣದಲ್ಲಿ ಶೇ. 99.4 ರಷ್ಟಾಯಿತು.

(2) 44-45 ಸಮರದ ವರ್ಷವನ್ನು ಹೊರತು 38-39 ರಿಂದ 57—58 ರ ಬಡ್‌ಜಟ್ ವರ್ಷದವರೆಗೆ ಈ ಎಲ್ಲಾ ವರ್ಷಗಳಲ್ಲಿಯೂ, ಕೇಂದ್ರದ ತೆರಿಗೆ ಹಣದಲ್ಲಿ ಕಸ್ಟಂಸ್ ಸುಂಕ ಅತ್ಯಂತ ಮುಖ್ಯ ಮೂಲ ವರಮಾನ ಬಾಬಿನಿಸಿತ್ತು. ಆಗ ತೆರಿಗೆ ಹಣದಲ್ಲಿ ಸುಮಾರು ¼ ರಷ್ಟು ಸುಂಕ ಮತ್ತು ಕಾರ್ಪೋರೇಷನ್ ತೆರಿಗೆಗಳಿಂದ ಪಡೆಯಲಾಯಿತು. ಮುಂದೆ 57-58 ರಲ್ಲಿ (ಬಡ್‌ಜಟ್) ವರ್ಷದಲ್ಲಿ ತೆರಿಗೆ ಹಣದಲ್ಲಿ ಶೇ. 41 ರಷ್ಟನ್ನು ಕೇಂದ್ರ ಅಬ್ಕಾರಿ ಸುಂಕದಿಂದ ಪಡೆಯಲಾಗಿದೆ.

(3) ಕೇಂದ್ರದ ಅಬ್ಕಾರಿ ಸುಂಕದಿಂದ ಉತ್ಪತ್ತಿಯು, ಒಂದೇ ಸಮವಾಗಿ ಏರುತ್ತಿದೆ. 38-39 ರಲ್ಲಿ ಕೇವಲ 9 ಕೋಟಿ ರೂಗಳು, ಒಟ್ಟು ತೆರಿಗೆ ಹಣದಲ್ಲಿ ಶೇ. 12 ರಷ್ಟಿದ್ದದ್ದು, 44-45 ರಲ್ಲಿ 38 ಕೋಟಿ ರೂಗಳಿಗೆ (ಶೇ. 15 ರಷ್ಟು) ಏರಿದೆ. ಆದು 50-51 ರಲ್ಲಿ 68 ಕೋಟಿ (ಶೇ. 19 ರಷ್ಟು) ರೂಗಳಿಗೂ ಮತ್ತು 55-56 ರಲ್ಲಿ 145 ಕೋಟಿ ರೂಗಳಿಗೂ (ಶೇ. 34 ರಷ್ಟು) ಏರಿದೆ. 1957-58 ರ ಬಡ್‌ಜಟ್‌ನಲ್ಲಿ ಕೇಂದ್ರದ ಅಬ್ಕಾರಿ ಸುಂಕದಿಂದ 209 ಕೋಟಿ ರೂಗಳು ಅಥವಾ ಒಟ್ಟು ತೆರಿಗೆ ಹಣದಲ್ಲಿ ಶೇ. 41 ರಷ್ಟನ್ನು ಅಂದಾಜುಮಾಡಲಾಗಿದೆ.

ನವಭಾರತಕ್ಕೆ
ಚಂದಾದಾರರಾಗಿರಿ

ಭಾರತದ ಪ್ರಥಮ ಸ್ವಾತಂತ್ರ ಸಮರ !

ಭಾರತೀಯರ ಸ್ವಾತಂತ್ರ್ಯದ ಪ್ರಥಮ ಘೋಷಣೆಯು 1857 ರ ಮಾರ್ಚ್ 29 ರಂದು ಹುತಾತ್ಮ ಮಂಗಲ ಪಾಂಡೆಯವರ ಬಂದೂಕಿನ ಗೋಳಿಯು ಇಂಗ್ಲಿಷ್ ರಕ್ತದ ಪ್ರವಾಹವನ್ನು ಹರಿಸಿ ಈ ಸಂಕಲ್ಪದ ಮೊಟ್ಟ ಮೊದಲಿನ ಪ್ರಸ್ಫೋಟನಾಯಿತು. ಏಪ್ರಿಲ್ 8 ರಂದು ಮಂಗಲಪಾಂಡೆಯು ತನ್ನ ಅಂತಿಮ ವಿಶ್ವಾಸದ ಲೇಖನಿಯಿಂದ ವಧಸ್ತಂಭದ ಮೇಲೆ ಸ್ವಾತಂತ್ರ್ಯದ ಮಹಾಮಂತ್ರವನ್ನು ಭಾವೀ ಪೀಳಿಗೆಗಾಗಿ ಕೊರೆದನು. ಮೇ 10 ರಂದು ಮೀರತ್ತಿನ ಸೇವಾತಾಣ್ಯದ ಸೈನಿಕರ 'ಮಾರೋ ಫರಂಗೀಕೋ' ಎಂಬ ತುಮುಲ ರಣ ಘೋರ್ಜನೆಯಿಂದ ಈ ಮಂತ್ರದ ಜಾಗೂ ಸಂಕಲ್ಪದ ಸಿದ್ಧಿಗಾಗಿ ಭಾರತೀಯ ಸ್ವಾತಂತ್ರ ಸಮರವು ಪ್ರತ್ಯಕ್ಷ ಪ್ರಾರಂಭನಾಯಿತು. ಪ್ರತಿಕ್ಷಣ ಉಗ್ರರೂಪವನ್ನು ಧರಿಸತೊಡಗಿತು. 1857 ರ ಮೇ 10 ರಂದು ಪ್ರಾರಂಭವಾದ ಸ್ವಾತಂತ್ರ್ಯ ಸಮರವೆಂದರೆ ಆಕಸ್ಮಿಕವಾಗಿ ಆದ ಉತ್ಪಾತವೇನೂ ಅಲ್ಲ. ಅದು ಈ ದೇಶದ ಪರಿಸ್ಥಿತಿ ಪ್ರಾಪ್ತ ಪರಂಪರಾಗತ ನೇತೃತ್ವದ ಅಡಿಯಲ್ಲಿ ಆದ ಒಂದು ಮಹಾಕ್ರಾಂತಿಯಾಗಿತ್ತು.

ಪ್ಲಾಸಿಯ ಯುದ್ಧದ ನಂತರದ ಭಾರತವನ್ನು ಮುಂಗುವ ಇಂಗ್ಲಿಷರ ಕಾರ್ಯವು ಪ್ರಾರಂಭವಾಗಿ 1818 ರಲ್ಲಿ 2 ನೇಯ ಬಾಜೀರಾಯನನ್ನು ರಾಜ್ಯಭ್ರಷ್ಟಗೊಳಿಸಿ ಸಮಾಪ್ತಿಗೊಂಡಿತು. ಆನಂತರ ಬ್ರಿಟಿಷ್ ಸಂಸ್ಥೆಯ ಉನ್ನತ ಅಧಿಕಾರಿಗಳ ದೃಷ್ಟಿ ಈ ಸಂಪನ್ನ ಹಾಗೂ ಫಲವತ್ತಾದ ಪ್ರದೇಶದ ಸಂಪೂರ್ಣ ಶೋಷಣೆಯಲ್ಲಿ ಕೇಂದ್ರೀಕೃತವಾಯಿತು. ಅದಕ್ಕಾಗಿ ಆಳಿದುಳಿದ ಶಕ್ತಿಕೇಂದ್ರಗಳ ಉಚ್ಚಾಟನೆಯು ಅವಶ್ಯವೆನಿಸಿತು. ಅವರ ಹಳೇ ಕರಾರು, ಸಂಧಿ ಪತ್ರಗಳನ್ನು ಕಟ್ಟುಟ್ಟು ರಾಜರ ಕೈಚೀಟಿಗ ಳನ್ನೂ ಜಹಗೀರುದಾರರ ಅಧಿಕಾರಗಳನ್ನೂ ಕಿತ್ತು ಪಾಲು ಮಾಡಿದರು. ಕೊಟ್ಟ ಕ್ಷ ವಿಶೇಷಾಧಿಕಾರಿಗಳು ಹಿಂತೆಗೆಯಲ್ಪಟ್ಟವು. ಐತಿಹಾಸಿಕ ಮಹತ್ವದ ಅಭಿಜಾತ ಮನೆತನಗಳನ್ನು ಸಂಪೂರ್ಣವಾಗಿ ನಷ್ಟ ಗೊಳಿಸಲಾಯಿತು. ಈ ಮೊದಲು ದೇಶೀ ರಾಜರ ಆಕ್ರಮಣದಲ್ಲಿ ಸಶಸ್ತ್ರಾಧಿ ಸೈನಿಕರು ಏನೂ ಉದ್ಯೋಗವಿಲ್ಲದೆ ದೇಶಾತ್ಯಂತ ದಾರಿದ್ರ್ಯದಿಂದ ಅರೆದಾಡಲು ಪ್ರಾರಂಭಿಸಿದರು: ಸಾಮಾನ್ಯ ಜನತೆಯ ಮೇಲೆ ಹೊಸ-ಹೊಸ ಕರಗಳನ್ನು ಹೇರಿ ಅವರ ಉಗ್ರ ಶೋಷಣೆಯೂ ಆಯ್ತು. ಹೇಸ್ಟಿಂಗ್ಸ್ ಮತ್ತು ವೆಲ್ಲೆಸ್ಲಿಯವರು ನಡೆಸಿದ ಈ ಘೋರಣೆಯನ್ನು ಅತಿಯಾಗಿ ಇನ್ನೂ ಹೆಚ್ಚಿನ ಕಠಿಣತೆಯಿಂದ ಮುಂದಿನ ವೈಸ್‌ರಾಯ್ ಡಾಲ್‌ಹೌಸಿಯು 1846 ರಲ್ಲಿ ಭಾರತದಲ್ಲಿ ಪದಾರ್ಪಣೆ 'ಹಿಂದೂಸ್ಥಾನದ ಭೂಮಿಯನ್ನು ನಾನು ನೆಲಸಮ ಮಾಡುವೆನು' (I will level the Land of Hindustan) ಎಂದು ಪ್ರತಿಜ್ಞೆ ಮಾಡಿದನು. ಮತ್ತು ವಿಷದ ಮಾತ್ರೆಗಳನ್ನು ಸಕ್ಕರೆಯಲ್ಲಿ ಲೇಪಿಸಿ ಕೊಡುವ ಬದಲು ಇದ್ದಹಾಗೆಯೇ ಕೊಡಲುಪಕ್ರಮಿಸಿದರು. ಪಂಜಾಬ್, ಬ್ರಹ್ಮದೇಶ, ಸತಾರ, ನಾಗಪುರ, ಅಯೋಧ್ಯೆ ಝಾನ್ಸಿ ಹೀಗೆ ಒಂದರ ಹಿಂದೆ ಒಂದರಂತೆ ರಾಜ ಸಿಂಹಾಸನಗಳನ್ನು ಉರುಳಿಸಿ ರಾಣಿಯರ ಅಂತಃಪುರದೊಳಗಿನ ಪಲ್ಲಂಗಗಳ ಅಡಿಯ ಭೂಮಿಯನ್ನು ಅಗೆದು ಕೆಗೆಯುನವರೆಗೂ ಇಂಗ್ಲಿಷ್ ಸಂಸ್ಥೆಯ ಲೋಭ ಹಾಗೂ ಮದದ ಸೀಮೆಯು ಲಾರ್ಡ ಡಾಲ್ ಹೌಸಿಯ ಕಾಲದಲ್ಲಿ ಮುಟ್ಟಿತ್ತು! ಯಾವಾತ್ತುದನ್ನು ಸಂಪತ್ತಿಂದು ಕರೆಯುನರೋ ಆಸೆಲ್ಲವೂ ಒಂದಲ್ಲ ಒಂದು ನಿಮಿತ್ತದಿಂದ ಅಪಹರಿಸಲ್ಪಡಲು ಪ್ರಾರಂಭವಾಯಿತು.

ಧರ್ಮದ ಮೇಲೂ ಆಕ್ರಮಣ

ಇದೇ ಹೊತ್ತಿಗೆ ಸೋತವರಿಗೆ ಹೇಗೆ ಸಂಪತ್ತಿನ ಮೇಲೆ ಅಧಿಕಾರವಿಲ್ಲವೋ, ಹಾಗೆಯೇ ಧರ್ಮದ ಅಧಿಕಾರವೂ ಇಲ್ಲವೆಂಬ ತಿಳುವಳಿಕೆಯಿಂದ ಬ್ರಿಟಿಷರು ಧರ್ಮಪ್ರಾಣ ಭಾರತದ ಹೃದಯಕ್ಕೆ ಕೈಯಿಕ್ಕಿ ಅದನ್ನು ನುಚ್ಚುನೂರುಮಾಡಲು ಪ್ರಾರಂಭಿಸಿದರು. 1850 ರಲ್ಲಿ Relgious Disabilities Act ಅನ್ನು ಜಾರಿಗೆ ತಂದು ಮತಾಂತರ ಹೊಂದಿದವರಿಗೆ ಆಸ್ತಿಯ ಮೇಲಿನ ಹಕ್ಕನ್ನು ಕೊಡಲಾಯಿತು. ಮಿಶನರಿಗಳ ಕಾರಸ್ತಾನಗಳು ಹೆಚ್ಚುತ್ತ ಬಹಿರಂಗವಾಗಿ ಅವುಗಳಿಗೆ ಸರಕಾರಿ ಸಹಾಯ ಸಿಗಲಾರಂಭಿಸಿತು. ಇವರು ಭಾರತದ ಕ್ರೈಸ್ತೀಕರಣದ ಅಡಿಯಲು ಇಚ್ಛೆಸಿದರು. 1857 ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಡೈರೆಕ್ಟರ್ ಬೋರ್ಡಿನ ಅನೇಕರು ಹೌಸ್ ಆಫ್ ಕಾಮನ್ಸ್‌ನಲ್ಲಿ ಭಾಷಣ ಮಾಡುತ್ತ 'ಹಿಂದೂಸ್ಥಾನದಷ್ಟು ವಿಶಾಲ ದೇಶವನ್ನು ದೇವರು ಇಂಗ್ಲೆಂಡಿಗೆ ಕ್ರೈಸ್ತನ ಕೃಪೆಯ ಮೂಲಕ ವಿಜಯಿಯಾಗಿ ಆ ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೂ ಹಾರಿಸಲು ಬಯವಾಲಿಸಿದ್ದು ಇದೀ ಭಾರತದ ಕ್ರೈಸ್ತೀಕರಣದಲ್ಲಿ ನಮ್ಮಲ್ಲಿ ಯಾರೂ ಹಿಂದೆ ಬೀಳಲಾಗದು ಎಂದು ಹೇಳಿದ್ದರು. ಈ ಉದ್ದೇಶದಿಂದ ಆಳುವ ಕಂಪೆನಿಯ ಪ್ರೇರಣೆಯಿಂದ ಇಂಗ್ಲೀಷ್ ಲೇಖಕರು ಮತ್ತು ಮಿಶನರಿಗಳು ಸಂಧಿಸಿದ್ದಲ್ಲೆಲ್ಲಾ ಹಿಂದೂ ಮತ್ತು ಮುಸ್ಲಿಂ ಧರ್ಮಗಳನ್ನು ಮನಸಾರೆ ಬೈದು ಭಂಗಿಸುತ್ತಿದ್ದರು. ಸರಕಾರಿ ಮತ್ತು ಖಾಸಗಿ ಕಾಗದ ಪತ್ರಗಳಲ್ಲಿ ಹಿಂದು ಮುಸಲ್ಮಾನರನ್ನು 'ಹೀದನ್ಸ್' ಎಂದೇ ತುಚ್ಛವಾಗಿ ಬಹಿರಂಗವಾಗಿ ಕರೆಯಲಾಗುತ್ತಿತ್ತು. ಮೊದಲೇ ಈ ಭಾರತೀಯ ಸೈನಿಕರು ಇಂಗ್ಲಿಷರ ಮೇಲೆ ಉರಿದು ಬಿದ್ದಿದ್ದರು. ಸ್ವದೇಶಿ ರಾಜರಿಂದ ಕೌರ್ಯದ ಬಗ್ಗೆ ಅವರಿಗೆ ಜಹಗೀರು, ಜಮೀನು, ಪ್ರಶಂಸೆ ಮತ್ತು ಒಡ್ಡಿಗಳು ದೊರೆಯುತ್ತಿದ್ದವು. ಈ ಹೊಸ ಘೋರಣೆಯಿಂದ ಎಂದಾದರೊಮ್ಮೆ ಸ್ತುತಿಶಬ್ದ ಪ್ರಯೋಗದ ಹೊರತು ಇನ್ನೇನೂ ಇವರಿಗೆ ದೊರೆತಿರಲಿಲ್ಲ. ಯಾರಭರನಸೆಯ ಮೇಲೆ ಇಂಗ್ಲಿಷ್ ರಾಜ್ಯ ವಿಜಯದ ಹಿಂದೆ ವಿಜಯಗಳಿಸಿತ್ತೋ, ಅವರ ಭವಿಷ್ಯವು ಅಂಧಕಾರದಿಂದ ಮುಸುಕಿತ್ತು. ಅಧಿಕಾರ ಪದಗಳು ಅಲಭ್ಯವಾಗಿದ್ದವು. ಅವರ ಉದ್ಧಾರಕ್ಕಾಗಿ ಬಹುಮಾನವೆಂದು ಜನರಲ್ ಆರ್ಥರ್ ವೆಲ್ಲೆಸ್ಲಿಯಂಥ ಸೇನಾಪತಿಗಳ. ಅವರಿಗೆ ಎಷ್ಟು ಪಶುಸಮಾನವಾಗಿ ಕಾಣುತ್ತಿದ್ದರೆಂದರೆ ಗಾಯಗೊಂಡ ಸೈನಿಕರನ್ನು ಆಸ್ಪತ್ರೆಗೆ ಕಳುಹಿಸುವ ಬದಲು ಬಂದೂಕಿನಿಂದ ಸಾಯಿಸುವುದು ಯೋಗ್ಯ ಮತ್ತು ಲಾಭಕರವೆಂದು ತಿಳಿಯುತ್ತಿದ್ದರು! ಎಂದೂ ಸ್ವರಾಜ್ಯದ ಅಪೇಕ್ಷಕತೆಯೇ ತೋರದ ಇವರಿಗೆ ಇಂಗ್ಲಿಷರು ತಮ್ಮ ವರ್ಚಸ್ಸಿನಿಂದ ಅದನ್ನು ತಿಳಿಸಿದರು ಜೊತೆಗೆ ಈ ಮತಪ್ರಸಾರದ ಸತ್ರದಿಂದ ಬೇಕಿಗೆ ಎಣ್ಣೆಯನ್ನು ಸುರಿದಂತಾಯಿತು. ಸೈನಿಕರಿಗೆ ಯುದ್ಧ ಕಾಲ ಬಿಟ್ಟರೆ ಆನಂತರ ಸಾಕಷ್ಟು ಬಿಡುವು ದೊರೆಯುತ್ತಿದ್ದ. ಆಗ ಶ್ರೀರಾಮ ಜಂಪ ಶ್ರೀ ಕೃಷ್ಣರನ್ನೂ, ಸೈಗಂಬರವನ್ನೂ ಬೈದು ತಮ್ಮ ಮತಪ್ರಚಾರ ಮಾಡುವುದೇ ಸೈನಿಕ ಅಧಿಕಾರಿಗಳಕೆಲಸವಾಗಿತ್ತು. ಇದರಿಂದ ಕೋಪಗೊಂಡು ಯಾರಾದರೊಬ್ಬನು ಉತ್ತರಿಸಲು ಪ್ರಯತ್ನಿಸಿದರೆ ಅವನಿಗೆ ಕಠೋರ ಶಿಕ್ಷೆ ಶಿದ್ಧವಾಗಿತ್ತು. ಕೆಲವೇ ದಿನಗಳಲ್ಲಿ ಈ ಕಾರ್ಯಗಳಲ್ಲಿ

ಭಾರತದ ಪ್ರಥಮ ಸ್ವಾತಂತ್ರ್ಯ ಸಮರ

(ಮುಂದುವರಿದುದು)

ನಿಲ್ಲುವುದೆಂದರೆ ತಮ್ಮ ಧರ್ಮಕ್ಕೆ ತಿಲಾಂಜಲಿಯನ್ನಿತ್ತಿದ್ದಂತೆಯೇ ಎಂದು ಅನುಭವಕ್ಕೆ ಬರುವಂತಹ ಘಟನೆಗಳು ನಡೆಯತೊಡಗಿದವು. ಒಂದು ಸಿದ್ಧೀ ಮತಕ್ಕೆ ಸೇರಿದನೆಂದರೆ ಅವನ ಜೀವಿತಕಾಲವೆಲ್ಲ ಅವನಿಗೆ ಬಿಡ್ಡಿ ದೊರೆಯುತ್ತಿತ್ತು. ಬಲವಂತವಾಗಿ ಸನ್ಯಾಸದಿಂದ ಈ ಬಿಡ್ಡಿ ಕೊಡಲ್ಪಡುತ್ತಿತ್ತು. ಸೈನಿಕರು ಕ್ರೈಸ್ತರಾಗಿದ್ದರೆ ಬಾಡಿಗೆ ಸೈನ್ಯವಾಗಿ ಉಳಿಯುವುದು ಇಂಗ್ಲಿಷರ ಭಾವನೆಯಾಗಿತ್ತು. ಆದ್ದರಿಂದಲೇ ಕ್ರೈಸ್ತೀಕರಣಕ್ಕೆ ಇಷ್ಟು ಉತ್ತೇಜನವನ್ನು ಅವರು ತಾತ್ಕಾಲಿಕ ಸೈನ್ಯಾಧಿಕಾರಿಗಳು ಸ್ಥಳೀಯರನ್ನು ನುತಾಂತರಗೊಳಿಸಲಂದೇ ಅವರು ಸೈನ್ಯವನ್ನು ಬಳಸಿಕೊಳ್ಳುವ ಪುಟಗಿ ಬಹಿರಂಗವಾಗಿ ಕ್ರೈಸ್ತಧರ್ಮವನ್ನು ಪ್ರಚಾರ ಮಾಡಿದರು. ಈಗ ಸ್ವಾರಾಜ್ಯ ನಾಶನದೊಂದಿಗೆ ಇಹಲೋಕವಂತೂ ಮುಗಿದಿದೆ ಮತ್ತು ಸ್ವಧರ್ಮವನ್ನು ಬಿಟ್ಟು ಪುಣ್ಯಗತಿ ಹಾಗೂ ಪರಲೋಕಗಳ ಬಗ್ಗೆ ತಿಲಾಂಜಲಿಯನ್ನೇ ಕೊಡಬೇಕಾಗಿ ಬಂದಿತೆ? ಎಂದು ತೋರಿ

ಅವರ ಮನಸ್ಸು ತಳಮಳಗೊಂಡಿತು. ಇಂಗ್ಲಿಷರ ಪ್ರತಿಯೊಂದು ಕೃತಿಯನ್ನು ಸಂಶಯದಿಂದ ನೋಡಲು ಅವರು ಆರಂಭಿಸಿದರು. ಪ್ರತಿಯೊಂದು ಕೃತಿಯನ್ನು ಸಂಶಯದಿಂದ ನೋಡಲು ಅವರು ಆರಂಭಿಸಿದರು. ಪ್ರತಿಯೊಂದು ಕಾನೂನೂ ಅವರನ್ನು ಧರ್ಮಭ್ರಷ್ಟಗೊಳಿಸುವ ಕಾರ್ಯನ್ವಾನವೆಂದು ಅನಿಸತೊಡಗಿತು. ಈ ಸ್ಥಿತಿಯಲ್ಲಿರುವಾಗಲೇ ಹೊಸ ಕಾಡತೂಸುಗಳ ವಿತರಣೆಯು ಬೆಂಕಿಯ ಕಿಡಿಯಂತೆ ಆಕ್ರೋಶವನ್ನು ಬಡಿದೆಬ್ಬಿಸಿತು. ಸೈನಿಕರಿಗೆ ಹೊಸ ಬಂದೂಕು ಮತ್ತು ಕಾಡತೂಸುಗಳ ಕಾರ್ಖಾನೆಗಳು ತೆರೆಯಲ್ಪಟ್ಟವು. ಇವುಗಳನ್ನು ಚರ್ಬಿಯಿಂದ (ಪಣಿ) ಸುತ್ತಿದ ಹಲ್ಲುಗಳಿಂದಲೇ ಅದನ್ನು ತೆಗೆಯಬೇಕೆಂಬ ಆಜ್ಞೆ ಇತ್ತು. ಅದಕ್ಕೆ ಹಸುವಿನ ಮತ್ತು ಹಂದಿಯ ಚರ್ಬಿಯನ್ನು ಹಚ್ಚುತ್ತಿದ್ದರು ಹಲ್ಲಿನಿಂದ ತೆಗೆಯಬೇಕೆಂಬ ಆಜ್ಞೆಯಿಂದಾಗಿ ಅದನ್ನು ತೆಗೆಯುವಾಗ ನಾಲಗೆಗೆ ಆ ಚರ್ಬಿಯ ಸ್ಪರ್ಶವಾಗಿ ಸೈನಿಕರು ಮತಾಂತರ ಹೊಂದುವರಿದ್ದರು. ನಂತರ ಗವರ್ನರ್ ಜನರಲ್‌ನಿಂದ ಹಿಡಿದು ಕೊಂಡು ಅಧಿಕಾರಿಯವರೆಗೆ ಎಲ್ಲರೂ ಅದರಲ್ಲಿ ಹಸು ಮತ್ತು ಹಂದಿಯ ಚರ್ಬಿ ಇರಲಿಲ್ಲವೆಂದು ಎಷ್ಟು ತಿರುಚೊಪ್ಪೆ ಹಾಕಿದರೂ ಈ ವಿಷಯ ಮಾತ್ರ ಸತ್ಯವೇ ಆಗಿತ್ತು. ಇದನ್ನು ಲಾರ್ಡ್ ರಾಬರ್ಟ್‌ಸನ್ ಇವರು 'ಭಾರತದಲ್ಲಿ 40 ವರ್ಷಗಳು' ಎಂಬ ಪುಸ್ತಕ ಬರೆದಿದ್ದಾರೆ, ಅದರಲ್ಲಿ ಎಲ್ಲ ವಿವರವಾಗಿ ಕೊಟ್ಟಿದೆ.

ಈ ಕಾಡತೂಸುಗಳ ವಾರ್ತೆ ವಿದ್ಯುತ್ ಗತಿಯಿಂದ ಸೈನಿಕ ತಾಣಗಳಿಂದ ಎಲ್ಲೆಡೆಗೂ ಪಸರಿತು. ತಮ್ಮನ್ನು ಧರ್ಮ ಭ್ರಷ್ಟಗೊಳಿಸಲು ಪ್ರವೃತ್ತರಾದ ಇಂಗ್ಲೀಷರಿಗೆ ಧರ್ಮ ರಕ್ಷಣೆಗಾಗಿ ಕಂಕಣ ಸ್ನಾನಮಾಡಿ ಅವರ ರಾಜಸತ್ತೆ ಕೊರಳನ್ನು ಹಿಜುಕಲು ಸೈನಿಕರ ಕೈಗಳು ಮುಂಚಾಚುತ್ತಿದ್ದವು. ಆಂದರೆ ಕ್ರಾಂತಿಯ ಎಲ್ಲ ಮಾನಸಿಕ ಆಧಾರಗಳು ಆಗಲೇ ಬಂದಿದ್ದವು.

ಕ್ರಾಂತಿಯ ನೇತೃತ್ವ

1857 ರ ಕ್ರಾಂತಿಯ ಮುಖಂಡ ಶ್ರೀಮಂತ ನಾನಾ ಸಾಹೇಬರು ಗಂಭೀರ ತೇಜಸ್ಸು ಜಾಗೂ ಸೂಕ್ಷ್ಮ ಬುದ್ಧಿಯವರಾಗಿದ್ದರು. ಉಪ್ಪು-ಖಾರ ತಿಕ್ಷಣದ ಜೊತೆಗೆ ಅತ್ಯಮ ರಾಜಕಾರಣದ ಅಭ್ಯಾಸವೂ ಆಗಿತ್ತು ಪಾದ ಎಂಬ ಇಂಗ್ಲಿಷ್ ವಾಚಕನಿಂದ ದಿನಾಂಕಗಳನ್ನು ತರಿಸಿ ಓದಿಸಿ, ಬಿಂಬೊಸ್ಕಾನದ ಹಾಗೂ ಇಂಗ್ಲೇಂಡಿನ ರಾಜಕಾರಣವನ್ನು ಚೆನ್ನಾಗಿ ತಿಳಿಯುತ್ತಿದ್ದರು. ಅವರು ಅತ್ಯಂತ ಮಾನಧನರಾಗಿದ್ದು ಬಾಜೀರಾವ್ ಪೇಷ್ವೆಯವರ ನಿಧನದ ನಂತರ ನ್ಯಾಯವಾದ ಇವರ ಹಕ್ಕನ್ನು ಇಂಗ್ಲೀಷರು ಗದಾಪ್ರಹಾರ ಮಾಡಿದರು. ಕಾನೂನಿನಂತೆ ಅವರಿಗೆ ಸಿಗಬೇಕಾದ ಮಾನಧನ ಪ್ರವೃತ್ತಿಯನ್ನು ಕೊಡಲಿಲ್ಲ. ಇಂಗ್ಲೆಂಡಿಗೆ ಕಳುಹಿಸಿದ ಅವರ ವಕೀಲ ಅಜೀಮುಲ್ಲಾಖಾನನು ನಿರಾಶನಾಗಿ ಹಿಂದಿರುಗಿದನು. ಇದರಿಂದ ಡಾಲ್‌ಹೌಸಿಯು ಮಾಡಿದ ಅಪಮಾನ ಮತ್ತು ಇಂಗ್ಲಿಷ್ ಸತ್ತೆಯಿಂದಾದ ಅನ್ಯಾಯವನ್ನು ಖಡ್ಗದಿಂದ ದೂರುಮಾಡಲು ನಾನಾ ಸಾಹೇಬನು ನಿಶ್ಚಯಿಸಿದನು. 4 ದಿಕ್ಕೆನಲ್ಲಿ ಹರಡಿದ ಅಸಂತೋಷವನ್ನು ನೋಡಿ ಕ್ರಾಂತಿಯ ಯೋಜನೆಯನ್ನು ಸಿದ್ಧಗೊಳಿಸಿದನು. ಭಾರತದ ಎಲ್ಲ ರಾಜರಿಗೆ ಪತ್ರಬರೆದು ಈ ಯೋಜನೆಯಲ್ಲಿ ಮೆಲ್ಲಗೆ ಅವರೆಲ್ಲರನ್ನೂ ಸೇರಿಸಿದನು. ಫಕೀರ್, ಮೌಲ್ವಿ, ಬ್ರಾಹ್ಮಣ, ತಪಸ್ವಿ, ಸನ್ಯಾಸಿ ಮೊದಲಾದ ವೇಷದಲ್ಲಿ ವೃತ್ತ ಧಾರಿಕ್ರಾಂತಿ ಪ್ರಚಾರಕರು ಸೈನಿಕರ ಠಾಣೆಗಳಲ್ಲಿ ಹಾಗೂ ನಗರ ಹಳ್ಳಿಗಳಲ್ಲಿ ಗರುಡ ಪಕ್ಷಿಯಂತೆ ಆಲೆದಾಡಲು ಪ್ರಾರಂಭಿಸಿದರು. ಮೈಸೂರಿನ ರಾಜರು ನಾನಾ ಸಾಹೇಬನ ಯೋಜನೆಗೆ ಸೇರಿದ್ದರು. ಬರಾಕ್‌ಪೂರ್, ಅಂಬಾಲಾ, ಮೀರತ್, ಪೆಷಾವರಿನಿಂದ ಹಿಡಿದು ಆಂಧ್ರ, ಮದರಾಸ್‌ವರೆಗೂ ಠಾಣ್ಯಗಳೊಳಗಿನ ಸೈನಿಕರ ಅಂತಃಕರಣಗಳನ್ನು ಈ ಪ್ರಚಾರಕರು ಯುದ್ಧದ ಅರಿವಿನಿಂದ ತುಂಬಿದರು. ದಿಲ್ಲಿ ಬಾದಶಹನ 'ಬಾದಕಾಮ' ಯು ಮೊದಲೇ ಇಂಗ್ಲಿಷರಿಂದ ಅಪಹರಿಸಲ್ಪಟ್ಟಿತ್ತು. ಈಗ ಈ ಪದವಿಯೂ ಅಪಹರಿಸಲ್ಪಟ್ಟಿದುದರಿಂದ ದಿಲ್ಲಿ ಸಂತಪ್ತವಾಗಿತ್ತು.

ಒಂದರ ಹಿಂದೆ ಒಂದಾಗಿ ಸಿಂಹಾಸನಗಳು, ಸೈನ್ಯಠಾಣೆಗಳು, ನಗರ ಹಳ್ಳಿಗಳು ಒಂದೇ ಭಾವನೆಯಿಂದ ಚೈತನ್ಯ ಗೊಂಡು ಏಳುತ್ತಿರುವಾಗ ಆ ಕ್ರಾಂತಿ ದಿನವೆಂದು 1857 ರ ಮೇ 31 ದಿನಾಂಕವನ್ನು ಗೊತ್ತುಪಡಿಸಲಾಯಿತು. ಆದರೆ ಇದೆಲ್ಲ ಎಷ್ಟು ಗುಪ್ತವಾಗಿ ನಡೆದಿತ್ತೆಂದರೆ ಸೈನಿಕರಿಗೆ ತಮ್ಮ ಬೆಟಾಲಿಯನ್ ಮಾಡಬೇಕಾದ ಕಾರ್ಯವಿಷ್ಟೇ ತಿಳಿದಿತ್ತು. ರಕ್ತ ಕ್ರಾಂತಿ ಚಿಹ್ನವೆಂದು ಒಂದು ರಕ್ತಾಂಕಿತ ಕಮಲದ ಹೂ ಸೇನಾ ನಿವೇಶನದಲ್ಲಿ ಸುತ್ತಾಡಲಾರಂಭಿಸಿತು. ಕ್ರಾಂತಿದೂತರು ಇದನ್ನು ಹಿಡಿದು ಠಾಣೆಗಳಲ್ಲಿ ಪ್ರವೇಶಿಸಿ ಆಲ್ಲಿಯ ಮುಖಂಡನಿಗೆ ಕೊಡುವರು. ಆನಂತ್ರಮವಾಗಿ ಸರ್ವ ಸೈನಿಕರ ಹಸ್ತ ಸ್ಪರ್ಶದ ನಂತರ ಆ ಕಮಲವು ಪುನಃ ಕ್ರಾಂತಿದೂತನ ಕೈಗೆ ಹಿಂತಿರುಗಿ ಬರುತ್ತಲೇ ಆತನು ಇನ್ನೊಂದು ಠಾಣೆಗೆ ಹೊರಡುವನು. ಈ ಕಮಲವನ್ನು ಸ್ಪರ್ಶಿಸುತ್ತಲೇ 'ಎಲ್ಲವನ್ನೂ ರಕ್ತದಿಂದ ಕೆಂಪುಗೊಳಿಸುವ ಕಾರ್ಯದಲ್ಲಿ ನಿಕ ಸೂತ್ರರಾಗಿರಿ' ಎಂಬ ಅವರ ಸಂದೇಶದಿಂದ ಅವರಿಗೆ ರೋಮಾಂಚನವಾಗುತ್ತಿತ್ತು. ಕ್ರಾಂತಿಯ ಪ್ರತಿಜ್ಞೆಯನ್ನು ನಾಗರಿಕರಿಗೆ ನೀಡಲು ದೂತರು ಹಳ್ಳಿ ಹಳ್ಳಿ ತಿರಿ ತಿರಿಗಳಲ್ಲಿ ಚಪಾತಿಗಳನ್ನು ಹಿಡಿದು ತಿರುಗುತ್ತಿದ್ದರು. ಹಳ್ಳಿಯ ಚೌಕಿದಾರರ ಹತ್ತಿರ ಬರುವರು; ಚಪಾತಿಯ ಒಂದು ತುಂಡನ್ನು ಅವನು ತಿನ್ನುವನು ಮತ್ತು ಉಳಿದ ದನ್ನು ಇತರರಿಗೆ ಪ್ರಸಾದವೆಂದು ಕೊಡುವನು. ಈ ಪ್ರಸಾದ ತಿಂದವನು ಕ್ರಾಂತಿ ಪ್ರತಿಜ್ಞೆ ಕೈ ಕೊಂಡಂತಾಗಿ ಆಮೇಲೆ ಚಪಾತಿಗಳನ್ನು ತಯಾರಿಸಿ ಅವನೂ ಹಂಚುವನು. ಒಮ್ಮೆ ಇಂಗ್ಲೀಷರಿಗೆ ಸಂತಯ್ಯ ಬಂದು ಚಪಾತಿಯೊಂದಿಷ್ಟು ಮುರಿದಿಂದು ನೋಡಿದರು. ಆದರೆ ಚಪಾತಿಯೊಳಗಿನಿಂದ ಸಂದೇಶವನ್ನು ಕಳುಹಿಸಲಿಕ್ಕಿರದೆ ಸ್ವತಃ ಚಪಾತಿಗಳೇ ಸಂದೇಶವಾಗಿದ್ದುದೆಂಬುದರ ಕಲ್ಪನೆ ಅವರಿಗೆಲ್ಲಿತ್ತು! ಇಷ್ಟು ಸೂಕ್ಷ್ಮವಾಗಿತ್ತು ಆ ಸಂಘಟನೆ.

ಈ ಸಮಯದಲ್ಲಿ ಸಂಘಟನೆಯ ಸೂಕ್ಷ್ಮ ಭದ್ರತೆಯನ್ನು ಪರಿಶೀಲಿಸಲು ನಾನಾ ಸಾಹೇಬನು ವಕೀಲ ಅಜೀಮುಲ್ಲಾ ಖಾನ್ ಮತ್ತು ಬಂಧು ಬಾಳಾಸಾಹೇಬರೊಂದಿಗೆ ದಿಲ್ಲಿ, ಅಂಬಾಲಾ, ಸಿಂಮ್ಲಾ ಲಕ್ನೋ, ಕಾಲ್ಪಿ ಮೊದಲಾದುವುಗಳಿಗೆ ಭೇಟಿ ಕೊಟ್ಟು ಸಿಪ್ರಿಲ್ ಕೊನೆಗೆ ಬ್ರಹ್ಮಾ

ವರ್ಷಕ್ಕೆ ಹಿಂತಿರುಗಿದನು. ಇವರ ಬಗ್ಗೆ ಜನರು ಎಷ್ಟು ಆದರ ತಾಳಿದ್ದರು ಮತ್ತು ಇಂಗ್ಲಿಷರ ಬಗ್ಗೆ ಎಷ್ಟು ತಾತ್ಸಾರ ಭಾವನೆ ಇತ್ತೆಂಬುದಕ್ಕೆ ಈ ಯಾತ್ರೆಯಲ್ಲಿ ಒಂದು ಘಟನೆಯು ಸಂಭವಿಸಿತು. ನಾನಾಸಾಹೇಬನು ಲಕ್ನೋ ಸಂದರ್ಶಿದ ದಿನ ಬೆಳಿಗ್ಗೆ ಕಮಿಶನರ್ ಸರ್ ಲಾರೆನ್ಸನು ತನ್ನ 'ಬಗ್ಗಿ'ಯಲ್ಲಿ ಹೋಗುತಿದ್ದಾಗ ಜನರು ಅತನನ್ನು ಹಿಂಬಾಲಿಸಿ ಅವನ ಬೇಲಿ ಕೊಳಚೆಯನ್ನೆಸೆದರು. ಆದರೆ ಅದೇ ಜನರು ನಾನಾಸಾಹೇಬನು ನಗರವನ್ನು ಪ್ರವೇಶಿಸುತ್ತಲೇ ಪ್ರಜಾಂತ ಮೆರವಣಿಗೆ ಹೊಂಡಿಸಿ ಅವನನ್ನು ಸ್ವಾಗತಿಸಿದರು. ಈ ಮುಕ್ಕಾಮಿನಲ್ಲೇ ಅವರು ಜಗದೀಶಪುರದ ರಾಜಾ ಕುಮಾರಸಿಂಹನನ್ನು ಕ್ರಾಂತಿ ಕೂಟದಲ್ಲಿ ಸೇರಿಸಿಕೊಂಡರು.

ಯೋಜಿಸಿದಂತೆ ಮೇ ೩೧ ರಂದು ಈ ಪ್ರಕ್ಷೋಭವು ಆಗಿದ್ದರೆ ಅದು ವಿಜಯ ಧ್ವಜವನ್ನು ಹಾರಿಸಿಯೇ ಹಾರಿಸುತ್ತಿತ್ತು. ಆದರೆ ಸೈನಿಕರ ಬಿಸಿನೆತ್ತರ ಇಷ್ಟು ಸಂಯಮ ತಾಳದೆ ಅಕಾಲದಲ್ಲೇ ಕ್ರಾಂತಿ ಎದ್ದರು. ಮಾರ್ಚ್ ೨೯ರಂದು ಬರಾಕ್‌ಪುರದ ೨೫ನೇ ಪ್ಲೆಟೂನಿನ ತರುಣ ಸೈನಿಕ ಮಂಗಳಪಾಂಡೆ 'ಲೆಫ್ಟಿನೆಂಟ್ ಬಾಸ್'ನ ಬಲಿಯನ್ನು ತೆಗೆದುಕೊಂಡು ಸ್ವಂತ ರಕ್ತದ ಅರ್ಘ್ಯವನ್ನು ಭೂಮಾತೆಗರ್ಪಿಸಿದನು. ಏಪ್ರಿಲ್ ೪ರಂದು ಅವನನ್ನು ವಧಸ್ತಂಭಕ್ಕೇರಿಸಲಾಯಿತು. ಅವನ ಹೆಸರಿನ ಪ್ರಭಾವವು ಎಷ್ಟು ವಿಲಕ್ಷಣವಾಗಿತ್ತೆಂದರೆ ಕ್ರಾಂತಿಯುದ್ಧದ ಎಲ್ಲ ಸೈನಿಕರನ್ನು ಇಂಗ್ಲಿಷರು 'ಪಾಂಡೆ' ಎಂದೇ ಕರೆಯುತ್ತಿದ್ದರು. ಪಾಂಡೆಯ ಹುತಾತ್ಮತ್ವವು ಜಪಪ್ಪ ದಿವ್ಯವಾಗಿದ್ದರೂ ಅಕಾಲದಲ್ಲಾದ್ದರಿಂದ ೧೮೫೭ ಸ್ವಾತಂತ್ರ್ಯ ಸಮರಕ್ಕೆ ಯಶಶ್ರೀಯು ಒಲಿಯಲಿಲ್ಲ. ಏಕೆಂದರೆ ಆತನ ಕೃತಿಯು ಸಂಯಮದ ಅಣಿಕಟ್ಟನ್ನು ಒಡೆಯಲು ತವಕಿಸುತ್ತಿದ್ದ ಸೈನಿಕರಿಗೆ ಹೋರಾಟದ ಸಂಕೇತವಾಯಿತು. ಇದರಿಂದ ಅಂಬಾಲಾ ವರೆಗೂ ಗಲಿಬಲಿಯಾಯಿತು. ಕೊನೆಗೆ ಮೇ ೩೧ರ ದಾರಿನೋಡದೆ ೧೦ರಂದೇ ವಿಸಾರಿತ್ತಿನ ಸೈನಿಕರು ಹೋರಾಟ ಪ್ರಾರಂಭಿಸಿದರು. ಆದಿಕ ನುಧ್ಯಾಹ್ನ ಸೂರ್ಯನ ಚಂಡಕಿರಣಕ್ಕೆ ಇಂಗ್ಲಿಷರ ರಕ್ತ ದಿಂದ ಅರ್ಘ್ಯವನ್ನರ್ಪಿಸುತ್ತ ಒಬ್ಬ ಅಂಗ್ಲನಬಲಿ ತೆಗೆದುಕೊಳ್ಳಲಾಯಿತು. 'ಮಾರೋ' ಫರಂಗಿಕೋ ಎಂಬ ಸೈನಿಕರ ಉನ್ಮತ್ತ ಘರ್ಜನೆ ಕೇಳುತ್ತಲೇ ಇಡೀ ನಗರವೇ ಉರಿದುಬಿದ್ದಿತು. ಇಂಗ್ಲಿಷರ ಬಂಗಲೆಗಳು ಬೆಂಕಿಗಾಹುತಿಯಾದವು. ಅವರ ಪ್ರೇತಗಳು ಧೂಳಪಾಲಾದವು! ಸೈನಿಕರು ದಿಲ್ಲಿಯ ಮಾರ್ಗವನ್ನು ಸಮಗೊಳಿಸುತ್ತ ನುನ್ನಡೆದರು. ಉಳಿದ ಕಂಠಸ್ನಾನದ ಕಾರ್ಯವನ್ನು ವಿಸಾರಿತ್ತಿನ ನಾಗರಿಕರು ಪೂರ್ಣ ಮಾಡಿದರು-

ಜ್ವಾಲಾಮುಖಿಯ ಅಕಾಲಿಕ ಸ್ಫೋಟ

ಕೇಶ್ಟೆಯ ಸಂಕೇತದಂತೆ ದಿಲ್ಲಿ ಬಾದಶಹ ಮತ್ತು ನಾಗರಿಕರು ಮೇ ೩೧ರ ಸಿದ್ಧತೆಯಲ್ಲಿರುವಾಗಲೇ ವಿಸಾರಿತ್ತಿನ ಸೈನಿಕರು ದಿಲ್ಲಿ ದ್ವಾರವನ್ನು ಪ್ರವೇಶಿಸಿದಾಗ ಇನ್ನು ಸುಮ್ಮನೆ ಕುಳಿತುಕೊಳ್ಳುವುದು ಯೋಗ್ಯವಲ್ಲವೆಂದು ಬಹದೂರ್ ಶಹನ ನೇತೃತ್ವದಲ್ಲಿ ದಿಲ್ಲಿ ಸ್ವತಂತ್ರವಾಯಿತು. ಆಗ ದಿಲ್ಲಿ ಸ್ವತಂತ್ರವಾಗುವುದೆಂದರೆ ಬಾರಕಮೇ ಸ್ವತಂತ್ರಗೊಂಡಂತೆ ಅರ್ಥವಾಗುತ್ತಿತ್ತು. ಕಲ್ಕತ್ತೆಯಲ್ಲಿದ್ದ ವೈಸ್‌ರಾಯ್ ಲಾರ್ಡ್‌ಕ್ಯಾನಿಂಗನು ದಿಲ್ಲಿ ಸ್ವಾತಂತ್ರ್ಯದ ಶರು ತಲಪಿಜೊಡನೆ ಸ್ತಂಭೀಭೂತನಾದನು. ಆ ಶಬ್ದಗಳ ಅರ್ಥವೇ ಆಗದು ಅವನಿಗೆ ಇಷ್ಟೈಶ್ವರ್ಯವಾದ ರೂ ದಿಲ್ಲಿಯು ಅಕಾಲಿಕ ಹೋರಾಟದಿಂದ ಕ್ರಾಂತಿಯ ಸುಸೂತ್ರ ಯೋಜನೆಯು ಮಣ್ಣು ಪಾಲಾಯಿತು. ಇಂಗ್ಲಿಷರು ಎಚ್ಚರಗೊಂಡರು. ವಿವಿಧ ಕೇಂದ್ರಗಳಲ್ಲಿ ಸಂಕೇತದ ದಾರಿ ಕಾಯುತ್ತಿದ್ದ ಕ್ರಾಂತಿ ವೀರರು ಸ್ತಂಭೀಭೂತರಾದರು. ಇಂಗ್ಲೀಷರ ಭೇದ ನೀತಿಗೆ ಬಲಿಬಿದ್ದ ಸಿಖ್ಖರು ಅವರಿಗೆ ಸಹಾಯವಾಡಿ ದೇಶದ್ರೋಹಿಗಳೆದರು. ಅವರ ಸಹಾಯದಿಂದ ಇಂಗ್ಲಿಷರು ವೇತಾವರದನಂದಿನ ಎಲ್ಲ ಕ್ರಾಂತಿ ಕೇಂದ್ರಗಳ ಮೇಲೆ ಕ್ರೌರ್ಯದ ದೌರ್ಜನ್ಯ ನಡೆಸಿ ಅವುಗಳನ್ನು ನಾಶಗೈದರು. ಇತ್ತ ದಿಲ್ಲಿಯು ಹಿಂದೆಯೇ 'ಮಾರೋ ಫರಂಗಿಕೋ' ಎಂದು ದಿ. 20ಕ್ಕೆ ಅಲೀಗಡ್, ನಾಸಿಕಾಬಾದ್, ಹೋಷಿಲ್ ಏಂಡ್, ಅಲಹಾಬಾದ್ ಮೊದಲಾದವುಗಳು ಉರಿಯುತ್ತ ಇಂಗ್ಲಿಷರ ಆಹುತಿಯನ್ನು ತೆಗೆದುಕೊಂಡವು. ಕಾನ್‌ಪುರ್ ನಾತ್ ನಿಶ್ಚಯಿಸಿದಂತೆ ಸೂತ್ರಬದ್ಧವಾಗಿ ಜೂನ್ 4ಕ್ಕೆ ಕ್ರಾಂತಿ ಎದ್ದಿತು. ಸೇಶ್ಟೆ ಮತ್ತು ಅದರ ವಿಖ್ಯಾತ ಸೇನಾನಿ ತಾಂತ್ಯಾಟೋಪಿಯವರು ನೇತೃತ್ವ ವಹಿಸಿದ್ದರಿಂದ ಇವರ ಹಡೆಗಳಂತೆ ದಿಲ್ಲಿ ಕಡೆಗೆ ತಿರುಗದಂತೆ ಕಾನ್‌ಪುರವನ್ನು ಕ್ರಾಂತಿಯುದ್ಧದ ಕೇಂದ್ರವನ್ನಾಗಿ ಮಾಡಿದನು. ಇಲ್ಲಿ ಸೇಶ್ಟೆಯ ರಾಜ್ಯ ಪ್ರತಿಷ್ಠಾಪನೆಯಾಯಿತೆಂದು ತಿಳಿದೊಡನೆ ಇಂಗ್ಲಿಷ್ ಸೇನಾಪತಿ ವ್ಹೀಲರನು ಒಂದು ಸಾವಿರ ಇಂಗ್ಲಿಷ್ ಸೈನಿಕರೊಂದಿಗೆ ಅಲ್ಲಿಯ ಕೋಟೆಯ ಆಶ್ರಯವನ್ನು ಪಡೆದನು! ಕೋಟೆಗೆ ಕ್ರಾಂತಿ ಕಾರರ ಮುತ್ತಿಗೆಬಿತ್ತು. ಬೇಕಿ ದಾರಿ ಕಾಣದೆ ವ್ಹೀಲರನು ಸಂಧಿಗೊಪ್ಪಿದನು. 'ಡಾಲ್‌ಹೌಸಿಯ ಪಾಪದತ್ತ ಭಾಗಿಯಾಗದವರಿಗೆ ಹೋಗಲು ಬಿಡಿವು' ಎಂದು ಅವನಿಗೆ ತಿಳಿಸಲಾಯಿತು. ಹಿಂತಿರುಗುವ ಈ ಆಂಗ್ಲ ಸೈನ್ಯದ ಪ್ರವಾಸದ ಎಲ್ಲ ವ್ಯವಸ್ಥೆಯಾಗಿ ಅದು ಹೊರಟಿತು! ಆದರೆ ಜನರಲ್ ನೀಲ್ ಇವನ ಅತ್ಯಾಚಾರ ದಿಂದ ಸಿಟ್ಟಿಗೆದ್ದ ಸೈನಿಕರು ಗಂಗಾ ನದಿಯಲ್ಲಿ ಅವರನ್ನು ಜೋಣಿಯಿಂದ ಹೊರ ತೆಗೆದು ನೀಲ್ ಗಂಗಾನದಿಯ ಶುಭ್ರಧಾರೆಯನ್ನು ರಕ್ತವರ್ಣದಿಂದ ಪರಿಶಿದರು! ಕಾನ್‌ಪುರದ ಹಿಂದೆಯೇ ಸಂಗ್ರಾಮ ದೇವತೆ ಮಹಾರಾಣಿ ಲಕ್ಷ್ಮೀಬಾಯಿ ನೇತೃತ್ವದಲ್ಲಿ ಝಾನ್ಸಿಯು ಸ್ವತಂತ್ರವಾಯಿತು ಉತ್ತರದಲ್ಲಿ ಪೆಷಾವರದಿಂದ ಜಬ್ಬಲ್‌ಪುರ ಮತ್ತು ದಕ್ಷಿಣಕ್ಕೆ ನರ್ಮದಾ ನದಿವರೆಗೂ ಕ್ರಾಂತಿ ಜ್ವಾಲೆಯು ತನ್ನ ನಾಲಿಗೆಗಳನ್ನು ಚಾಚಿತ್ತು. ಅಕಾಲಿಕ ಸ್ಫೋಟದಿಂದಾಗಿ ಇಂಗ್ಲಿಷರು ಹೇಗೆ ಸಾವಧಗೊಂಡರೋ ಹಾಗೆಯೇ ಕ್ರಾಂತಿ ಯೋಜನೆಯಲ್ಲಿ ಸೇರಿದ ಅನೇಕ ರಾಜರು ಹಟಸ್ಥರಾದರೆ ಇನ್ನು ಕೆಲವರು ಇಂಗ್ಲಿಷರಿಗೆ ಸಹಾಯ ಮಾಡಿದರು. ಯಾರ ರಾಜಮುಕುಟವನ್ನು ಇಂಗ್ಲಿಷರು ತುಳಿದಿದ್ದರೋ ಆ ನಿಜಾಮ, ದಿನಕರರಾವ್ ರಾಜವಾಡೆಯವರ ಸಲಹೆಯಿಂದ ಪಟಿಯಾಲ, ನಾಭಾ, ಜಿಂದ್, ಕಚ್ಚ, ರಾಜಪೂತ್ ಆದಿ ಸಂಸ್ಥಾನಗಳು ವಿಜಯದ ಆನುಸೂಯದಿಂದ ಪ್ರಾತ್ಯನೇ ಅತ್ಯಗ್ನಿಗಾರನಕ್ಕಿಂತಲೂ ಸೇ ಗಾ ದ ರೂ ಜೀವಿಸುವುದೇ ಪ್ರಯಾಣಾರ್ಥ ವೆಂದು ಬಗೆದು ನೊಮಲು ಸೇವೆಯಂತೆ ಮತ್ತು ಅನಂತರ ಕ್ರಾಂತಿ ವಿರೋಧಿ ಘೋರಣೆಯನ್ನು ತಾಳಿದವು. ಇನ್ನು ನಾಗಪುರ ಯಾವ ರಾಜಸಿಂಹಾಸನವನ್ನು ಭಂಗಿಸಿ ಹಾಲ್‌ಹೌಸಿಯು ರಾಣಿಯರ ಅಂತಃಪುರ ಮೊಳಗಿನ ಪಲ್ಲಂಗದಡಿಯ ಭೂಮಿಯನ್ನು ಅಗೆದು ಭೋಗ್ಯಸ್ಥಿ ಮಸೆತಸಪ ವ ನ ರಂ ಗ ಮಾಡಿದನೋ, ಯಾವುದಿನ ತಳಿನು ನಷ್ಟಗೊಳಿಸಿದನೋ, ಅಕ್ಷರಾರ್ಥ ವಿನಾಯಕನ ಕ್ರಾಂತಿಕಾರಿಗಳ ಭಾಸಿಯನ್ನೇ ರಿಚಿದನು, ಮತ್ತು ರಾಣಿ ಬಾಕಿ ಬಾಯಿಯು ಇಂಗ್ಲಿಷರ ಬೆ ಳ್ಳಿಕ್ಕೆ ನಂತಳು! ಪಸ್ಕೋ ಇವಳು ಮೈಸೂರಿನಲ್ಲಿ ಯಂತೆ ಕೇವಲ ಸಂಕೇತ ಮಾಡಿದ್ದೇ ಆಗಿದ್ದರೆ ನಾಗಪುರದಿಂದ ಶೈದೆ ಬಾದಾ ಮತ್ತು ಅಲ್ಲಿಂದ ಸಾತಾರಾ, ಕೊಲ್ಹಾಪುರ ವರೆಗೂ ಯುದ್ಧವು ವರಸುತ್ತಿತ್ತೆಂದು

ಇಂಗ್ಲಿಷ್ ಇತಿಹಾಸಜ್ಞರೇ ಹೇಳುತ್ತಾರೆ. ರಿಗಿನ ಹೆಮ್ಮೆಟಿ ಕಮಿಷನರ್ ಎಲೀಸನ್ ಬಾಕಾಬಾಯಿಗೆ ಧನ್ಯವಾದಗಳನ್ನಿತ್ತನು. ಸನ್ಮಾನವು ಮಾನ ಧವಕ್ಕಾಗಿರುತ್ತದೆ, ರಾಣಿ ಬಾಕಾ ಮತ್ತು ಅವಳ ಮನೋವೈ ತ್ಯಯ ಜನರಿಗೆ ಅದರ ಮೇಲೆ ಯಾವ ಅಧಿಕಾರವಿರಬಹುದು? ಅವಳ ಈ ಸಹಾ ಯಕ್ಕಾಗಿ ಇಂಗ್ಲಿಷರು ಕೊಟ್ಟ ಬಹು ಮಾನವಾದರೂ ಏನು? ಕೇವಲ ತುಚ್ಛೀ ಕರಣದ ವರ್ತನೆ!

ರುಸ್ತಾನ್ಸಿಯ ಸಂಗ್ರಾಮ ದೇವತೆ

ಸಾಸನ್ಯಾಜ್ಞಧಾನಿ ದಿಲ್ಲಿ ನೂರ ಮೂವತ್ನಾಲ್ಕು ದಿನ ರಾತ್ರಿ ಹಗಲು, ಕ್ಷಣಕ್ಷಣಗಳ ಹೋರಾಟದ ನಂತರ ಸಮರ್ಥ ನೇತೃತ್ವದ ಅಭಾವದಿಂದಾಗಿ ಬ್ರಿಟಿಷರ ತಿಸ್ತಿನ ಹಾಗೂ ಸನ್ನದ ಸೇನೆಯ ವಶವಾಯಿತು. ವೃದ್ಧ ಬಹದೂರ ಶಾಹ ಮತ್ತು ಅತನ ಬೇಗಂ ಜಿನ್ನತ್ ಮಹಲಿಗೆ ಬ್ರಹ್ಮದೇಶದ ದೇಶಪ್ರತ್ಯ ಜೀವನದಲ್ಲೇ ಅಂತಿಮ ಉಸಿರನ್ನು ಚಿಡ ಬೇಕಾಯಿತು; ಕ್ರಾಂತಿ ಸೇನೆಯ ಮುಖಂಡ ನಾನಾಸಾಹೇಬರು ತಿಂಗಳು ಗುಟ್ಟಲ್ಲೆ ಹೋರಾಡಿ ರಣಭೇರಿ ಹೊಡೆಯು ತ್ತ ಹೋದರೂ ವಿಧಿಯು ಅಪಜಯತತ್ಪ ನ್ನು ಸೂಚಿಸಿದ ನೇಪಾಳಕ್ಕೆ ಹೋಗಿ ಅಂತ ರ್ಧಾನ ಹೊಂದಿದರು. ಅಲ್ಲೇ ನಾಯಿ ತೆಂಬುದು ಇನ್ನೂ ತಿಳಿದಿಲ್ಲ. ಪೊದು ಬಾಜೀರಾಯರ ವಂಶಕುಮಾರನು ಸ್ವಧ ರ್ಮ ಹಾಗೂ ಸ್ವದೇಶಕ್ಕಾಗಿ ರಣರಂಗ ದಲ್ಲಿ ಮಡಿದನೆಂಬುದು ಗೌರವಾಸ್ಪದ ವಿಷಯ. ನಾನಾಸಾಹೇಬರ ಸಹೋ ದರಿ ಮಹಾರಾಣಿ ಲಕ್ಷ್ಮೀಬಾಯಿಯು ಸರ್ ಹ್ಯೂ ರೋಸ್‌ನಂತಹ ಉದ್ದಾಮ ಇಂಗ್ಲಿಷ್ ಸೇನಾಪತಿಯೊಡನೆ 9 ದಿನ ಹಗಲು ರಾತ್ರಿ ನಡೆಸಿದ ಹೋರಾಟದಿಂದ ಇಂಗ್ಲಿಷರು ಪಡುಗಲಾರಂಭಿಸಿದರು. ರುಸ್ತಾನ್ಸಿಯನ್ನು ಳಿಸುವುದು ಅಸಾಧ್ಯ ವೆಂದು ಕಂಡುಬಂದನಂತರ ಮಧ್ಯರಾತ್ರಿ ಯಲ್ಲಿ ಪುತ್ರನನ್ನು ಹೆನ್ನಿಗೆ ಕಟ್ಟಿಕೊಂಡು ರುಸ್ತಾನ್ಸಿಕೋಟೆಯ ಮೇಲಿನ ಗೋಡೆಯ ಮೇಲಿಂದ ಹಾರಿ ಇಂಗ್ಲಿಷ್ ಸೇನೆಯ ಮುತ್ತಿಗೆಯನ್ನೊಡೆದ ಗೋಮಾಂಚಕಾರಿ ಘಟನೆಯು ಕಾವ್ಯಗಳೊಳಗಿನ ಅದ್ಭುತ ವರ್ಣನೆಗಳನ್ನೂ ಮೀರಿಸುತ್ತದೆ! ಅಪಂಕ ಕಾಲ್ಪಿ ಮತ್ತು ಗ್ವಾಲ್ಹೇರದ ರಣಕ್ಷೇತ್ರಗಳನ್ನು ತನ್ನ ತೇಜಸ್ಸಿನಿಂದ ಉದ್ದೀಪಿಸಿದ ಈ ಅಮರ ದೇವತೆಯು ಗ್ವಾಲ್ಹೇರದ ಗಂಗಾದಾಸ್ ಬಾಬಾನ ಗುಡಿಸಲು ಪತ್ತಿರ ಅನಲಜ್ವಾಲೆಯಲ್ಲಿ ಅಂತರ್ಧಾನ ಹೊಂದಿತಳು.

58ರ ಸಮರದಲ್ಲಿ ಎಷ್ಟಿಗಿಂತೀ ವಯೋವೃದ್ಧ ಹಾಗೂ ಯಶಸ್ವೀ ಸೇನಾನಿ 80 ವರ್ಷದ ಜಗದೀಶಪುರದ ಕುವರ ಸಿಂಹರು ಇಂಗ್ಲಿಷರನ್ನು ಪರಾಜಿತಗೊಳಿಸಿ ಸ್ವತಃತ್ರ ಜಗದೀಶಪುರದಲ್ಲಿ ತಮ್ಮ ದೇಹವನ್ನಿಟ್ಟರು. ಈ ಸಮರ ಯಜ್ಞದ ದಂತಿಮ ಆಹುತಿ ಎಂದರೆ ಪೇಶ್ವೆಯ ಅತಿ ನೆಚ್ಚಿನ ಸೇನಾನಿ ತಾಂತ್ಯಾಟೋಪಿಯು ನರದಾಗಿತ್ತು. ಇವರ ಬಗ್ಗೆ ಕುಟಿಲಾಭಿ ಪ್ರಾಯ ಸೂಚಿಸುತ್ತ ಇಂಗ್ಲಿಷ್ ಲೇಖ ಕರು 'Had there been only half a dozen of Tatia Topes, the History of the Revelutionary War of 1857 would have been Quite Different' ಎಂದು ಒರೆದಿದ್ದಾರೆ. ಭಾರತೀಯ ರಾಷ್ಟ್ರದ ಈ ದೇದೀಪ್ಯಮಾನ ಕೌಸ್ತುಭ ಪರಕೀಯರ ಪಂಚಾಕ್ರಮದಿಂದಲ್ಲ, ಆದರೆ ಸ್ವಕೀಯರ ವಿಶ್ವಾಸ ಘಾತುಕತೆಗೆ ಬಲಿ ಬಿದ್ದು ಧಧಸ್ತಂಭದ ಮೇಲೇರಬೇಕಾ ಯಿತು! ನಾನಾಸಾಹೇಬ ಪೇಶ್ವೆಯವರ ಅಳಿಯ ರಾವ್ ಸಾಹೇಬರು ಅನಂತರ ಅಜ್ಞಾತವಾಸದಲ್ಲಿದ್ದರು. 1862ರ ಆಗಸ್ಟ್ 20ರಂದು ಅವರನ್ನು ಬಂಧಿಸಿ ಕಾನ್‌ಪುರದಲ್ಲಿ ಗಲ್ಲಿಗೇರಿಸಲಾಯಿತು.

ಈ ರೀತಿ ಭಾರತೀಯ ಸ್ವಾತಂತ್ರ್ಯ ಸಮರದ ಜ್ವಾಲಾಮುಖಿಯ ಸರ್ವಪ್ರಥ ಮವಾಗಿ ಯಾವ ಸ್ಫೋಟವು 1856ರ ಮೇ 10 ರಂದು ಆಯಿತೋ ಅದರ ಕೊನೆ ಯಜ್ವಾಲೆಯು ಕಾ. 20-8-1862 ರಂದು ರಾವ್ ಸಾಹೇಬ ಪೇಶ್ವೆಯವರ ಫಾಸಿಯಿಂದ ವಿರಾಮ ಪಡೆಯಿತು. ಅನಂತರ ಇಂಗ್ಲಿಷರು ಈ ಕ್ರಾಂತಿಯ ಹುಸಿ ಬೀಜವು ಕೂಡಾ ಉಳಿದಿಲ್ಲವೆಂದು ಖಾತ್ರಿಪಡಿಸಿಕೊಂಡರು.

ಭಾರತೀಯ ಪ್ರಜಾಸತ್ತೆಯ ಉದ್ಗಾತಾ ವಾಸುದೇವ ಬಲವಂತ ಫಡಕೆ

ಆದರೆ ಜ್ವಾಲಾಮುಖಿಯು ಸದಾ ಕಾಲಕ್ಕೆ ಆರಿಹೋಗೆತ್ತೆ? ಇಲ್ಲ. ಅದು ಒಳಗಿಂದೊಳಗೇ ಕುದಿಯುತ್ತಿತ್ತು. ಸೇನಾ ಪತಿ ತಾಂತ್ಯಾ ಟೋಪಿಯನ್ನು ಗಲ್ಲಿಗೇರಿ ಸಿದ ಕೇವಲ 20 ವರ್ಷಗಳಲ್ಲಿಯೇ ಅದರ ಒಳಗಿನ ತಪ್ತರಸವು ಪುಣೆ ಒಮ್ಮೆ ಹೊರ ಉಕ್ಕಿಬಂದಿತು. 57ರ ಅಪಯತದಿಂದ ಭಾರತೀಯ ಸಾತಂತ್ರ್ಯ ಸಮರ ತಿಲ್ಲ ತಿಲ್ಲ. "ಕಾಪ್ತ ಒಂದು ಹೋರಾಟದಲ್ಲಿ ನೋರರೂ ಹೋ ರಾ ಟ ಗ ಳ ಒಂ ದಿ ಹೋರಾಟಕೂಡುವೆತ್ತೆ, ಮತ್ತು ಕೊನೆಗೆ ಯುದ್ಧವನ್ನು ನೆದ್ದೇ ಗೆಲ್ಲುವೆವು." ಈ ಭಾರತೀಯ ರಾಷ್ಟ್ರದ ದೃಢನಿಶ್ಚಯವನ್ನು ಅತಪ್ತರಸದ ಸ್ಫೋಟವು ಪ್ರಕಟಿಸಿತು. ಆ ಸ್ಫೋಟವೇ ವೀರವರ ವಾಸುದೇವ ಬಲವಂತ ಫಡಕೆಯವರ ಜೀವನ ಕಥೆ ಯಾಗಿದೆ. ಮಹಾರಾಷ್ಟ್ರದ ವನವೇಲು ತಹ್ಸೀಲಿನ ಶಿರಢೋಣ ಎಂಬ ಹಳ್ಳಿಯು ಈ ವಂಶಾಂಕುರ ಭಾರತೀಯ ಪ್ರಜಾಸತ್ತೆಯ ಮಹಾನ್ ಉದ್ಗಾತನಾದನು. ಸೇನಾಪತಿ ತಾಂತ್ಯಾಟೋಪಿಯ ಕೈಯಿಂದ ಬಿದ್ದ ಸ್ವಾತಂತ್ರ್ಯ ಧ್ವಜವನ್ನು ಪೂನಾ ಕವಿ ಸರಿತೆಟ್‌ನ ಕಾರಕೂನನಾಗಿದ್ದ ಈ ಸಾಮಾನ್ಯ ಜನತೆಯ ಪ್ರತಿನಿಧಿಯು ಎತ್ತಿ ಹಿಡಿದು ಬ್ರಿಟಿಷ್ ಸಾಮ್ರಾಜ್ಯವನ್ನೆ ಯುದ್ಧಕ್ಕೆ ಆಹ್ವಾನಿಸಿದನು. ಮುಂಬೈ ಗವರ್ನರ್ ರಿಚರ್ಡ್ ಟೆಂಪಲರ ರಾಜ್ಯ ಯಂತ್ರ ಇಡೀ ಅರಬ್ಬಿ ಸಮುದ್ರದ ಚಲ್ಲಾಪಿಲ್ಲಿ ದಂಡೆಮಾಡಿ ಕೊನೆಗೆ ವಿಶ್ವಾಸ ಘಾತು ಕತೆಯಿಂದ, ವೀರ ವಾಸುದೇವ ಬಲವಂತ ಫಡಕೆ ಮೇಜರ್ ದೇವಿಯರ್‌ನ ಕೈಗೆ ಸಿಕ್ಕಿಬಿದ್ದರು. ವೈಸ್ರಾಯಿನ ಆಗಮನ ವನ್ನು ಸ್ವಾಗತಿಸುತ್ತ ನ್ಯಾಯಮಂದಿರ ದಲ್ಲಿ ಕೊಟ್ಟ ಹೇಳಿಕೆಯಲ್ಲಿ ಈ ಅಧಿನಾಯಕ ದಧೀಚಿ ಹೇಳಿದನು. "ಹಿರಣ್ಯಾನಂದ ಪ್ರಜಾಸತ್ತೆಯ ರಾಜ್ಯಸಿಂಹಾಸನವು ನನ್ನ ಧ್ಯೇಯವಾಗಿತ್ತು. ಜೀವದಿಗೆ ನಾನು ಹೆದರಬೇಕಾಗಿಲ್ಲ. ಆತಪ ಕಾರ್ಯವನ್ನೇ ನಾನು ಮುಂದುವರಿಸಿದ್ದೇನೆ. ಜೀವ ತೆಗೆಗಳ ಕಲ್ಯಾಣಕ್ಕಾಗಿ ದಧೀಚಿ ಮುನಿಯು ತನ್ನ ಅಸ್ಥಿಯನ್ನು ಕೊಟ್ಟನು. ಮತ್ತು ನನ್ನ ರಾಷ್ಟ್ರಕ್ಕಾಗಿ ನಾನು ಮರಣವನ್ನೇಕೆ ಸ್ವೀಕರಿಸಬಾರದು?" 1879ರ ನವೆಂಬರ್ ತಿಂಗಳ ಒಂದು ಸಂಜೆಯಲ್ಲಿ ಅಮೃತ ಬಜಾರ್, ಪತ್ರಿಕೆ ಈ ವೀರನನ್ನು 'ಹಿಮಾ ಚಲದಂತೆ ಉತ್ತುಂಗ ಪುರುಷ' ಎಂದು ಸ್ತೋರವಿಸಿದೆ.

卐卐卐卐卐

ಕಾಂಗ್ರೆಸ್

1885 ರಲ್ಲಿ ಆಯಿಲ ಭಾರತಸ್ವಾತಂತ್ರ್ಯ ಸಂಸ್ಥೆಯಾದುದು. 1897 ರಲ್ಲಿ ವೀರವರ ಸಾವರ್ಕರರು ತಮ್ಮ ಸಂಗಡಿಗರೊಂದಿಗೆ ಕ್ರಾಂತಿಯನ್ನಾರಂಭಿಸಿದುದು. ಲೋಕ ಮಾನ್ಯ ಬಾಲಗಂಗಾಧರ ತಿಲಕರ ಸ್ವಾತಂತ್ರ್ಯೋದ್ಯಮ 1916 ರಲ್ಲಿ ಗಾಂಧೀಜಿ ಭಾರತಕ್ಕೆ ಬಂದು 1920 ರಲ್ಲಿ ತಿಲಕರ ಮರಣಾನಂತರ ಸಾಯಕತ್ವವನ್ನುವಹಿಸಿ 27 ವರ್ಷ ಸ್ವಾತಂತ್ರ್ಯೋದಯನಡೆಸಿ 1947 ರಲ್ಲಿ ಗೆದ್ದದ್ದು ಸೃತ್ಯವಾಗಿದೆ.

ಔದ್ಯೋಗೀಕರಣದ ಕಡೆಗೆ

ಸ್ವಾತಂತ್ರ್ಯಾನಂತರದ ಪ್ರಥಮ ದಶಕದಲ್ಲಿ ನಡೆದ ಕಾರ್ಯ ಪ್ರಗತಿ

ಸ್ವಾತಂತ್ರ್ಯಾನಂತರದ ಪ್ರಥಮ ದಶಕದಲ್ಲಿ, ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ, ನಡೆದಿರುವ ಮಹತ್ವಪೂರ್ಣ ಪರಿವರ್ತನೆಯ ಸೂಚಿಕೆಯಿದು. ಈ ಪರಿವರ್ತನೆಯ ಹಿನ್ನೆಲೆಯಲ್ಲಿ, ಭಾರತದ ಜನತೆ— ತಾಂತ್ರಿಕರು, ಆಡಳಿತಗಾರರು, ಶ್ರಮ ವ್ಯವಸ್ಥಾಪಕರು ನಡೆಸಿರುವ ಬೃಹತ್ ಪ್ರಯತ್ನ ಅಡಗಿದೆ.

ಉತ್ಪಾದನೆಯಲ್ಲಿ ಹೆಚ್ಚಳ

ಕೈಗಾರಿಕೋದ್ಯಮಗಳ ತ್ವರಿತವಾದ ನಿಯೋಜಿತ ಅಭಿವೃದ್ಧಿಯಿಂದ ಕಳೆದ 10 ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆಯು ನೂರಕ್ಕೆ 60 ರಷ್ಟು ಹೆಚ್ಚಾಯಿತು.

ಉದಾಹರಣೆಗೆ: ನಿರಣಿಗಳಲ್ಲಿ ತಯಾರಿಸಿದ ಹತ್ತಿಬಟ್ಟೆಗಳ ಉತ್ಪಾದನೆಯು 1947 ರಲ್ಲಿ 37,600 ಲಕ್ಷ ಗಜಗಳಷ್ಟಿದ್ದು 1957 ರಲ್ಲಿ 53,000 ಲಕ್ಷ ಗಜಗಳಿಗೇರಿತು. ಸಕ್ಕರೆಯ ಉತ್ಪಾದನೆಯು 10-75 ಲಕ್ಷ ಟನ್ನುಗಳಿಂದ 20 ಲಕ್ಷ ಟನ್ನುಗಳಿಗೆ ಹೆಚ್ಚಿತು. ವನಸ್ಪತಿ ತೈಲಗಳ ಉತ್ಪಾದನೆಯು 95,000 ಟನ್ನುಗಳಿಂದ 2,56,000 ಟನ್ನುಗಳಷ್ಟಾಯಿತು. ಬೈಸಿಕಲ್‌ಗಳ ಉತ್ಪಾದನೆಯು 43,000 ಇದ್ದದ್ದು 6,95,000 ಕ್ಕೂ, ಹೊಲಿಗೆ ಯಂತ್ರಗಳ ತಯಾರಿಕೆಯು 6,000 ದಿಂದ 1,33,000 ಕ್ಕೂ ಏರಿತು.

ಇದರ ಜೊತೆಗೆ, ಹೊಸದಾಗಿ ಸ್ಥಾಪನೆಯಾದ, ಪ್ರಮುಖ ಎಂಜಿನಿಯರಿಂಗ್ ಹಾಗೂ ರಾಸಾಯನಿಕ ಕೈಗಾರಿಕೆಗಳಲ್ಲಿಯೂ ಗಮನಾರ್ಹವಾದ ಉತ್ಪಾದನೆಯಾಗಿದೆ. 1947 ರಿಂದೀಚೆಗೆ, ಕೈಗಾರಿಕಾ ಪ್ರಗತಿಯಲ್ಲಿ ಇದೊಂದು ಮಹತ್ವದ ಅಂಶವೆನಿಸುವುದು.

ರೈಲ್ವೆ ಎಂಜಿನ್‌ಗಳನ್ನು ತಯಾರಿಸುವ ಎರಡು ಕಾರ್ಖಾನೆಗಳು ಒಂದು ಸರ್ಕಾರಿ ಸ್ವಾಮ್ಯದಲ್ಲಿರುವ ಪೂರ್ವಕ್ಷೇತ್ರದಲ್ಲಿರುವ ರೈಲ್ವೆ ಎಂಜಿನ್ ಕಾರ್ಖಾನೆ, ಮತ್ತೊಂದು ಖಾಸಗಿ ಕಾರ್ಯಕ್ಷೇತ್ರದಲ್ಲಿರುವ 'ಟಿಲ್ಕೊ' ಕಾರ್ಖಾನೆ—, ಮೋಟಾರು ಕೈಗಾರಿಕೆ, ಸಿಂಧ್ರಿ ಕೃತಕ ಗೊಬ್ಬರ ಕಾರ್ಖಾನೆ, ಆಧುನಿಕ ತೈಲ ಶುದ್ಧೀಕರಣಾಲಯಗಳು; ಉಕ್ಕಿನ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳು, ರೈಲ್ವೆ ವ್ಯಾಗನುಗಳನ್ನು ನಿರ್ಮಿಸುವ ಖಾಸಗಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳು, ಪೆರಂಬೂರಿನಲ್ಲಿರುವ ಸಮಗ್ರರೈಲ್ವೆ ಕಾರ್ಖಾನೆ, ಹಿಂದೂಸ್ಥಾನ್ ನೌಕಾ ನಿರ್ಮಾಣಕೇಂದ್ರ, ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ, ಕೈಗಾರಿಕೆಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ತಯಾರಿಸುವ ಕಾರ್ಖಾನೆ, ವಿದ್ಯುಚ್ಛಕ್ತಿ, ಮೋಟಾರು ಹಾಗೂ ಬೈಸಿಕಲ್ ಎಂಜಿನ್‌ಗಳನ್ನು ತಯಾರಿಸುವ ಅನೇಕ ಕಾರ್ಖಾನೆಗಳು ಮತ್ತು ಮುಖ್ಯ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳು ಇವೆಲ್ಲ ಈಪ್ರಮುಖ ಕೈಗಾರಿಕೋದ್ಯಮಗಳಲ್ಲಿ ಸೇರುತ್ತವೆ.

ಯಂತ್ರೋಪಕರಣಗಳ ತಯಾರಿಕೆ

1956 ರಲ್ಲಿ 23 ಕೋಟಿರೂಗಳಷ್ಟು ಬೆಲೆಯ ಯಂತ್ರೋಪಕರಣಗಳ ಉತ್ಪಾದನೆಯಾಯಿತು. 1947 ರಲ್ಲಿ ಈ ಕ್ಷೇತ್ರದಲ್ಲಾಗುತ್ತಿದ್ದ ಉತ್ಪಾದನೆ ಅತ್ಯಲ್ಪ. ಡೈಸೆಲ್ ಎಂಜಿನ್‌ಗಳ ತಯಾರಿಕೆಯು 1947 ರಲ್ಲಿ 700 ಇದ್ದುದು, 1956ರಲ್ಲಿ ಸುಮಾರು 12,000 ಕ್ಕೆ ಏರಿದೆ. ವಿದ್ಯುಚ್ಛಕ್ತಿಯಿಂದ ಕೆಲಸಮಾಡುವ ಸಂಪುಗಳ ಉತ್ಪಾದನೆಯು 6,000 ದಿಂದ 46,000 ಕ್ಕೂ, ವಿದ್ಯುಚ್ಛಕ್ತಿ ಮೋಟಾರುಗಳ ಉತ್ಪಾದನೆಯು 38,000 ಅಶ್ವಶಕ್ತಿಯಿಂದ 3,38,000 ಅಶ್ವಶಕ್ತಿಗೆ ಮುಟ್ಟಿದೆ.

ರಾಸಾಯನಿಕ ವಸ್ತುಗಳ ಉತ್ಪಾದನೆಯನ್ನು ತೆಗೆದುಕೊಂಡಲ್ಲಿ, ಗಂಧಕಾಮ್ಲದ ಉತ್ಪಾದನೆ 60,000 ಟನ್ನುಗಳಿಂದ 1,65,000 ಟನ್ನುಗಳಿಗೇರಿದೆ. ಕಾಸ್ಟಿಕ್ ಸೋಡಾ ಉತ್ಪಾದನೆ 3,000 ಟನ್ನುಗಳಿಂದ 39,000 ಟನ್ನುಗಳಿಗೆ ಹೆಚ್ಚಿದೆ. ಸೋಡಾ ಆಷ್ 12,000 ಟನ್ನುಗಳಿಂದ 84,000 ಟನ್ನುಗಳಿಗೂ, ಅಮೋನಿಯಂ ಸಲ್ಫೇಟ್ 21,000 ಟನ್ನುಗಳಿಂದ 3,38,000 ಟನ್ನುಗಳಿಗೂ, ಸೂಪರ್ ಫಾಸ್ಫೇಟ್ 5,000 ಟನ್ನುಗಳಿಂದ 81,000 ಟನ್ನುಗಳಿಗೂ ಏರಿದೆ.

ಕಲ್ಲಿದ್ದಲು ಮತ್ತು ಉಕ್ಕಿನ ಉತ್ಪಾದನೆಯಲ್ಲಿ ಆಗಿರುವ ಹೆಚ್ಚಳವೂ ಗಮನಾರ್ಹವಾಗಿದೆ. 1947 ರಲ್ಲಿ 300 ಲಕ್ಷ ಟನ್ನುಗಳಷ್ಟು ಕಲ್ಲಿದ್ದಲನ್ನು ಗಣಿಗಳಿಂದ ಹೊರತೆಗೆಯಲಾಯಿತು. 1956ರಲ್ಲಿ 390 ಲಕ್ಷ ಟನ್ನುಗಳಷ್ಟು ಕಲ್ಲಿದ್ದಲನ್ನು ಗಣಿಗಳಿಂದ ಹೊರತೆಗೆಯಲಾಯಿತು. ಇದೇ ಅವಧಿಯಲ್ಲಿ ಉಕ್ಕಿನ ಉತ್ಪಾದನೆಯು 8.9 ಲಕ್ಷ ಟನ್ನುಗಳಿಂದ 18.2 ಲಕ್ಷ ಟನ್ನುಗಳಿಗೆ ಹೆಚ್ಚಿತು. ಸಿಮೆಂಟಿನ ಉತ್ಪಾದನೆ 14 ಲಕ್ಷ ಟನ್ನುಗಳಿಂದ 49 ಲಕ್ಷ ಟನ್ನುಗಳಿಗೆ, ಅಂದರೆ ಸುಮಾರು ನೂರಕ್ಕೆ 350 ರಷ್ಟು ಹೆಚ್ಚಿದೆ.

ಔದ್ಯೋಗಿಕ ತಂತ್ರಜ್ಞದಲ್ಲಿ ಪ್ರಗತಿ

ಈ ಎಂಜಿನಿಯರಿಂಗ್ ಹಾಗೂ ರಾಸಾಯನಿಕ ಕೈಗಾರಿಕೆಗಳನ್ನು ನಿರ್ಮಿಸುವ ವಿಧಾನದಲ್ಲಿ ವೇಗವು ಸಾಧಿಸಿರುವ ಔದ್ಯೋಗಿಕ ತಂತ್ರಜ್ಞದ ಪ್ರಗತಿಯನ್ನು ಅಂಕಿಸಂಖ್ಯೆಗಳು ಸೂಚಿಸಲಾರವು ಎಂಬುದೊಂದು ಮಹತ್ವದ ವಿಷಯ. ಅಲ್ಲಲ್ಲಿದ್ದ ಕೆಲವು ವಿದೇಶಿ ತಂತ್ರಜ್ಞರನ್ನು ಬಿಟ್ಟರೆ, ಈ ಕೈಗಾರಿಕೆಗಳನ್ನು ಪೂರ್ಣವಾಗಿ ಭಾರತೀಯ ತಾಂತ್ರಿಕರೇ ನಿರ್ಮಿಸಿದರು.

ದ್ವಿತೀಯ ಯೋಜನೆಯಲ್ಲಿ ಉಕ್ಕಿನ ಉತ್ಪಾದನೆಯು ಸುಮಾರು ನಾಲ್ಕರಷ್ಟು ಹೆಚ್ಚುವುದು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ 150 ಲಕ್ಷ ಟನ್ನುಗಳಷ್ಟು ಉಕ್ಕಿನ ಉತ್ಪಾದನಾ ಸಾಮರ್ಥ್ಯವನ್ನು ಸಾಧಿಸುವುದು ಅಸಾಧ್ಯವೆನಿಸದು.

ಕಳೆದ ಹತ್ತು ವರ್ಷಗಳಲ್ಲಿ ಗಳಿಸಿರುವ ಅನುಭವ ಹಾಗೂ ವಿಶ್ವಾಸವು ಈ ಕೆಳಕಂಡ ಕೈಗಾರಿಕೆಗಳನ್ನು ಆರಂಭಿಸುವುದಕ್ಕೆ ಚಕ್ತಿಯನ್ನು ನೀಡಿದೆ.

1) ಉಕ್ಕಿನ ಕಾರ್ಖಾನೆಗಳು.

2) ಭಾರಿ ಪ್ರಮಾಣದ ರಾಸಾಯನಿಕ ವಸ್ತುಗಳ ತಯಾರಿಕಾ ಕಾರ್ಖಾನೆಗಳಿಗೆ ಬೇಕಾಗುವ ಯಂತ್ರಗಳು,

3) ಪ್ರಥಮ ಪ್ರಾಜೆಕ್ಟ್‌ಗೆ ಬೇಕಾಗುವ ಯಂತ್ರೋಪಕರಣ ಭಾಗಗಳನ್ನು ಪೂರೈಸುವ ಸಲುವಾಗಿ ಫೌಂಡ್ರಿಗಳು,

4) ಗಣಿಕೆಲಸಗಳಲ್ಲಿ ಬಳಕೆಯುಕ್ತವಾದ ಭಾರಿ ಯಂತ್ರೋಪಕರಣಗಳು,

5) ಭಾರಿ ಪ್ರಮಾಣದ ಮೆಷಿನ್ ಟೂಲ್ ಕಾರ್ಖಾನೆ,

6) ಭಾರಿ ಪ್ರಮಾಣದ ಉಕ್ಕಿನ ರಚನೆಗಳು, ಮತ್ತು

SUNRISE

21 JEWELS

You must know that the
SUNRISE
Water Resistant Watches
With
Latest Technical Improvements are

‡ Shock protected
‡ Anti Magnetic
‡ Steel unbreakable spring
‡ Tropicalised balance with self compensating hair spring
‡ 100 Percent water-proof

Purchase today.

ಸನ್‌ರೈಸ್ [ಸೂರ್ಯೋದಯ]
.... ಕೈ ಗಡಿಯಾರ ....

ಅತ್ಯಂತಾಧುನಿಕ ವೈಶಿಷ್ಟ್ಯಗಳನ್ನೊಳಗೊಂಡು ಈಉದ್ಯಮದಲ್ಲಿ ಕ್ರಾಂತಿಯನ್ನುಂಟು ಮಾಡಿದೆ. ಧಕ್ಕೆಯಿಂದ ರಕ್ಷಿಸಲ್ಪಟ್ಟು, ಒಳ್ಳೆಯ ಸ್ಟೀಲಿನ ಒಡೆಯದಿರದ ಸ್ಪ್ರಿಂಗ್ ಮತ್ತು ಹೇರ್‌ಸ್ಪ್ರಿಂಗ್‌ಗಳನ್ನುಳ್ಳದಾಗಿದೆ.

ನೀರಲ್ಲಿ ಬಿದ್ದರೂ ಕೆಡದಂತೆ ನಿರ್ಮಾಣವಾಗಿದೆ. ಇಂದೇ ಬಂದು ಕೊಳ್ಳಿರಿ-

S. V. Setty. & Bros., 874, Bangalore Road, *BELLARY-2*

Bharat Electric Coffee Works Bellary.

For quality Coffee, pure and fresh to suit every taste and purpose- Our Coffee is electrically roasted and ground under expert supervision

Reasonable Rates

A TRIAL WILL COVINCE YOU.

ಭಾರತ್ ಎಲೆಕ್ಟ್ರಿಕ್ ಕಾಫಿ ವರ್ಕ್ಸ್

ಬೆಂಗಳೂರು ರೋಡು ಬಳ್ಳಾರಿ ೨

ನಮ್ಮಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಹುರಿದು ಪುಡಿಮಾಡಿದ ತಾಜಾ ಶ್ರೇಷ್ಠವಾದ ಪುಡಿಯು ಯಾವಾಗಲೂ ಸರಿಯಾದ ಬೆಲೆಗೆ ದೊರೆಯುತ್ತದೆ. ಕಾಫಿ ಬೀಜವನ್ನು ಪುಡಿ ಮಾಡಿಕೊಡುತ್ತೇವೆ.

ಒಂದು ಸಲ ಪರೀಕ್ಷಿಸಿ ಮನಗಾಣಿರಿ.

CRESCENT INSTITUTE OF--COMMERCE, BELLARY.

(Recognised By Govt. of Mysore)

Golden Opportunity *Dont Miss To Enroll*

The Managing Committee have decided to introduce a fresh subject namely "*BUSINESS MANAGEMENT*" in addition to TYPEWRITING, SHORT-HAND & BOOK-KEEPING from this year. Efficient and elaborate coaching will be given to the candidates according to syllabus prescribed by Mysore Educatio. Rules and Regulations. Rest of the particulars can be had from the Principal in person-

S. Zahiruddin.
Principal,

ಹಿಂದೀ ಮಹಾವಿದ್ಯಾಲಯ ಬಳ್ಳಾರಿ

ಪ್ರಾರಂಭಿಕ ಮತ್ತು ಉನ್ನತ ಪರೀಕ್ಷೆಗಳು, ಪಾಠ್ಯಪುಸ್ತಕ, ಅಧ್ಯಯನ ವೈಸ್ಕೂಲ್, ಮಿಡಲ್ ಸ್ಕೂಲ್‌ಗಳಲ್ಲಿ ಹಿಂದೀ ಪಂಡಿತರಾಗಲು ಬೇಕಾದ ಯೋಗ್ಯತೆ ಸೃಷ್ಟಿಮಾಡುವಾರದಿಂದ ನಡೆಸಲ್ಪಡುವ 'ಹಿಂದೀ ಉಪಾಧ್ಯಾಯರ ಟ್ರೇನಿಂಗ್' ಪರೀಕ್ಷೆ" ವಸ್ತುಗಳ ವಿವರಗಳಿಗಾಗಿ ಕೆಳಗಿನವರನ್ನು ಸಂಪರ್ಕಿಸಿರಿ -

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ

ಕಂಪ್ಲಿ ಸಕ್ಕರೆ ಕಾರ್ಖಾನೆ

(ಬಳ್ಳಾರಿ ಸೆಂಟ್ರಲ್ ಕೋ ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್ ಆಶ್ರಯದಲ್ಲಿ)

THE KAMPLI SUGAR FACTORY.

of

(The Bellary Central Co-op Stores Limited)

ಕಾರ್ಖಾನೆಯಲ್ಲಿ ೧೫—೧೨—೧೯೫೭ ರಿಂದ ಸಕ್ಕರೆ ಉತ್ಪನ್ನವಾಗಲಿದೆ.

TARGET DATE OF PRODUCTION OF SUGAR IN THE FACTORY 15—12—1957

೧. ಅಧಿಕೃತ ಷೇರು ಬಂಡವಾಳ ರೂ- ೨೫,೦೦,೦೦೦

೨. ಚಂದಾರೂಪದ —,,— ರೂ- ೨೧,೨೩,೦೦೦

೩. ಸಂದಾಯವಾದ —,,— ರೂ- ೨೦,೭೮,೦೦೦



ಧನ ಸಂಗ್ರಹದ ವಿವರಗಳು

1) ಮೈಸೂರು ಸರ್ಕಾರದ ಷೇರು ಮೊತ್ತ 10,00,000

—,,— ಕೊಟ್ಟಿಸಾಲ 8,00,000

2) ಕಂಪ್ಲಿ ಭಾಗದ ಕಬ್ಬು ಬೆಳೆಯುವವರಿಂದ ಮತ್ತು ಇತರರಿಂದ ಷೇರು ಹಣ 25,00,000

3) ಭಾರತದ ಇಂಡಸ್ಟ್ರಿಯಲ್ ಫೈನಾನ್ಸ ಕಾರ್ಪೋರೇಶನ್ ಎಂಬ ಸಂಸ್ಥೆಯಿಂದ ದೊರೆತ ಸಾಲ 40,00,000

ಒಟ್ಟು ಮೊತ್ತ 83,00,000

(ಕಂಪ್ಲಿ ಸಕ್ಕರೆ ಕಾರ್ಖಾನೆಯ ಭವ್ಯ ದೃಶ್ಯ)

ಮೈಸೂರು ಸರ್ಕಾರದವರು, ತಾವು 10 ಲಕ್ಷ ರೂ- ಷೇರುಗಳನ್ನು ತೆಗೆದುಕೊಂಡಿರುವುದೇ ಅಲ್ಲದೆ, 8 ಲಕ್ಷ ರೂ ಸಾಲವನ್ನು ಮುಂಜೂರು ಮಾಡಿರುತ್ತಾರೆ. ಇದಕ್ಕೆ ಈ ಭಾಗದವರೆಲ್ಲರ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಬೇಕಾಗಿದೆ. ಕಂಪ್ಲಿ ರೈತರಿಗಾಗಿಯೂ, ಸಾರ್ವಜನಿಕರಿಗಾಗಿಯೂ ವಿಶಾಲವಾಗಿರಿಸಲ್ಪಟ್ಟ ಷೇರು ಮೊತ್ತದಲ್ಲಿ 3 ಲಕ್ಷ 77 ಸಾವಿರ ರೂ ಕುಂಬಿ ಬೇಕಾಗಿದೆ. ಇದು ಶೀಘ್ರದಲ್ಲೇ ಸಂದಾಯವಾಗುವುದೆಂಬ ಆಶೆಯಿದೆ.

ಜರ್ಮನಿಯಿಂದ ಕಾರ್ಖಾನೆಗೆ ಬೇಕಾದ ಸಮಸ್ತ ಯಂತ್ರ ಸಾಮಗ್ರಿಗಳು ರವಾನೆಯಾಗಿದ್ದು, ಶೇ. 98/- ಭಾಗ ಕಾರ್ಖಾನೆಯು ಆವರಣದಲ್ಲಿ ಬಂದಿರುವುದಿದೆ. ಸಣ್ಣ-ಪುಟ್ಟ ಸಾಮಾನುಗಳನ್ನೊಳಗೊಂಡ ಯಂತ್ರ ಸ್ಥಾಪನೆಯ ಕಾರ್ಯವು ಆದು ಜರ್ಮನ್ ಎಂಜನಿಯರುಗಳ ನೇತೃತ್ವದಲ್ಲಿ ಭರದಿಂದ ಸಾಗಿದೆ. ಬರುವ ನವಂಬರಿನೊಳಗಾಗಿ ಇದು ಮುಗಿದು, ಪರೀಕ್ಷಾ ಪ್ರಯೋಗಗಳ ನಂತರ ಡಿಸೆಂಬರ್ 57 ರ ಮಧ್ಯ ಭಾಗದಲ್ಲಿ ಕಾರ್ಖಾನೆಯು ಸಕ್ಕರೆ ಉತ್ಪನ್ನ ಕಾರ್ಯದಲ್ಲಿ ತೊಡಗುವುದೆಂಬ ಪೂರ್ಣ ಭರವಸೆಯನ್ನು ಕೊಡುತ್ತಾ, ಆವರ ಸಹಕಾರವನ್ನು ಮುಂದೆಯೂ ಸ್ವಾಗತಿಸುತ್ತೇನೆ. ಈ ಸ್ವಾತಂತ್ರ್ಯದಿನದ ಶುಭೋತ್ಸವದಲ್ಲಿ ನನಗೆ ಎಲ್ಲ ವಿಧಗಳಿಂದ ಸಹಾಯಮಾಡಿದ ಭಿನ್ನ-ಭಿನ್ನ ಪ್ರದೇಶಗಳ ಸಂಸ್ಥೆಗಳಿಗೂ, ವ್ಯಕ್ತಿಗಳಿಗೂ ನನ್ನ ಹಾರ್ದಿಕ ವಂದನೆಗಳನ್ನರ್ಪಿಸುತ್ತೇನೆ.

ಹೆಚ್. ರಾಮಮೂರ್ತಿ
ಕಾರ್ಯದರ್ಶಿ

ಹೆಚ್. ಲಿಂಗಾರೆಡ್ಡಿ
ಅಧ್ಯಕ್ಷ

ಸಿಟಿ ಲಾಡ್ಜ್

ಊಟದ ಹೋಟೆಲ್

ಬೆಂಗಳೂರು ರೋಡ್ ಬಳ್ಳಾರಿ - ೨

CITY LODGE

(Best Boarding & Lodging in Bellary - 2)

- ಸುಂದರ ವಸತಿ, ಸ್ನಾನ
- ಗಾಳಿ, ಬೆಳಕುಗಳ ಸ್ವಚ್ಛ ರೂಂಗಳು
- ತಣ್ಣೀರು, ಬಿಸಿನೀರಿನ ಸ್ನಾನ
- ವ್ಯಾಪಾರ, ಉದ್ಯೋಗಗಳಿಗೆ ಮಧ್ಯ ಕೇಂದ್ರ
- ರುಚಿ, ಆರೋಗ್ಯಕರ ಭೋಜನ-ಫಲಹಾರ
- ವಿನಯಶೀಲ ನೌಕರ ವರ್ಗ

ಬಳ್ಳಾರಿಯಲ್ಲಿ ನಮ್ಮ ಇತರ ಹೋಟೆಲುಗಳು

೧) — ಶ್ರೀ ಕೃಷ್ಣ ಆರೋಗ್ಯ ಭವನ —
(ಬ್ರಾಹ್ಮಣಬೀದಿ) ಊಟ-ಫಲಾಹಾರ

೨) — ಅಂಬಾಭವನ ಕಾಫಿಕ್ಲಬ್ —
(ಬೆಂಗಳೂರು ರೋಡ್) ಫಲಹಾರ ಮಾತ್ರ

ಸಂತೋಷ ಕೂಟಗಳಿಗೂ, ಅಲ್ಪೋಪಹಾರಗಳಿಗೂ ಬೇಕಾಗುವ ಪಕ್ವಾನ್ನ, ಫಲಹಾರಗಳನ್ನು ಯೋಗ್ಯ ದರಗಳಿಂದ ಒದಗಿಸುತ್ತೇವೆ.

While at Bellary stay with us & Enjoy

G. R. Udupi
Proprietor, City-Lodge, Amba Bhavan
& Sri Krishna Arogya Bhavan

ಜಿ. ಆರ್. ಉಡುಪಿ.
(ಮಾಲಿಕರು)
ಸಿಟಿಲಾಡ್ಜ್, ಅಂಬಾಭವನ, ಆರೋಗ್ಯಭವನ

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತ್ತು
ಎಲ್ಲ ನೋವುಗಳಿಗೆ ದಿವ್ಯಾಮೃತ
(ಇಪ್ಪತ್ತೈದಂಜಾ ಜ್ವರಕ್ಕೆ ನೀರಿನ
ಲ್ಲಿ ೪ ತೊಟ್ಟು ಹಾಕಿ ಸೇವಿಸಿರಿ)

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ,
ಎಲ್ಲಪಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
೬ತಿಂಗಳಿಗೆ 3—0—0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746.)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary

ಸಮಿಷ್ಟಿವಾಣಿ

16

ಸೋಮವಾರ ಸೆಪ್ಟೆಂಬರ್, 9-9-1957

ವರ್ಷ 21.	ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.	ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 9	ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!!	ಬಿ. ಬಿ. ಕೇಶವರಾವ್

ಮಧ್ಯಪೂರ್ವ-ಯುದ್ಧದ ಲಕ್ಷಣ

ಮಧ್ಯ ಪ್ರಾಚ್ಯದ ಪರಿಸ್ಥಿತಿಯಲ್ಲಿ ಅಮೆರಿಕಾವು ಕೀಳ್ಮಟ್ಟದಲ್ಲೇ ಹೊಸ ಕಾರ್ಯಕ್ರಮ ಕೈಕೊಳ್ಳಬಹುದು ಹಿರ್ಶಯಿಸಿದೆಯೆಂದು ಭಾವಿಸಲಾಗಿದೆ. ಇದಕ್ಕಾಗಿಯೇ ಅಧ್ಯಕ್ಷ ಐಸನ್‌ಹೋವರ್ ಅವರು ನ್ಯೂ ಬ್ರನ್ಸ್‌ವಿಂಕಿನಲ್ಲಿ ಇರುವ ತಮ್ಮ ವಿಶ್ರಾಂತಿ ನೆಲೆಯನ್ನು ತ್ಯಜಿಸಿ ವಿಶೇಷ ತಾ. ಮಾಫಿಗಾಗಿ ವಾಷಿಂಗ್ಟನ್ನಿಗೆ ಹಿಂದಿರುಗಿದ್ದಾರೆ.

ಕಮ್ಯೂನಿಸ್ಟ್ ಕೈವಾಡಕ್ಕೆ ಗುರಿಯಾಗುವ ಹೆದರಿಕೆಯಿರುವ ಜೋರ್ಡಾನ್, ಲೆಬನಾನ್, ಮತ್ತು ಇತರ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಸಹಾಯವನ್ನು ವಾಗ್ದಾನವನ್ನೀಯುವ ಒಂದು ಘೋಷಣೆ ಹೊರಡಿಸಬೇಕೆಂದು ಹೀಗೆ ಒಂದಿರುವ ಶಿಫಾರಸ್ಸುಗಳಲ್ಲೊಂದು. ಈ ವಿಷಯವನ್ನು ಅಧ್ಯಕ್ಷರು ಪರೀಲೆಸುತ್ತಿದ್ದಾರೆ.

ಈರಾಕಿಗೂ ಬಹುಬೇಗ ಟೆಕ್ಸಿಗೂ ಆಯುಧಗಳನ್ನು ವಿಮಾನಗಳ ಮೂಲಕ ಕಳುಹಿಸಿಕೊಡುವ ಸಲಹೆಯನ್ನು ಸರಿತೀಲಿಸುತ್ತಿದ್ದಾರೆಂದು ರಾಜತಾಂತ್ರಿಕ ವೃತ್ತಪತ್ರಿಕೆಗಳಲ್ಲಿ ವರದಿಮಾಡಲಾಗಿದೆ.

ಜೋರ್ಡಾನಿಗೆ ಇದೇ ರೀತಿ ವಿಮಾನಗಳ ಮೂಲಕ ಆಯುಧಗಳ ರವಾನೆ ೨ ನೆಯ ಸೋಮವಾರದಿಂದ ಆರಂಭವಾಗುವುದು.

ಮಧ್ಯಪ್ರಾಚ್ಯದ ಬಗ್ಗೆ ಅಮೆರಿಕ ಏನೇ ಕ್ರಮ ಕೈಗೊಂಡರೂ ಅದನ್ನು ಬ್ರಿಟನ್ನಿನೊಡನೆ ಸಮಾಲೋಚನೆ ನಡೆಸದಲ್ಲದೆ ಕೈಕೊಳ್ಳುವುದಿಲ್ಲವೆಂದು ತಿಳಿಸಲಾಗಿದೆ. ಅಧ್ಯಕ್ಷರು ಮತ್ತು ಪ್ರಧಾನಿ ಮಾಕ್‌ಮಿಲನ್ ಅವರು ಸಮಾಲೋಚನೆ ನಡೆಸುತ್ತಿದ್ದಾರೆ ಎಂದೂ ತಿಳಿದಿದೆ.

ಬ್ರಿಟನ್ನಿನೊಡನೆಯೂ ಅಲ್ಲದೆ ಇತರ ಮಿತ್ರ ರಾಷ್ಟ್ರಗಳೊಡನೆಯೂ ಅಮೆರಿಕಾವು ಈ ವಿಷಯವಾಗಿ ವಿಚಾರ ವಿನಿಮಯ ಮಾಡುತ್ತಿದೆ ಎಂದೂ ಸೂಚ್ಯವಾಗಿದೆ.

ಕಳೆದ ಅಕ್ಟೋಬರ್‌ನಲ್ಲಿ ಸೂಯೆಜ್ ಕಾಲುವೆಯ ವಿಚ್ಛೇದ ಉಂಟಾಗಿನಿಂದೀಚೆಗೆ ಅಮೆರಿಕಾವು ಇತರ ರಾಷ್ಟ್ರಗಳೊಡನೆ ಮಧ್ಯಪ್ರಾಚ್ಯದ ಬಗ್ಗೆ ಅತ್ಯಂತ ನಿಕಟವಾದ ಸಮಾಲೋಚನೆ ನಡೆಸುತ್ತಿದೆ ಎಂದು ಒಬ್ಬ ಅಧಿಕಾರಿ ತಿಳಿಸಿದರು.

ರಷ್ಯಾದೆ ನೇತೆಲೆ ಯುದ್ಧಕ್ಕಾಗಿ ಪೂರ್ಣಸಿದ್ಧತೆ

ರಷ್ಯ — ಅಹಾಜನೆ

ಉತ್ತರ ಅಟ್ಲಾಂಟಿಕ್ ಒಕ್ಕೂಟ ರಾಷ್ಟ್ರಗಳ ಅಧಿವೇಶನವು ಪ್ಯಾರಿಸ್‌ನಲ್ಲಿ ಸೋವಿಯತ್ ಯೂನಿಯನ್ ಬಾಲ್ಟಿಕ್‌ನಲ್ಲಿ ರಷ್ಯದ ನೇತೃತ್ವಕ್ಕಾಗಿ ಕೃತಿಸಾಗಿ ಸಿದ್ಧತೆಗಳನ್ನು ಮಾಡಿದೆ ಎಂಬುದಾಗಿ ಅಭಿಪ್ರಾಯಪಟ್ಟಿದೆ. ಅ

ಶ್ರೀ

ಚೈತನ್ಯ ಮಹಾಪ್ರಭು ಜೀವನ ಮತ್ತು ಆದರ್ಶ

ಪೀಠಿಕೆ ;—

ಠಾಕೂರ್ ಭಕ್ತಿ ವಿನೋದೆಯವರು ಇಂಗ್ಲೀಷಿನಲ್ಲಿ ಬರೆದ ಚಿಕ್ಕ ಪುಸ್ತಕದ ಆನುವಾದವಿದು. ನಮ್ಮ ಆತ್ಮೀಯರಾದ ಶ್ರೀ ನಂದದುಲಾಲ್ ಬ್ರಹ್ಮಚಾರಿ (ಗೌಡೀಯಮಠ–ಮದ್ರಾಸ್) ಇವರ ಸೂಚನೆಯಂತೆ ಇದನ್ನು ಕನ್ನಡಿಸಿದ್ದೇನೆ. ಶ್ರೀ ಗುರು ಚೈತನ್ಯ ಭಗವಂತರ ಜೀವಿತಾದರ್ಶಗಳನ್ನು ತಮ್ಮ ಜೀವಿತದಲ್ಲಿ ಅಳವಡಿಸಿ, ಭಕ್ತಿ ವಿಜಯ ಪ್ರಭಾವದಿಂದ ಎಲ್ಲ ಶತ್ರುಲಗಳನ್ನು ಹೊರದೂಡಿ ಅದರಲ್ಲಿ ಶುದ್ಧತೆಯನ್ನೂ, ಪಾವಿತ್ರತೆಯನ್ನೂ, ತಂದ ಸೇವಾಮೂರ್ತಿಗಳು ಠಾಕೂರ್ ಭಕ್ತಿ ವಿನೋದೆಯವರು. ಅವರು ತಮ್ಮ ಅನೇಕ ಪ್ರಕಾರಣಗಳಿಂದ ಗೌಡೀಯ ಸಂಸ್ಥೆಗೆ ಅಪಾರಸೇವೆಯನ್ನು ಸಲ್ಲಿಸಿ ಕೃತಕೃತ್ಯರಾಗಿರುವರು. ಗುರು ಚೈತನ್ಯರ ಶಿಕ್ಷಾಷ್ಟಕವನ್ನು ಆಧ್ಯಯನ, ಮನನ ನಿಧಿಧ್ಯಾಸನಗಳಿಂದ ಕಾರ್ಯಾನ್ವಿತರಾಗಿ, ಗೃಹಸ್ಥರೂ ಸಹ ಬ್ರಹ್ಮಚರ್ಯ ಮತ್ತು ಸನ್ಯಾಸಗಳಿಗೆ ವಿರೋಧವಿಲ್ಲದೆ ಆದರ್ಶ ಭಕ್ತರಾಗಬಹುದೆಂಬುದನ್ನು ಠಾಕೂರರು ತೋರಿಸಿಕೊಟ್ಟಿರುವರು.

ಠಾಕೂರ್ ಭಕ್ತಿವಿನೋದರವರೇ ನವದ್ವೀಪದ ಮಾಯಾಪುರದಲ್ಲಿ ಶ್ರೀ ಗುರುಚೈತನ್ಯರ ಜನ್ಮಸ್ಥಾನವನ್ನು ತೋರಿಸಿಕೊಟ್ಟವರು, ಫಾಲ್ಗುಣಮಾಸದ ಪೂರ್ಣಿಮೆಯಲ್ಲಿ ಶ್ರೀ ಗುರು ಚೈತನ್ಯರ ಅಗಮನವನ್ನು ಗಮನದಲ್ಲಿಟ್ಟು ಸಾವಿರಾರು ಯಾತ್ರಿಕರು ಈ ನವದ್ವೀಪಗಳ ಪ್ರದಕ್ಷಿಣಮಾಡುವರು.

(1) ಅಂತರ್‌ದ್ವೀಪ (ಈಗಿನ ಮಾಯಾಪುರ)
(2) ಸಿಮಂತದ್ವೀಪ (,, ಸಿಮೂಲಿಯ)
(3) ಗೋದ್ರುಮದ್ವೀಪ (,, ಗಡಿರಾಜ)
(4) ಮಧ್ಯದ್ವೀಪ (,, ಮಜ್ದಿಯ)
(5) ಕೂಲದ್ವೀಪ (ಈಗಿನ ನವದ್ವೀಪ)
(6) ಋತುದ್ವೀಪ (,, ಚಂಪಹಾಟಿ)
(7) ಜನ್ಹುದ್ವೀಪ (,, ಜನ್ನಗರ)
(8) ಮೋದದ್ರುಮದ್ವೀಪ (,, ಮಮಗಾಚಿ)
(9) ರುದ್ರದ್ವೀಪ (ಈಗಿನ ಶಕಟಪುರ)

ಸಾಧ್ಯವಾದಮಟ್ಟಿಗೆ ಮೂಲ ಲೇಖಕರ ಅಭಿಪ್ರಾಯಗಳನ್ನು ದೋಷಗಳಿಲ್ಲದೆ ಕನ್ನಡಿಸಲೆತ್ನಿಸಲಾಗಿದೆ. ದೋಷಗಳನ್ನು ತೋರಿಸಿದಲ್ಲಿ ಮುಂದಿನ ಮುದ್ರಣದಲ್ಲಿ ತಿದ್ದಲಾಗುವುದು. ಚೈತನ್ಯ ಭಕ್ತರಾದ ಕನ್ನಡಿಗರೆಲ್ಲರು ಇದನ್ನು ಆದರಿಸುವುದರಲ್ಲಿ ಸಂಶಯವಿಲ್ಲವೆಂದು ಭಾವಿಸುತ್ತೇನೆ.

ಟಿ. ಬಿ. ಕೇಶವರಾವ್
'ನವಭಾರತ' ಸಂಪಾದಕ

ಜನನ ಮತ್ತು ಬಾಲ್ಯ

ಬಂಗಾಲ ಪ್ರಾಂತ್ಯದ ನಡಿಯಾ ಜಿಲ್ಲೆಯ ಮಾಯಾಪುರದಲ್ಲಿ ಶಕಾಬ್ದ 1407 ರ ಫಾಲ್ಗುಣಮಾಸದ 23 ನೆಯ ದಿನ್ಯ ಮಹಾಪ್ರಭುವಿನ ಜನ್ಮವಾಯಿತು. ಅಂದು ಚಂದ್ರಗ್ರಹಣವಿದ್ದು, ಭಾಗೀರಥಿ ನದಿಯಲ್ಲಿ ಜನರು 'ಹರಿಬೋಲ್' ಎಂಬ ನಾಮೋಚ್ಚಾರಣೆಯಿಂದ ಸ್ನಾನಗೈಯುತ್ತಿದ್ದರು. ಅಂತಹ ಪವಿತ್ರಸನ್ನಿವೇಶದಲ್ಲಿ ಅವರ ಜನ್ಮವಾದುದೊಂದು ವಿಶೇಷವಾಗಿದೆ. ತಂದೆ ಜಗನ್ನಾಥ ಮಿಶ್ರರವರೂ, ತಾಯಿ ಶಚೀದೇವಿಯವರು ಬಡಬ್ರಾಹ್ಮಣ ವೈದೀಕ ಕುಟುಂಬಕ್ಕೆ ಸೇರಿದವರಾದರೂ, ಸಾಹ್ಯರು, ಭಕ್ತರು. ಇಂತಹವರ ಹೊಟ್ಟೆಯಲ್ಲಿ ಜನ್ಮಿಸಲು ನಿಶ್ಚಯಿಸಿದುದು ಭಗವಂತನ ಸ್ವಾಧಾವಿಕ ಲೀಲೆ.

ಜನ್ಮಹೊಂದಿದ ಮಹಾಪ್ರಭುವು ಅಸಾಧಾರಣ ಸುಂದರಾಕೃತಿಯಿಂದ, ಸುವರ್ಣ ಶೋಭೆಯಿಂದ ಪ್ರಜ್ವಲಿಸುತ್ತಿದ್ದ ಕಾರಣ ಗ್ರಾಮದ ಸ್ತ್ರೀಯರೆಲ್ಲ ಕಾಣಿಕೆಗಳೊಂದಿಗೆ ದರ್ಶನಕ್ಕಾಗಿ ಬರಹತ್ತಿದರು. ಶಚೀದೇವಿಯ ತಂದೆಯಾದ ಪಂಡಿತ ನೀಲಾಂಬರ ಚಕ್ರವರ್ತಿಯವರು ಪ್ರಸಿದ್ಧಜ್ಯೋತಿಷ್ಯರಾದ ಕಾರಣ ಜನ್ಮಿಸಿದ ಮಗುವು ಭವಿಷ್ಯದಲ್ಲಿ ಪ್ರತಿಭಾವಾನ್ ವ್ಯಕ್ತಿಯಾಗುವನೆಂದು ಹೇಳಿ ವಿಶ್ವಂಭರನೆಂದು ನಾಮಕರಣ ಮಾಡಿದರು. ಜೀವನ ವ್ಯಕ್ತಪದ ಸವಿಪದದಲ್ಲಿ ಜನ್ಮಿಸಿದ ಕಾರಣ 'ನಿಮಾಯಿ' ಎಂಬ ಹೆಸರನ್ನು ಇಟ್ಟಳು. ಶಿಶುವು ಬಂಗಾರ ಬಣ್ಣದಿಂದ ಶೋಭಿಸುತ್ತಿದ್ದ ಕಾರಣ, ಗ್ರಾಮದ ಸ್ತ್ರೀಯರು "ಗೌರ್ ಹರಿ" ಎಂದು ಕರೆಯುತ್ತಿದ್ದರು.

ಬಾಲ್ಯದಿಂದಲೇ ಅನೇಕ ಚಮತ್ಕಾರೀ ಕೃತ್ಯಗಳು ಗೋಚರವಾಗಹತ್ತಿದವೆಂಬುದಕ್ಕೆ ಕೆಲ ದಂತ ಕತೆಗಳುಂಟು. ಕೂಸಾಗಿ ತಾಯಿಯ ಮಡಲಲ್ಲಿ ವಿಶೇಷವಾಗಿ ಅಳುತ್ತಿದ್ದಾಗ, ತಾಯಿಯಾಗಲಿ ನೆರೆಹೊರೆಯ ಸ್ತ್ರೀಯರಾಗಲಿ, "ಹರಿ ಬೋಲ್" ಎಂದರೆ ಅಳುವು ನಿಲ್ಲುತ್ತಿತ್ತು. ನಿರಂತರವೂ, ಮನೆಯಲ್ಲಿ ಹರಿಸ್ಮರಣೆಯಾಗುತ್ತಿರಬೇಕೆಂಬುದು ಭಾವವಾಗುತ್ತದೆ. ಭವಿಷ್ಯೋದ್ದೇಶ ಸಾಧನೆಯು ಮರ್ಮವು ಇದರಿಂದಲೇ ವ್ಯಕ್ತವಾಗುವುದು. ಶುಕ್ಲಪಕ್ಷದ ಚಂದ್ರನೋಪಾದಿಯಲ್ಲಿ ಬೆಳೆಯುತ್ತಿದ್ದ ಮಗುವು ಬರುಬರುತ್ತ ಅಧಿಕ ಚಂಚಲತೆಯನ್ನು ಮತ್ತು ಕ್ರೀಡಾಸಕ್ತಿಯನ್ನು ತೋರಿಸಲುದ್ಯುಕ್ತವಾಯಿತು. ತಾಯಿಯು ಒಂದು ದಿನ ಮಿಠಾಯಿ ಕೊಟ್ಟರೆ, ಅದನ್ನು ಎಸೆದು ಮಣ್ಣನ್ನು ತಿಂದನು. ತಾಯಿಯು ಕಾರಣವನ್ನು ಕೇಳಿದಾಗ "ಎಲ್ಲವೂ ಮಣ್ಣಿನಿಂದಲ್ಲವೇ ಉತ್ಪನ್ನವಾಗುವುದು? ಮೂಲವಸ್ತುವಾದ ಮಣ್ಣನ್ನೇಕೆ ತಿನ್ನಬಾರದು?" ಎಂದನು. ತಾಯಿಯೂ ಸಹ ಘನ ಪಂಡಿತನ ಪತ್ನಿಯಾದರಿಂದ, ವಸ್ತುವಿನ ಗುಣದೋಷಗಳನ್ನರಿಯುಕ್ತಾಯುಕ್ತ ಉಪಯೋಗವನ್ನು ಮಾನ್ಯಮಾಡಿ ಗ್ರಹಿಸಬೇಕೆಂದಳು. ಮಣ್ಣು ಹೂಜಿಯು ರೂಪದಲ್ಲಿದ್ದಾಗ ನೀರನ್ನು ತಾಕಿ ಉಪಯೋಗಿಸಬೇಕು. ಆದೇ ಮಣ್ಣು ಇಟ್ಟಿಗೆಯಾದಾಗ ಹಾಗೆ ಉಪಯೋಗಿಸದೆ, ಮನೆಕಟ್ಟಲು ಉಪಯೋಗಿಸಬೇಕು. ಎಂದು ಸ್ಪಷ್ಟಪಡಿಸಿದಳು. ಬಾಲಕನು ಒಪ್ಪಿ ತನ್ನ ದೋಷವನ್ನು ತಿದ್ದಿಕೊಳ್ಳಲು ಆಶ್ವಾಸನವಿತ್ತನು.

ಮತ್ತೊಂದು ಚಮತ್ಕಾರೀಕೃತ್ಯವು ಬಾಲ್ಯದಲ್ಲಿ ಘಟಿಸಿತು. ಯಾತ್ರಿಕನಾದ ಬ್ರಾಹ್ಮಣನೊಬ್ಬನು ಅವರ ಮನೆಯಲ್ಲಿ

ಶೇಕಡ 4 1/4 ಬಡ್ಡಿಯುಳ್ಳ

ಮೈಸೂರು ರಾಜ್ಯದ ಅಭಿವೃದ್ಧಿ ಸಾಲ ೧೯೬೯

ಸಾಲದ ಮೊಬಲಗು : ೩೦೦ ಲಕ್ಷ ರೂಪಾಯಿಗಳು

ಸಾಲದ ಅಸಲು ಬೆಲೆ : ೧೦೦ ರೂಪಾಯಿಗೆ ೯೮.೭೫ ರೂ.

ವಾಪಸು ಕೊಡುವ ತಾರೀಖು ; ೧೬ ನೆಯ ಸೆಪ್ಟೆಂಬರ್ ೧೯೬೯

ಹಣ ಪಾವತಿ ಮಾಡುವ ಅವಧಿಯು, ಮುಂದಾಗಿ ಮುಗಿದು ಹೋದ ಹೊರತು 16 ನೆಯ ಸೆಪ್ಟೆಂಬರ್ 1957 ನಿಂದ 18 ನೆಯ ಸೆಪ್ಟೆಂಬರ್ 1957 ವರೆಗೂ (ಸೇರಿ) ಇರುತ್ತದೆ.

ಹಣವನ್ನು ನಗದಾಗಿ ಪಾವತಿ ಮಾಡಬಹುದು; ಇಲ್ಲವೇ 1958 ನೆಯ ಇಸವಿಯ ಶೇಕಡ 3 ರ ಮೈಸೂರು ಸರ್ಕಾರದ ಸಾಲ ಪತ್ರಗಳ ಅಡಮಾನ ರೂಪವಾಗಿ ಪಾವತಿ ಮಾಡಬಹುದು.

1958 ನೆಯ ಇಸವಿಯ ಶೇಕಡ 3 ರ ಮೈಸೂರು ಸರ್ಕಾರದ ಸಾಲ ಪತ್ರಗಳನ್ನು 100 ರೂಪಾಯಿಗಳ ಸಾಲದ ಮುಖ ಬೆಲೆಗೆ 99-75 ರೂಪಾಯಿಗಳಂತೆ ಸ್ವೀಕರಿಸಲಾಗುವುದು.

ಪ್ರಕಟಿಸಿದ ಮೊಬಲಗಿಗಿಂತ ಶೇಕಡ 10 ರಷ್ಟಿನ ವರೆಗೆ ಹೆಚ್ಚಿನ ಚಂದಾಹಣವನ್ನು ಇಟ್ಟುಕೊಳ್ಳಲು ಸರ್ಕಾರಕ್ಕೆ ಅಧಿಕಾರವಿರುತ್ತದೆ ಪಾವತಿಯಾದ ಒಟ್ಟು ಮೊಬಲಗು 330 ಲಕ್ಷ ರೂಪಾಯಿಗಳಿಗಿಂತಲೂ ಮೀರಿದ ಪಕ್ಷದಲ್ಲಿ, ನಗದು ಹಣ ಪಾವತಿ ಮಾಡಿರುವವರಿಗೆ ಸಾಲವನ್ನು ಪ್ರಮಾಣಾಂಶವಾಗಿ ಹಂಚಲಾಗುವುದು. ಸಾಲದ ಅರ್ಜಿಯ ಜೊತೆಗೆ ಅವರು ಕೊಟ್ಟಿರುವ ಪೂರ್ಣ ಮೊಬಲಗನ್ನು ಬಡ್ಡಿಯಿಲ್ಲದಂತೆ ಅವರಿಗೆ ವಾಪಸು ಕೊಡಲಾಗುವುದು.

ಈ ಸಾಲದ ಮೊಬಲಗನ್ನು 2 ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವ ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸಲಾಗುತ್ತದೆ.

ಈ ಸಾಲಕ್ಕೆ ಸಾಲಿಯಾನ ಶೇಕಡ 4¼ ರಂತೆ 16 ನೆಯ ಸೆಪ್ಟೆಂಬರ್, 1957 ರಿಂದ ಬಡ್ಡಿ ಕೊಡಲಾಗುತ್ತದೆ.

ಬಡ್ಡಿಯನ್ನು 6 ತಿಂಗಳಿಗೊಂದುಸಲ 16 ನೆಯ ಮಾರ್ಚ್ ಮತ್ತು 16 ನೆಯ ಸೆಪ್ಟೆಂಬರ್ ಈ ದಿನಗಳಲ್ಲಿ ಆದಾಯ ತೆರಿಗೆಯನ್ನು ಕಳೆದು ಪಾವತಿ ಮಾಡಲಾಗುವುದು.

ಸಾಲದ ಅರ್ಜಿಗಳು ೧೦೦ ರೂಪಾಯಿಗಳಿಗೆ ಅಥವಾ ಇದರ ಗುಣಕ ಪ್ರಮಾಣಗಳಿಗೆ ಅನ್ವಯಿಸುವಂತೆ ಇರಬೇಕು.

ಸಾಲದ ಅರ್ಜಿಗಳನ್ನು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಸ್ವೀಕರಿಸಲಾಗುವುದು;—

(a) ಬೆಂಗಳೂರು, ಬೊಂಬಾಯಿ, ಕಲ್ಕತ್ತಾ ಮದರಾಸ್ ಮತ್ತು ದೆಹಲಿ ನಗರಗಳಲ್ಲಿರುವ ಇಂಡಿಯನ್ ರಿಸರ್ವ್ ಬ್ಯಾಂಕಿನ ಕಚೇರಿಗಳು

(b) ಬೆಂಗಳೂರು ಜಿಟ್ಟು ಮೈಸೂರು ರಾಜ್ಯದಲ್ಲಿರುವ ಮೈಸೂರು ಬ್ಯಾಂಕಿನ ಶಾಖೆಗಳು.

(c) ಬೆಂಗಳೂರು ಮತ್ತು (b) ಭಾಗದಲ್ಲಿ ಸೂಚಿಸಿರುವ ಪ್ರದೇಶಗಳನ್ನು ಜಿಟ್ಟು, ಮೈಸೂರು ರಾಜ್ಯದಲ್ಲಿರುವ ಇಂಡಿಯನ್ ಸ್ಟೇಟ್ ಬ್ಯಾಂಕಿನ ಮತ್ತು ಹೈದರಾಬಾದ್ ಸ್ಟೇಟ್ ಬ್ಯಾಂಕಿನ ಶಾಖೆಗಳು.

(d) ಮೇಲೆ ಸೂಚಿಸಿರುವ ಯಾವುದೇ ಬ್ಯಾಂಕಿನ ಶಾಖೆಗಳಿಲ್ಲದ ಇತರ ಮೈಸೂರು ರಾಜ್ಯದ ಪ್ರದೇಶಗಳಲ್ಲಿ ಸರ್ಕಾರಿ ತಾಲ್ಲೂಕು ಟ್ರೆಜರಿಗಳು.

ಶ್ರೀ

ಚೈತನ್ಯ ಮಹಾಪ್ರಭು ಜೀವನ ಮತ್ತು ಆದರ್ಶ

(3 ನೇ ಪುಟದಿಂದ)

(ಮುಂದುವರಿದುದು)

ವೈಷ್ಣವ ಧರ್ಮ ಪ್ರಚಾರ

ನಡಿಯಾವು ವೈಷ್ಣವ ಸಿದ್ಧಾಂತದ ಮುಖ್ಯ ಕೇಂದ್ರವಾಗಿ, ಬಂಗಾಳದ ಭಿನ್ನ-ಭಿನ್ನ ಭಾಗಗಳಿಂದ ವೈಷ್ಣವಧರ್ಮ ಪ್ರಚಾರದಲ್ಲಿ ಹಾರ್ದಿಕ ಆಸಕ್ತಿಯುಳ್ಳ ಆಚಾರ್ಯರೆಲ್ಲ ಅಲ್ಲಿಗೆ ಬರಹತ್ತಿದರು. ಅಲ್ಲಿಂದಲೇ ಪ್ರಸಾರಕಾರ್ಯದಾರಂಭವಾಯಿತು. ತಮ್ಮ ಪ್ರಿಯಶಿಷ್ಯರಾದ ಪ್ರಿಯ ನಿತ್ಯಾನಂದ ಮತ್ತು ಹರಿದಾಸರಿಗೆ ಪ್ರಪ್ರಥಮವಲ್ಲಿತ್ತ ಆದೇಶವೆಂದರೆ—

"ಸ್ನೇಹಿತರೇ ಇನ್ನು ಹೊರಡಿರಿ ನಗರದ ಬೀದಿ-ಬೀದಿಗಳಲ್ಲಿ ಸಂಚರಿಸಿ, ಪ್ರತಿಯೊಬ್ಬರ ಮನೆ ಬಾಗಿಲಿಗೆ ಹೋಗಿ ಹರಿನಾಮ ಸ್ಮರಣೆಮಾಡಲು, ಪವಿತ್ರ ಜೀವನವನ್ನು ಸಾಗಿಸಲು ತಿಳಿಸಿರಿ." ಎಂದರು ಇಂಥ ಆಜ್ಞೆಯನ್ನು ಪಡೆದು. ಎಲ್ಲರಿಗೂ ತಮ್ಮ ಉಪದೇಶವನ್ನು ಕೊಡುವ ಕಾರ್ಯದಲ್ಲಿ ನಗರದ ಕೆಟ್ಟ ದರಾಚಾರಿಗಳಾದ ಜಗಾಯಿ, ವಾಧ ಇಎಂಬಿಬ್ಬರು ಪ್ರಾರಂಭದಲ್ಲಿ ಉಪದೇಶಕರನ್ನು ಅವಮಾನಪಡಿಸಿದರೂ, ಬಳಿ ಬರುತ್ತ ಪ್ರಭುವಿನ ಭಕ್ತಿಯ ಪ್ರಭಾವಕ್ಕೊಳಗಾಗಿ ಸನ್ಮಾರ್ಗದಲ್ಲಿಳಿದು ನಾಮಸಂಕೀರ್ತನೆಯಲ್ಲಿ ಮಗ್ನರಾದರು. ಇದರಿಂದ ನಡಿಯಾದ ಜನತೆಯ ಮೇಲೆ ಹೆಚ್ಚಿನ ಪ್ರಭಾವವಾಗಿ ನಿಮಾಯ್ ಪಂಡಿತರು ವಿದ್ಯಾಸಾಗರರಷ್ಟೇ ಅಲ್ಲದೆ ಸರ್ವ ಶಕ್ತಿಮಾನ್ ಭಗವಂತನ ದೂತರೆಂದು ಭಾವಿಸಿದರು.

ಈ ಸಮಯದಿಂದ ತಮ್ಮ 23 ನೆಯ ವಯಸ್ಸಿನವರೆಗೆ ನಡಿಯಾದಲ್ಲೇ ಅಲ್ಲದೆ ನೆರೆಹೊರೆಯ ಗ್ರಾಮಗಳಲ್ಲೂ ತಮ್ಮ ಸಿದ್ಧಾಂತಗಳನ್ನು ಪದೇಶಿಸುತ್ತ ಶಿಷ್ಯಂದಿರ ಮನೆಗಳಲ್ಲಿ ಚಮತ್ಕಾರಗಳನ್ನು ಪ್ರದರ್ಶಿಸಿ, ಭಕ್ತಿ ಗೂಢ ಸಿದ್ಧಾಂತಗಳನ್ನು ಅರುಹಿ ಇತರೆ ಭಕ್ತರೊಡನೆ ನಾಮ ಸಂಕೀರ್ತನೆ ಮಾಡುತ್ತಿದ್ದರು. ನಗರದ ಬಜಾರಗಳಲ್ಲಿ ವೈಷ್ಣವ ಭಕ್ತರು ಹರಿಸಂಕೀರ್ತನೆ ಮಾಡುತ್ತಿದ್ದ ಕಾರಣ, ಭಿನ್ನ ಭಿನ್ನ ಪ್ರದೇಶಗಳಲ್ಲಿ ಇದರಿಂದ ಭಿನ್ನವಾದ ಮೂರ್ತಿಯ ದ್ವೇಷವುತ್ಪನ್ನವಾಗಿ ಸ್ಮಾರ್ತ ಬ್ರಾಹ್ಮಣರು ಕಾಜಿ ಸಾಹೇಬರಲ್ಲಿ ಹೋಗಿ ದೂರು ಹೇಳಿ ಇದು ಹಿತಶತ್ರುಗಳ ವಿರೋಧವಾದುದೆಂದು ಹೊರಿಯಿಟ್ಟರು. ಕಾಜಿಯು ಕೋಪೋದ್ದೀಪ್ತನಾಗಿ, ಶ್ರೀನಿವಾಸ ಪಂಡಿತನಮನೆಗೆ ಹೋಗಿ ಮೃದಂಗವನ್ನು ಒಡೆದು, ನಿಮಾಯ್ ಪಂಡಿತನು ಶನ್ನ ವಿಚಿತ್ರ ದರ್ಮದ ಬಗ್ಗೆ ಬೀದಿ ಗಲಾಟೆಮಾಡುವುದು ನಿಲ್ಲದಿದ್ದರೆ ಅತನನ್ನು ಮತ್ತು ಅತನ ಶಿಷ್ಯರನ್ನು ಮುಸಲ್ಮಾನರನ್ನಾಗಿ ಮಾಡುವೆನೆಂಬ ಬೆದರಿಕೆ ಹಾಕಿದನು. ಆಗ ನಿಮಾಯ್ ಪಂಡಿತರು ಒಂದು ರಾತ್ರಿ ತನ್ನ ಶಿಷ್ಯರ ಕೈಯಲ್ಲಿ ಪಂಜುಗಳನ್ನು ಕೊಟ್ಟು ಸಂಕೀರ್ತನ ದಳಕ್ಕೆ ಘೋಣಂಗಿ ದಳವನ್ನು 14 ಭಾಗಗಳಾಗಿ ಮಾಡಿ ಕಾಜಿಯ ಮನೆಯಕಡೆ ಧಾವಿಸಿದರು. ಅಲ್ಲಿ ಕಾಜಿಯೊಡನೆ ದೀರ್ಘ ಸಂಭಾಷಣೆ ಮಾಡಿ ಅವನ ಮನ ಒಪ್ಪಿಸಿ ಅತನ ಶರೀರವನ್ನು ಸ್ಪರ್ಶಿಸಿದ ಕೂಡಲೆ ಕಾಜಿಯಲ್ಲಿ ಅದ್ಭುತ ಪರಿಣಾಮವಾಗಿ ಅತನೂ ಭಕ್ತನಾಗಿ ಸಂಕೀರ್ತನದಳವನ್ನು ಸೇರಿದನು.

ಪ್ರಭುವಿನ ಅದ್ಭುತ ಶಕ್ತಿಗೆ ಜಗತ್ತೇ ಬೆರಗಾಗಿ ಸಾವಿರಾರು ನಾಸ್ತಿಕರು ವೈಷ್ಣವ ಧರ್ಮದ ಪರಿಧಿಯಲ್ಲಿ ವಿಶ್ರಂಭರ ಧ್ವಜದಡಿಯಲ್ಲಿ ಬಂದರು.

ಸನ್ಯಾಸ ಸ್ವೀಕಾರ—

ಮಾತ್ಸರ್ಯ ಮತ್ತು ಸೀಜಪ್ರವೃತ್ತಿಯ ಬ್ರಾಹ್ಮಣರು ಮತ್ತು ಇತರರು ಕೂಡಿ ಮಹಾಪ್ರಭುವಿಗೆದರು ಒಂದು ವಿರೋಧ ದಳವನ್ನೇ ಕಟ್ಟಿದರು. ಜಾತಿಯ ಸ್ವಾರ್ಥ ಗುಂಪುಗಳ ವೈಷಮ್ಯ ಪ್ರಗತಿಯ ಎರಡು ಶತ್ರುಗಳೆಂದು ಘೋಷಿಸಿ, ಒಂದು ಕಾಟುಂಬಕ್ಕೆ ಸೇರಿದವರೇ ಆಗಿದ್ದರೆ, ಮಹೋನ್ನೇಶ ಸಾಧನೆಯಾಗಲಾರದೆಂದು ತಮ್ಮ 24 ನೆಯ ವಯಸ್ಸಿನಲ್ಲಿ ಕುಟುಂಬ ನಗರದ ಕೇಶವ ಭಾರತಿಯರ ಮಾರ್ಗದರ್ಶನದಲ್ಲಿ ಸನ್ಯಾಸ ಸ್ವೀಕಾರ ಮಾಡಿದರು. ಮಾತೆಯೂ, ಪತ್ನಿಯೂ ಈ ವಿರಹಕ್ಕಾಗಿ ವಿರೋಧಿಸಿದರು ಆದರೆ ಸಿದ್ಧಾಂತದಲ್ಲಿ ದೈಹಿನಿಶ್ಚಯಿಯಾದ ಪ್ರಭುವು ತನ್ನ ಸೀಮಿತ ಜಗತ್ತನ್ನು ತೊರೆದು- ಸೀಮಾರಹಿತ ಜಗತ್ತಿನ (ಕೃಷ್ಣನ) ವಿಶಾಲಕ್ಷೇತ್ರದಲ್ಲಿ ಪ್ರವೇಶಿಸಿದರು. ಸನ್ಯಾಸ ಸ್ವೀಕೃತಿಯ ನಂತರ ಶಾಂತಿಪುರದ ಅದ್ವೈತ ಪ್ರಭುವಿನ ಅವಿಷ್ಯವನ್ನು ಸ್ವೀಕರಿಸಿ, ಅಲ್ಲಿ ನಡಿಯಾದ ಮಿತ್ರರಿಗೆ, ಅನುಯಾಯಿಗಳಿಗೆ ಮಾತೆಯಾದ ಶಚೀದೇವಿಗೆ ದರ್ಶನಕೊಟ್ಟರು- ಶಿರೋಮುಂಡನ ಮಾಡಿದ, ಕೌಪೀನಧಾರಿಯಾದ, ಕೈಯಲ್ಲಿ ಕಮಂಡಲ, ದಂಡಗಳನ್ನು ಧರಿಸಿದ ಸನ್ಯಾಸಿಯನ್ನು ಕಂಡು ತಾಯಿಗೆ ದುಃಖವಾಯಿತು. ತಂಯಿಗೆ ನಮಸ್ಕರಿಸಿ ತಾವು ಬೃಂದಾವನದಲ್ಲಿ ಹೋಗಿ ನೆಲೆಸುವದಾಗಿ ಕೇಳಿಕೊಂಡರು. ತಾಯಿಂಗಿಷ್ಟವಿಲ್ಲದ ಪ್ರಭು ಮತ್ತು ಇತರ ಮಿತ್ರರೊಡನೆ ಆಲೋಚಿಸಿ, ಜಗನ್ನಾಥನ ಪುರಿಯಲ್ಲಿದ್ದರೆ, ಆಗಾಗ್ಗೆ ಸಮಾಚಾರವನ್ನು ಹೊಂದುವುದು ಸುಲಭವೆಂದಳು. ಸನ್ಯಾಸ ಸ್ವೀಕಾರದ ನಂತರ ಪ್ರಭುವಿಗೆ ಕೃಷ್ಣ ಚೈತನ್ಯ ಎಂಬ ಹೆಸರು ಬಂದಿತು. ಶಾಂತಿಪುರದಿಂದ ಪುರಿಯವರೆಗೆ ಪ್ರಯಾಣ ಮಾಡಿದ ನಿವರಗಳನ್ನು ಪ್ರಭುವಿನ ಜೀವಿತ್ರಕಾರರೆಲ್ಲರೂ ವರ್ಣಿಸಿದ್ದಾರೆ. ಭಾಗೀರಥೀ ತೀರದಲ್ಲಿ ಭತ್ರಭೋಗದ ವರೆಗೆ ಹೋಗಿ ಅಲ್ಲಿಂದ ದೋಣಿಯಲ್ಲಿ ಮಿದ್ನಾಪುರಜಿಲ್ಲೆಯ ಪ್ರಯಾಗ ಘಾಟಿಯನ್ನು ಸೇರಿ, ಅಲ್ಲಿಂದ ಕಾಲ್ನಡಗೆಯಲ್ಲಿ ಪುರಿಯನ್ನು ಸೇರಿ, ಅಲ್ಲಿ 'ಸಾರ್ವಭೌಮ' ರೆಂಬ ಮಹಾರಯರ ಇಸ್ಪದೆಂತೆ ಅವರ ಮನೆಯಲ್ಲಿ ತಂಗಿದರು ಶಂಕರ ಸಿದ್ಧಾಂತದ ವೇದಾಂತಿಗಳೂ, ಆ ಕಾಲದ ಶ್ರೇಷ್ಠ ಸ್ಮೃತಿಯಾಯಿಕರೂ ಅನೇಕ ಶಿಷ್ಯರನ್ನು ಹೊಂದಿದವರೂ ಆದ ಸಾರ್ವಭೌಮರ ಜನ್ಮಸ್ಥಾನವೂ ಸಹ ನಡಿಯಾ ಆಗಿದ್ದಿತು

ಪುರಿ ಜಗನ್ನಾಥದಲ್ಲಿ—

ಅವರೆ ಭಾವಮೈದುನ ಗೋಪಿನಾಥ ಮಿಶ್ರರಿಂದ ತರುಣನೂ, ಸುಂದರನೂ ಆದ ಸನ್ಯಾಸಿಯ ವಿಷಯವನ್ನರಿತು, ಇಷ್ಟು ಚಿಕ್ಕ ವಯಸ್ಸಿನಲ್ಲಿ ಸನ್ಯಾಸ ಧರ್ಮ ಪಾಲನೆಯು ಕಷ್ಟವೆಂಬುವ ಸಂದೇಹವನ್ನು ಸಾರ್ವಭೌಮರು ವ್ಯಕ್ತಪಡಿಸಿದರು. ಚೈತನ್ಯರನ್ನು ಚನ್ನಾಗಿಬಲ್ಲ ಗೋಪಿನಾಥರು ಅವರ ಧೈರ್ಯಶಕ್ತಿಜ್ಞಾನ ಸೋಬಲವನ್ನು ಕುರಿತು ಸಾರ್ವಭೌಮರು ಶಂಕಿಸಿದರೂಸಹ ಮನದಟ್ಟು ಮಾಡಿದರು. ಈ ನಂತರ ಚೈತನ್ಯರು, 7 ದಿನಗಳವರೆಗೆ ಶಾಂತಚಿತ್ತರಾಗಿ ಸಾರ್ವಭೌಮರು ಹೇಳಿದ ವೇದಾಂತ ಸೂತ್ರಗಳೇನೆಂಬುದು ಅರ್ಥವಾದರೂ, ಶ್ರೀ ಶಂಕರಾಚಾರ್ಯರ ಟೀಕೆಗಳು ಯಾವ ಉದ್ದೇಶದಿಂದ ಕೂಡಿದವೆಂಬುದು ಗೊತ್ತಾಗುವಂತಿಲ್ಲವೆಂದರು. ನಿಮ್ಮ ಅರ್ಥವೇನೆಂದು ಕೇಳಿದಾಗ ಚೈತನ್ಯರು ಶಂಕರರ ಟೀಕೆಗಳನ್ನು ಬದಿಗಿರಿಸಿ, ಸರಳ ಮತ್ತು ಸ್ವಷ್ಟವಾದ ಅರ್ಥವನ್ನು ಕೇಳಿದರು.

(ಬರುವ ವಾರ ಮುಂದುವರಿಯುವುದು)

ಶ್ರೀ

ಚೈತನ್ಯ ಮಹಾಪ್ರಭು ಜೀವನ ಮತ್ತು ಆದರ್ಶ

(ಮುಂದುವರಿದುದು)

ಅತಿಥಿಯಾದಾಗ ತನ್ನ ಆಹಾರವನ್ನು ಭುಂಜಿಸುವ ಮೊದಲು ನೈವೇದ್ಯಮಾಡುವ ಪದ್ಧತಿ. ಕೃಷ್ಣನಿಗೆ ನೈವೇದ್ಯವನ್ನು ಈ ಬಾಲಕನೆ ಬಂದು ಅರ್ಪಿಸುವನ್ನು ಭುಂಜಿಸಿದನು. ಬಾಲಕನ ಈ ಕೃತ್ಯಕ್ಕೆ ಆತ್ಯಂತಾಶ್ಚರ್ಯಭರಿತನಾಗಿ ಜಗನ್ನಾಥ ಮಿಶ್ರನು ಸಲಹೆಮಾಡಿದಂತೆ, ಮರುದಿನ ಸಲ ಅತಿಥಿ ಬ್ರಾಹ್ಮಣನು ಅಡಿಗೆ ಮಾಡಿಕೊಂಡನು. ಎಂದಿನಂತೆ ಸಲವೂ ಹೀಗೆಯೇ ಆಯಿತು. ಬ್ರಾಹ್ಮಣನು ತಿನ್ನುವ ಸಲ ಅಡಿಗೆಗೆ ಹಚ್ಚಿದ್ದಾಗ ಮೆಣಸಿನಕಾಯಿ ಸಿಲಕಿದ್ದರು. ಆಗ ಪದೇ ಪದೇ ಬಾಲಕನು ಯಾತ್ರೆಗೆ ಕೃಷ್ಣನ ರೂಪದಲ್ಲೇ ದರ್ಶನ ಕೊಟ್ಟನು. ಬ್ರಾಹ್ಮಣನು ಇನ್ನು ಜೀವಿಸಿರುವುದೇ ಸಾಧಿಸಿದುದಕ್ಕೆ ಆತ್ಯಾನಂದ ಭರಿತನಾಗಿ ಮೈಮರೆತು ಧ್ಯಾನಮಗ್ನನಾದನು. ಕಳ್ಳಬಿದ್ದರು ಬಾಲಕನ ಪೈಮೇಲಿದ್ದ ಆಭರಣಾಭರಣವನ್ನು ಕದಿಯುವುದಕ್ಕಾಗಿ ತನ್ನ ಆಶ್ಚರ್ಯವನ್ನು ಯಿಂದ ಅವರನ್ನು ಮನೆಯ ಕಡೆ ಎಳೆತಂದಾಗ ಅವರು ಭಯದಿಂದ ಪಿಡಿಕೋಮುದು; ಏಕಾದಶಿಯ ದಿನ ಕೃಷ್ಣಾರ್ಚನೆಗಾಗಿ ಹಿಂಗ್ಯಾ ಮತ್ತು ಜಗದೀಶ ಎಂಬಿರು ಪೂಜಾದ್ರವ್ಯಗಳನ್ನು ಸಂಗ್ರಹಿಸಿದಾಗ ಅವನ್ನು ತಾನು ಮೊದಲಿಸಿಕೊಂಡದ್ದು ಬಳಸಿ ಬಿಸಾಡಿದ ಮಣ್ಣಿನ ಪಾತ್ರೆಗಳ ಮೇಲೆ ಬಾಲಕನು ಕೊಡಾಗಿ ಅಪವಿತ್ರವಾತ್ರೆಗಳವು. ಈನು ಕೂಡ್ರುಬಾರದು" ಎಂದು ತಾಯಿಯು ಹೇಳಿದಳು. ಅಡಿಗೆ ಮಾಡಿದ ಮಾತ್ರಕ್ಕೇ ಅಪವಿತ್ರತೆ ಹೇಗೆ ಬಂತು? ಎಂದು ಬಾಲಕನು ಪ್ರಶ್ನಿಸಿದನು.

ವಿದ್ಯಾಭ್ಯಾಸ :—

ಈ ಘಟನೆಗಳೆಲ್ಲ ಬಾಲಕನು ೨ ವರ್ಷದ ವಯಸ್ಸಿನವರೆಗೆ ನಡೆದವು. ೩ನೆಯ ವಯಸ್ಸಿನವನಾದಾಗ ಮಾಯಾಪುರ ಸಮೀಪ ಗಂಗಾನಗರದಲ್ಲಿ ಗಂಗಾದಾಸ್ ಪಂಡಿತರ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿಸಲಾಯಿತು. ಅಲ್ಲಿ ಬಾಲಕನು ಸಂಸ್ಕೃತ, ವ್ಯಾಕರಣ, ಸಾಹಿತ್ಯ ಮತ್ತು ಅಲಂಕಾರ ಶಾಸ್ತ್ರಗಳನ್ನು ಚಿಕ್ಕವಯಸ್ಸಿನಲ್ಲೇ ಕಲಿತು, ಪಾರಂಗತನಾದನು. ಆನಂತರ ತನ್ನ ತಂದೆಯು ಪಂಡಿತರ ಕಾರಣ, ನುಸಿಯಲ್ಲಿನ ಗ್ರಂಥಗಳನ್ನೆಲ್ಲ ಓದಿ, ವಾಸ್ತ ಮತ್ತು ಸ್ಮೃತಿಯಲ್ಲಿ ಪ್ರವೀಣ್ಯತೆಯನ್ನು ಪಡೆದು ಪಂಡಿತ ಸ್ಪರ್ಧೆಯನ್ನು ಗೆದ್ದನು. ಬಾಲಕನು ೧೦ನೆಯ ವರ್ಷ ತುಂಬುವುದರೊಳಗೆ ವ್ಯಾಕರಣ ಸಹಿತ ಅಲಂಕಾರಶಾಸ್ತ್ರವನ್ನು ಸ್ವಂತಗೊಳಿಸಿಕೊಂಡನು.

ಮೊದಲ ಬಿಂಬನ, ಪತ್ನಿಯ ಅಕಾಲಮೃತ್ಯು ಪುನರ್ವಿವಾಹ :—

ಚಿಣ್ಣನಾದ ವಿಶ್ವರೂಪನು ಗೃಹವನ್ನು ತ್ಯಜಿಸಿ, ಆಶ್ರಮಸ್ವೀಕಾರವಾಯಿದ ಕಾರಣ, ತಂದೆಯ ಮೃತ್ಯುವಿನಿಂದ ಚಿಕ್ಕ ವಯಸ್ಸಿನಲ್ಲೇ ಕುಟುಂಬದ ಭಾರವನ್ನು ಹೊರಬೇಕಾಯಿತು. 14 ಅಥವಾ 15 ನೆಯ ವಯಸ್ಸಿನಲ್ಲಿ ಸಡಿಯಾದಲ್ಲಿ ತಿ ಚಾರ್ಯರ ಕನ್ಯೆ ಲಕ್ಷ್ಮೀದೇವಿಯೊಂದಿಗೆ ಮದುವೆಯಾಯಿತು. ಸಡಿಯಾದ ಪಂಡಿತರಾಂತ ತಿನ್ನಯ ವಿದ್ಯಾಭ್ಯಾಸ ಪೂರ್ಣಗೊಳಿಸಲು ಸಹಾಯ ಮಾಡಿದ್ದರಿಂದ, ಅವರಿಗೆ ಕೃತಜ್ಞತಾ ಸೂಚಕವಾಗಿ, ಅಳಿಯನಲ್ಲಿ ಕೃಷ್ಣ ಪ್ರಭು ಪ್ರಸನ್ನರಾಗಲೆಂದು ಪ್ರಾರ್ಥಿಸಿದನು. ಆಳ್ವಿಕೆಯ ಸಾತ ಪಂಡಿತರುಗಳಲ್ಲಿ, ನೈಯಾಯಿಕರಾಗಿದ್ದ ಜಗದೀಶನನ್ನು ಅಧ್ಯಾಪಕ ಸ್ಥಾನದಲ್ಲಿ ಸೇರಿಸಿಕೊಳ್ಳಲಾಯಿತು.

ಕುಟುಂಬದಲ್ಲಿ ಸ್ವಲ್ಪ ಸಮಯ ಕಳೆದ ಕಾರಣ ಧಾರಣಕ್ಕಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಪೂರ್ವ ಬಂಗಾಳದಲ್ಲಿ ಪದ್ಮಾನದಿಯ ಪದೇಶಕ್ಕೆ ಹೋಗಿ ತನ್ನ ವಾಂಛಿತ ಪ್ರಯತ್ನದಿಂದ ಸಾಕಷ್ಟು ಹಣ ಸಂಪಾದಿಸಿದನು. ಸಮಯ ಸ್ವಾರ್ಥಬಂಗಾಲದಲ್ಲಿರಲು, ಇತ್ತ ಪತ್ನಿಯು ಹಾವು – ಕಚ್ಚಿ ಅಕಸ್ಮಿಕ ವ್ಯತ್ಯಯವಿಗೆ ಗುರಿಯಾದಳು — ಹಿಂದಿರುಗಿದಾಗ ಕಾಯಿಯ ಮುಖವನ್ನು ಸಂತೈಸಿ, ಮನುಷ್ಯ-ವ್ಯವಹಾರದ ಅಸ್ಥಿರತೆಯನ್ನು ಸ್ಪಷ್ಟಪಡಿಸಿ, ಮಾತೆಯ ಮನಸ್ಸಾಂತಿಗಾಗಿ ರಾಜಾ ಪಂಡಿತನಾತನ ವಿಷ್ಣುಪ್ರಿಯಾ ಎಂಬ ಕನ್ಯೆಯನ್ನು ಮಹಾಪ್ರಭುವು ವಿವಾಹ ಮಾಡಿಕೊಂಡನು. ಇಲ್ಲಿಯವರೆವಿಗೆ ಅವರ ಶಿಷ್ಯಮಂಡಲವು ಸಾಕಷ್ಟು ಬೆಳೆದಿತ್ತು.

ಅಧ್ಯಾಪಕ ಜರ್ಜೆ— ಖ್ಯಾತಿ :—

ದೊಡ್ಡ ವಿದ್ವಾಂಸರುಗಳು ಇರುವ ಗಳಿಸಿದ್ದ ಕಾಲ್ಯೋರ ನಗರವು ಸುತ್ತಮುತ್ತಲಿನವರು ನಡಿಯಾಕ್ಕೆ ಆಗಮಿಸಿ ಅಲ್ಲಿಯ ಪಂಡಿತರನ್ನು ಚರ್ಚೆಗೆ ಆಹ್ವಾನಿಸಿದರು. ಅಲ್ಲಿಗೆ ಪಂಡಿತರು ಭಯಪಡುವ ಇವರು ಒರಿಸ್ಸಾದಿಂದ ಮುಂಚೆ ಬಿಂಬನಿಂದ ಸಲಹೆಯನ್ನು ಸೂತ್ರಧಾರರು. ಆರಂಭ ಸುಮಾರು ಭಗಳು. ಸದರಿ ಪಿಸ್ತಾರನ್ನು 'ಖಾಲಿಕೋಡನ ಘಾಟ್' ಎಂಬಲ್ಲಿ ಭೇಟಿ ಮಾಡಿ ಅಲ್ಲಿಗೆ ಚರ್ಚೆಯನ್ನು ಜರ್ಜೆಯನ್ನು ಸೋಲಿಸಿದರು. ಬಾಲಕನಿಂದ ಸೋತೆನೆಂಬ ಅವಮಾನದಿಂದ ಗಂಗಾಧರ ಪಂಡಿತರು ಮನೆಗೆ ಹಿಂತಿರುಗಿದರು. ಇದಾದ ಸ್ವಲ್ಪ ಸಮಯದಲ್ಲಿ ಸ್ವಯಂ ಪಂಡಿತರೆಂದು ಪ್ರಖ್ಯಾತಿಯಾಯಿತು.

ದಿಗ್ವಿಜಯ-ಸಂಸ್ಥಾರಿ— ಉಪದೇಶ,—

16 ನೆಯ ವಯಸ್ಸಿನಲ್ಲಿ ತನ್ನ ತಂದೆಗೆ ಸರ್ಕಾರಾಂತಿಮ ಕಾರ್ಯ ಗಯಾಕ್ಕೆ ಹೋಗಿ, ಪಾಪಿಂದ್ಯಪುರಿಯವರೆಗೆ ಪ್ರಯಾಣ ಕೈಗೊಂಡರು. ಪ್ರಯಾಣದ ಮಧ್ಯದಲ್ಲಿ ಸ್ಥಳೀಯ ಪಂಡಿತರೊಂದಿಗೆ ಸಂಸ್ಕೃತ ಭಾಷೆಯಲ್ಲಿ ಸಂವಾದಗಳನ್ನು ಪಾರ್ಥ ನಡೆಯಿಸಿ ಬಂದು ಧಾರ್ಮಿಕ ಉಪನ್ಯಾಸಗಳನ್ನು ಕೊಟ್ಟರು. ಇವರ ಧರ್ಮಕ್ಕೂ ಪಡೆದವು ಅಕ್ಕಪಕ್ಕದ ಪರಿಣಾಮಕಾರಿಕ ಕಾರ್ಯಗಳನ್ನು ಇವರ ಜ್ಞಾನಕ್ಕೆ ಪ್ರಭಾವಿತರಾಗಿ ಸ್ಥಳೀಯ ಪಂಡಿತರುಗಳು ಅನುಯಾಯಿಗಳಾದರು. ಪ್ರಯಾಣದ ಕೊನೆಯಲ್ಲಿ ಇವರಿಗೆ ಬಾಲಕನ ಗುರುಗಳಾದ ಜಗದೀಶ ಪಂಡಿತರು ಧರ್ಮಾರ್ಜನೆಯಲ್ಲಿ ಕೃಷ್ಣ ನಹೆಸರನ್ನು ಕೇಳಿದರೆ ದೇವ ಮಾನವರಾಗಿ ಬೀಳುತ್ತಿದ್ದರು. ಶ್ರೀನಿವಾಸ ಪಂಡಿತರ ಮನೆಯಲ್ಲಿ ನೂರಾರು ಪಂಡಿತರ ಸಮ್ಮುಖದಲ್ಲಿ, ಮಹಾಪ್ರಭುವು ತನ್ನ ಅಲೌಕಿಕ ಶಕ್ತಿಗಳನ್ನು ಪ್ರದರ್ಶಿಸಿದರೆಂದು ಕರ್ನಾಟಕ ಕಂಡವರು ಹೇಳುವಾಡೆ ಶ್ರೀನಿವಾಸ ಪಂಡಿತರ ಅವಮಾನದಲ್ಲಿ ರಾತ್ರಿಯು ಸಂಕೀರ್ತನ (ಭಜನೆಯಂಗಿರ) ವನ್ನಾ ರಂಭಿಸಿ, ಅಲ್ಲಿಯೇ ಹಾಡುವುದು, ಕುಣಿಯುವುದು ಉಪದೇಶಿಸಿದುದು, ಸನ್ಯಾಸಿಕ ಕಾರ್ಯಗಳಾರಂಭವಾದವು ಭಾರತನನ್ನೆಲ್ಲಾ ಸಂಚರಿಸಿ, ವೈಷ್ಣವಸಿದ್ಧಾಂತದ ಉಪದೇಶಕನಾದ ನಿತ್ಯಾನಂದ ಪ್ರಭುವು ಆ ಸಮಯಕ್ಕೆ ಇವರನ್ನು ಕೂಡಿಕೊಂಡನು.

— ಬಳ್ಳಾರಿ ಮುನ್ಸಿಫರ ಕೋರ್ಟಿನಲ್ಲಿ —

O. S. 80 / 57

ವಾದಿ :— H. ಅಶ್ವತ್ಥನಾರಾಯಣಶೆಟ್ಟಿ

Vs

ಪ್ರತಿವಾದಿಗಳು :— (1) ನಡ್ರವೆಂಕಪ್ಪ
(2) ಮರೂರು ಯೆರ್ರಪ್ಪರೆಡ್ಡಿ

ನೋಟೀಸು

ವಾದಿಯು ಪ್ರೋನೋಟಿನ ಬಾಬ್ತು 372-14-0 ಗಳನ್ನು ವಸೂಲಿ ಮಾಡಿಕೊಳ್ಳಲು ಪ್ರತಿವಾದಿಗಳ ಮೇಲೆ ದಾವಾಮಾಡಿರುತ್ತಾನೆ. ಮೊದಲನೆಯ ಪ್ರತಿವಾದಿಯು ಎರಡನೆಯ ಪ್ರತಿವಾದಿಗೆ ಬರದುಕೊಟ್ಟ ಸದರಿ ಪ್ರೋನೋಟಿನ ಹಕ್ಕನ್ನು ವಾದಿಗೆ 31—8—1956 ಕ್ಕೆ ಒಪ್ಪಿಸಲಾಗಿದೆ. ಮೊದಲನೆಯ ಪ್ರತಿವಾದಿಗೆ ನೋಟೀಸು ಕೊಟ್ಟಿದ್ದರೂ, ಗೈರು ಹಾಜರಾದ ಕಾರಣ ಆತನನ್ನು 15—4—57 ಎಕ್ಸಪಾರ್ಟಿಯಾಗಿ ಮಾಡಲಾಗಿದೆ.

ಎರಡನೆಯ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ 18—9—57 ಪ್ರಾತಃಕಾಲ 11 ಗಂಟೆಗೆ ಮೇಲ್ಕಾಣಿಸಿದ ಸದರಿ ಕೋರ್ಟಿಗೆ ಹಾಜರಾಗಿ ತನ್ನ ಆಕ್ಷೇಪಣೆಯನ್ನು ತಿಳಿಸದಿದ್ದಲ್ಲಿ ಆತನನ್ನು ಎಕ್ಸಪಾರ್ಟಿಯಾಗಿ ಮಾಡಿ, ಆತನ ಗೈರುಹಾಜರಿಯಲ್ಲಿ ಡಿಕ್ರೀಮಾಡಲಾಗುವುದು.

ಶಿ. ಭೀಮಪ್ಪಶೆಟ್ಟಿ.
ವಾದಿಯ ಅಡ್ವಕೇಟ್, ಬಳ್ಳಾರಿ

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ ೪
ಸತ್ಸಂಚಯನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟಾಂಪಿಟ್ಟು ಅಥವಾ ರಿಪ್ಲೈಕಾರ್ಡು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತ್ತು
ಎಲ್ಲ ನೋವುಗಳಿಗೆ ದಿವ್ಯಾಮೃತ
(ಇನ್ಫ್ಲುಯಂಜಾ ಜ್ವರಕ್ಕೆ ನೀರಿನ
ಲ್ಲಿ ೩ ಕೊಟ್ಟು ಹಾಕಿ ಸೇವಿಸಿರಿ)

ಕಾಶ್ಮೀರಿ ಅರ್ಕ್

ಲೇಪನೆ, ಸೇವನೆ - ಎಂದೂ ಸಾಧ್ಯ,
ಎಲ್ಲಾಪ್ರಾಣಿಗಳಲ್ಲೂ ಕೊಡಬಹುದು

H. S & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
೬ತಿಂಗಳಿಗೆ 3—0—0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri.

Edited, Printed & Published by T. P. KESHAVA RAO at Nava Bharat Printing Press, Bellary

ಸಚಿತ್ರಭಾರತಿ

ಸೋಮವಾರ ಸೆಪ್ಟೆಂಬರ್, 20-9-1957

ವರ್ಷ 21. ಸಂಚಿಕೆ 3- | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!! | ಸಂಪಾದಕ ಮತ್ತು ಪ್ರಕಾಶಕ ಟಿ. ಜಿ. ಕೇಶವರಾವ್

ಕಾಮಿನೀ ಕಾಂಚನಗಳ ನಗರ ಹಾಂಗ್‌ಕಾಂಗ್

[ನೀರಿದ್ದಲ್ಲಿ ಕಸರಿರುವಂತೆ, ದೀಪದಡಿಯಲ್ಲಿ ಕತ್ತಲಿರುವಂತೆ, ಊರಿನ್ನಲ್ಲಿ ಜೊಲಗೇರಿಗಳಿದ್ದು ತರಸ್ಕರಣೀಯವೆನಿಸಿದರೂ ಅಲ್ಲೇ ಸಕ್ಕದಲ್ಲೇ ಪ್ರೇಕ್ಷಣೀಯ ಪ್ರಸಂಗ-ಪರಿಸ್ಥಿತಿ-ಪ್ರಯೋಗಗಳೂ ಕೊರತೆಯಿಲ್ಲದು ಅದಕ್ಕೂ ವಿವಿಧತೆಯ ವೈಚಿತ್ರ್ಯಕ್ಕೂ ವಿಲಕ್ಷಣವಾಗಿದೆ ಎಂದ ಬಳಿಕ ಭಿನ್ನರುಚಿಯ ಲೋಕವು ವಿಶಿಷ್ಟ ಪೂರ್ಣವಾದಗಳನ್ನು ಅತ್ಯಂತ ದಿಂದ ನಿರೀಕ್ಷಿಸದಿರದು. ಆದರ್ಶವೂ ಜೀವಳ ಸರ್ವಸ್ವಗಳಾದ ಕಾಮಿನೀ ಕಾಂಚನಗಳಿಂದ ತುಂಬಿ ತುಳುಕಾಡುವ ಹಾಂಗ್‌ಕಾಂಗ್‌ನ ಕುರಿತು ಪರಿಚಾಯಕವಾದ ಲೇಖನವಿದು. ಓದದವರನ್ನೂ ಓದಿಸಲು]

ಪೋರ್ಚುಗೀಸರ ಮೊಜಾಂಬಿಕ್, ಬ್ರಿಟಿಷರ ಪೂರ್ವ ಆಫ್ರಿಕಾ, ಬೆಲ್ಜಿಯನ್ನರ ಕಾಂಗೋ ಪ್ರದೇಶಗಳಂತೆ ಸಾವಕಾಶ ಜ್ಯಾರಾಹಿ ಶೋಷಣೆ, ಅತ್ಯಾಚಾರ, ಅನಾಚಾರ, ದ್ರವ್ಯಲಾಲಸೆಗಳಿಗೆ ತಾಯಿಮನೆಯಾದ ಇನ್ನೊಂದು ತಾಣವು ಹಾಂಗ್-ಕಾಂಗ್ ದ್ವೀಪವಾಗಿದೆ- ವಾಸವರನ್ನಿಲ್ಲಿ ಪ್ರಾಣಿಗಳಂತೆ ದ್ರವ್ಯವನ್ನು ಸಂಚಯಿಸುವ ಏಕಮಾತ್ರ ಉದ್ದೇಶವನ್ನು ಪೂರ್ತಿಗೊಳಿಸಬೇಕೆನ್ನುವರಿಗೆ ಅವಸರಿತಳದಲ್ಲಿ ಹಾಂಗ್‌ಕಾಂಗಿನಷ್ಟು ಭೂ ಸ್ವರ್ಗವು ಮತ್ತೊಂದು ಸಿಗಲಾರದು.

ಅಮರಗಣಿಕೆಯರ ಅಂದುಬೊಲ

ಕಾಂಚಾಣಂ ಕಾರ್ಯಸಿದ್ಧಿರ್ಣಂ ಎಂಬ ಮಾತು ಅಕ್ಷರಶಃ ಪರಿಪಾಲಿಸಲ್ಪಡುವ ಭೂಭಾಗವೆಂದರೆ ಹಾಂಗ್‌ಕಾಂಗ್ ಒಂದೇ- ಇಲ್ಲಿ ಲಾಭವೇ ಅತಿ ಪವಿತ್ರವಾದ ವಸ್ತು. ಧನಂಪೊವಿದ್ದರೆ ಸರ್ವವಸ್ತುಗಳೂ ಕರತಲಾಮಲಕ. ಉನ್ನತವಾದ ಹಮ್ಮ್ಯಗಳೂ, ಮನೋಹರವಾದ ಉಪವನಗಳೂ, ಸೊಗಸಾಗಿ ಸಾತ್ತುವಿದ ರಸ್ತೆಗಳೂ, ಆಧುನಿಕ ಶಾಲೆಗಳೂ ಹಾಂಗ್‌ಕಾಂಗ್‌ನ ಲಕ್ಷ್ಯೈನಾರಾಯಣರ ಖಾಸಗಿಸ್ವತ್ತುಗಳಂತಿವೆ.

ಇಲ್ಲಿಯ ವಿಲಾಸೋಪಭೋಗದ ಉಪಚಾರ ಗೃಹಗಳನ್ನು ಬಿಟ್ಟು ನಗರದ ನೈಜವಾದ ಪರಿಸ್ಥಿತಿಯನ್ನು ಕಾಣಬೇಕೆಂದರೆ ಸಾವಿರಾರು ಜನರು ಜೊತೆಗೂಡಿ ವಾಸಿಸುವ ಚಿಗಿಜರ ಹರಿಯುವ ಬಿಗಿಯಾದ ಗಡಿಸಲುಗಳನ್ನೂ, ಓಬರಾಯನ ಕಾಲದ ಗ್ಯಾರೇಜುಗಳನ್ನೂ ಹೊಕ್ಕು ನೋಡಬೇಕು. ಇಕ್ಕಟ್ಟಿಯೇ ಹಾಂಗ್‌ಕಾಂಗಿನ ಮಾರ್ಮವಿವಾದ ದುರಂತವಮಯ ಜೀವನದ ಪರಿಚಯಕ್ಕೆ ಪ್ರೇಕ್ಷಕನಿಗೆ. ಸವಿಸ್ತಾರವಾಗಿ ಬಳಸಿಕೊಂಡಿರುವ ರಸ್ತೆಗಳ ಅಕ್ಕಪಕ್ಕಗಳಲ್ಲಿ ಸ್ಥಾಪಿತೊಂದು ಕೋಣೆಯೂ ಒಂದೊಂದು ಕುಟುಂಬದಿಂದ ಬಳಿಗೊಂಡಿದೆ. ವಾರ್ಗದುದ್ದಕ್ಕೂ ವೇಶ್ಯಾವಾಟಿಗಳು ಜಾಜಿಕೊಂಡಿರುವುದನ್ನು ಕಾಣಬಹುದಾಗಿದೆ. ಅಲ್ಲಲ್ಲಿ ಬಿದರುಗಳ ಮೇಲೆ ತೂಗುಹಾಕಿರುವ ಬಟ್ಟೆಗಳೂ "ಕಾಪಲೆರುವನೆನೆ" ಮತ್ತು "ಕಾಮಿನಿಯು ಕತ್ತಲೆಯಡಿಯಲ್ಲಿ ನಿನ್ನನ್ನು ಕಾದಿದ್ದಾಳೆ" ಎಂಬ ತೂಗುಹಲಗೆಗಳೂ ಈ ನಗರದ ನಿತ್ಯನೋಟಗಳಾಗಿವೆ.

ಹಾಳು ಹಿಪ್ಪೆಯಾದ ಯಂತ್ರಗಳಂತೆ ಚೀನೀಜನರು ತಯಾರಿಸುವ ನಿತ್ಯನವೀನ ಯಾಂತ್ರಿಕ ಸಾಮಾನುಗಳೂ, ದುರ್ವಾಸನೆಯಿಂದ ಮೂಗನ್ನು ಮುಚ್ಚಿಕೊಳ್ಳುವಂತ ಮೂತ್ರ ವಿಸರ್ಜನೆಸ್ಥಳಗಳೂ, ನೀರಿನ ಸೌಕರ್ಯವಿದ ಗುಡಿಸಲುಗಳೂ, ಮೈತುಂಬಾ ಜೆವರಿಸಿ ದಿನವೊಂದಕ್ಕೆ 14 ತಾಸು ದುಡಿಯುವ ಕಾರ್ಮಿಕರು, ತಿಗಣೆತುಂಬಿದ ಹಾಸಿಗೆ, ಮಂಚಗಳೂ ರಕ್ತವನ್ನು ಹೀರುತ್ತಿರುವ ತುಟಿಗಳೂ, ಕಾಮಾಲೆರೋಗ ಪೀಡಿತವಾದ ಕಣ್ಣುಗಳೂ, ಭಿಕ್ಷಾನ್ನ ಕದನಗಳೂ, ನಿರುದ್ಯೋಗ ಪೆಡಂಭೂತವೂ ಆವರಿಸಿರುವ ಹಾಂಗ್‌ಕಾಂಗ್‌ನಲ್ಲಿ ವಾಸಮಾಡಿಕೊಂಡಿರುವ ಸಾಂಕ್ರಾಮಿಕ ರೋಗಗ್ರಾಸಗಳು.

ಒಂದು ಬಟ್ಟಿಲು ವಾಸಕ್ಕಾಗಿ ದೇಹವಿಕ್ರಯಿಸುವ ಬೆಲೆವೆಣ್ಣುಗಳು

ಕ್ವಾನ್ಸಿ, ವಾಂಚಾಪೂರ, ಅಂತರ್ದೇಶೀಯ ಯುವತಿಯರಿಂದಾಗಿ ಆಸ್ಯಾಖಂಡದ ಭಿನ್ನ ಭಿನ್ನ ಭೂಭಾಗಗಳಿಂದ ಬಂದಿರುವ ನಿರಾಶ್ರಿತರಿಗೆಲ್ಲಾ ಹಾಂಗ್‌ಕಾಂಗ್ ನಗರವು ವಾಸಸ್ಥಳವಾಗಿದೆ. ಜನಸಂಖ್ಯೆಯು ವರ್ಧಿಸುತ್ತಿರುವ ಹಾಂಗ್‌ಕಾಂಗ್‌ನಲ್ಲಿ ನಿರುದ್ಯೋಗ ಸಮಸ್ಯೆಯು ಇನ್ನೂ ಅಧಿಕವಾಗಿ ಬೆಳೆಯಲಾರಂಭಿಸಿದೆ. ನಿರಾಶ್ರಿತರಲ್ಲಿ ಹೆಚ್ಚಿನವರೆಲ್ಲಾ ತಮ್ಮ ಉದರ ಪೋಷಣೆಗಾಗಿ ನೇಯ್ಗಾರಿಕೆಗಳನ್ನು ನಿರ್ಮಿಸಿ ಜೀವಿಸುತ್ತಿರುವ ವ್ಯಸನಗಳೇ ಇಲ್ಲಿ ಅಧಿಕವಾಗಿವೆ. ನಿರ್ಗತಿಕರಾದ ಶಿಶುಗಳನ್ನು ರಸ್ತೆಗಳಲ್ಲಿ ಅಲೆಯುತ್ತಿರುವ ಪುಂಡರು ಸಾಕಿ ಸಲಹಿ ವಿವಿಧವಿದ್ಯೆಯನ್ನು ಕಲಿಸಿ ವೇಶ್ಯಾಗಾರ ದ್ವಾರಪಾಲಕರನ್ನಾಗಿ ಮಾಡುತ್ತಿದ್ದಾರೆ ಹಾಂಗ್‌ಕಾಂಗ್‌ನಲ್ಲಿ ಇಲ್ಲಿ ನಿಲಯಸಮಯ ಜೀವನವನ್ನು ಸಾಗಿಸಬೇಕೆನ್ನುವರಿಗೆ ಬಹು ಸುಲಭದಲ್ಲಿ

—ಬಳ್ಳಾರಿ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟ್‌ನಲ್ಲಿ—

Op 10 / 57

ಮೈನರ್ ತಾಳಮ್ಮಗೆ ಗಾರ್ಡಿಯ್ ಏರ್ಪಾಟು ಮಾಡುವ ವಿಷಯದಲ್ಲಿ—

ಕಂಬಾರು ಈರಮ್ಮ ಬೊಗ್ಗೂರು ..... **ಅರ್ಜಿದಾರಳು**

and

1) ಕಂಬಾರು ನಾಗಲಿಂಗಪ್ಪ
2) ಕಂಬಾರು ನಾಗಪ್ಪ } ..... **ಪ್ರತಿವಾದಿಗಳು**

ಇನೇ ಪ್ರತಿವಾದಿಗೆ ನೋಟೀಸು :—

ನಿನ್ನ ಮಗಳಾದ ಮೇಲ್ಕಂಡ ಮೈನರಿಗೆ ಆಕೆಯ ತಾಯಿ ಯಾದ ಅರ್ಜಿದಾರಳು ತನ್ನನ್ನೆ ಗಾರ್ಡಿಯನ್ನಾಗಿ ಮಾಡಬೇಕು ಎಂತ ಮೇಲ್ಕಂಡ ಅರ್ಜಿಯನ್ನು 25—8—57 ತಾರೀಕು ಹಾಜರು ಮಾಡಿರುತ್ತಾಳೆ. ನಾವಿನ ಮಾಮೂಲು ಸಮನು ಜಾರಿಮಾಡಿದಾಗ ತಪ್ಪಿಸಿಕೊಂಡ ಕಾರಣ ಪತ್ರಿಕೆಯಲ್ಲಿ ನೋಟೀಸು ಜಾಹಿರಾತು ಮಾಡಿರುತ್ತದೆ. ಈ ನಂಬರು ವಾಯಿದೆಯು 5—10—57 ಹಗಲು 11 ಗಂಟೆಗೆ ಇರುತ್ತದೆ. ನೀನು ಹಾಜರಾಗಿ ತಕರಾರು ಮಾಡಬಹುದು. ಇಲ್ಲವಾದರೆ, ನಿನ್ನ ಪರೋಕ್ಷದಲ್ಲಿ ತೀರ್ಮಾನ ಮಾಡಲಾಗುತ್ತದೆ.

ಬಳ್ಳಾರಿ
೨೦—೯—೫೭

ಶಿರಿಗೇರಿ ನಾರಾಯಣಶಾಸ್ತ್ರಿ
ಅರ್ಜಿದಾರಳ ವಕೀಲರು

ಶ್ರೀ

ಚೈತನ್ಯ ಮಹಾಪ್ರಭು ಜೀವನ ಮತ್ತು ಆದರ್ಶ

(ಮುಂದುನರಿದುದು)

ಚೈತನ್ಯರ ಆರ್ಥದ ತರ್ಕ, ಮೇಳ ಮತ್ತು ಸೌಂದರ್ಯವನ್ನು ಕಂಡು ಇಷ್ಟು ಸರಳವಾಗಿಯೂ ದರೂ ಪರಿಣಾಮಕಾರಿಯಾಗಿ ರೀತಿಯಲ್ಲಿ ಬ್ರಹ್ಮಸೂತ್ರ ಭಾಷ್ಯವನ್ನು ಕೇಳಿದ್ದು, ಇನು ಮೊದಲನೆ ಸಾರಿ ಎಂದರು. ಬರ ಬರುತ್ತ ಶ್ಲಿಷ್ಟವಾದ ಶಂಕರ ಸಿದ್ಧಾಂತದಿಂದ ದೂರವಾಗಿ ಚೈತನ್ಯರ ತತ್ವಪ್ರತಿಪಾದಕರೂ, ಅನುಯಾಯಿಗಳೂ ಆಗಿ ಆ ಕಾಲದ ಶ್ರೇಷ್ಠ ವೈಷ್ಣವರೆಂದು ಹೆಸರು ಪಡೆದರು. ಒರಿಸ್ಸಾ ಪ್ರಾಂತದಲ್ಲಿ ಕೃಷ್ಣ ಚೈತನ್ಯರ ಗುಣಗಾನ ಮಾಡುತ್ತ ನೂರಾರುಜನರು ಅವರ ಶಿಷ್ಯರಾದರು.

ದಕ್ಷಿಣದೇಶದ ಯಾತ್ರೆ—

ಅವರು ದಕ್ಷಿಣ ದೇಶಕ್ಕೆ ಕೃಷ್ಣದಾಸ ಬ್ರಾಹ್ಮಣರೊಂದಿಗೆ ಪ್ರಯಾಣ ಬೆಳೆಸಿದರು. ಅವರ ಚರಿತ್ರೆ ಲೇಖಕರು ದಕ್ಷಿಣ ಯಾತ್ರೆಯ ಬಹಳ ವಿವರಗಳನ್ನು ಕೊಟ್ಟಿರುವರು. ಕೂರ್ಮಾ ಕ್ಷೇತ್ರಕ್ಕೆ ಹೋಗಿ ವಾಸುದೇವನೆಂಬ ಕುಷ್ಠರೋಗಿಯನ್ನು ವಾಸಿಮಾಡಿದುದು, ಗೋದಾವರೀತೀರದ ವಿದ್ಯಾನಗರದ ರಾಜ್ಯಕಾಲ ರಾಮಾನಂದ ರಾಯರೊಡನೆ ಸ್ನೇಹ ಇನ್ನಿಯ ಚರ್ಚೆ ನಡೆಸಿದುದು, ಕಿಷ್ಕಿಂಧೆಯಲ್ಲಿ ರಾಮ ಚಂದ್ರನು ವಾಲಿಯನ್ನು ಕೊಂದ ಸ್ಥಳದಲ್ಲಿ ಸಪ್ತವೃಕ್ಷಗಳನ್ನು ಆಶ್ಚರ್ಯಪಡಿಸಿದುದು, ವಗೈರೆ ತಿಳಿಸಲಾಗಿದೆ. ವೈಷ್ಣವ ಸಿದ್ಧಾಂತ ಮತ್ತು ನಾಮ ಸಂಕೀರ್ತನೆಯ ಮಹತ್ವವನ್ನು ತಿಳಿಸುತ್ತ ರಂಗಕ್ಷೇತ್ರದ ವೆಂಕಟಭಟ್ಟರ ಮನೆಯಲ್ಲಿ ಚಾತುರ್ಮಾಸ್ಯ ವ್ರತವನ್ನು ಮಾಡಿ ವರ್ಷಕಾಲವು ಮುಗಿಯುವವರೆಗೂ ಅಲ್ಲಿದ್ದು ವೆಂಕಟಭಟ್ಟರ ಕುಟುಂಬವನ್ನೆಲ್ಲ ವೈಷ್ಣವ ಧರ್ಮಕ್ಕೆ ತಿರುಗಿಸಿದರು. ವೆಂಕಟ ಭಟ್ಟರ ಮಗನಾದ 10 ವರ್ಷದ ಗೋಪಾಲನೂಸಹ ವೈಷ್ಣವಧರ್ಮವನ್ನು ಸ್ವೀಕರಿಸಿ, ತನ್ನ ಚಿಕ್ಕಪ್ಪನಾದ ಪ್ರಬೋಧಾನಂದ ಸರಸ್ವತಿಯವರಿಂದ ಸಂಸ್ಕೃತ ಅಧ್ಯಯನ ಮಾಡಿ ದೊಡ್ಡವನಾದ ಮೇಲೆ ಬೃಂದಾವನವನ್ನು ಸೇರಿ ಶ್ರೀ ಕೃಷ್ಣ ಚೈತನ್ಯರ ಆರು ಗೋಸ್ವಾಮಿಗಳಲ್ಲಿ ಒಬ್ಬನಾದನು.

ದಕ್ಷಿಣದ ಅನೇಕ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ, ಕನ್ಯಾಕುಮಾರಿಯವರೆಗೂ ಹೋಗಿ ಭೀಮಾನದಿಯ ಮೇಲಿರುವ ಪಂಢರಪುರದ ಮಾರ್ಗವಾಗಿ 2 ವರ್ಷಗಳೊಳಗಾಗಿ ಪುರಿಯನ್ನು ಸೇರಿದರು. ಪಂಢರಪುರದಲ್ಲಿ ತುಕಾರಾಂ ಎಂಬ ಭಕ್ತರೊಬ್ಬರನ್ನು ವೈಷ್ಣವ ಪಂಥಕ್ಕೆ ಸೇರಿಸಿದರು. ಬೊಂಬಾಯಿ ಸಿವಿಲ್ ಸರ್ವಿಸ್‌ನ ಶ್ರೀ ಸತ್ಯೇಂದ್ರನಾಥ ಟಾಗೋರ್ ರವರಿಂದ ಸಂಪಾದಿತವಾದ ಅಭಂಗಗಳಲ್ಲಿ ಈ ವಿಷಯದ ಪ್ರತಿಪಾದನೆಯುಂಟು. ಬುದ್ಧ, ಜೈನ ಮಾಯಾವಾದಿ ಮುಂತಾದ ಅನೇಕ ಜಾತಿ ಪಂಥಗಳ ಮುಖ್ಯರೊಡನೆ ಕಲೆತು, ಚರ್ಚಿಸಿ, ತಮ್ಮ ವಿರೋಧಿಗಳನೇಕರನ್ನು ವೈಷ್ಣವ ಧರ್ಮಕ್ಕೆ ಸೇರಿಸಿದರು.

ಸನ್ಯಾಸಿಗಳು ಮತ್ತು ಮುಸಲ್ಮಾನರ ಪರಿವರ್ತನೆ

ಪುರಿಗೆ ಹಿಂದಿರುಗಿದ ನಂತರ ಪ್ರತಾಪರುದ್ರದೇವ ಮತ್ತು ಇತರ ಪಂಡಿತ ಬ್ರಾಹ್ಮಣರು ಚೈತನ್ಯ ಮಹಾಪ್ರಭುವಿನ ಧಾರ್ಮಿಕ ಪಂಥಕ್ಕೆ ಸೇರಿದರು. ತಮ್ಮ 28 ನೇ ವಯಸ್ಸಿನಲ್ಲಿ ಸಂಚರಿಸಿ ಮಾಲ್ವಾ ಪ್ರದೇಶದ ಗೌಡ ನಗರಕ್ಕೆ ಹೋಗಿ, ಹಿಂದುತ್ವದಿಂದ ಮುಸಲ್ಮಾನ ಧರ್ಮಕ್ಕೆ ಸೇರಿದ ಇಬ್ಬರ ಸಂಬಂಧವನ್ನು ಬೆಳೆಸಿದರು. ರೂಪ ಮತ್ತು ಸನಾತನ ಎಂಬ ಇವರು ಗೌಡ ಮುಸಲ್ಮಾನ ಶಾಸಕರಿಗೆ ದಬೀರ್ ಖಾಸ್ ಮತ್ತು ಸಾಖಿರ್ ಮಲ್ಲಿಕರಾಗಿದ್ದರು. ಇವರು ಚೈತನ್ಯರಿಗೆ ಬರೆದು ತಮ್ಮ ಧಾರ್ಮಿಕ ಪತನದಿಂದ ರಕ್ಷಿಸಲು ಕೇಳಿದ್ದರು. ಅವರನ್ನು ಇಂಥ ಕಷ್ಟದಲ್ಲಿ ಸಂಧಿಸಲು ಚೈತನ್ಯರು ಯೋಚಿಸಿದರು. ರೂಪನು ಅಲಹಾಬಾದಿನಲ್ಲಿ ಸೇರಿದಾಗ ಸ್ವಾಮಿಯಾಗಿ ಹತ್ತು ದಿನಗಳವರೆಗೆ ಶಿಕ್ಷಣಹೊಂದಿ ಬೃಂದಾವನಕ್ಕೆ ಹೋಗಲು ಆದೇಶವಾಯಿತು. ಕಾಶಿಯಲ್ಲಿ ಎರಡುತಿಂಗಳವರೆವಿಗೆ ತಪನಮಿಶ್ರನಮನೆಯಲ್ಲಿ ಸನಾತನು ಗೋಸ್ವಾಮಿಯಾಗಿ ಶಿಕ್ಷಣಹೊಂದಿದನು. ಇಬ್ಬರೂ ಸಂಸ್ಕೃತ, ಅರಾಬಿಕ್, ಮತ್ತು ಪರ್ಶಿಯನ್ ಭಾಷೆಗಳ ವಿದ್ವಾಂಸರಿದ್ದ ಕಾರಣ ಮೊದಲನೆಯವನಾದ ರೂಪ ಗೋಸ್ವಾಮಿಗೆ ಭಕ್ತಿ ಮತ್ತು ಪ್ರೇಮದ ಮೇಲೆ ಧಾರ್ಮಿಕ ಗ್ರಂಥಗಳನ್ನು ಬರೆಯಲು ಚೈತನ್ಯರು ಹೇಳಿದರು. ಚೈತನ್ಯರ ಪಂಥಕ್ಕೆ ಮೋಹಿತರಾಗಿ ಅನೇಕ ಮುಸಲ್ಮಾನರು ವೈಷ್ಣವಧರ್ಮವನ್ನು ಅಂಗೀಕರಿಸಿದರು. ದ್ವಾಪರಯುಗದಲ್ಲಿ ಕೃಷ್ಣಲೀಲೆಯು ನಡೆದ ಸ್ಥಳಗಳ ಪುನರಾ

— ರಾಷ್ಟ್ರದ ಅಮೂಲ್ಯ ಸಂಪತ್ತು —

ಮಹಾತ್ಮಗಾಂಧಿಯವರು ತಮ್ಮ ಜೀವಿತಕಾಲದಲ್ಲಿ ಉಪಯೋಗಿಸುತ್ತಿದ್ದ ಪಾದರಕ್ಷೆ, ಕನ್ನಡಕ, ಗಡಿಯಾರ, ಹಣ್ಣಿನರಸ ಕುಡಿಯುತ್ತಿದ್ದ ಪಾತ್ರೆ, ಚಪ್ಪಲಿ ವಗೈರೆಗಳನ್ನು ಗಾಂಧಿ ಸ್ಮಾರಕ ನಿಧಿಯವರು ಭದ್ರವಾಗಿ ಕಾದಿರಿಸಿದ್ದಾರೆ.



ದ್ಧರ ಕಾರ್ಯಕ್ಕೆ ಈಗ ಸ್ವಾಮಿಗಳ ಮೃತ್ಯು ಕಾರ್ಯವಾಯಿತು. ಕೃಷ್ಣಚಾಸನು ಬರೆದ ಗ್ರಂಥದಲ್ಲಿ ರೂಪ ಸನಾತನರ ಶಿಕ್ಷಣದ ಅಂಶಗಳುಂಟು ಜೀವ ಗೋಸ್ವಾಮಿಯವರ (ಇವರು ರೂಪ, ಸನಾತನರ ದಾಯಾದಿ) ಷಟ್ಸಂದರ್ಭ ಗ್ರಂಥದಲ್ಲೂ ಸಹ ಚೈತನ್ಯರ ಆದೇಶ ಸಾರವುಂಟು.

ಕಾಶಿಯಲ್ಲಿದ್ದಾಗ ಮರಾಠಾ ಬ್ರಾಹ್ಮಣರೊಬ್ಬರಮನೆಯಲ್ಲಿ ಸನ್ಯಾಸಿಗಳ ಸಮ್ಮೇಳನವಾಯಿತು. ಅಲ್ಲಿ ಗುರು ಚೈತನ್ಯರ ತತ್ವ ಪ್ರಭಾವದಿಂದ ಚಿನುತ್ಯಾರವನ್ನು ತೋರಿಸಿ ಸನ್ಯಾಸಿಗಳನ್ನು ತನ್ನ ಕಡೆಗಾಕರ್ಷಿಸಿದರು. ಸನ್ಯಾಸಿಗಳ ಮುಖಂಡನೂ, ಪ್ರಚಂಡ ವಿದ್ವಾಂಸನೂ ಆದ ಪ್ರಕಾಶಾನಂದ ಸರಸ್ವತಿಯವರ ಧೋರಣತ್ವದಲ್ಲಿ ಬಂದಿದ್ದರು. ಸನ್ಯಾಸಿಗಳು ಶಂಕರಾಚಾರ್ಯರ ಟೀಕೆಗಳಿಂದ ತನುಗೆ ತಪ್ಪು ದಾರಿ ಹಿಡಿಸುತ್ತಿದ್ದಾರೆಂದು ಕೊಂಡು ವೇದಾಂತಯುದ್ಧಗಳಾದವು ಚೈತನ್ಯರ ಅದ್ಭುತ ಪ್ರತಿಭೆಗೆ ಚಮತ್ಕೃತರಾಗಿ ಸನ್ಯಾಸಿಗಳಿಂದ ಎಸ್ ಸಂದ್ಯಾಸಿಗೂ ರೂಪ ವಳಯಲು ಪಾದ್ಯವಾಗಲಿಲ್ಲ. ಚೈತನ್ಯರ ಸಂಪರ್ಕದಿಂದ ಅವರ ಹೃದಯ ಪರಿವರ್ತನೆಯಾಗಿ, ಭಕ್ತಿ ಮಾರ್ಗಕ್ಕೆ ಬಂದು ಜಾತೀಯತೆಯ ಭಾವನೆಯನ್ನು ಬಿಟ್ಟು ಕೃಷ್ಣಪ್ರೇಮದ ಪರಿಧಿಯಲ್ಲಿ ಬಂದರು. ಈ ಸನ್ಯಾಸಿಗಳ ಪರಿವರ್ತನೆಯಿಂದ ಬನಾರಸ (ಕಾಶಿ) ದಲ್ಲಿ ಕ್ರಾಂತಿಯಾಗಿ ಅಲ್ಲಿನ ನಿವಾಸಿಗಳೆಲ್ಲ ವೈಷ್ಣವರಾದರು. ಚೈತನ್ಯ ಗುರುವಿಗೆ ಜಗನ್ನಿವಾಸರೊಡನೆ ಜರುಗಿದ ದೊಡ್ಡ ಸಂಭಾಷಣೆ ಮೇಳವನ್ನೇ ನಡೆಸಿದರು. ಇದಾನಂತರ ಬಲಭದ್ರನೊಡನೆ ಮತ್ತೆ ನೂರಾರು ಕ್ರೋಶ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಆನೆ ಹುಲಿ ಮೊದಲಾದ ಅನ್ಯ ಜಂತುಗಳು ಸಹ ಕೃಷ್ಣನ ನಾಮಸ್ಮರಣೆಯಿಂದ ನರ್ತನ ಮಾಡುವ ಚಮತ್ಕಾರಕೃತಿಗಳಾದವೆಂದು ಚರಿತ್ರಕಾರರು ಬರೆದಿದ್ದಾರೆ.

ಹೆತ್ತವರು ಮಾಡುವ ಮಮತೆಯ ತಪ್ಪುಗಳು

(ಮಮತೆಯೋನೋ ಮುದ್ದಾಗಿದೆ ನಿಜ. ಒಲುಮೆಯ ಹಿನ್ನೆಲೆಯಲ್ಲಿ ಮೋಹಾಂಧತೆಯು ಬೀಡುಬಿಟ್ಟಲ್ಲಿ ರಕ್ಷಕನೇ ಭಕ್ಷಕನೆನಿಸಿ ತಾರಕನೇ ಮಾರಕನಾಗುವಂತಾದೀತು, ಹೂವೆ ಹಾವೆಂದೆನಿಸಿ ಬೇಲಿಯೆ ಹೊಲವ ಮೇದಂತಾದೀತು. ಅದರಲ್ಲೂ ಮಕ್ಕಳ ಹಿತಚಿಂತಕರಾದವರು ಈ ಎಲ್ಲ ವಿಚಾರಗಳನ್ನು ಆಳವಾಗಿ ಅರಿತಷ್ಟೂ ಅಲ್ಪವೆನಿಸದಿರದು. ಪ್ರಸ್ತುತದ ಬರೆಹದ ಬರಹಗಾರರೇನೊ ಹೊಸಬರೆನಿಸಿದರೂ ಹೇಳಿದ ಹೇಳಿಕೆಗೆ ತಲೆದೂಗಬೇಕೆಂಬುನವರಿಂದ ಓದಲೇ ಬೇಕಾದ ಲೇಖನವಿದು.)

ದೇಹದರಮನೆಯಿಂದ ಮಾಯಾಹಂದರಕ್ಕೆ ಬಿದ್ದೊಡನೆಯೇ ಮಗುವು ಹೆದರಿಕೆಯನ್ನು ಸಿಳಿದಿರುತ್ತದೆಂಬ ವಾದ ಸಂಭವವಾದವೇ? ಹೆದರಿಕೆಯ ವಿಶಾಚವು ಆಡಿಯಿಂದ ಮುಡಿಯ ತನಕ ಜೇರುಬಿಡಬೇಕಾದರೆ, ಯಾ ವೃದಯದಿಂದ ತೊಲಗಿ ಹೊದರಿಗೆ ಸೇರಬೇಕಾದರೆ ಹೆರವರ ಸಹಕಾರವು ಅಗತ್ಯ—

ಉದರದಿಂದ ಹೊರಬಿದ್ದೊಡನೆಯೇ ಮಗುವು ತನ್ನ ಪೂರ್ವಾಪರ ವಿಚಾರ ಮಟ್ಟಿತು, ಬಾಹ್ಯದ ಬೆಡಗನ್ನು ಕಣ್ತೆರೆದು, ಕಾಣುತ್ತದೆ. ಕಂಡು ಕೂಗುತ್ತದೆ. ಉದು ಸ್ವತಂತ್ರವಾಗಿ ಕೂಗಿದಾಗ ಅದರ ಕೂಗನ್ನು ನಿಲ್ಲಿಸಲಕ್ಕಾಗಿ ಬಟ್ಟಲೋ ಜಾಗಟೆಯೋ ಬಡಿಯುವುದನ್ನು ನಾವು ಕಾಣುತ್ತಿದ್ದೇವೆ.

ಜಾಗಟೆ ಬಡಿತದ ಅಲೆಗಳು ಕಿರುಗೂಸಿನ ಎಳೆ ತನ್ಮಾಟಿಯಲ್ಲಿ ಹೆದರಿಕೆಯ ಕಲೆಯನ್ನು ಮಾಡದಿಹವೇ? ಮುಂದೆ ಅದು ಹೆದರಿಕೆಯ ರೂಪದಲ್ಲೇ ಶಬ್ದವ ಗ್ರಹಿಸಬಹುದೇ?

ಬೆಳೆದು ಶೈಶವಾವಸ್ಥೆಗೆ ಕಾಲಿಡುತ್ತದೆ. ಕೈಬಿಟ್ಟು ನಡೆಯಲು ಕಲಿಯುತ್ತದೆ. ಉದರನೇ ಜಗತ್ತೆಂದರಿಯದಿದ್ದ ಮಗುವು ಕೋಣೆಯ ಪ್ರಪಂಚದಿಂದ ಹೊರಗೆ ಹಾರಿ ಚಾವಡಿಯ ಚಂದಿರನದಾಟ, ಅಂಗಣದ ಆಕಾಶವನ್ನು ಕುತೂಹಲಿತ ದೃಷ್ಟಿಯಿಂದ ನೋಡಿ ನಲಿಯುತ್ತದೆ.

ಮಗುವು ಅಮ್ಮಾ ಎನ್ನಲು ಕಲಿತು ಅಮ್ಮನ ಅಗಲುವಿಕೆಯಾದಾಗ ಅಮ್ಮಾ....ಎಂದೆ ಅತ್ತಿತು. ಅದರ ಕೂಗನ್ನಿಲ್ಲಿಸಲು, ಕುತೂಹಲವ ಕುಂಟಿಸಲು, ಗುಮ್ಮಾ ಎಂಬ ಔಷಧಿಯನ್ನೇ ಕುಡಿಸಿದರು ಹೆತ್ತವರು. ಮಗುವು ಗುಮ್ಮಾ ಎಂಬ ಮಧ್ಯದ ಸೊನ್ನೆಯೊಳಗೇ ಅಡಗಿ, ಹೆದರಿ ಹಿಪ್ಪೆಯಾಗಿ ಮುದುಟಿ ಕುಳಿತಿತು. ತನ್ನ ಕುತೂಹಲಿತ, ಕಾಲ್ಪನಿಕ ದೃಷ್ಟಿಯಿಂದ, ಮನದಲ್ಲಿ ಸೃಷ್ಟಿಯಲ್ಲಿ ವಡೆಯಲ್ಲಿ ನುಡಿಯಲ್ಲಿ ಬರೆಯ ತೊಡಗಿತು ಗುಮ್ಮನ ಚಿತ್ರವನ್ನು! ಅದರ ಭಾವನೆಗೆ ಮಿಗಿದ ಬ್ರಹ್ಮಾಂಡ ಭೂತವಾಗಿ ಬೆಳೆಯಿತು ಆ ಗುಮ್ಮ!! ಮಗುವಿನ ಜ್ಞಾನ ದೃಷ್ಟಿಗೆ ನಿಲುಕದ ಆ ವಸ್ತು ಅಸಾಧಾರ್ಣ ಅಸಮಾನ್ಯವಾಗಿ ಬೆಳೆದು, ಮಗುವನ್ನು ಎದ್ದು ನಿಲ್ಲದಂತೆಯೂ ಮಾಡಿತು.

ಮೆಟ್ಟಲಿಳಿದ ಮಗುವು ಕುತೂಹಲಿತವಾಗಿ, ಸುತ್ತಲೂ ನೋಡಿ, ಬ್ರಹ್ಮ ಸೃಷ್ಟಿಯ ತನ್ನ ಸಹೋದರ ಸಹಪಾಠಿಗಳನ್ನೆರಸಿ ತೊಡಗಿತು. ಆಂಗಳದಲ್ಲಿ ಕಲ್ಲುಗಳೊಡನೆ ಆಟವಾಡಿತು. ಅದರೊಳಗೆ ಆಟವಾಡಿತು. ಅದರೊಳಗೂ 'ಗುಮ್ಮ' ಎಂದಂತಾಯಿತು ಮಗುವಿಗೆ. ತಾಯಿದೇಹದ ಮೇಲೆ ಚಲ್ಲಾಟವಾಡಿತು. ಪೈಗೆ ಮಣ್ಣಾಗುವುದೆಂದು ಹೆದರಿದ ಹೆತ್ತವರು ಗುಮ್ಮನಿದೆ ಎಂದರು. ಮಗು ಹೆಜ್ಜೆಇಡಲೂ ಹೆದರಿತು. ಸಹಚರರನ್ನರಸುವ ಕೆಲಸ ಅಸಾಮಾನ್ಯವೆಂದರಿಯಿತು. ಮುಂದುವರಿದು ಮಣ್ಣಿನ ಬಾಣಿಯನ್ನಣಕಿಸಿತು ಮಗು ಅದರೆ ನೀರಿಗೆ ಬಿದ್ದೀತೆಂಬ ಹೆದರಿದ ಹೆತ್ತವರು ಗುಮ್ಮ ಎಂದರು. ಮಗು ಇಣುಕಲು ಹೆದರಿತು. ಆದರೆ, ಕುತೂಹಲ ತಡೆಯಿತು. ಏನೆ ನೋಡುವ ಎಂದಾತೆ. ಹೇಗೆ ನೋಡಲಿ?

ಹೆತ್ತವರ ಕಣ್ಣು ತಪ್ಪಿಸುವ ವಿದ್ಯೆ ಹೆತ್ತವರ ಈ ಆಜ್ಞಾನದಿಂದ ಬೆಳೆಯುತ್ತದೆ ಮಕ್ಕಳಲ್ಲಿ. ಹೆತ್ತವರಾರೂ ಇಲ್ಲದಾಗ ಇಣುಕಲು ಹೋಗಿ ಬಿದ್ದು ಅನಾಹುತವಾಗುವುದೂ ಇದೆ ಕುತೂಹಲವಳಿದು ನಾನಿದ್ದೇ ಅದರ ಆಶಯಂತೆ ಪ್ರೀತಿಯಿಂದ ಮಣ್ಣಿನಲ್ಲಾಡಿದಾಗ "ನಿನ್ನ ಮೈಕೊಳೆ ನಾ ಮುಟ್ಟಲಾರೆ" ಎಂದರೆ ಅದಕ್ಕೆ ಮಣ್ಣಿನಲ್ಲಾಡುವುದರ ಕೆಡುಕು ತಿಳಿಯದೇ? ಬಾಣಿಯ ನೀರಿನಲ್ಲಿ ಅದನ್ನು ಇಳಿಸುತ್ತಾ ತೃಪ್ತಿಯಿಂದ ಅತೃಪ್ತಿ ಹೊಂದುವವರೆಗೆ ಅಂದರೆ ಮೂಗಿನವರೆಗೆ ನೀರು ಬರುವಂತೆ ಇಳಿಸಿದರೆ ಅದೇ ನೀರಿನ ಅಪಾಯವ ತಿಳಿಯದೇ ಮಗುವೇ? ನಾ ಮೇಲೆ ಬರುವೆನೆಂದು ಹಾರದೇ? ಮತ್ತೆ ನೀರಿನ ಸರಸಕ್ಕೆ ಹೋದೀತೇ? ಇದೇ ಕ್ರಿಯಾತ್ಮಕ ಶಿಸ್ತಿನ್ನಿಸಲಾರದೆ.

ಬೆಂಕಿ :— ಬೆಂಕಿಯೋ ಒಂದು ಅಪಾಯಕಾರಿಯಾದ ವಸ್ತು. ರುಚಿ ತಿಳಿದವರಿಗೊಂದು ಮಾಣಿಕ್ಯದಂತಹ ಆಕರ್ಷಣೀಯವಸ್ತು. ಅರಿಯದ ಮಗು ಪತಂಗದಂತೆ, ದೀಪದೊಡನೆ ಆಡಲು ಅದನ್ನು ಮುಟ್ಟಲು, ಹಿಡಿಯಲು, ತಿನ್ನಲು ಆಶಿಸಬಹುದು. ರುಚಿ ತಿಳಿದವನು ಕಾರ್ಕಶನು ಹಣ್ಣು ತಿನ್ನಬಯಸಿದಂತೆ. ಮಗು ಬೆಂಕಿಯ ಮುಟ್ಟಲಾಶಿಸಿದಾಗ "ಅಬೂ....ಅಯ್ಯೋ! ಎಂದು ಹೆದರಿಸುವ ರೂಢಿ ನಮ್ಮಲ್ಲಿದೆ. ಆಗ ಮಗು, ಅದರಲ್ಲೇನೋ ವಿಚಿತ್ರವಿರುತ್ತದೆ. ಅದನ್ನು ತಿಳಿಯಬೇಕೆಂದು ಆಶಿಸಲು ಸಾಧ್ಯವಿದೆ. ಅಂತೆಯೇ ಹಿರಿಯರ ನಂಬಿಸಲೂ ಕಲಿತು ಯಾಲ್ಲಪ್ಪ ವೇಳೆ ನೆಂಟರಮನೆಗೆ ಹೋಗುವ ಮದಮಗನಂತೆ, ಉಡುಪು ಸವೇತ ಹೋಗಿ ಮುಟ್ಟಿ ಅಹುತಿಗೊಳ್ಳಲೂ ಸಾಧ್ಯವಿದೆ.

ನಾವದ್ದೇ ಅದು ಬೆಂಕಿಯ ಹತ್ತಿರ ಹೋಗುವಾಗ ತಡೆಯದೆ ಪ್ರೋತ್ಸಾಹಿಸಿದವಾಗಿದೇ? ಮುಟ್ಟಿ, ಚೀರಿ, ಬೊಬ್ಬಿಟ್ಟ ಸಮ್ಮ ಕಣ್ಣೆಮುಚ್ಚಿಗೇ ಅದರ ಬೆಂಕಿಯ ಅನುಭವ ಅದಕ್ಕಾಯಿತಾಗಿದೆ?

ಭೂತ :— ಭೂತವೆಂದರೆ ಮಕ್ಕಳಿಗೆ ಗುಮ್ಮನ ತಮ್ಮನ ಸಮಾನ. ಮೊದಲೇ ಗುಮ್ಮನ ಜೋಡದ ಗೂಬೆ; ಗೂಬೆ; ಎಂದೊಡನೆ ಹೆದರಿದ ಮಕ್ಕಳು ಭೂತಕ್ಕೆ ಹೆದರುವುದರಲ್ಲೇನು ಆಶ್ಚರ್ಯ! ಗುಮ್ಮನನ್ನು ಅಸಾಧಾರಣ ರೂಪವಾಗಿ ಚಿತ್ರಿಸಿಕೊಂಡ ಮಕ್ಕಳು ಭೂತವನ್ನೂ ಅದಕ್ಕಿಂತಾ ಮಿಕ್ಕಿ ಚಿತ್ರಿಸಲು ಸಾಧ್ಯವಿಲ್ಲವೇ? ದಾರಿಯಲ್ಲಿ ಒಬ್ಬನೇ ಸಾಗಬೇಡ, ಕತ್ತಲೆಯಲ್ಲಿ ಒಬ್ಬನೇ ಇರಬೇಡ ನಿನ್ನ ಭೂತ ತಿಂದೀತು, ಎಂದು ರಕ್ಷಕರಾಡುವಾ ನಮ್ಮ ತಿಂಬ ಜಂತು ಗುಮ್ಮಕ್ಕಿಂತಲೂ ಮೇಲೆಂದು ತಿಳಿದು ಇಡೀದೇಹ ಹದರಿಕೆಯ ಭೂತದ ಸಂಚಾರದಿಂದ ನಡುಗಲು ಸಾಧ್ಯವಿಲ್ಲವೇ?

ಸ್ವಲ್ಪ ಬಲಿತ ಮೇಲೆ ಅದೇ ರಕ್ಷಕರು "ಆ ಜೇಟಿಗೆ ಹೋಗಿ ಅದು ತಗಲು ನಿನಗೆ ಹೆದರಿಕೆಯೇ? ಏನಿದೆ ಅಲ್ಲಿ"?

ಕಾಮಿನೀ ಕಾಂಚನಗಳ ನಗರ

ಹಾಂಗ್‌ಕಾಂಗ್

(ಮುಂದುವರಿದುದು)

ವೇಶ್ಯೆಯರು ಲಭಿಸುತ್ತಾರೆ. 1 ಬಟ್ಟಲು ಮಾಂಸವನ್ನಿತ್ತಲ್ಲಿ ದೇಹದಾಹವನ್ನು ತಣಿಸುವ ಬೆಲೆಬಣ್ಣುಗಳೂ ಇಲ್ಲಿದ್ದಾರೆ.

ಹಾಂಗ್‌ಕಾಂಗ್ ನಗರವು ಎಲ್ಲಿಂ ರಾಷ್ಟ್ರಗಳಿಗೂ ಪ್ರವೇಶವನ್ನೀಯುವ ಸ್ವತಂತ್ರ ದೇವು ಆಗಿದೆ. ಆಲ್ಲಿಂದ ಅಮೆ ತಾಸಿನಲ್ಲಿ ಬಳಿಯಿರುವ ಪೋರ್ಚುಗೀಸ್ ವಸಾಹತು ಮಕಾವೋ ದ್ವೀಪವನ್ನು ತಲುಪಬಹುದಾಗಿದೆ. ಹಾಂಗ್‌ಕಾಂಗ್‌ನಲ್ಲಿ ದಲಿತಾ ಜೋಪಣೆಯು ನಿರ್ಭೀತ ವಾಗಿ ನಡೆಯುತ್ತಿದೆ. ಕಾರ್ಮಿಕರು ಮಾಲೀಕನ ಯಾವತ್ತು ಅಪ್ಪಣೆಗಳಿಗೆ ಆತಿ ವೇಗೆಯತೆಯಿಂದ ನಡೆದುಕೊಳ್ಳ ಬೇಕಾಗುತ್ತದೆ. ಲಘಂಗಸೇ ಕಾರ್ಯ ನಿರತನಾಗು, ನಾನು ನಿನಗೆ ವೇತನವನ್ನೀ ಯುವ ಮಾಲೀಕನಾಗಿದ್ದೇನೆ., ಕಾರ್ಮಿಕ ಸಂಘಗಳ ಮಾತೆತ್ತಿದಿರು. ಮಾತೆತ್ತಿ ದಲ್ಲಿ ಗುಂಡಿಗೆ ಗುರಿಯಾಗುವೆ ಯೆಂಬ ಹಾಂಗ್‌ಕಾಂಗ್‌ನ ಸಿನಂತರು ಆಡುವ ಮಾತಾಗಿದೆ.

ಹಾಂಗ್‌ಕಾಂಗ್‌ನಲ್ಲಿ ಚೀನೀ ಜನರೆಷ್ಟೋ ರಿಕ್ಷಾಗಳನ್ನು ಎಳೆದುಕೊಂಡು ಸಂಪಾದಿಸಿದ ದುಡ್ಡಿನಿಂದ ತಮ್ಮ ಹೊಟ್ಟೆಯನ್ನು ಹೊರೆದು ಕೂಳ್ಳುತ್ತಾರೆ. ಬಾಡಿಗೆ ಎತ್ತಿಗಿಂತಲೂ ಅಧಿಕವಾಗಿ 14 ತಾಸಿನಿಂದ 18 ರ ವರೆಗೆ ದುಡಿಯು ತ್ತಿರುವ ಈ ಮಾನವ ಪ್ರಾಣಿಗಳ ಜೀವವು ತೀರಾ ಚಿಂತಾಜನಕವಾಗಿದೆ. ಬೇರೆ ಬೇರೆ ದೇಶಗಳ ಹಡಗುಗಳು ಬಂದು ಲಂಗರು ಹೊಡೆದೊಡನೆ ನಾವಿಕರೊಡನೆ ಇತರ ಶ್ರೀಮಂತ ಅಧಿಕಾರಿಗಳನ್ನೂ ಸುತ್ತುವರಿ ದು ಅವರನ್ನು ವೇಶ್ಯಾಟಗಳಿಗೆ ಕರೆದೊ ಯ್ಯುವ ದಳ್ಳಾಳಿಗರ ಕಾರ್ಯವನ್ನೂ ಇವರು ಜರುಗಿಸುತ್ತಾರೆ. ಹಾಂಗ್‌ಕಾಂಗ್ ನಲ್ಲಿ ಪ್ರತಿಯೊಬ್ಬ ರಿಕ್ಷಾ ಎಳೆಯುವನು ರಿಕ್ಷಾ ಮಾಲೀಕನಲ್ಲ; ರಿಕ್ಷಾ ಮಾಲೀಕನು 'ಟಾಂಗಾ' ಎಂಬ ರಹಸ್ಯವಾದ ಸಂಘ ಗಳಿಗೆ ಸೇರಿದವನಾಗಿರುತ್ತಾನೆ. ಒಂದೇ ಒಂದು ಅಮೇರಿಕನ್ ನಾಣ್ಯ (ಡಾಲರ್) ಕ್ಕಾಗಿ ರಿಕ್ಷಾ ಎಳೆಯುವವನನ್ನು ರಿಕ್ಷಾ ಮಾಲೀಕನು ಕೊಲೆಮಾಡಿದ ಪ್ರಸಂಗಗಳು ಹಾಂಗ್‌ಕಾಂಗ್‌ನಲ್ಲಿ ದಿನಂಪ್ರತಿ ನಡೆ ಯುತ್ತವೆ.

ಭಾರತೀಯರ ಕಾಳಸಂತೆಯ ಗೃಹಗಳು ಮತ್ತು ಪಡಕಾನೆಗಳು

ಹಾಂಗ್‌ಕಾಂಗಿನ ವೇಪಕವರ್ಗ ದಲ್ಲಿ ಭಾರತೀಯರಷ್ಟು ಇನ್ನಾರೂ ಇರ ಲಾರರು. ಸಿಂಧಿ ಸಮಾಜಕ್ಕೆ ಸೇರಿದ ಈ ಲಾಭಬಡುಕರು ಅವರ ತಾತ ಮುತ್ತಾತರ ಕಾಲದಿಂದಲೇ ಹಾಂಗ್‌ಕಾಂಗಿಗೆ ಹೋಗಿ ಬುಳಕೊಂಡವರಿದ್ದಾರೆ. ಇವರು ಪ್ರತಿವರ್ಷವೂ ಸಿಂಧಿ ಸಿರಾಶ್ರೇತರನ್ನು 2 ವರ್ಷಗಳ ಅವಧಿ ವೇರೆಗೆ ಕರೆಸಿಕೊಳ್ಳುತ್ತಿದ್ದಾರೆ. ಪ್ರತಿ ಯೊಬ್ಬನಿಗೆ ಮಾಸಿಕ ಒಂದಕ್ಕೆ 150 ರೂ. ಗಳನ್ನಿತ್ತು ಭವ್ಯಾರ್ಭ ಊಟೋಪಚಾರ ವಸತಿ ಪೌಕರ್ಯಗಳನ್ನು ಭೂಯೋದೆವರಿಗೆ ಇವರು ಉಣ್ಣುತ್ತಿದ್ದಾರೆ. ದಿನಕ್ಕೆ 8 ತಾಸು ಅವರು ದುಡಿಯಬೇಕಾಗುತ್ತದೆ. ಬೆಳಗ್ಗೆ 8-30 ರಿಂದ ರಾತ್ರಿ 11-30 ರ ವರೆಗೆ ಕಾರ್ಯನಿರತರಾದರೂ ತಿಂಗಳೊಂದಕ್ಕೆ 250 ಹಾಂಗ್‌ಕಾಂಗ್ ಡಾಲರುಗಳಷ್ಟು ಹಣವನ್ನು ಅವರ ಕೈಗಿತ್ತು ಸುಲಭ್ಯಕಿದರ್ಥವನ್ನು ಭಾರತಕ್ಕೆ ಕಳುಹಿಸುತ್ತಾರೆ. ಭಾರತ ಸರ್ಕಾರವು ಈ ಲಾಭಕೋರರ ವಿಷಯದಲ್ಲಿ ಏನಾದರೂ ಕಾರ್ಯಕ್ರಮಗಳನ್ನು ಅನುಸರಿಸಿಯೇ ಎಂದರೆ ಇಲ್ಲವೆನ್ನಲು ವಿಷಾದವಾಗುತ್ತದೆ. ನೆಹರೂರವರಿಗಿಂತಲೂ ಐದಾರು ಬಾರಿ ಅಧಿಕವಾಗಿ ಸಂಸಾರನೇತ್ರಾದಾವ ಭಾರತ ಸರಕಾರಕ್ಕೆ ಏಕೆ ಅಂಜಬೇಕು ಎಂಬುದೆ ಹಾಂಗ್‌ಕಾಂಗಿನ ಭಾರತೀಯರ ವಾದ.

ಮಾನವರು ಪ್ರಾಣಿಗಳಿಗಿಂತಲೂ ಕೀಳು

ಹಾಂಗ್‌ಕಾಂಗಿನ ಶ್ರೀಮಂತರ ಉನ್ನತೋನ್ನತ ಹರ್ಮ್ಯಗಳನ್ನೂ, ತಾರೆ ಸಿವನ ಭವನಗಳನ್ನೂ ಬಿಟ್ಟು ಬೆಲ್ಲ ಪೂರ್ ರೈಲ್ವೆಯಲ್ಲಿ ಪ್ರಯಾಣ ಬೆಸೆದರೆ ಗಯಲ್ಲಿ ಪ್ರಸವ 60 ಚೀನೀ ಕುಟುಂಬಗಳನ್ನು ನಾವು ಕಾಣಬಹುದು ಜೀವಚ್ಛವದಂತಿರುವ ಈ ಅನಾಗರೀಕ ಮಾನವರು ಕೂಲಿಯಾಳುಗಳ ಗಿಯೂ ದಳ್ಳಾಳಿಗಳಾಗಿಯೂ ತಮ್ಮ ಜೀವನವನ್ನು ಸಾಗಿಸುತ್ತಾರೆ.

ಐದು ಅಡಿ ಅಗಲವಿರುವ ಗುಹೆಯಲ್ಲಿ ಹರುಕುಮುರುಕಾದ ಜಾಸೆಯನ್ನು ಹಾಸಿಕೊಂಡು 4 ಮಂದಿ ಸದಸ್ಯರಿರುವ ಕುಟುಂಬವು ವಾಸಿಸುತ್ತದೆ. ನೇರವಾಗಿ ನಿಲ್ಲಲಾಗದೆ ಉರಗಗಳಂತೆ ಹೊಟ್ಟೆಎಳೆ ದುಕೊಂಡು ಗವಿಯನ್ನು ಪ್ರವೇಶಿಸಿ ಪ್ರಾಣಿಗಳಿಗಿಂತಲೂ ತುಚ್ಛವಾದ ಜೀವನ ವನ್ನೆ ಸಾಗಿಸುತ್ತಿರುವ ಚೀನೀ ಜನರು ಹಾಂಗ್‌ಕಾಂಗಿನ ದಾರುಣಾಮಯ ಸನ್ನಿವೇಶದ ಕಹಿನೆನಹುಗಳಾಗಿದ್ದಾರೆ. ಬುಟ್ಟೆಯಂತಿರುವ ಮನೆಗಳಲ್ಲಿ ವಾಸಿಸು ವವರಿಗೆ ಅದೇ ಪರಿಪಾಠವಾಗಿ ಪರಿಣ ಮಿಸಿದರೂ ಅಲ್ಲಿನ ಲಕ್ಷ್ಮೀಪುತ್ರರಿಗೆ ಹಾಂಗ್‌ಕಾಂಗ್ ಎಂಬುದು ಭೂಲೋಕದ ಅಳಕಾವತಿಯಾಗಿ ಪರಿಣಮಿಸಿದೆ.

ಹೆತ್ತವರು ಮಾಡುವ ಮಮತೆಯ ತಪ್ಪುಗಳು

ಎಂದು ಹೆತ್ತವರು ಮಕ್ಕಳನ್ನು ಬಡಿಯುವುದನ್ನು ನಾವು ಕಾಣುತ್ತೇವೆ. ಆವರಿಗೆ ಚಿಕ್ಕಂದಿನಿಂದ ಆ ಭೂತ ಇಂದು ಅವರ ಸ್ಕೂಲಿನಿಂದ ಎಂದು ರಕ್ಷಕರು ತಿಳಿಯರೇ?

ನೆರಳ ಕಂಡೊಡನೆ ಭೂತವೆಂದರಿವಂತೆ ನಮಾಡಿದ ರಕ್ಷಕರು ನೆರಳಲ್ಲದೆಡೆ ಮಗ್ಗುವನ್ನು ತಳಿಸಿಯಾರೆ? ಭೂತವಿಲ್ಲದ ಜಾಗದಲ್ಲಿ ಕಳುಹಿಸಲು ಶಕ್ತರೆ? ಸೂರ್ಯಾಸ್ತದ ನಂತರವೇ ಮಕ್ಕಳಿಗೆ ಆಜ್ಞೆಕ್ಕೆ? ಚಿಕ್ಕ ಹುಳವಕಂಡರೆ, ಜಜ್ಜಿ ಭೂತವಾಗಿ ಒಂದು ಕೆಂದಂಜಿ!! ಗಳಿ ಬೀಸಿದರೆ ಭೂತದ ನೆರಳೆಂದಂಜಿಕೆ!!! ಮಿಂಚು ಮಿಂಚಿದರೆ ಭೂತದ ಕಣ್ಣೆಂದು ಭಯ!!!! ಎಲೆಬಿದ್ದೊಡೆ ಭೂತ ಕಲ್ಲು ದಿರಿಸಿದೆಂದು ನಮ್ಮ!!!! ಇಂತು ಮಕ್ಕಳ ಅಧೋಗತಿಗೆ ಗಳಿಸಿದ ರಕ್ಷಕರು ಅವರ ಬಾಲಿಗೆ ರಾಕ್ಷಸರಲ್ಲದೆ ಮತ್ತೇನು?

ಹೆದರಿಕೆಯ ಭೂತಗಳು ನಾಗರಿಕರಾಗಿ ಕೊನೆವರೆಗೂ ನಾವು ಕಾಣದಿರೆ? ಆಂಜಿಕೆಯ ಸಂಜೆದಿ ಕಂಜಿಗಳು ಮಿಡಿಂತಿ, ಕೈಯಾವು ಒಡಿಯುವುದು, ಪೆದರಿಕೆಯ ಭೂತಕ್ಕೆ! ರಕ್ತವ ಒಕ್ಕಿದವು ಆತಿರೇಕವಾಗಿ ನಾಡಿಯು ಹುಯುವುದೂ ಇವೆ. ಕೈಯ ಬಿಯುವುದೂ ಇವೆ. ಇಂಥವನ ಮನಸ್ಸಿನಲ್ಲಿ ಸುತ್ತಲೂ ಭೂತದ ನುಳಿವಾಟ! ಚೀರಾಟ!!ಹಾರಾಟ!!!

ಕಣ್ಣು ಮುಚ್ಚಲೂ ಕೇಳದು, ಕೈ ಎತ್ತಲೂ ಬಾರದು, ಬಾಯಿ ಕೆದೆಯಲೂ ಊಂಹೂಂ! ಅಂದಮೇಲೆ ಹೆದರಿಕೆಯ ಭೂತವು ಮನುಷ್ಯನ ಅವನತಿಗಾಗಿ ದೇ? ಕಾಲಿಗೆ ಸಿಕ್ಕಿದ ಹಗ್ಗವು ಎಷ್ಟೋ ಮಂದಿಗೆ ನಾಗರ ಹಾವಾಗಿ, ಪುಳ್ಳ ಚುಚ್ಚಿದ ಗಾಯವು ಹಾವಾರು ಜನರಿಗೆ ಹಾಲಾಹಲದ ವೇನೆಯಾಗಿ ಮರಣವನ್ನು ತಂದಿರಲೇ? ಅಂದ ಮೇಲೆ ರಕ್ಷಕರು ಮಾಡುವ ತಪ್ಪು ಸಾಮಾನ್ಯವೇ? ಮಕ್ಕಳಲ್ಲಿ ಧೈರ್ಯವ ತುಂಬುವ ಬದಲು ಪುಕ್ಕಲಿನ ಕೇಪನ್ನು ತುಂಬಿ ಅವರ ಭವ್ಯ ಭವಿಷ್ಯತ್ತನ್ನು ಅಧೋಗತಿಯ ಪಥದಲ್ಲಿ ಬೀಳಿಸಲೇ?—

—ಬಳ್ಳಾರಿಯ ಮುನ್ಸೀಫರ ಕೋರ್ಟಿನಲ್ಲಿ—

O. S 273 / 1957

Between

K. M ರುದ್ರಮುನಿ ತಂಜೆ ಅಮರಯ್ಯ } ವಾದಿ
ವಯಸ್ಸು 29 — ಸಂತಾಪ್ತಿ — ಸಬ್‌ಪೈಜರ್ }
ಹೊಸಪೇಟೆ }

and

ಪಾಲ್ಕುರಿಗ ನಲ್ಲೇಪ ಶಿವರುದ್ರಪ್ಪ } ಪ್ರತಿವಾದಿ
(ಶ್ರೀ ಜೆಜ್ಜೂರಿ ವೀರಪ್ಪನವರ ಬೆಂಗ— }
ರೋಡಿನ ಜವಳಿ ಅಂಗಡಿಯ ಗುಮಾಸ್ತ) }

ಪ್ರತಿವಾದಿಗೆ ನೋಟೀಸು :—

ಪ್ರತಿವಾದಿಯು ವಾದಿಯ ಹೆಸರಿನಲ್ಲಿ 400 ರೂ. ಗಳಿಗೆ ಒಪ್ಪಿಸಿ ಕೊಟ್ಟ ಪ್ರಾಮಿಸರಿ ನೋಟಿನ ಬಾಬ್ತು ಅಸಲು ಜಡ್ತಿ ಸೇರಿ 500 ರೂ. ಗಳಿಗೆ ವಾದಿಯು ದಾವಾ ಹೂಡಿ ಅದರ ವಾಯ್ದೆಯು 5—10—57 ಕ್ಕೆ ಹಾಕಲಾಗಿದೆ. ಅಂದು ನೀವು ಖುದ್ದಾಗಲೀ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದಲ್ಲಿ ನಿಮ್ಮನ್ನು ಏಕಪಕ್ಷವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಡಿ. ಪರಿಮಳಾಚಾರ್
ವಾದಿಯ ವಕೀಲರು

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ 3
ಏಜ್ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)
ಇತರ ವಿವರಗಳಿಗೆ ಸ್ಟ್ಯಾಂಪ್ಸು ಆಫವಾ
ರಿಪ್ಲೈಕಾರ್ಡು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ 2

ಕೆ. ಕೆ, ಕಮ್ಮಿ, ಬಿಮ್ಮಿ, ಲಿಪ್ಸ್ಟಿಕ್ ಪೌಡರ್ಸ್, ಮಲೆಯಂಗಾ, ಪರ್ಫ್ಯೂಮ್ಸ್ ಮುಂತಾದ ಸೌಂದರ್ಯವರ್ಧಕಗಳಿಗಾಗಿ ದಿವ್ಯ ಮೈಕ್ (ಇಷ್ಟೆಲ್ಲವೂ ಒಂದೇ ಸೂರಿನಲ್ಲಿ ದೊರೆಯುವ ಏಕೈಕ ಅಂಗಡಿ)

ಕಾಸ್ಮೆಟಿಕ್ ಎಂಪೋರಿಯಂ



S. & Sons, Bellary. ಎಸ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ
(NATIONALIST WEEKLY)
ಚಂದಾದರಗಳು. Subscription Rates.

ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ

Subscription will not be accepted for less than 6 months

NAVA BHARAT, BELLARY.
(Regd. M. No. 4746)

To

Sri.

Edited, Printed & Published by T. B. KESHAVA RAO at Nava Bharat Printing Press, Bellary

ಸಂಜೀವಿನಿ

ಸೋಮವಾರ ಅಕ್ಟೋಬರ್, 14 10–1957

ವರ್ಷ 21.	ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.	ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 4–	ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!!	ಟಿ. ಬಿ. ಕೇಶವರಾವ್

Dakshina Bharat Hindi Prachar Sabha Madras

Under the auspices of *Karnatak Hindi Prachar Sabha, a Zonal office for Hindi Prachar* will be opened in Brahmins Street Bellary on 16—10—57 at 6 P. M.

Convocation will also be held.

Sri T. Subrahmanyam B. A. B. L. (M.P.) has kindly consented to inaugurate & preside.

All are cordially invited.

M. Satyanarayana	Srikantamurthy M. A.	T. B. Keshava Rao
General Secretary	Secretary	Zonal Organizer
D. B. H. Sabha	Karnatak H. P. Sabha	BELLARY 2
Madras	Dharwar	

(*Poorva Karnatak:* Shimoga, Chitaldrug, Bellary, Raichur, Gulbarga & Bidar Dts.)

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ ಮದ್ರಾಸು.

ಕರ್ನಾಟಕ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ

16-10-57 ನೇ ಬುಧವಾರ ಸಾಯಂಕಾಲ 6 ಗಂಟೆಗೆ

ಶ್ರೀಯುತ ಟಿ. ಸುಬ್ರಹ್ಮಣ್ಯಂ M. P. ಇವರು

ಬಳ್ಳಾರಿ ನಗರದ ಬ್ರಾಹ್ಮಣ ಬೀದಿಯಲ್ಲಿ, ಪೂರ್ವ ಕರ್ನಾಟಕ ಹಿಂದೀ ಮಂಡಲ ಕಾರ್ಯಾಲಯವನ್ನು ಉದ್ಘಾಟನೆ ಮಾಡಲು, ಮತ್ತು ವಾರ್ಷಿಕೋತ್ಸವ-ಪ್ರಮಾಣ ಪತ್ರ ವಿತರಣೋತ್ಸವದ ಅಧ್ಯಕ್ಷತೆ ವಹಿಸಲು ಕೃಪೆಮಾಡಿ ಒಪ್ಪಿರುವರು.

ತಾವು ಈ ಸಮಾರಂಭದಲ್ಲಿ ಭಾಗವಹಿಸಲು ಕೋರಿಕೆ.

ಎಂ. ಸತ್ಯನಾರಾಯಣ	ಶ್ರೀಕಂಠಮೂರ್ತಿ	ಟಿ. ಬಿ. ಕೇಶವರಾವ್
ಪ್ರಧಾನ ಕಾರ್ಯದರ್ಶಿ	ಸ್ಥಾನೀಯ ಕಾರ್ಯದರ್ಶಿ	ಮಂಡಲ ಸಂಘಟಕ
ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ	ಕರ್ನಾಟಕ ಹಿಂದೀ ಪ್ರಚಾರ ಸಭೆ	ಬಳ್ಳಾರಿ 2
ಮದ್ರಾಸ್	ಧಾರವಾಡ	

ಪೂರ್ವ ಕರ್ನಾಟಕ ಹಿಂದೀ ಮಂಡಲ:— ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗ ಮತ್ತು ಬೀದರ್.

ರಷ್ಯದ ಕೃತಕ ಚಂದ್ರ

ಭೂಮಿಯನ್ನು ಸುತ್ತುವ ಉಪಗ್ರಹವೊಂದನ್ನು ರಷ್ಯಾವು ಇಂದು ಅಂತರಿಕ್ಷಕ್ಕೆ ಹಾರಿಸಿತು. ಇದುಭೂಮಿಗೆ ೫೬೦ ಮೈಲಿ ಎತ್ತರದಲ್ಲಿ ಪ್ರತಿ ೯೫ ನಿಮಿಷಕ್ಕೊಂದುಸಲ ಭೂಮಿಯನ್ನು ಪ್ರದಕ್ಷಿಣೆ ಮಾಡುತ್ತಿದೆ ಎಂದು ಮಾಸ್ಕೋ ರೇಡಿಯೋ ವರದಿ ಮಾಡಿದೆ.

೨೩ ಅಂಗುಲದ ಸುತ್ತಳತೆಯುಳ್ಳ ಈ ಉಪಗ್ರಹವನ್ನು ಸೂರ್ಯೋದಯ ಅಥವಾ ಸೂರ್ಯಾಸ್ತ ಸಮಯಗಳಲ್ಲಿ ಸಾಧಾರಣ ಬೈನಾಕ್ಯುಲರ್‌ನಿಂದಾಗಲಿ ಅಥವಾ ಲಘುದೂರದರ್ಶಕಗಳಿಂದಾಗಲಿ ನೋಡಬಹುದೆಂದು ಟಾಸ್ ವಾರ್ತಾ ಸಂಸ್ಥೆ ಪ್ರಕಟಿಸಿದೆ.

ಈ ಉಪಗ್ರಹವು ಒಂದು ಗಂಟೆಗೆ 17,000 ಮೈಲಿ ವೇಗದಲ್ಲಿ ಚಲಿಸುತ್ತಿದೆ ಎಂದೂ ಪ್ರಕಟಿಸಿದೆ.

ಇದು ನಿನ್ನೆ ತಾ. ಬೆಳಿಗಿನ ಜಾವ ಒಂದೂಮುಕ್ಕಾಲರ ವೇಳೆಯಲ್ಲಿಯೇ ಸಂಜೆ ಆರೂ ಮುಕ್ಕಾಲರ ಸಮಯದಲ್ಲಿ ನಾಸ್ಕೋಮೇಲೆ ಎರಡು ಸಲ ಹಾದು ಹೋಗುತ್ತಿದೆಯೆಂದು ಪ್ರಕಟಿಸಿತ್ತು.

ಈ ಉಪಗ್ರಹಕ್ಕೆ ಉಕ್ಕಿನ ರೇಡಿಯೋಟ್ರಾನ್ಸ್‌ಮಿಟರುಗಳನ್ನು ಜೋಡಿಸಿರುವುದಾಗಿಯೂ ಅದು ಆಗಾಗ ಕೊಡುವ ಸಂಕೇತಗಳನ್ನು ರೇಡಿಯೋ ಮೂಲಕ ಗಮನಿಸಬಹುದೆಂದೂ ತಿಳಿಸಿದೆ.

ಅಮೆರಿಕದ ಪ್ರತಿಕ್ರಿಯೆ

ನ್ಯೂಯಾರ್ಕ್‌ನಿಂದ ಬಂದಿರುವ ಒಂದು ವರದಿ ಈ ಮುಂದಿನ ಕಂಡಂತೆ ತಿಳಿಸುತ್ತದೆ.

ಅಮೆರಿಕಾದ ರೇಡಿಯೋ ವರದಿಗಳಲ್ಲಿ ಈ ಅಂಶವನ್ನು ಪ್ರಧಾನವಾಗಿ ಪ್ರಕಟಿಸಲಾಗಿದೆ.

ರಷ್ಯನ್ನರು ತಿಳಿಸಿರುವ ಈ ಸಂಗತಿಯು ನಿಜವಾದರೆ ರಷ್ಯಕ್ಕೂ, ಅಮೆರಿಕಾಕ್ಕೂ ಉಂಟಾಗಿರುವ ಮೈತ್ರಿಯು ಸ್ಪರ್ಧೆಯಲ್ಲಿ ರಷ್ಯದ್ದೇ ಮೇಲುಗೈಯಾಗಿದೆಯೆಂದು ಹೇಳಬಹುದು'' ಎಂದು ನ್ಯಾಷನಲ್ ಬ್ರಾಡ್‌ಕಾಸ್ಟಿಂಗ್ ಕಂಪೆನಿಯ ವ್ಯಾಖ್ಯಾತೃ ತಿಳಿಸಿದ್ದಾನೆ.

ಅಮೇರಿಕವು ಇಷ್ಟೆ ಉಪಗ್ರಹವನ್ನು ಮುಂದಿನ ವಸಂತಋತುವಿನಲ್ಲಿ ಹಾರಿಸಲಿದೆ. ಕಳೆದ ಸೆಪ್ಟೆಂಬರಿನಲ್ಲೇ ಇದನ್ನು ಹಾರಿಸಬೇಕೆಂದು ಏರ್ಪಾಟು ಮಾಡಲಾಗಿತ್ತು.

ಅಮೆರಿಕದ ಉಪಗ್ರಹಗಳ ಯೋಜನೆಯ ಡೈರೆಕ್ಟರ್ ಡಾ|| ಜಾನ್ ಪೇಗೆನ್ ರು ಕಳೆದ ವಾರ ಈ ಬಗ್ಗೆ ಮಾತನಾಡುತ್ತಾ, ಪ್ರಯೋಗಾರ್ಥವಾಗಿ ನಾಲ್ಕು ಉಪಗ್ರಹಗಳನ್ನು ಹಾರಿಸಲಾಗುವುದೆಂದೂ ೨೦ ಅಂಗುಲ ಸುತ್ತಳತೆಯ ಒಂದು ಉಪಗ್ರಹವೊಂದನ್ನು ನೌಕಾಪಡೆ ಹಾರಿಸಲಿದೆಯೆಂದೂ ತಿಳಿಸಿದ್ದರು.

ರಷ್ಯವು ಹಾರಿಸಿರುವುದಾಗಿ ತಿಳಿದುಬಂದ ಈ ಉಪಗ್ರಹಕ್ಕಾಗಿ ಅಮೇರಿಕದ ವಿಜ್ಞಾನಿಗಳು ಇದರ ಪರಿಶೀಲನೆಗಾಗಿ ಹೊರಗುನೋಡುತ್ತಿದ್ದಾರೆಂದು ಫಿಲಿಡೆಲ್ಫಿಯಾದಿಂದ ಫ್ರಾಂಕ್ಲಿನ್ ಸಂಸ್ಥೆಯ ಪ್ರಮುಖರೊಬ್ಬರು ಹೇಳಿದರು.

ಮಿಲಿಟರಿ ಪರಿಣಾಮವಿಲ್ಲ

ಪ್ಯಾರಿಸ್‌ನಲ್ಲಿರುವ ಯೂರೋಪಿನ ಮಿತ್ರ ಸೇನೆಗಳ ಮಹಾದಂಡನಾಯಕರ ಕಛೇರಿಯ ಪ್ರಮುಖರೊಬ್ಬರು ಈ ಬಗ್ಗೆ ಮಾತನಾಡುತ್ತಾ ರಷ್ಯವು ಹಾರಿಸಿರುವ ಈ ಉಪಗ್ರಹದಿಂದ ಮಿಲಿಟರಿ ಪ್ರತಿಕ್ರಿಯೆಗಳುಂಟಾಗುವುದೆಂದು ತಾವು ಭಾವಿಸುವುದಿಲ್ಲವೆಂದು ಹೇಳಿದರು.

ಭೂಮಿಯ ಸುತ್ತ ಸುತ್ತುವ ಉಪಗ್ರಹಗಳಿಗೆ ತಮ್ಮ ಕೇಂದ್ರದಲ್ಲಿ ಮಿಲಿಟರಿ ಪ್ರಾಧಾನ್ಯ ಕೊಟ್ಟಿರುವುದು ತಮಗೆ ತಿಳಿಯದೆಂದೂ ಅವರು ನುಡಿದರು.

ಕೇಂದ್ರ ಹಾಗೂ ಪ್ರಾಂತ್ಯ ಸರಕಾರಗಳಿಂದ ವಿವರಣೆ ಅಗತ್ಯ

ಈ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ಮೈಸೂರಿಗೆ N.E.S. ಬ್ಲಾಕುಗಳನ್ನು 39 ದೊರಕಬೇಕಾಗಿದ್ದು ಕೇವಲ 22 ಮಾತ್ರ ದೊರೆತಿವೆಯೆಂದು ತಿಳಿದುಬಂದಿದೆ. ನ್ಯಾಯವಾಗಿ ದೊರಕಬೇಕಾಗಿದ್ದ ಉಳಿದ 17 ಬ್ಲಾಕುಗಳನ್ನು ಏತಕ್ಕೆ ಮೈಸೂರಿಗೆ ಕೊಡಲಾಗಲಿಲ್ಲವೋ ತಿಳಿಯದು.

ಸಾಲಿನಲ್ಲಿ ಸಾಕಷ್ಟು ಮಂದಿ ಬ್ಲಾಕ್ ಡೆವಲಪ್‌ಮೆಂಟ್ ಶಿಕ್ಷಣ ಪಡೆಯಲು ಕೇಂದ್ರ ಶಿಕ್ಷಣ ಶಿಬಿರಕ್ಕೆ ಮೈಸೂರು ಸರ್ಕಾರವು ಅಧಿಕಾರಿಗಳನ್ನು ನಿಯೋಜಿಸಿದ್ದಿತೆ? ಹೀಗೆ ನಿಯೋಜಿಸಲಾಗಿದ್ದು, ಕೇಂದ್ರದ ಶಿಕ್ಷಣ ಶಿಬಿರದಲ್ಲಿ ಸ್ಥಳಾನಕಾತ ಸಾಲದೇ ಇದ್ದಪ್ರಯುಕ್ತ ಕಡಿಮೆ ಅಧಿಕಾರಿಗಳಿಗೆ ಮಾತ್ರ ಶಿಕ್ಷಣವನ್ನು ಕೊಡಲಾಯಿತೇ? ಎಂಬ ಬಗ್ಗೆ ವಿವರಣೆ ಅಗತ್ಯವಾಗಿದೆ.

ಮೈಸೂರಿನ ಅಧಿಕಾರಿಗಳಿಗೆಲ್ಲ ಶಿಕ್ಷಣ ದೊರಕಲು ಸ್ಥಳಾಭಾವ ಇದ್ದಲ್ಲಿ ಇತರ ಪ್ರಾಂತ್ಯಗಳ ಅಧಿಕಾರಿಗಳಿಗೂ ಇದೇ ರೀತಿ ಶಿಕ್ಷಣ ದೊರಕದಾಯಿತೇ? ಹಾಗಾದಲ್ಲಿ ಆ ಪ್ರದೇಶಗಳಲ್ಲಿನ ಎಷ್ಟು ಮಂದಿ ಅಧಿಕಾರಿಗಳಿಗೆ ಈ ರೀತಿಯ ಪರಿಸ್ಥಿತಿ ಉಂಟಾಯಿತು ಮೈಸೂರಿನಂತೆ ಪ್ರತ್ಯೇಕ ಪ್ರದೇಶಗಳು ಈ ಸಾಲಿನಲ್ಲಿ N. E. S. ಬ್ಲಾಕುಗಳನ್ನು ಕಳೆದುಕೊಂಡವು. ವಿಶಾಲ ಮೈಸೂರಿನ 17 ಬ್ಲಾಕುಗಳನ್ನು ಕಳೆದುಕೊಳ್ಳಲು ಕೇಂದ್ರ ಅಥವಾ ಪ್ರಾಂತ್ಯ ಸರ್ಕಾರಗಳಲ್ಲಿ ನಿಜವಾಗಿ ಯಾರು ಕಾರಣರು?

ಉತ್ತರ ಭಾರತದ ವಿಶೇಷ ವರ್ಚಸ್ಸಿನಿಂದ ದಕ್ಷಿಣ ಭಾರತಕ್ಕೆ ಅನ್ಯಾಯ ಆಗುತ್ತಿದೆ. ಎಂಬ ಭಾವನೆ ಜನತೆಯಲ್ಲಿ ಜೀವಂತವಿದೆ. ಕೇಂದ್ರ ಸರ್ಕಾರದ ಆಡಳಿತ ಸೂತ್ರ ಹಿಡಿದ ನಮ್ಮ ನಾಯಕರು ಈ ಬಗ್ಗೆ ಆಗಿಂದಾಗ್ಗೆ ವಿವರಣೆ ಈ ಯುಕ್ತ ಸಂಶಯ ವಾತಾವರಣವನ್ನು ದೂರೀಕರಿಸುವುದು ಅಗತ್ಯ.

ಮೈಸೂರಿನಲ್ಲಿ ಕಾಂಗ್ರೆಸ್ ರಾಜಕೀಯವು ದಿನ ದಿನಕ್ಕೆ ಅಡ್ಡಹಾದಿ ಹಿಡಿಯುತ್ತಿದೆ ಇದರಿಂದ ಸರ್ಕಾರದ ಆಡಳಿತವೂ ಸಹ ಸಡಿಲವಾಗುತ್ತಿರುವುದನ್ನು ಜನತೆ ಕಾಣುತ್ತಿದೆ. ಸಾಕಷ್ಟುಮಂದಿ ಅಧಿಕಾರಿಗಳನ್ನು ಬ್ಲಾಕ್ ಡೆವಲಪ್‌ಮೆಂಟ್ ಶಿಕ್ಷಣವನ್ನು ಕೇಂದ್ರ ಶಿಕ್ಷಣ ಶಿಬಿರದಲ್ಲಿ ಪಡೆಯಲು ಸರ್ಕಾರವು ನಿಯೋಜಿಸದಿರುವ ಸಂಭವವೂ ಇರಬಹುದು.

ಈಡೀ ಭಾರತದಲ್ಲಿ ಈ ಯೋಜನೆ ಏಕ ಪ್ರಕಾರವಾಗಿ ವ್ಯಾಪ್ತಿಗೊಳ್ಳುತ್ತಿರುವುದರಿಂದ ಅಧಿಕಾರಿಗಳ ಶಿಕ್ಷಣಶಿಬಿರವನ್ನು ಕೇಂದ್ರದಿಂದ ಜರುಗಿಸುವುದೇ ಸೂಕ್ತ. ಈ ರೀತಿಯ ಶಿಬಿರವೊಂದು ಸಾಲದಾದರೆ 2-3 ಶಿಬಿರಗಳನ್ನು ಕೇಂದ್ರ ಸರ್ಕಾರವೇ ಬೇರೆ ಬೇರೆ ಪ್ರದೇಶಗಳಲ್ಲಿ ಏರ್ಪಡಿಸಬಹುದಾಗಿದೆ.

ಒಟ್ಟಿನಲ್ಲಿ ಮೈಸೂರಿಗೆ ನ್ಯಾಯವಾಗಿ ದೊರಕಬೇಕಾಗಿದ್ದ 39 ರಾಷ್ಟ್ರೀಯ ವಿಸ್ತರಣಾ ಯೋಜನಾ ಕ್ಷೇತ್ರಗಳಲ್ಲಿ ಕೇವಲ 22 ಮಾತ್ರ ದೊರೆತದ್ದು ತೀರಾ

ಕೇಂದ್ರ ಹಾಗೂ ಪ್ರಾಂತ್ಯ ಸರಕಾರಗಳಿಂದ ವಿವರಣೆ ಅಗತ್ಯ

(ಮುಂದುವರಿದುದು)

ಅನ್ಯಾಯ. ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರೂ, ಲೋಕ ಸಭೆ ಹಾಗೂ ರಾಜ್ಯ ಸಭೆಯಲ್ಲಿನ ನೈಸಾಂನಿನ ಮಾನ್ಯ ಸದಸ್ಯರೂ ಈ ಅನ್ಯಾಯಕ್ಕೆ ಕಾರಣವೇನೆಂಬುದನ್ನು ಪರೀಲಿಸಿ ಇದನ್ನು ಸರಿಪಡಿಸಬೇಕು.

ಯಾರೋ ಮಾಡಿದ ಅಕಸ್ಮಿಕ ತಪ್ಪುಗಳಿಗಾಗಿ ವಿಶಾಲ ನೈಸೂರಿನ ಜನತೆಯು ರಾಷ್ಟ್ರೀಯ ವಿಸ್ತರಣಾಯೋಜನೆಯ ಹದಿನೇಳು ಕ್ಷೇತ್ರಗಳನ್ನು ಕಳೆದುಕೊಳ್ಳುವುದು ನ್ಯಾಯವಲ್ಲ.

ಆಹಾರಾಭಾವ ಪ್ರದೇಶಗಳು ಈ ಸಂವತ್ಸರದಲ್ಲಿ ವಿಶಾಲ ನೈಸೂರಲ್ಲಿ ಹೆಚ್ಚಿರುವಾಗ, ನಾವು 17 N. E S. ಬ್ಲಾಕುಗಳನ್ನು ಕಳೆದುಕೊಳ್ಳುವುದೆಂದರೆ ಬರಗಾಲದಲ್ಲಿ ಅಧಿಕಮಾಸಬಂದಂತಾಗಿದೆ

ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಈ ಸಂಬಂಧದಲ್ಲಿ ಅಧಿಕೃತ ವಿವರಣೆ ಇತ್ತು ಜನತೆಯ ಸಂಶಯವನ್ನು ದೂರೀಕರಿಸಲಿ. ಆಗಿರುವ ನ್ಯೂನತೆಯನ್ನು ಸರಿಪಡಿಸಿ ನಮಗೆ ನ್ಯಾಯವಾಗಿ ಈವರ್ಷ ಪಲ್ಲಿಸಬೇಕಾದ 17 ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಗಳನ್ನು ದೊರಕಿಸಿಕೊಡಲೆಂದು ಒತ್ತಾಯಿಸುತ್ತೇನೆ.

ರಾಷ್ಟ್ರಗಳಲ್ಲಿ ಪರಸ್ಪರ ಸಹಕಾರ ಅಗತ್ಯವೆಂದು ಶ್ರೀ ಪಂ॥ ನೆಹ್ರೂರವರ ಅಭಿಪ್ರಾಯ

ವಿಶ್ವಶಾಂತಿಯ ಧ್ಯೇಯವನ್ನು ಕಾರ್ಯಗತಮಾಡಲು ಎಲ್ಲ ದೇಶಗಳೂ ಒಂದರೊಡನೊಂದು ಸಹಕರಿಸಬೇಕಾದ ಕಾಲವೀಗ ಬಂದಿದೆಯೆಂದು ಶ್ರೀ ನೆಹ್ರೂ ಒಸಾಕ್ಕದಲ್ಲಿ ಅ. 10 ರಂದು ಅಭಿಪ್ರಾಯಪಟ್ಟರು.

ಪ್ರತಿಯೊಂದು ರಾಷ್ಟ್ರಕ್ಕೂ ಅದರದೇ ಆದ ಒಂದು ವೈಶಿಷ್ಟ್ಯವಿದೆ- ಅದು ಮುಖ್ಯವಾದ ಅಂಶ- ಹಾಗೆಂದರೆ ಒಂದು ರಾಷ್ಟ್ರ ಇನ್ನೊಂದಕ್ಕೆ ವಿರೋಧವಾಗಿರಬೇಕೆಂದು ಅರ್ಥವಲ್ಲ. ಪ್ರತಿಯೊಂದು ದೇಶವೂ ತನ್ನ ಜಾಯಮಾನಕ್ಕೆ ಅನುಗುಣವಾಗಿ ನಡೆದು ಅಭಿವೃದ್ಧಿಗೊಳ್ಳಬೇಕು. ವೈಶಿಷ್ಟ್ಯ, ವ್ಯಕ್ತಿತ್ವ ಎನ್ನುವಾಗ ಪ್ರತ್ಯೇಕ ಎನ್ನುವುದು ಅನರ್ಥವಲ್ಲ. ಇತರರೊಡನೆ ಸಹಕಾರದಿಂದಬಾಳಿ ವಿಶ್ವಜಗತ್ತನ್ನು ರಚಿಸುವ ಏರ್ಪಾಡೆಂದು ಅರ್ಥ ಎಂದು ನುಡಿದರು.

ಜಪಾನಿನ ಕೈಗಾರಿಕೆ ಪ್ರದೇಶದ ಹೃದಯವೆಂದು ಹೆಸರುವಾಸಿಯಾದ ಒಸಾಕಾಕ್ಕೆ ಭೇಟಿಯಿತ್ತ ನೆಹ್ರೂರನ್ನು ಅಲ್ಲಿನ ಗೌರ್ನರರೂ, ಮೇಯರರೂ ಸ್ವಾಗತಿಸಿದರು. ತಮ್ಮ ಸೌವಾರ್ಥವಾಗಿ ಏರ್ಪಟ್ಟಿದ್ದ ಪತ್ರಿಕಾಕೂಟದಲ್ಲಿ ನೆಹ್ರೂ ಮಾತನಾಡುತ್ತ ಮೇಲೆ ಕಾಣಿಸಿದಂತೆ ನುಡಿದರೇ. ಮುಂದುವರಿದು, ತಾವಿಲ್ಲಿಗೆ ವಿಷಯ ತಿಳಿದುಕೊಳ್ಳಲು ಬಂದಿರುವುದಾಗಿಯೂ ಇದರಿಂದ ಕಲಿತುಕೊಳ್ಳುವುದೇ. ಭಾರತದ ಉದ್ದೇಶವೆಂದೂ ನುಡಿದರು.

ಇತರ ದೇಶಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದರೂ ಅವುಗಳ ಬಗ್ಗೆ ಸ್ನೇಹವಾಗಿ ವ್ಯವಹರಿಸುವುದೇ ಭಾರತದ ನೀತಿಯೆಂದರು

ರಾಷ್ಟ್ರ ರಾಷ್ಟ್ರಗಳ ನಡುವೆ ಶಾಂತಿಯ ಸಾಮಾನ್ಯಗಾನ್ನು ತಾನು ಪರಿಹರಿಬಲ್ಲೆನೆಂದು ಹೇಳುವ ಪ್ರಶ್ನೆಯೆ ಭಾರತಕ್ಕಿಲ್ಲವೆಂದರು. ಅಂತರಾಷ್ಟ್ರೀಯ ರಾಜಕೀಯದಲ್ಲಿ ಭಾರತದ ಪಾತ್ರ ರಾಷ್ಟ್ರಗಳ ಮಧ್ಯದ ತಪ್ಪು ತಿಳುವಳಿಕೆಗಳನ್ನು ತಿಳುಮಾಡಿಕೊಂಡು ಅವುಗಳ ಪರಿಹಾರಕ್ಕೆ ಸಹಾಯಮಾಡುವುದೇ ಆಗಿರಬೇಕೆಂದರು.

ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಪಾಕ್ ಸಂಚು ನಡೆಸುತ್ತಿದೆ

ಕಾಶ್ಮೀರದಲ್ಲಿ ನಡೆದ ಬಾಂಬ್ ಆಸ್ಫೋಟನೆಗಳಲ್ಲಿ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್‌ಖಾನ್ ನೂನ್ ರ ಗೂಢಚಾರ ಶಾಖೆಯ ಉನ್ನತಾಧಿಕಾರಿಗಳ ಕೈವಾಡವಿದೆಯೆಂದು ಅಬ್ದುಲ್ ಪರವಾನ ಎಂಬುವನು ತಿಳಿಸಿದ್ದಾನೆ.

ಈ ಆಸ್ಫೋಟನಗಳ ಸಂಬಂಧವಾದ ವೊಖದ್ದಮೆಯ ವಿಚಾರಣೆಯು 10 ರಂದು ಇಲ್ಲಿನ ವಿಶೇಷ ನ್ಯಾಯಾಧೀಶರ ಸಮ್ಮುಖದಲ್ಲಿ ಆರಂಭವಾದಾಗ ಅಪಾದಿತರ ಪೈಕಿ ಮೇಲ್ಕಂಡ ಅಬ್ದುಲ್ ಅಜೀಜ್ ಅಪ್ರೂವರ್‌ಆಗಿ ತಿರುಗಿ ಮೇಲಿಕಂಡ ಸಂಗತಿಯನ್ನು ಹೊರಗೆಡಹಿದನು.

ಈ ವೊಖದ್ದಮೆಯಲ್ಲಿ 9 ಜನರು ಅಪಾದನೆಗಳೊಳಗಾಗಿದ್ದಾರೆ.

ಮಧ್ಯೆ ಮಧ್ಯೆ ನೀರು ಕುಡಿಯುತ್ತ ಸಾಕ್ಷ್ಯವಿತ ಅಬ್ದುಲ್ ಅಜೀಜ್ ತಾನು 3 ಬಾರಿ ಸಮರ ಪರಿಮರ್ಷೆಯನ್ನು ದಾಟಿ ಆಜಾದ್ ಕಾಶ್ಮೀರಕ್ಕೆ ಹೋದುದಾಗಿಯೂ ಅಲ್ಲಿ ಸಾಲ್ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದುದಾಗಿಯೂ ತಿಳಿಸಿದ.

ಅನಂತರ ತಾನು ಫಿರೋಜ್‌ಖಾನ್ ನೂನರನ್ನು ಕಂಡುದಾಗಿಯೂ ಆ ಅರು ತನ್ನ ಬೆನ್ನು ತಟ್ಟಿ ಶಹಬಾಸ್! ನೀನು ನಮ್ಮ ಪರವಾಗಿ ಕೆಲಸಮಾಡುತ್ತಿರು. ನಾವು ನಿನಗೆ ಸಹಾಯ ಮಾಡುತ್ತೇನೆ ಎಂದು ಹೇಳಿದರೆಂದೂ ತಿಳಿಸಿದನು.

ಕಾಶ್ಮೀರವನ್ನು ದಕ್ಕಿಸಿಕೊಳ್ಳುವ ಸಂಚು

ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಲು ಇಲ್ಲಿ ಒಳಜಗಳ ಹುಟ್ಟಿಸಿ ರಾಷ್ಟ್ರೀಯ ಪರಿಷತ್ತಿನಲ್ಲಿ ವಿಭಿನ್ನತೆ ಉಂಟುಮಾಡಿ ರಾಜ್ಯದಲ್ಲಿ ಕೋಮುಮಾರುಪ್ಲೇಗಿನಂತೆ ಸೂಯೆಗಳನ್ನು ಕೆರಳಿಸುವ ದೃಷ್ಟಿಯಿಂದ ಕೈಗೊಳ್ಳಬೇಕಾದ ನಾನಾ ನೋಪಾಯಗಳನ್ನು ಕುರಿತು ಆಲೋಚಿಸಲು ನಡೆದ ಸಭೆಗಳಲ್ಲಿ ತಾನು ಭಾಗಿಯಾಗಿದ್ದುದಾಗಿ ಅಜೀದ್ ಹೇಳಿ ಈ ನಡುವಳಿಕೆಗಳು ನಿಷ್ಫಲವಾದರೆ ಬಾಂಬ್ ಆಸ್ಫೋಟನೆಗಳೇ ಮುಂತಾದ ವಿನಾಶಕೃತ್ಯಗಳನ್ನು ನಡೆಸಬೇಕೆಂದು ಸಭೆಗಳಲ್ಲಿ ಚರ್ಚಿಸಲಾಯಿತೆಂದೂ ತಿಳಿಸಿದರು.

ಆದರೆ ರಾವಲ್ಪಿಂಡಿ ಮತ್ತು ಅಬ್ಬಾಟಾಬಾದ್‌ಗಳಲ್ಲಿ ನಡೆದ ಸಭೆಗಳಿಗೆ ತಾನು ಹೋಗಲು ಅವಕಾಶ ದೊರೆಯಲಿಲ್ಲವೆಂದು ಹೇಳಿದ. ರಾವಲ್ಪಿಂಡಿ ಸಭೆಯಲ್ಲಿ ಫಿರೋಜ್‌ಖಾನ್ ನೂನು ಅಫ್ಘಾನಿಸ್ತಾನದಿಂದ ಗಡೀಪಾರು ಮಾಡಲ್ಪಟ್ಟ ಒಬ್ಬ ರಾಜಪುತ್ರ ನು ತ್ತು ಹಲವಾರುಮಂದಿ ನಾಯಕರು ಸೇರಿದ್ದರೆಂದೂ ಆತ ಹೇಳಿದನು.

ಪಾಕಿಸ್ತಾನದ ಗೂಢಚಾರನಾಗಿ

ಪಾಕಿಸ್ತಾನದ ಗೂಢಚಾರನಾಗಿ ತಾನು ಎರಡು ವರ್ಷ ನಡೆಸಿದ ಕೆಲಸಗಳನ್ನು ಅಬ್ದುಲ್ ಅಜೀಜ್ ವಿವರಿಸುತ್ತಾ

ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಪಾಕ್ ಸಂಚು ನಡೆಸುತ್ತಿದೆ

(ಸುಂದುವರಿದುದು)

ಪ್ರಚಾರ ಸಾಹಿತ್ಯವೇ ಮುಂತಾದುವನ್ನು ತಾನು ಶ್ರೀನಗರಕ್ಕೆ ತಂದು ಮುಖ್ಯಸ್ಥರಿಗೆ ತಲುಪಿಸಿದುದಾಗಿ ಹೇಳಿದನು

ಫಿರೋಜ್ ಖಾನ್ ನೂನ್ ರಿಗೂ ತನಗೂ ಮೊದಲುಬಾರಿ ರಾವಲ್ಪಿಂಡಿಯಲ್ಲಿ ಭೇಟಿಯಾಯಿತೆಂದೂ ಆವಾಗ ತನ್ನ ನೇಜಯ ಮಾಡಿದವನು ಸುಮಾರು ವಿಷಾದು ರೇಜಿಗೆ ಒಂದು ಸೈಲಿ ದೂರದಲ್ಲಿ ಮೋರಿ ವೈಗಾನ್ ಎಂಬಲ್ಲಿನ ಪಾಕ್ ಗೂಢಾಚಾರ ಅಧಿಕಾರಿ ಪಜ್ವಲ್ ಖಾನ್ ಎಂಬಾತನೆಂದೂ ಹೇಳಿದನು.

ಜಾಹೀರಾತುಗಳು

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)
ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಪಾಂಡವ ವನವಾಸ
ಐತಿಹಾಸಿಕ ಕಹಾನಿ
ಹಿಂದೀರಚನೆ ೪
ಪತ್ರಲೇಖನೆ
(ಸೆಟ್ ಬೆಲೆ 4-4-0)
ಇತರ ವಿವರಗಳಿಗೆ ಸ್ಕಾಂಪಿಟ್ಟು ಅಥವಾ ರಿಜಿಸ್ಟ್ರಾರ್ರು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ಸ್ವೀಕಾರ—ವಿಮರ್ಶೆ

'ಯುಗಪುರುಷ, ದಸರಾವಿಶೇಷಾಂಕ
ಕಿನ್ನಿಗೋಳಿ [ಪಶ್ಚಿಣಭಾರತ]

ಕವಿತೆ, ಕಾವ್ಯಾಲೋಕನ ವಿಚಾರ ಮಂಥನ, ಶಾಸ್ತ್ರೀಯ ವಿವೇಚನೆ, ವಿಡಂಬನೆ, ನೈಜ್ಞಾನಿಕ ವರ್ಗೈರೆ. ವೈವಿಧ್ಯಯುಕ್ತವಾದ ಸಾಹಿತ್ಯದ ಸವಿಯೂಟವನ್ನು ಬಡಿಸಿರುವ 'ಯುಗಪುರುಷ' ದ ಸಂಚಾಲಕರು ಅಭಿನಂದಾರ್ಹರು.

'ಯುಗಪುರುಷ' ದಲ್ಲಿ ಕರ್ನಾಟಕ ಉತ್ತಮ ಲೇಖಕರಿಗೆ ಪಾಠವ್ಯವುಂಟು. ಸುಂದರ ಮತ್ತು ನೋಡಹಿತ ಮುದ್ರಣ ದಿಂದ ಚಲಿಗೆ ಕಳೆಯೇರಿದೆ. ಕನ್ನಡಿಗರು ಈ ಪತ್ರಿಕೆಗೆ ಪ್ರೋತ್ಸಾಹ ಕೊಡಬೇಕು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ ಶೀತಜ್ವರ, ಮಲೇರಿಯಾ, ಮತ್ತು ಎಲ್ಲ ನೋವುಗಳಿಗೆ ದಿವ್ಯಾಮೃತ
(ಇದಕ್ಕೆ ಯಾವುದಾ ಜ್ವರಕ್ಕೆ ನೀರಿನಲ್ಲಿ ೩ ಕೊಟ್ಟು ಹಾಕಿ ಸೇವಿಸಿರಿ)

ಕಾಶ್ಮೀರಿ ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ
ಎಲ್ಲಷಾಪುಗಳಲ್ಲೂ ದೊರೆಯುತ್ತದೆ.

H. S & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸಲ್ಪಡಲ್ಲ	Subscription will not be accepted for less than 6 months

NAVA BHARAT, BELLARY.
(Regd. M. No. 1746)
To
Sri. _____
_____
_____

Edited, Printed & Published by T. P. KESHAVA RAO at Nava Bharat Printing Press, Bellary.

ಸಮಾಚಾರ

ಸೋಮವಾರ ಡಿಸಂಬರ್, 23—12—1957

ವರ್ಷ 21. | ಬಳ್ಳಾರಿಯ ಉಜ್ವಲ ಹಾಸ್ಯೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 9- | ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ !!! | ಟಿ. ಬಿ. ಕೇಶವರಾವ್

ಬಳ್ಳಾರಿ, ರಾಯಚೂರುಗಳಲ್ಲಿ ಹಿಂದೀ ಪ್ರಚಾರಕ ಶಿಕ್ಷಣ ಶಿಬಿರಗಳು

"ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸಲಹೆ, ಸೂಚನೆಗಳಂತೆ ಕರ್ನಾಟಕ ಹಿಂದೀ ಪ್ರಚಾರ ಸಭೆ ಧಾರವಾಡದ ಆಶ್ರಯದಲ್ಲಿ, ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಈ ತಿಂಗಳು 25–26 ನೆಯ ದಿನಾಂಕ ಬುಧವಾರ ಗುರುವಾರ, ಚಿತ್ರದುರ್ಗ–ಬಳ್ಳಾರಿ ಜಿಲ್ಲೆಯ ಪ್ರಚಾರಕರಿಗಾಗಿಯೂ, ರಾಯಚೂರು ನಗರದ ಗವರ್ನಮೆಂಟ್ ಹೈಸ್ಕೂಲಿದಲ್ಲಿ 29-12-57, 30-12-57 ಬೀದರ್, ಗುಲ್ಬರ್ಗ, ರಾಯಚೂರು, ಜಿಲ್ಲೆ ಪ್ರಚಾರಕರಿಗಾಗಿಯೂ, ಶಿಕ್ಷಣ ಶಿಬಿರಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಸುಪ್ರಸಿದ್ಧ ವಿದ್ವಾಂಸರೂ, ಶಿಕ್ಷಣ–ತಜ್ಞರೂ, ಈ ಶಿಬಿರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ."

ಪರಸ್ಥಳದಿಂದ ಬರುವ ಪ್ರಚಾರಕರು, ಹಿಂದೀ ಕ್ಷೇತ್ರದಲ್ಲಿಪ ಕಾರ್ಯಕರ್ತರಿಗಾಗಿ ಉಚಿತವಾಗಿ ಭೋಜನ, ವಸತಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರವಾಸಿತ ಪ್ರಚಾರಕರಿಗಾಗಿ ಒಂದು ಕಡೆಯ ಪ್ರಯಾಣ ಖರ್ಚನ್ನು ಕೊಡಲಾಗುವುದು. 1/– ರೂ ಸಲ್ಲಿಸಿ ಪ್ರತಿನಿಧಿಗಳಾಗಿಬೇಕು. ಎಲ್ಲ ಹಿಂದೀ ಪ್ರೇಮಿಗಳೂ ಭಾಗವಹಿಸಿ, ಮಾತೃ ಭಾಷೆ, ರಾಜಭಾಷೆಗಳ ಅಭಿವೃದ್ಧಿ ಮತ್ತು ವ್ಯಾಪ್ತಿಗೆ ತಕ್ಕ ಸಲಹೆ ಸೂಚನೆ ಕೊಟ್ಟು, ಶಿಬಿರಗಳನ್ನು ಯಶಸ್ವಿಗೊಳಿಸಲು, ಪೂರ್ವಕರ್ನಾಟಕ ಹಿಂದೀ ಸಂಘಟಕರಾದ ಶ್ರೀ T. B. ಕೇಶವರಾಯರು ಕೋರುತ್ತಾರೆ.

ನಾಯಕರಿಗೆ ೬ ತಿಂಗಳು ಸಜೆ

ಬ್ರಾಹ್ಮಣರನ್ನು ಕೊಲ್ಲಲು ಪ್ರೇರೇಪಿಸಿದ ಅಪಾದನೆ

ದ್ರಾವಿಡ ಕಜಗದ ನಾಯಕ ಶ್ರೀ E. V. ರಾಮಸ್ವಾಮಿನಾಯಕರ್‌ರವರು ಬ್ರಾಹ್ಮಣರನ್ನು ಕೊಲ್ಲಬೇಕು ಮತ್ತು ಅವರ ಮನೆಗಳಿಗೆ ಬೆಂಕಿ ಇಡಬೇಕು. ಎಂದು ಜನರಿಗೆ ಕರೆಯಿತ್ತರೆಂಬ ಅಪಾದನೆ ಮೇಲೆ ಈ ದಿನ ಅವರಿಗೆ 6 ತಿಂಗಳು ಸಾದಾ ಸಜೆ ವಿಧಿಸಲಾಯಿತು.

ಮೂರು ಅಪಾದನೆಗಳ ಮೇಲೆ ಅವರಿಗೆ ಸಜೆ ವಿಧಿಸಲಾಯಿತು. 3 ಸಜಾ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸುವಂತೆ ತಿಳಿಸಲಾಗಿದೆ.

ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾದ ಶ್ರೀ ಶಿವಸುಬ್ರಹ್ಮಣ್ಯಂ ರವರು ನಾಯಕರ ತೀರ್ಪನ್ನಿತ್ತಾ ಪೈನಿಯನ್ನು 'ಎ'ದರ್ಜೆಯಲ್ಲಿಡಬೇಕೆಂದು ಆಜ್ಞೆಯಿತ್ತರು.

ಜನಸಂದಣಿ ಜಾಸ್ತಿಯಿತ್ತು. ಕೋರ್ಟಿನ ಪ್ರವೇಶವನ್ನು ನಿಯಂತ್ರಿಸಲಾಗಿತ್ತು. E V.R. ರವರು ತಮ್ಮ ಪತ್ನಿ ಮಣಿ ಅಮ್ಮಯ್ಯರ್ ರೊಡನೆ ತಮ್ಮ ಬಟ್ಟೆ – ಬರೆಗಳನ್ನೊಳಗೊಂಡ ಚೀಲವೊಂದನ್ನು ಹಿಡಿದು ಕೊಂಡು ಕೋರ್ಟಿಗೆ ಬಂದಿದ್ದರು.

ರಾಜ್ಯಕ್ಕೆ ೩ ಸಹಸ್ರ ಟನ್ ಅಕ್ಕಿ

ಜನವರಿ ತಿಂಗಳಲ್ಲಿ ಕೇಂದ್ರ ಸರಕಾರವು ಮೈಸೂರು ರಾಜ್ಯಕ್ಕೆ 2 ಸಹಸ್ರ ಟನ್ ಜಪ್ಪರ್ಕಿ ಮತ್ತು 1 ಸಹಸ್ರ ಟನ್ ಅಕ್ಕಿಯನ್ನು ನಾಲದ ಆಧಾರದ ಮೇಲೆ ಸರಬರಾಜು ಮಾಡಲಿದೆ.

—ಎಂದು ರಾಜ್ಯದ ಕೃಷಿ ಮಂತ್ರಿ ಶ್ರೀ M.P. ಪಾಟೀಲ್‌ರವರು ಪತ್ರಿಕಾ ಗೋಷ್ಠಿಯಲ್ಲಿ ನುಡಿದರು.

ಇತ್ತೀಚೆಗೆ ದೆಹಲಿಗೆ ಭೇಟಿ ಇತ್ತಿದ್ದಾಗ ತಾವು ಅಲ್ಲಿ ಕೇಂದ್ರ ಆಹಾರ ಮಂತ್ರಿ ಶ್ರೀ A.P. ಜೈನರವರೊಡನೆ ರಾಜ್ಯದ ಆಹಾರ ಪರಿಸ್ಥಿತಿ ಬಗ್ಗೆ ಮಾತುಕತೆ ಹಡೆಸಿ ಜನವರಿ ತಿಂಗಳ ಅಂತ್ಯದ ವರೆಗೂ ಕೇಂದ್ರ ಸರ್ಕಾರವು ಆಹಾರ ಸರಬರಾಜು ಮಾಡಬೇಕೆಂದು ಒತ್ತಾಯ ಪಡಿಸಿದುದಾಗಿಯೂ ಇದಕ್ಕೆ ಶ್ರೀ ಜೈನ್ ಒಪ್ಪಿರುವುದಾಗಿಯೂ ತಿಳಿಸಿದರು.

ರಾಜ್ಯಸರ್ಕಾರವು ಈ ಸುಗ್ಗಿ ಕಾಲದಲ್ಲಿ ಸುಮಾರು ೫೦ ಸಹಸ್ರ ಟನ್‌ಗಳಷ್ಟು ಅಕ್ಕಿಕೊಂಡು ದಾಸ್ತಾನು ಮಾಡಿಡಲು ನಿರ್ಧರಿಸಿದೆ ಎಂದೂ ಸಚಿವರು ನುಡಿದರು.

ರಾಜ್ಯದಲ್ಲಿ ಈಗ ಭತ್ತದ ಬೆಳೆ ಕಡಮೆ ಆಗುತ್ತಿದೆ ಎಂದೂ ನುಡಿದರು. ಆಹಾರ ಧಾನ್ಯಗಳ ವ್ಯಾಪಾರಿಗಳಿಗೆ ಲೈಸನ್ಸ್ ಕೊಡುವ ಪದ್ಧತಿಯನ್ನು ಕೇಂದ್ರ ಸರ್ಕಾರದ ಆದೇಶದಂತೆ ಜಾರಿಗೆ ತರಲಾಗುವುದೆಂದು ತಿಳಿಸಿದರು.

[1] ಫ್ಯಾಂಟೇಷನ್ ಕಾರ್ಮಿಕ ವಸತಿ ಯೋಜನೆಯನ್ನು 1956 ರ ಏಪ್ರಿಲ್‌ನಲ್ಲಿ ಆರಂಭಿಸಲಾಯಿತು. ಈ ಯೋಜನೆಯ ಪ್ರಕಾರ ದ್ವಿತೀಯಯೋಜನಾವಧಿಯಲ್ಲಿ ೨ ಕೋಟಿ ರೂಗಳ ಅವಕಾಶವಿದೆ. (4 ನೇ ಪುಟಕ್ಕೆ)

ಹೈಸ್ಕೂಲು ಶಿಕ್ಷಕರಿಗೆ ಮಧ್ಯಂತರ ಪರಿಹಾರ

ಸರ್ಕಾರದ ಪರಿಶೀಲನೆಯಲ್ಲಿದೆ, ಮುಷ್ಕರ ಬೇಡವೆಂದು ಸರ್ಕಾರದ ಮನವಿ

ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಒಳಪಟ್ಟಿರುವ ಹೈಸ್ಕೂಲುಗಳ ಶಿಕ್ಷಕರು ಮುಷ್ಕರ ಹೂಡಬಾರದೆಂದು ಸರ್ಕಾರದ ವರಿಷ್ಠರಿಂದು ಮನವಿ ಮಾಡಿಕೊಂಡಿದ್ದಾರೆ.

ಶಿಕ್ಷಕರ ಸಂಬಳ ಮತ್ತು ತುಟ್ಟಿಭತ್ಯೆ ಹೆಚ್ಚಿಸುವುದಕ್ಕೆ ಅನೇಕ ತೊಡಕುಗಳಿವೆ. ಆದರೂ ಈ ವಿಷಯದಲ್ಲಿ ಕೊನೆಯನಿರ್ಣಯತೆಗೆದುಕೊಳ್ಳುವವರೆಗೆ ಮಧ್ಯಂತರ ಪರಿಹಾರ ಕೊಡುವ ಸಾಧ್ಯತೆಯನ್ನು ಸರಕಾರ ಪರಿಶೀಲಿಸುತ್ತಿದೆ ಎಂದು ಸರಕಾರದ ಪತ್ರಿಕಾಪ್ರಕಟನೆ ತಿಳಿಸಿದೆ.

ಪತ್ರಿಕಾ ಪ್ರಕಟನೆ ಹೀಗಿದೆ:—

ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಒಳಪಟ್ಟಿರುವ ಕೆಲವು ಹೈಸ್ಕೂಲುಗಳ ಶಿಕ್ಷಕರು ತಮ್ಮ ಸಂಬಳ ಮತ್ತು ತುಟ್ಟಿಭತ್ಯೆಗಳನ್ನು ಹೆಚ್ಚಿಸಿಲ್ಲದ್ದರಿಂದ ಮುಷ್ಕರ ಹೂಡುವರೆಂದೂ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಖಾಸಗಿ ಮತ್ತು ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೊಳಪಟ್ಟ ಶಾಲೆಗಳ ಶಿಕ್ಷಕರ ಸಂಬಳ ಮತ್ತು ತುಟ್ಟಿಭತ್ಯೆಗಳನ್ನು ಹೆಚ್ಚಿಸುವ ವಿಷಯವನ್ನು ಸರ್ಕಾರವು ಕೆಲಕಾಲದಿಂದ ಪರಿಶೀಲಿಸುತ್ತಿದೆ. ಇಂಥ ಸಂಸ್ಥೆಗಳು ಈ ಸಂಬಂಧದಲ್ಲಿ ಧನಸಹಾಯದ ನಿಬೇರೆ-ಬೇರೆ ನಿಯಮಾವಳಿಗಳಿಗೆ ಬದ್ಧವಾಗಿನೆಯೆಂಬ ಸಂಗತಿ ಸಾಮಾನ್ಯವಾಗಿವಿದಿತವಾಗಿದೆ.

ತಜ್ಞರ ಸಮಿತಿ

ಈ ಪ್ರಶ್ನೆಯನ್ನು ಪರಿಶೀಲಿಸಿ ಸಮಗ್ರ ಮೈಸೂರು ರಾಜ್ಯಕ್ಕೆ ಅನ್ವಯವಾಗುವಂಥ ಏಕರೂಪ ನಿಯಮಗಳನ್ನು ರೂಪಿಸುವ ದೃಷ್ಟಿಯಿಂದ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದೆ. ಇದೇ ವಿಷಯಕ್ಕೆ ಸಂಬಂಧಪಟ್ಟ ಹೆಚ್ಚಿನ ವೆಚ್ಚವನ್ನು ನಿರ್ವಹಿಸುವುದಕ್ಕಾಗಿ ವೆಚ್ಚದ ಸಾಧನವನ್ನು ತೋರಿಸಿಕೊಡಲು ಮತ್ತೊಂದು ಸಮಿತಿಯನ್ನೂ ರಚಿಸಲಾಗಿದೆ. ಸರ್ಕಾರವು ಈ ಸಮಿತಿಗಳ ಶಿಫಾರಸುಗಳನ್ನು ನಿರೀಕ್ಷಿಸುತ್ತಿದೆ. ಇದಲ್ಲದೆ ಸಂಬಂಧಪಟ್ಟ ಸಂಸ್ಥೆಗಳ ವ್ಯವಸ್ಥಾಪಕರು ಈ ಹೆಚ್ಚಿನ ವೆಚ್ಚದಲ್ಲಿ ತಮ್ಮ ತಮ್ಮ ಪಾಲಿನ ಹೆಚ್ಚಿನ ವೆಚ್ಚವನ್ನು ಹೊತ್ತುಕೊಳ್ಳಲು ಸಿದ್ಧರಾಗಬೇಕು. ಈ ಸಂಬಂಧದಲ್ಲಿ ಎಜ್ಯೂಕೇಷನ್ ಸೆಸ್ಸ್‌ಗಳು ತಮ್ಮ ಅಭಿಪ್ರಾಯವನ್ನು ಇನ್ನೂ ತಿಳಿಸಿಲ್ಲ.

ತೊಡಕಿನ ಪ್ರಶ್ನೆ

ಈ ತೊಡಕಿನ ಪ್ರಶ್ನೆಯನ್ನು ತೀವ್ರವಾಗಿ ಬಿಡಿಸುವುದು ಸುಲಭವಲ್ಲ. ಆದರೂ ಈ ವಿಷಯದಲ್ಲಿ ಕೊನೆಯ ನಿರ್ಣಯತೆಗೆದುಕೊಳ್ಳುವವರೆಗೆ ಸರ್ಕಾರವು ಮಧ್ಯಂತರ ಪರಿಹಾರ ಕೊಡುವ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ. ಆದುದರಿಂದ ಸಂಬಂಧಪಟ್ಟ ಶಿಕ್ಷಕರು ತೆಗೆದುಕೊಳ್ಳುವ ಅವಸರದ ನಿಲುವಿನಿಂದ ಯಾವ ಪ್ರಯೋಜನವೂ ಆಗಲಾರದು. ಅವರು ಈ ಸಂದರ್ಭದಲ್ಲಿ ಮುಷ್ಕರ ಹೂಡುವುದು ಉಚಿತವೇ ಎಂಬುದನ್ನು ಆಲೋಚಿಸಬೇಕು. ಸಂಬಳವನ್ನು ಹೆಚ್ಚಿನ ಹಣವನ್ನು ಜನಸಾಮಾನ್ಯರಿಂದಲೇ ಪಡೆಯಬೇಕಾಗುತ್ತದೆ. ಈ ಸಂಬಂಧದಲ್ಲಿ ಜನಸಾಮಾನ್ಯರು ಎಷ್ಟು ಹೆಚ್ಚು ಭಾರವನ್ನು ಹೊರಬಲ್ಲರೆಂಬುದನ್ನು ಸರ್ಕಾರ ಪರಿಶೀಲಿಬೇಕಾಗಿದೆ.

ಶಿಕ್ಷಕರು ಮುಷ್ಕರ ಹೂಡಿದರೆ.....

ಶಿಕ್ಷಕರು ಮುಷ್ಕರ ಹೂಡಿದರೆ ನಷ್ಟಕ್ಕೆ ಗುರಿಯಾಗುವರು. ವಿದ್ಯಾರ್ಥಿಗಳೇ ಅಲ್ಲದೆ ಶಿಕ್ಷಕರು ಸಾರ್ವಜನಿಕರಿಗೆ ಕರ್ತವ್ಯವನ್ನು ಸಲ್ಲಿಸುವ ಹೊಣೆಗಾರಿಕೆಯನ್ನು ಹೊತ್ತಿರುವರೆಂಬುದನ್ನೂ ಸಹ ಸ್ಮರಿಸಿಕೊಳ್ಳಬೇಕು. ಶಿಕ್ಷಕರು ತಮ್ಮ ಆವಶ್ಯಕತೆಗಳನ್ನು ವ್ಯಕ್ತಪಡಿಸಿದ ಅಗತ್ಯದ ಪರಿಹಾರವನ್ನು ಸೂಚಿಸುವುದಕ್ಕಾಗಿ ಮುಷ್ಕರವನ್ನೇ ಹೂಡಬೇಕಾಗಿಲ್ಲ. ಇದಕ್ಕೆ ಅನುಸರಿಸಬೇಕಾದ ಬೇರೆಮಾರ್ಗಗಳೂ ಇವೆ. ಶಿಕ್ಷಕರಿಗೆ ಸಾಕಷ್ಟು ಪರಿಹಾರವನ್ನು ನೀಡಲಾಗಿಲ್ಲವಾದರೆ ಅದಕ್ಕೆ ಕಾರಣ ಸರ್ಕಾರಕ್ಕೆ ಈ ವಿಷಯ ಅರಿವಿಲ್ಲವೆಂದಲ್ಲ. ಈ ಸಮಸ್ಯೆಗೆ ಅನೇಕ ತೊಡಕುಗಳು ಅಂಟಿಕೊಂಡಿರುವುದೇ ಕಾರಣ. ಸರ್ಕಾರವು ಈ ಸಮಸ್ಯೆಯನ್ನು ಶೀಘ್ರದಲ್ಲಿಯೇ ಬಿಡಿಸುವ ನಿರೀಕ್ಷೆಯನ್ನು ಹೊಂದಿದೆ. ಇದನ್ನು ದೃಷ್ಟಿಯಲ್ಲಿಟ್ಟು ಶಿಕ್ಷಕರು ಮುಷ್ಕರವನ್ನು ಕೈಕೊಳ್ಳಬಾರದು ಈ ಸಂಬಂಧದಲ್ಲಿ ಶಿಕ್ಷಕರು ಮುಷ್ಕರ ಹೂಡುವ ಆವಶ್ಯಕತೆಯಿಲ್ಲವೆಂಬಂಶವನ್ನು ಸರ್ಕಾರವು ಸ್ಪಷ್ಟಪಡಿಸಬಯಸುತ್ತದೆ.

ಮೈಸೂರು ರಾಜ್ಯದ ಅಭಿವೃದ್ಧಿ ಕಾರ್ಯಕ್ಕೆ ಹಣ

ಯೋಜನಾ ಸಮಿತಿಯಿಂದ ೩.೬೧ ಲಕ್ಷ ರೂಪಾಯಿ ನೀಡಿಕೆ

ಮೈಸೂರು ರಾಜ್ಯದಲ್ಲಿನ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗಾಗಿ ಯೋಜನಾ ಸಮಿತಿ ೩.೬೧ ಲಕ್ಷ ಹೆಚ್ಚು ರೂಗಳನ್ನು ೧೯೫೭-೫೮ ವರ್ಷಕ್ಕೆ ನೀಡಿದೆ. ಈ ಮೊಬಲಗಿಗೆ ರಾಜ್ಯಸರ್ಕಾರದ ಕಾಣಿಕೆಯಾಗಿ ೧,೮೦,೫೦೦ ರೂಗಳನ್ನು ಸೇರಿಸಿ ಒಟ್ಟು ೫,೪೧,೫೦೦ ರೂಗಳನ್ನು ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಆಯಾ ಜಿಲ್ಲೆಗಳಿಗೆ ಒದಗಿಸಲಾಗಿರುವಷ್ಟು ಹಣವನ್ನು ಕೊಡಲಾಗಿದೆ ಎಂದು ತಿಳಿಸಿದರು.

ಈಗ ಸದ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒದಗಿಸಿದ್ದ ಹಣ ಸಾಲದೆಬಂದಿದ್ದರಿಂದ ಹೊಸದಾಗಿ ಯಾವ ಸ್ಥಳೀಯ ಅಭಿವೃದ್ಧಿ ಕಾರ್ಯವನ್ನೂ ಕೈಗೊಳ್ಳಬಾರದೆಂದೂ, ಈಗ ಕೆಲಸ ಆರಂಭ ಮಾಡಿರುವ ಕಾಮಗಾರಿಗಳನ್ನೇ ಮುಂದುವರಿಸಿಕೊಂಡು ಹೋಗಬೇಕೆಂದೂ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿತ್ತು.

---

[೩] ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಕೊಳಚೆ ಪ್ರದೇಶಗಳನ್ನು ನಿರ್ಮೂಲಗೊಳಿಸುವುದಕ್ಕಾಗಿ 20 ಕೋಟಿ ರೂಗಳನ್ನು ತೆಗೆದಿರಿಸಲಾಗಿದೆ. ನಂತರ ಈ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲು 1,10,000 ಉತ್ತಮ ನಿವೇಶನಗಳನ್ನು ಮಾಡಲಾಗುವುದು.

(4 ನೇ ನೋಡಿ)

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ

ಹಿಂದೀ ಪ್ರಚಾರಕರು--ಅಧ್ಯಾಪಕರಿಗಾಗಿ ಶಿಬಿರದ ಆಯೋಜನೆ

ದಕ್ಷಿಣದ ಹಿಂದೀ ಪ್ರಚಾರಕರಲ್ಲಿ ಪರಸ್ಪರ ಪರಿಚಯವನ್ನು ಹೆಚ್ಚಿಸಿ, ಹಿಂದೀ ಸಾಹಿತ್ಯ ಮತ್ತು ಶಿಕ್ಷಣದ ಭಿನ್ನ-ಭಿನ್ನ ಕ್ರಮಗಳಲ್ಲಿ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ದಕ್ಷಿಣದ ನಾಲ್ಕು ಪ್ರಾಂತ್ಯಗಳ ಭಿನ್ನ-ಭಿನ್ನ ಸ್ಥಾನಗಳಲ್ಲಿ ಶಿಬಿರದ ಆಯೋಜನೆ ಮಾಡಲಾಗಿದೆ. ಕರ್ನಾಟಕದ 19 ಜಿಲ್ಲೆಗಳವರಿಗಾಗಿ 12 ಜಿಲ್ಲಾ ಕೇಂದ್ರಗಳಲ್ಲಿ ಅಂದರೆ ಧಾರವಾಡ, ಬಿಜಾಪುರ, ಬಳ್ಳಾರಿ, ಶಿವಮೊಗ್ಗ, ಮೈಸೂರು, ಬೆಂಗಳೂರು, ಕೋಲಾರ, ಬೆಂಗಳೂರು, ಮಂಗಳೂರು, ಬೆಳಗಾಂ, ಅಂಕೋಲ, ರಾಯಚೂರುಗಳಲ್ಲಿ ಡಿಸೆಂಬರ್ 57 ರ ಅಂತ್ಯದೊಳಗಾಗಿ ಮಂಡಲ ಸಂಘಟಕರು, ತಮ್ಮ ಪ್ರಾಂತೀಯ ಕಾರ್ಯಾಲಯದ ಸಹಾಯದಿಂದ ಎರಡು ದಿನಗಳ ಶಿಬಿರ ವ್ಯವಸ್ಥೆ ಮಾಡಬೇಕಾಗಿದೆ.

ಶಾಲೆ-ಕಾಲೇಜುಗಳಲ್ಲಿ ಹಿಂದೀ ಶಿಕ್ಷಣದ ಸಂಬಂಧವಿರುವ ಅಧ್ಯಾಪಕರು, ಪ್ರಾಧ್ಯಾಪಕರು, ಸಾರ್ವಜನಿಕರಿಗಾಗಿ ಹಿಂದೀ ವರ್ಗ ನಡೆಸುತ್ತಿರುವವರು, ಮತ್ತು ನಮ್ಮ ಸಭೆಯ ಪ್ರಮಾಣಿತ ಪ್ರಚಾರಕರು, ಒಂದು ನಿಶ್ಚಿತ ಕಾರ್ಯಕ್ರಮಕ್ಕೊಳಪಟ್ಟು ಶಿಬಿರದಲ್ಲಿ ಹಿಂದೀ ವಾತಾವರಣದಲ್ಲಿರುವ ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಪ್ರಚಾರಕರು 3 ಶಿಬಿರಗಳಲ್ಲಿ ಭಾಗ ತೆಗೆದುಕೊಳ್ಳಬಹುದು. ಊಟ, ವಸತಿಗಳ ಸೌಕರ್ಯ ಉಚಿತವಾಗಿ ಏರ್ಪಡಿಸಲಾಗುವುದು. ಪ್ರವೇಶ ಶುಲ್ಕ 1/- ಕೊಟ್ಟರಾಯಿತು. ಮಹಿಳೆಯರಿಗೂ ಶಿಬಿರದಲ್ಲಿ ವ್ಯವಸ್ಥೆ ಮಾಡಲಾಗುವುದು.

ಭಿನ್ನಾಭಿಪ್ರಾಯಗಳು ಅನೈಕ್ಯತೆಯಿಂದ ಇವ್ಯಾವತ್ತೂ ಜಗಳಾಡುತ್ತಿದ್ದುದರಿಂದ ಸಾವಿರಾರು ವರ್ಷಗಳಿಂದಲೂ ಬ್ರಿಟಿಷರು ಭಾರತವನ್ನು ಆಳುತ್ತಾ ಬಂದಿದ್ದಾರೆ ಎಂದು ತಿಳಿಸಿ, ಈ ಘಟನೆಯಿಂದ ಪಾಠ ಕಲಿಯುತ್ತಿಳ್ಳಬೇಕಾಗಿರುವುದಾಗಿ ಮತ್ತೆ ಎಚ್ಚರಿಸಿದರು. ಅನೈಕ್ಯತೆಯು ತಲೆಹಾಕದಂತೆ ನೋಡಿಕೊಳ್ಳಬೇಕೆಂದೂ ಅನೈಕ್ಯತೆಯನ್ನುಂಟು ಮಾಡಲು ಯಾರೊಬ್ಬರಿಗೂ ಅವಕಾಶ ಕೊಡಕೂಡದೆಂದು ತಿಳಿಸಿದರು.

ರೀವಾದಲ್ಲಿ ಮಾಡಿದ ಭಾಷಣದಲ್ಲಿಯೂ ರಾಷ್ಟ್ರವನ್ನೆದುರಿಸುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಲು ಐಕ್ಯತೆಯಿಂದಿರಬೇಕೆಂದು ಜನತೆಯನ್ನು ಕುಳಕೊಂಡರು.

ಒಗ್ಗಟ್ಟು ಅಗತ್ಯ

ಜನತೆಯು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಮಾತ್ರ ಕಾರ್ಯವನ್ನು ಸಾಧಿಸಬಹುದೆಂದೂ ಪರಸ್ಪರ ಸಹಕಾರ ಮನೋಭಾವ ಬೆಳೆಯಬೇಕೆಂದೂ ನುಡಿದರು.

ವ್ಯವಸಾಯ ಹಾಗೂ ಕೈಗಾರಿಕಾ ಕ್ಷೇತ್ರಗಳೆರಡೂ ಸಮಪ್ರಾಶಸ್ತ್ಯ ಬೆಳೆಯುಬೇಕೆಂದು ಸಲಹೆ ಮಾಡಿದರು.

ಕೊರಿಯಾ ಭಾಷಣ ಬೇಡ

ಕೊರಿಯಾದ ವಿವಾದಗಳನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಚರ್ಚಿಸಿ ಶಾಂತಿಯುತವಾಗಿ ಬಗೆಹರಿಸಲು ಈ ಪಕ್ಷಗಳೇ ಕಾರಣವೆಂದು ಘೋಷಿಸಿದರು.

ಬಾಕಿಯನ್ನು ತೊಡೆಯಬೇಕು

"ಭಾರತದ ದೊಡ್ಡ ಮೊತ್ತದ ಬಡಿತನ, ಇದನ್ನು ಒಂದು ದಿನದಲ್ಲಿ ತೊಡೆದು ಹಾಕಲು ಸಾಧ್ಯವಿಲ್ಲ. ಬಡತನದ ಬವಣೆಯಿಂದ ಹೊರಗೆಳೆಯಲು ಪಂಚವಾರ್ಷಿಕ ಯೋಜನೆಯು ಸಾಧನವಾಗಿದೆ. ಇದೇ ಜನತೆಯ ಸಹಕಾರದಿಂದ ಕಷ್ಟಪಟ್ಟು ಮಾಡಿದರೆ, ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಗೊಳಿಸಲು ಸಾಧ್ಯ."

— ಎಂದು ಶ್ರೀ ನೆಹರೂ ನುಡಿದರು.

— ಕಾಶ್ಮೀರದಲ್ಲಿ ಪ್ಲೆಬಿಸೈಟ್ ಅಗತ್ಯವೇ ಇಲ್ಲ —

.... ಸೆಕ್ಯೂರಿಟಿ ಕೌನ್ಸಿಲಿನಲ್ಲಿ ರಷ್ಯಾದ ಸ್ಪಷ್ಟ ಘೋಷಣೆ ....

ಕಾಶ್ಮೀರದ ಪ್ರಶ್ನೆಯನ್ನು ಕಾಶ್ಮೀರದ ಜನರು ಈಗಾಗಲೇ ಇತ್ಯರ್ಥಗೊಳಿಸಿದ್ದಾರೆಂದೂ, ಕಾಶ್ಮೀರ ಭಾರತದ ಅವಿಭಾಜ್ಯ ಭಾಗವೆಂದು ಅವರು ಭಾವಿಸಿದ್ದಾರೆಂದೂ ರಷ್ಯಾದ ಸರ್ಕಾರ ಭಾವಿಸುವುದಾಗಿ ರಷ್ಯಾದ ಮಿ|| ಆರ್ಕಡಿ ಸೊಬೊಲೆವ್ ಪ್ರಪಂಚ ಸಂಸ್ಥೆಯ ಸೆಕ್ಯೂರಿಟಿ ಕೌನ್ಸಿಲ್‌ನಲ್ಲಿ ತಿಳಿಸಿದರು.

ಕಾಶ್ಮೀರವನ್ನು ವೈಮನಸ್ಯವಿಷಯವನ್ನಾಗಿ ಮಾಡಲು ಸ್ವೀಡನ್ನಿನ ಮಿ|| ಗುನ್ನಾರ್ ಜಾರಿಂಗ್‌ರವರು ಭಾರತ ಮತ್ತು ಪಾಕೀ ಸ್ಥಾನಗಳಿಗೆ ಭೇಟಿಕೊಟ್ಟು ಅಭಿಪ್ರಾಯಗಳನ್ನು ಚರ್ಚೆ ನಡೆಸಬೇಕೆಂಬ 4 ರಾಷ್ಟ್ರಗಳ ನಿರ್ಣಯದ ಮೇಲೆ ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಚರ್ಚೆ ಮುಂದುವರಿದಾಗಲೇ ಸೊಬೊಲೆವ್ ಹೀಗೆ ತಿಳಿಸಿದರು.

ಏಕಮತ್ಯದಿಂದ ಕೂಡಿದ ಭಾರತ ಸಂಸ್ಥಾನವನ್ನು ಸೇರಿದ ನಂತರ ಕಾಶ್ಮೀರದ ಜನರು ಶಾಂತಿಯುತವಾಗಿ ತಮ್ಮ ದೇಶಾಭ್ಯುದಯ ಕಾರ್ಯಗಳಲ್ಲಿ ನಿರತರಾಗಿ ಬಹುಮಟ್ಟಿಗೆ ಪ್ರಗತಿ ಸಾಧಿಸಿದ್ದಾರೆ. ಆದರೆ ಅಲ್ಲಿ ಅಗಿರುವ ಬದಲಾವಣೆಗಳು ಕೆಲವು ರಾಷ್ಟ್ರಗಳಿಗೆ ಹಿಡಿಸದೆ ಆ ರಾಷ್ಟ್ರಗಳು ವೃಥಾಗೊಂದಲವನ್ನೆಬ್ಬಿಸಿವೆ. ಈ ಗೊಂದಲ ವೆಬ್ಬಿಸಿರುವವರಿಗೆ ಸಮಸ್ಯೆಯ ಪರಿಹಾರ ಬೇಕಾಗಿಲ್ಲ ಅದನ್ನು ಇನ್ನೆಷ್ಟು ಹೆಚ್ಚಿಸುವುದೇ ಅವರ ಉದ್ದೇಶ.

ಕಾಶ್ಮೀರದ ಜನರ ನಿಜವಾದ ಹಿತಗಳನ್ನು ಸೆಕ್ಯೂರಿಟಿ ಕೌನ್ಸಿಲ್ಲು ಗಮನಕ್ಕೆ ತಂದುಕೊಳ್ಳದೆ ಹೋದರೆ, ಅದು ಭಾರಿ ತಪ್ಪನ್ನು ಮಾಡಿದಂತಾಗುವುದು. ಪ್ಲೆಬಿಸೈಟ್ ಯೋಚನೆ ಒಂದು ಪಕ್ಷ ತಿರಸ್ಕರಿಸದೆ ಹೊರಗಡೆ ಕೈವಾಡವಿರುವ ಪ್ಲೆಬಿಸೈಟ್‌ನಿಂದ ಪರಿಸ್ಥಿತಿ ವಿಷಮಗೊಳ್ಳುವುದು ನಿಜ.

ಪ್ಲೆಬಿಸೈಟ್ ನಡೆಸಬೇಕೆಂದು ನಿರ್ಣಯದಲ್ಲಿ ಸೇರುವುದರಲ್ಲಿ ಅರ್ಥವಿಲ್ಲ. ಅಕ್ರಮಣವನ್ನು ಎದುರಿಸಲು, ಆಂತರರಾಷ್ಟ್ರೀಯ ಶಾಂತಿಯನ್ನು ಕಾಪಾಡಲು ಮಾತ್ರ ಪ್ರಪಂಚ ಸಂಸ್ಥೆಯ ಸೈನ್ಯವನ್ನು ಬಳಸಲು ಪ್ರಪಂಚಸಂಸ್ಥೆ ಪ್ರಣಾಳಿಕೆಯ ಪ್ರಕಾರ ಅವಕಾಶ ಇದೆಯೇ ಹೊರತು ಬೇರೆ ಯಾವಕಾರ್ಯಕ್ಕೂ ಅದನ್ನು ಬಳಸಲು ಅನುಮತಿಇಲ್ಲ.

ಕಾಶ್ಮೀರದಲ್ಲಿ ಬಲಾತ್ಕಾರದಿಂದ ಪ್ಲೆಬಿಸೈಟ್ ನಡೆಸಲು ಪ್ರಪಂಚ ಸಂಸ್ಥೆಯ ಸೈನ್ಯವನ್ನು ಬಳಸಲು ಪ್ರಪಂಚ ಸಂಸ್ಥೆ ಪ್ರಣಾಳಿಕೆಯಲ್ಲಿ ಅವಕಾಶವಿಲ್ಲ. ಆದರೆ ಪ್ರಪಂಚ ಸಂಸ್ಥೆಯ ಸೈನ್ಯವನ್ನು ಕಾಶ್ಮೀರಕ್ಕೆ ಕಳಿಸಿದರೆ ಅದು ಪ್ರಣಾಳಿಕೆಗೆ ವಿರುದ್ಧವಾಗುತ್ತದೆ. ಮತ್ತು ಕಾಶ್ಮೀರದ ಜನತೆಗೆ ಪರಮವಿರುದ್ಧವಾದ ಕ್ರಮವಾಗುತ್ತದೆ.

ಸಂಸ್ಥೆಗೆ ಸಂಬಂಧಿಸಿದ ಕಕ್ಷಿಗಳು ತಾವು ತಾವೇ ಹೊರಗಿನವರ ಕೈವಾಡವಿಲ್ಲದೆ, ಸಂಧಾನ ನಡೆಸಲು ಇರುವ ಅವಕಾಶಗಳನ್ನೆ ಮುಗಿಸಿಬಿಟ್ಟ ಈಗಿರುವ ಪರಿಸ್ಥಿತಿಯನ್ನು ಮತ್ತು ಇರುವ ಭಿನ್ನಾಭಿಪ್ರಾಯಗಳನ್ನು ಸರಿದೂಗಿಸಲು ಇರುವ ಸಾಧ್ಯತೆಯನ್ನು ಪರಿಶೀಲಿಸಲು ಕೌನ್ಸಿಲ್ಲಿನ ಅಧ್ಯಕ್ಷರು ಸೂಕ್ತ ಯೋಗ ಹೊಗದೇಕೆಂಬುದೇ ನಿರ್ಣಯದ ಉದ್ದೇಶವಾಗಿದ್ದರೆ, ಅದಕ್ಕೆ ಯಾರ ಆಕ್ಷೇಪಣೆಯೂ ಇಲ್ಲ. ಆದರೆ 1 ಕಕ್ಷಿಯ ಆಕ್ಷೇಪಣೆಗೆ ಗುರಿಯಾಗುವಂತಹ ಸಲಹೆಗಳನ್ನಿಟ್ಟು ಜಾರಿಂಗ್‌ರ ಕೈಕಟ್ಟಿ ಹಾಕುವುದು ಸರಿಯಲ್ಲ.

ಇಂಥ ಆಕ್ಷೇಪಣೆಗಳಿಗೆ ಕಾರಣವಾಗಿರುವ ಭಾಗಗಳನ್ನು ನಿರ್ಣಯದಿಂದ ತೆಗೆದು ಹಾಕುವುದೇ ರಷ್ಯಾದ ನಿರ್ಣಯದ ಉದ್ದೇಶ. ಈ ತಿದ್ದುಪಡಿಗಳ ಅಶಯವನ್ನು ನಿರ್ಣಯದಲ್ಲಿ ಅಡಕಮಾಡುವ ವಿಚಾರದಲ್ಲಿ ನಿರ್ಣಯವನ್ನು ತಂದಿರುವ ದರ ಜೊತೆಗೆ ಚರ್ಚಿಸಲು ನಾನು ಸಿದ್ಧನಾಗಿದ್ದೇನೆ. ಎಂದು ಸೊಬೊಲೆವ್ ವ್ಯಕ್ತಪಡಿಸಿದರು.

ಇಲ್ಲಿದೆ ಪ್ರಥಮ ಸ್ವಾತಂತ್ರ ಸಂಗ್ರಾಮ!

ಬ್ರಿಟಿಷ್ ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ಪತ್ರಕರ್ತರಿಗೆ ಕಳೆದ ವರ್ಷ ಸ್ವಾತಂತ್ರ್ಯದ ಹೋರಾಟವನ್ನು ಸೈನಿಕರ ದಂಗೆಯಾಯ್ತು, ಸೈನಿಕರ ದಂಗೆ ಎಂದು ಹೆಸರಿಸಿದ ವಿಷಯ ಬಹುಮಟ್ಟಿಗೆ ಜ್ಞಾಪಕಕ್ಕೆ ಬರುತ್ತದೆ. ಸ್ವಾತಂತ್ರ್ಯದ ದಾಹ ಬೇಕೆಂತಲೆ 1857 ರ "ಬಂಡಾಯ" ನಮ್ಮ ಪ್ರಥಮ ಸ್ವಾತಂತ್ರ್ಯ ಹೋರಾಟ ಎಂದು ನಾವು ಕರೆಯಲಾರಂಭಿಸಿದೆವಲ್ಲದೆ. ನಮ್ಮ ಹಾಗು ಹಾಹಿಗಳ ಕೋಪಕ್ಕೆ ದಬ್ಬಾಳಿಕೆಗಳ ಉರುಳು ಶಂಕ್ರಗಳ ಪರಿಚಯವೂ ಪ್ರಮುಖವಾಯಿತು.

— ಸಾಮೂಹಿಕ ಸಂಗ್ರಾಮ —

1857 ರ ಸಂಗ್ರಾಮ ದಂಗೆಯಲ್ಲ ಬಂಡಾಯ ವೆಲ್ಲ, ಕ್ರಾಂತಿಯಲ್ಲ, 'ಜೇಹಾದ್' ವೂ ಅಲ್ಲ. ಸಿಪಾಯಿಗಳ ಬಂಡಾಯವೂ ಅಲ್ಲ. ಬ್ರಿಟಿಷರನ್ನು ಭಾರತದಿಂದ ಹೊರದಬ್ಬಲು ನಡೆದ ಸಾಮೂಹಿಕ ಪ್ರಯತ್ನದ ಕದನ ಸ್ವಾತಂತ್ರ್ಯಸಂಗ್ರಾಮ. ಇಡೀ ದೇಶದೇ ಒಬ್ಬ ನಾಯಕನ ನೇತೃತ್ವ ನಾಗರೀಕರನ್ನೇ ಅಲ್ಲ, ಬ್ರಿಟಿಷ್ ಪಡೆಯಲ್ಲಿನ ಸೈನಿಕರೂ ಕದನದ ಕಹಳೆಯನ್ನು ಊದಿದರು. ಅದೊಂದು ಸಾಮೂಹಿಕ ಸಂಗ್ರಾಮ.

— ವ್ಯವಸ್ಥಿತ ಕದನ —

ನಾಯಕತ್ವವಿಲ್ಲದ, ವ್ಯವಸ್ಥಿತ ಬಂಡಾಯವಲ್ಲವಿದು. ಭಾರತದ ಉದ್ದಕ್ಕೂ ಈ ಹೋರಾಟ ನಡೆಯಿತು. ಉತ್ತರ ಭಾರತದಲ್ಲಿ ಧೀರರಾದ, ಸಮರ್ಥರಾದ ನಾಯಕರು ಈ ಹೋರಾಟದ ನೇತೃತ್ವವನ್ನು ವಹಿಸಿದ್ದರು. ಜನರ ಆಡಳಿತವನ್ನು ಸ್ಥಾಪಿಸುವುದಕ್ಕಾಗಿ ಜನರಿಗಾಗಿ ಜನರು ನಡೆಸಿದ ಜನರ ಸಂಗ್ರಾಮವಿದು. ಪ್ರಜಾ ಪ್ರಭುತ್ವದ ಸ್ಥಾಪನೆಗಾಗಿಯೇ ನಡೆದ ಪ್ರಜೆಗಳ ಸಂಗ್ರಾಮ. ಹಿಂದೂ-ಮುಸ್ಲಿಮರಲ್ಲಿ ಮತ್ಸರವಿರಲಿಲ್ಲ ಮೊಗಲ್ ನಾಯಕರಲ್ಲೂ, ಪೇಷ್ವೆಗಳಲ್ಲೂ ಪ್ರಧಾನ ಇರಲಿಲ್ಲ. ಸಾಮೂಹಿಕ ಐಕ್ಯತೆ ಇದ್ದಿತು ಮುಖ್ಯ ಉದ್ದೇಶ ಹೋರಾಟ ವಾಗಿದ್ದಿತು.

— ಸಂಗ್ರಾಮದ ದಾಖಲೆಗಳು —

ಇದಕ್ಕೆ ಸಾಕ್ಷಿಯಾಗಿ 1 ಸಂಗತಿಯನ್ನು ಜ್ಞಾಪಿಸಿಕೊಳ್ಳಬಹುದು. ಇಂಗ್ಲಿಷ್ ಪತ್ರಿಕೋದ್ಯಮಿಯೂ ಆದ ವೀಯಂ ಹಾವರ್ಡ್ ರಸೆಲ್ 1858–1859 ರಲ್ಲಿ ಭಾರತಕ್ಕೆ ಭೇಟಿ ಕೊಟ್ಟಾಗ ತನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದಾನೆ: "ಇದೊಂದು ಕರ್ತವ್ಯದ ಕದನ. ಇದು ಬಹು ಸಂಖ್ಯಾತರ ಸಂಗ್ರಾಮ ವಿದೇಶೀ ನೊಗವನ್ನು ಕಳಚಿ ಹಾಕಲು ಮೇಲೆದ್ದ ಸಿಡಿನ ಹೋರಾಟ. ಇದು ಜನತೆಯ ದೃಢ ಸಂಕಲ್ಪ ತಾಪ್ಯದ ಪ್ರಮಾಣದಿಂದ ವ್ಯಕ್ತಗೊಳಿಸಲ್ಪಟ್ಟಿದ್ದು. ಜನ ಭಾವಿಸಿದಂತೆ ಒಂದೇ ತಾತ್ಪುರದಿಯಲ್ಲಿ ಸೇರಲಿದೆಯೆಂತ ಅಷ್ಟೆ."

(ಮುಂದಿನ ಪುಟಕ್ಕೆ)

(ಹಿಂದಿನ ಪುಟದಿಂದ)

— ಕದನದ ಕರೆಗಳು —

ಇವನ್ನು ಪಾತ್ರಿಗೊಳಿಸಲು ಬೇಕಾದ ಇನ್ನೂ ಕೆಲವು ಸಾಕ್ಷಿಗಳೆಂದರೆ ಆಗ ಹೊರಡಿಸಲ್ಪಡುತ್ತಿದ್ದ ಘೋಷಣೆಗಳು ಯಾವ ಅಸ್ಪಷ್ಟತೆಯು ಇಲ್ಲದ ಈ ಪ್ರಥಮ ಘೋಷಣೆಯನ್ನು ನೋಡಿ "ಕರ್ತವ್ಯ ನಿಷ್ಠರಾದ ಭಾರತದ ನಾಗರೀಕರೇ, ನಮ್ಮ ಪವಿತ್ರ ಭೂಮಿಯಿಂದ ಶತ್ರುವನ್ನು ಓಡಿಸಲು ನಾವು ದೃಢ ನಿರ್ಧಾರಮಾಡಬೇಕು ಅನ್ಯರ ಆಡಳಿತ ಬೇಡಿಗಳಿಂದ ಬಂಧಿಸಲ್ಪಟ್ಟಿರುವ ನಮ್ಮ ಧರ್ಮವನ್ನು ಮತ್ತು ರಾಷ್ಟ್ರವನ್ನು ರಕ್ಷಿಸಬೇಕು."

ಘೋಷಣೆಗಳನ್ನೆಲ್ಲ ಏಯಿಲನ್ಸ್ (Ailans) ಎಂಬೇ ಕರೆಯಲಾಗುತ್ತಿತ್ತು. ಈ ಏಯಿಲನ್ಸ್‌ಗಳು ಲಂಡನ್ ಹಾಗೂ ಭಾರತದಲ್ಲೆಯ ದಸ್ತರು ಖಾನೆಗಳಲ್ಲಿ ಬೊರೆತಿವೆ. ಇನ್ನೆಂದು ಘೋಷಣೆ ಎಚ್ಚರವಾಗಿ! ಸ್ವಾತಂತ್ರ್ಯ ಪೆಂಬುದು ದೇವರು ಎಲ್ಲರಿಗೂ ಇತ್ತ ಮಹಾಕೊಡೆ! ಇನು ಸರ್ವ ಶಕ್ತನಾದ ದೇವರು ವಿಧಿಸಿದ ಕಠಿಣ ಪರೀಕ್ಷೆ ಮೇಲು-ಕೀಳು, ಬಡವ-ಬಲ್ಲಿದರೆಲ್ಲರೂ ಯಾವುದೇ ಧಾರ್ಮಿ ಜಿಲ್ಲೆರಿತನಗಳನ್ನೆಲ್ಲ ಮರೆತು ಮಾತೃಭೂಮಿ ವಿಮೋಚನೆಗಾಗಿ ಒಂದಾಗುವ ತ್ಯಾಗ ಕೋರಿಸಬೇಕು. ಅದ್ದರಿಂದ ಸೊಂಟಕಟ್ಟಿ ಏಳಿ!"

— ಮಾತೃವಾಂಶ ತಿಳಿದ ಬ್ರಿಟಿಷರು —

ಬ್ರಿಟಿಷ್ ಇತಿಹಾಸಕಾರರು ಈ ಎಲ್ಲ ವಾಸ್ತವಿಕ ಅಂಶಗಳನ್ನು ಬಚ್ಚಿಟ್ಟು ಹಿಂದಿಯ ನೆಲ ಸವಸಿದ ಗೋಲಿಗಳು ರೈಲ್ವೆ ಟೆಲಿಗ್ರಾಫ್‌ಗಳ ಆರಂಭ ಇತ್ಯಾದಿಗಳಿಂದ ಅಶಾಂತಿ ಹುಟ್ಟಿತೆಂದು ಸುಳ್ಳು ಹಾಗು ಮೂರ್ಖತನದ ಕಾರಣಗಳನ್ನು ಕೊಟ್ಟು ಬಣ್ಣಿಸಿದ್ದಾರೆ- ಇಂಥಾ ಕಾರಣಗಳಿಂದಲೇ ಮಾತೃ ಬಂಧು ಬಲಿಷ್ಠ ವಿದೇಶಿ ಆಡಳಿತವನ್ನು ಗದಗದನೆ ನಡುಗಿಸುವುದು ಸಾಧ್ಯವಿದೆ ಎಂಬುವನ್ನು ಎಂಥ ಮನುಷ್ಯನೂ ಹೇಳಬಲ್ಲನಲ್ಲನೇ? ಭಾರತವ ಉದ್ದಗಲಕ್ಕೂ ಹರಿದಾಡುತ್ತಿದ್ದ ಚೈತನ್ಯವನ್ನು ಅಲ್ಪವಾಗಿ ಬ್ರಿಟಿಷರು ಅಲ್ಪವಾಗಿ ಅರಿತಿದ್ದರು. ಭಾರತದ ಬಿಳಿ ಅಶಾಂತಿಯ ನಿಜವಾದ ಕಾರಣಗಳನ್ನು ಆ ಬಳಿಕ ಅವರು ತಿಳಿದಿದ್ದರೂ ಸಂಪೂರ್ಣ ತಪ್ಪಾಗಿಯೇ ತಿಳಿದರು.

ಸ್ವಾತಂತ್ರ್ಯದ ಚೈತನ್ಯ ದೇಶದಲ್ಲಿ ಕಾಲೂರಿ ನಿಂತಿತ್ತು. ಎಲ್ಲಾ ತೆರದ ದಾಸ್ಯಗಳನ್ನು ಕಿತ್ತಿಸ್ತಾಗೆದು ಸುಖ—ಶಾಂತಿ—ಸ್ವಾತಂತ್ರಗಳನ್ನು ಹೊಂದಲಿಚ್ಛಿಸಿದ ಜನರಿಗೆ ಸಂಗ್ರಾಮದ ವಿನಃ ಬೇರೆ ದಾರಿಯೇ ಇರಲಿಲ್ಲ. ಇಂಥ ಸಂಧರ್ಭದಲ್ಲೇ ಒಂದಾ ರಾಷ್ಟ್ರ ಬಿರುಗಾಳಿ ಭೋರ್ಗರೆಯುವುದು. ಹಾಗೆಯೇ ಆರಂಭವಾದುದು ನಮ್ಮ ಪ್ರಥಮ ಸ್ವಾತಂತ್ರ್ಯದ ಕದನ.

ಇದಕ್ಕೆಂತಲೂ ಸ್ಪಷ್ಟವಾದ ದಾಖಲೆಗಳು ದೊರೆತಿವೆ 1757 ರಲ್ಲಿ ನಡೆದ ಪ್ಲಾಸೀ ಕದನ- ಇತಿಹಾಸಿಕ ಸಂಗ್ರಾಮ. ಬ್ರಿಟಿಷರ ಹಿಡಿಬರಹವನ್ನೇ ಬರೆಯಿತ್ತು ಈ ಕಾಳಗದ ಶತವರ್ಷೋತ್ಸವನ್ನು ಆಗ ಆಚರಿಸಿ ಜನ ದಾಸ್ಯದ ಎಂತಹ ಪ್ರಪಾತಕ್ಕೆ ಬಿದ್ದಿದ್ದಾರೆ ಎಂದು ನೆನಪಿಸಿ ಕೊಡಲಾಯಿತ್ತಲ್ಲದೆ ಸ್ವಾತಂತ್ರ್ಯ ಹೋರಾಟದ ಜ್ವಾಲೆಯನ್ನು ಜೀವಂತಗೊಳಿಸಲಾಯಿತು. ಹೊರಗಿನ ಜನ ಬೆಂಬಲವಿಲ್ಲದೆಯೇ ಕೇವಲ ಸಿಪಾಯಿಗಳೇ ಮಾತ್ರ ಇಂಥ ಬಂಡಾಯವನ್ನು ನಡೆಸಲು ಸಾಧ್ಯವಿತೆಯೇ?

ಪ್ಲಾಸೀ ಕದನದಲ್ಲಿ, ಕದನದಿಂದ ಭಾರತೀಯರು ಬಲು ಕಟುವಾದ ಫಲಗಳನ್ನುಣ್ಣಬೇಕಾಯಿತು. ಇದು ತೋರಿಸಿದ ಭೋರತೀಯರ ದುರ್ಬಲ ಅಸಹಕಾರತನಿಂದ ಅಂತೆಯೇ ಅವರ ಪ್ರತೀಕಾರ ನೂರು ವರ್ಷಗಳ ಪರಿಗೂ ಜೀವಂತವಾಗಿದ್ದು 1857 ರಲ್ಲಿ ಪೆಟ್ಟುನೊದಲನೆಯದಾಗಿ ಅಸ್ಫೋಟಿಸಿತು.

ಈ ಸಂಗ್ರಾಮ ಸುವ್ಯವಸ್ಥಿತ ಯೋಜನೆಯೇ ಆಗಿತ್ತೆಂಬುದು ಸ್ಪಷ್ಟ. 1857 ಮಧ್ಯದಲ್ಲಿನ ಗರೀಕರಿಗಾಗಿ ಮುಲ್ಲಿಆಧಿಕಾರಿಗಳಿಗಾಗಿ ಚಪಾತಿ, ಕೆಲ್ಸ್ ಮುಂತಾದುವನ್ನು ಊರಿಂದೂರಿಗೆ ಕಳುಹಿಸಿಕೊಡಲಾಗುತ್ತಿತ್ತು. ಸ್ಟಿಸ್ ಫ್ಲವರ್ಸ್‌ಗಳನ್ನು ಸೈನಿಕರಿಗಾಗಿ ಸರಬರಾಜು ಸಲಾಗುತ್ತಿತ್ತು. ಕೋಟಿ ಕೋಟಿ ಜನರು, ಕೈಸಿಕಾರು ಸನ್ನಿಹಿತವಾಗಿರುವ ಸನುರವ ಸಂದೇಶಗಳನ್ನು ಈ ಮುಖಾಂತರ ಪರಸ್ಪರರು ತಿಳಿಯುತ್ತಿದ್ದರು. ಮಧ್ಯ ಭಾರತದ ಜನ ಹಣೆಗೆ ಕುಂಕುಮವನ್ನು ಧರಿಸುತ್ತಿದ್ದರು. ರಹಸ್ಯ ಸಂದೇಶ ರವಾನಿಸುವವರ ಸಂಕೇತವಾಗಿತ್ತು. ದೇಶ ವಿನೋಚನೆಯ ಲಕ್ಷಣವೂ ಆಗಿದ್ದಿತು ಭಾರತೀಯನಿಗೆ ಅದರರ್ಥ ತಾಯಿ, ಮಾತೃಭೂಮಿ ಭಾರತ, ಕಾಳೀದೇವಿ, ಲಕ್ಷ್ಮೀದೇವಿ ಎಲ್ಲವೂ ಎಂದಿತ್ತು! ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ ಅನರ್ಥ ಕಾರಿಯಾನಾಡಿನ ವಿಮೋಚನೆಗೆ ರಕ್ತ ಅಗತ್ಯವಾದುದು ಎಂದು "ನನಗೆ ರಕ್ತಕೊಡಿ, ನಿಮಗೆ ಸ್ವಾತಂತ್ರ್ಯಕೊಡುವೆ" ಎಂಬ ನೇತಾಜಿಯ ವಾಣಿಯನ್ನು ಈ ಸಂಧರ್ಭದಲ್ಲಿ ನೆನಪಿಸಿ ಕೊಳ್ಳಬಹುದು.

ಸಂಚಾರ ಸೌಕರ್ಯ, ಸಂದೇಶ ರವಾನೆಯ ಅನುಕೂಲತೆ ಇಲ್ಲದಿದ್ದರೂ 1857 ರ ಭಾರತದ ನಾಯಕರು ಯಶಸ್ವಿಯಾದ ವಿಧಾನಗಳನ್ನೇ ಅನುಸರಿಸಿದ್ದರು. ನಿಗೂಢ ಗುರುತಿನ ಯನ್ನು ತಲುಪಿಸಿದ್ದರು. ನಿಷ್ಪ್ರಯೋಜನವಾದ ಈ ಸಂಕೇತಗಳೊಡನೆ ಭಾರತದ ಜನತೆ ರಾಷ್ಟ್ರೀಯ ಹಳೆಗೆ ತಕ್ಕಂತೆ ಹೆಜ್ಜೆ ಹಾಕಿತು. ಈ ಸಂಕೇತಗಳನ್ನೆಲ್ಲಿಂದಾದು ಕಂಡು ಹಿಡಿದರೆಂಬುದು ಇಂದಿಗೂ ರಹಸ್ಯವೆ.

ಈ ಸಂಗ್ರಾಮದ ಪ್ರಥಮ ಗೌರವ ಬಂಗಾಲಕ್ಕೆ ಸೇರುತ್ತದೆ. ಜನವರಿ 29ರ 1857 ರಂದು ಮೊದಲ ಗುಂಡು ಬಂಗಾಲದಲ್ಲಿಯೆ ಸಿಡಿಯಿತು. ಇಡೀ ದೇಶವೇ ಭುಗಿಭುಗಿಲೆಂದೆದ್ದಿತು 'ದಂಡಿ' ಹೆಸರು ವಂತ್ರವಾದಿಯಂತಿದ್ದು ಸ್ವಾತಂತ್ರ್ಯದ ಪ್ರಥಮ ಕದನ ಅಲ್ಲಿಯೆ ಬೆಳಗಿತು.

(ಜಿಜ್ಞಾಸುಪ್ತ)

ಬಳ್ಳಾರಿ ಜಿಲ್ಲೆಯಲ್ಲಿ

ಚುನಾವಣೆಗಳು

25—2—57 ರಂದು ಗೋಡು ಮತ್ತು ಕಂಪಗಾನಳ್ಳಿ ಕ್ಷೇತ್ರಗಳಲ್ಲಿ 28-2-57 ನೆಯ ಗುರುವಾರ ಒಳಪಟ್ಟ ಸಂಡೂರು ಕ್ಷೇತ್ರಗಳಲ್ಲಿ, 2—3—57 ರಂದು ನಾಂಕ, ಕೂಡ್ಲಿಗಿ, ಹೊಸಪೇಟೆ ಕ್ಷೇತ್ರದಲ್ಲಿ 4—3—57 ರಲ್ಲಿ ಹೊಸಪೇಟೆ ಕ್ಷೇತ್ರದಲ್ಲಿ ಚುನಾವಣೆ ನಡೆಯಿತು. ಎಲ್ಲಿಯೂ ದುರ್ಘಟನೆಗಳಾಗಲಿಲ್ಲ. ಅಧಿಕಂತಲೂ ಹೆಚ್ಚಿನ ಮತದಾರರು ಎಲ್ಲ ಕ್ಷೇತ್ರಗಳಲ್ಲಿ ಮತದಾನ ಮಾಡಿದ್ದಾರೆ.

ಗುಂಪುಗಳ-ವಿವಿಧ ಜಾತಿಗಳ ನಾಯಕರ ವರ್ಚಸ್ಸನ್ನೆಲ್ಲ ಉಪಯೋಗಿಸುವುದರ ಜೊತೆಗೆ— ಹಣದಿಂದ ಮತ ಪರಿವರ್ತನೆಯನ್ನೊಲಿಸುವ ಕೆಲಸವೂ ಚನ್ನಾಗಿ ನಡೆಯಿತು. ಕಾಂಗ್ರೆಸ್ ಸಂಸ್ಥೆಯ ಕಡೆಯಿಂದ ಅಗಬೇಕಾದಷ್ಟು ಪ್ರಜಾಪ್ರಾಬಲ್ಯ ಇಲ್ಲ.

ಕಾಂಗ್ರೆಸ್ ವಿಜಯ

ಶ್ರೀ ಬಿ. ಇ ರಾಮಯ್ಯನವರು

ಸಿರುಗುಪ್ಪೆ ಕ್ಷೇತ್ರದಿಂದ ಪ್ರಸಪಾಪಕ್ಷದ ಶ್ರೀ ರೇವಣಸಿದ್ದಯ್ಯನವರನ್ನು ಸುಮಾರು 8000 ಸಾವಿರ ಹೆಚ್ಚು ಮತಗಳಿಂದ ಸೋಲಿಸಿದರು

ಶ್ರೀಮತಿ ಅಲ್ಲಂ ಸುಮಂಗಳಮ್ಮನವರು (ಕಾಂಗ್ರೆಸ್) ತಮ್ಮ ಪ್ರತಿಸ್ಪರ್ಧಿ ಶ್ರೀ ಕೆ. ದೊಡ್ಡಬಸಪ್ಪನವರನ್ನು 5000 ಹೆಚ್ಚು ಮತಗಳಿಂದ ಸೋಲಿಸಿದರು.

ಕಾಂಗ್ರೆಸ್‌ಗೆ ಸೋಲು

ಬಳ್ಳಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಉಮೇದುವಾರರಾದ ಶ್ರೀ ಅಬ್ದುಲ್ ರಜಾಕ್ ಸಾಹೇಬರವರು-ಸ್ವತಂತ್ರವಾದ ಶ್ರೀ ಮುಂ. ಗಂಗಪ್ಪನವರಿಂದ ಸೋಲಿಸಲ್ಪಟ್ಟರು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಟೈಫಾಯ್ಡ್, ಮಲೇರಿಯಾ, ಮತ್ತು
ಎಲ್ಲ ರೋಗಗಳಿಗೆ ದಿವ್ಯೌಷಧ

ಕಾಶ್ಮೀರ ಅರುಕ್

ಲೇಪನ, ಸೇವನ - ಎಂದೂ ಸಾಧ್ಯ
ಎಲ್ಲಾ ಔಷಧಾಲಯಗಳಲ್ಲೂ ದೊರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್. ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಆಹಾರಯುಕ್ತ ರಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಬಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಇ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ
ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„,— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಜೆಲೆ 2 8-0)
ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ ೩
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಪತ್ರಿಕಾತ್ಮಕ ಕಹಾನಿ
ಹಿಂದೀರಚನೆ ೨
ಪತ್ರಲೇಖನ
(ಸೆಟ್ ಜೆಲೆ 4-4-0)
ಇತರ ವಿವರಗಳಿಗೆ ಸ್ಟ್ಯಾಂಪ್ಸು ಅಥವಾ
ರಿಪ್ಲೈಕಾರ್ಡ್ ಬರೆಯಿರಿ.
ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಯಾವ ಪ್ರತಿಕಾರವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಚೈತನ್ಯ

ಸೋಮವಾರ ಮಾರ್ಚಿ 11–3–1957

ವರ್ಷ 20 ಸಂಚಿಕೆ –20	ಬ್ಯಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ಪಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!	ಸಂಪಾದಕ ಮತ್ತು ಪ್ರಕಾರ್ತ I. ಬಿ. ಕೇಶವರಾವ್



ಹೊಳೆಯುವ ನಾಣ್ಯಗಳು

ವಿಪ್ರೀಲ್ ಸೋಮವಾರದಿಂದ ಭಾರತದಲ್ಲಿ ಜಾರಿಗೆ ಬರುವ ಹೊಸ ನಾಣ್ಯಗಳು.

ಹಳೆಯ ನಾಣ್ಯಗಳೂ ಕೂಡ ಚಾಲಯಲ್ಲಿರುತ್ತವೆ. ಕ್ರಮೇಣ ಅವುಗಳ ಸ್ಥಾನವನ್ನು ಒಂತೆಗೆದುಕೊಳ್ಳಲಾಗುತ್ತದೆ. ಜನತೆಯು ಈ ಹೊಸ ನಾಣ್ಯಗಳನ್ನು ಅರಿಯಲು ತಿಳಿದು ವರ್ತಿಸಬೇಕು. ಅವ ಕೈಪಿಲ್ಲ ಕೋಷ್ಟಕಗಳು ತಯಾರಾಗಿವೆ.

1-0-0 ರೂಪಿ	100	ನಯಾ-ಪೈಸೆ
0-8-0 ಆಣೆಗೆ	50	,,
0-4-0 ಆಣೆಗೆ	25	,,
0-3-0 ,,	19	,,
0-2-0 ,,	12	,,
0-1-0 ,,	6	,,

— ಅಕ್ರಮ - ಯಾ - ಲಂಚದ ಅರ್ಜಿಗಳು —

ಸರ್ಕಾರದ ಪ್ರಕಟಣೆ

ಲಂಚ ಅಥವಾ ಇತರ ಅಕ್ರಮಗಳ ಆರೋಪಣೆಗಳನ್ನೊಳಗೊಂಡ ಅರ್ಜಿಗಳನ್ನು ಸರ್ಕಾರಕ್ಕಾಗಲಿ ದಕ್ಷತಾ ಲೆಕ್ಕ ತನಿಖೆಯ ವಿಶೇಷ ಅಧಿಕಾರಿಗಳಿಗಾಗಲಿ ಕಳುಹಿಸುವ ಅರ್ಜಿದಾರರು ತಮ್ಮ ಅರ್ಜಿಗಳ ಪ್ರತಿಗಳನ್ನು ಇತರ ಅನೇಕ ಕಛೇರಿಗಳಿಗೂ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕಚೇರಿಗಳಿಗೆ ಯಾವ ಮೇಲೆ ಇಂಥ ಆರೋಪಣೆಗಳು ಇರುತ್ತವೆಯೊ ಆ ರೀತಿ ಪ್ರವೇಶವಿರುವ ಸಂಭವವಿರುವುದರಿಂದ ಅವರು ಈ ಪ್ರತಿಗಳ ಮುಖಾಂತರ ತಮ್ಮ ಮೇಲಿನ ಆರೋಪಣೆಗಳನ್ನು ಮುಂದಾಗಿಯೇ ತಿಳಿದುಕೊಂಡು ವಿಚಾರಣೆಗೆ ಅವಶ್ಯಕವಿರುವ ಉಪಯುಕ್ತ ಮಾಹಿತಿಯನ್ನು ಅತಿಸುಲಭವಾಗಿ ಸಂಬಂಧಪಟ್ಟ ಪಕ್ಷದವರಿಂದ ಪಡೆಯಲು ಸಾಧ್ಯವಿದೆ. ಆದ್ದರಿಂದ ಮೇಲ್ಕಂಡ ಹಾಗೂ ವಿಚಾರಣೆಗಾಗಿ ಮೂರು ಕೂಟ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳಿಗಾಗಲಿ ದಕ್ಷತಾ ಲೆಕ್ಕ ತನಿಖೆಯ ವಿಶೇಷ ಅಧಿಕಾರಿಗಳಿಗಾಗಲೀ ಕಳುಹಿಸಬೇಕೇ ಹೊರತು ಅವರ ಪ್ರತಿಗಳನ್ನು ಇತರ ಕಛೇರಿಗಳಿಗೆ ಕಳುಹಿಸಕೂಡದೆಂದು ಸಲಹೆ ಮಾಡಲಾಗಿದೆ. ಇದರಿಂದ ಅರ್ಜಿಯಲ್ಲಿಯ ವಿಷಯಗಳನ್ನು ವಿಚಾರಣೆಯಿಂದ ಸ್ವಗತಿಸುವವರೆಗೆ ಸಾಧ್ಯವಿದ್ದಷ್ಟು ಗುಪ್ತವಾಗಿರಲು ಅನುಕೂಲವಾಗುವುದು.

THE NEW BHARAT
ನವಭಾರತ
ಸಂಪಾದಕ-ಪಳ್ಳಿಕೇತವರಾವ್

ಸೋಮವಾರ ಮಾರ್ಚ್ 11-3-1957

— ಚುನಾವಣೆಗಳು —

— ಕಲಿಯಬೇಕಾದ ಪಾಠ —

ಭಾರತದಲ್ಲಿ ಚುನಾವಣೆಗಳೆಲ್ಲ ಮುಗಿದಂತಾಯಿತು. ಕೇರಳ ಮೊಂದು ಬಿಟ್ಟು ಮಿಕ್ಕ ಪ್ರಾಂತಗಳಲ್ಲೆಲ್ಲ, ಕಾಂಗ್ರೆಸ್‌ಗೆ ನಿಚ್ಚಳ ಬಹುಮತ ದೊರೆಯುವ ಸೂಚನೆಗಳಿವೆ. ಈ ಚುನಾವಣೆಯಿಂದ ಕಾಂಗ್ರೆಸ್ ಸಂಸ್ಥೆಯೂ, ಇತರ ಪಕ್ಷಗಳೂ ಕಲಿಯಬೇಕಾದ ಪಾಠಗಳಿಂತಿವು: ನಿರಕ್ಷರತೆಯು ಕಡಮೆಯಾಗುತ್ತಲಿದ್ದು, ಜನತೆಯಲ್ಲಿ ರಾಜಕೀಯ ಜ್ಞಾನವು ಬೆಳೆದಂತೆಲ್ಲ ಏಮರ್ಶೆ – ವಿಶೇಷವಾಗಿ ಚುನಾವಣೆಗಳು ಬೆಳೆಯುವ ಹಣದ ಲಾಲಸೆ, ಪ್ರಲೋಭನ, ಪ್ರತಿಭಟನೆಗಳ ಆಟಗಳು ನಡೆಯುವಂತಾಗುತ್ತವೆ. ಸಂಸ್ಥೆ, ತತ್ವಗಳ ಉಚ್ಚಮಟ್ಟ, ಕಾರ್ಯರೂಪಕ್ಕೆ ತರಬಹುದಾದ ಭದವಸೆ, ವಗೈರೆ ಜನರಿಗೆ ಮನದಟ್ಟಾಗಬೇಕು.

ಪಾಠಗಳು :—

೧) ಹಣದ ಬೆಂಬಲದಿಂದ ಬೇ ಚುನಾವಣೆಗಳನ್ನು ಗೆಲ್ಲಲು ಸಾಧ್ಯವಿಲ್ಲ —

ಕೆಲವು ಸಂದರ್ಭಗಳಲ್ಲಿ ಇದರಿಂದ ಅನುಕೂಲವಾಗುವುದರ ಬಗಲು ಕಡಿಮೆಯಾಗುತ್ತದೆ. ವಿಶ್ವಸ್ತರಾದ, ಸ್ವಾಭಿಮಾನಿಗಳೆಂತಿರುವ ಏಜಂಟರೇ ಬಹುಭಾಗವನ್ನು ನುಂಗಿ ನೀರು ಕುಡಿದು, ನಂತರ ಅಲ್ಪ-ಸ್ವಲ್ಪ ಭಾಗವನ್ನು ಹಂಚಲು ಯೋಚಿಸುವರು. ಆವರನ್ನು ಲೆಕ್ಕ ಕೇಳುವುದು ಬಾಯಿಲ್ಲ. ಇದು ಅತಿ ಸೂಕ್ಷ್ಮವಾದ ವಿಷಯ. ಜನರಲ್ಲಿ ಈ ಸಮಾಚಾರವು ಗೊತ್ತಾಯಿತೆಂದರೆ, ಹಣ ಗಳಿಸಲಾಗದ ಇತರ ಏಜಂಟರು ಮತ್ತು ಅಲ್ಪ-ಸ್ವಲ್ಪವೂ ದೊರೆಯದ ಬಹುಸಂಖ್ಯಾತ ವೋಟರರು, ದ್ವಿಗುಣಗೊಂಡ ತ್ವೇಷದಿಂದ ವಿರುದ್ಧವಾಗಿ ಕೆಲಸ ಮಾಡ ಹತ್ತುವರು. ಅಥವಾ ಹೆಚ್ಚುಭಕ್ಷಿಸಿದ ಏಜಂಟರಿಗೆ ಪಾಠ ಕಲಿಸಬೇಕೆಂದು ಹಣವನ್ನು ಪಡೆದ ಮತದಾರರೂ ವಿರುದ್ಧ ವೋಟು ಮಾಡುವರು.

೨) ಜಾತೀಯತೆಯಿಂದ ಗೆಲ್ಲಲು ಸಾಧ್ಯವಿಲ್ಲ —

'ನಾನು ನಿಮ್ಮ ಜಾತಿಗೆ ಸೇರಿದವನು, ನೀವು ಈ ಊರಿನ ಮುಖಂಡರು ನಿಮ್ಮ ಸ್ವತಿಭೆಯಿಂದ ನನಗೆ ವೋಟು ಕೊಡಿಸಿ' ಎಂಬ ಜಾತೀಯತೆಯ ಪ್ರಚಾರವು ನೀಚವಾದುದಷ್ಟೇ ಅಲ್ಲದೆ, ಇಂಥ ಜಾಗೃತಿಯ ಯುಗದಲ್ಲಿ ಅಂತಹ್ಯೇಯವೂ ಹೇಯವಾದುದು ಎಂಬುದನ್ನು ಚುನಾವಣೆಯಲ್ಲಿಳಿದ ಅಭ್ಯರ್ಥಿಗಳು ಮನಗಂಡಿರಲು ಸಾಕು. ಚುನಾವಣೆಯ ಸಂದರ್ಭದಲ್ಲಿ ಗೋಪೆಗಳಿಗೂ ಸೂಕ್ಷ್ಮವಾದ ತಿವಿಗಳಿರುತ್ತವೆ.

ಯಾವ ಕ್ಷೇತ್ರದಲ್ಲೂ ಒಂದೇ ಜಾತಿಯ ಜನಸಂಖ್ಯೆಯಿರುವುದಿಲ್ಲ. ಜಾತಿಯ ಅಭಿಮಾನ ತನ್ನ ಜಾತಿಯವರನ್ನು ಗೆಲ್ಲಿಸುವ ಆಕಾಂಕ್ಷೆ ಇತರೆ ಜಾತಿಗಳವರಲ್ಲಿ ತಿಳಿಯತೆಂದರೆ. ಅವರ ಒಟ್ಟು ಗೂಡಿ ಜಾತೀಯತೆಯ ಪ್ರಚಾರದ ಒಳಸಂಚನ್ನು ವಿಫಲಗೊಳಿಸುತ್ತಾರೆ – ಮಣ್ಣು ಮುಕ್ಕಿಸುತ್ತಾರೆ.

೩) ಸ್ವತಂತ್ರರಿಗೆ ಸ್ಥಾನವಿಲ್ಲ ಈ ಕಾರಣ ಗೆಲ್ಲಲು ಸಾಧ್ಯವಿಲ್ಲ

ಪ್ರಜಾತಂತ್ರ ಜಾರಿಯಲ್ಲಿರುವ ವಿಸ್ತಾರವಾದ ದೇಶಗಳಲ್ಲೆಲ್ಲ, ಪಕ್ಷಗಳ ನಿರ್ಮಾಣ, ಧ್ಯೇಯೋದ್ದೇಶ, ಪ್ರಣಾಲಿಗಳುಂಟು. ಅಲ್ಲಿ ಸ್ವತಂತ್ರರ ಸೊಲ್ಲಿಲ್ಲ. ಅದರೆ ಹಿಂದೂಸ್ಥಾನದಲ್ಲಿ ಮಾತ್ರ ಯಾವ ಕಡಿವಾಣವೂ ಇಲ್ಲದ 'ಸ್ವತಂತ್ರರು' ಕಲೆ ಎತ್ತುತ್ತಿರುವುದು ರಾಷ್ಟ್ರೀಯ ಪ್ರಕ್ಕೆ ವಿಘಾತಕರವಾದ ಅಂಶವಾಗಿದೆ. ಗೆದ್ದನಂತರ ಇವರು ಯಾರಿಗೂ ಜವಾಬ್ದಾರರಲ್ಲ. ಸ್ವತಂತ್ರರಾಗಿರುವುದೆಂದರೆ ತಮ್ಮಧನ ಮದ, ವ್ಯಕ್ತಿಯ ಸ್ವತಿಷ್ಠೆ-ಪ್ರತಿಭೆ ಇಷ್ಟೇ! ಇವರು ಎಷ್ಟೇ ಸಜ್ಜನರಿರಲಿ, ಪರೋಪಕಾರಿಗಳಿರಲಿ, ಸಚ್ಚರಿತರಿರಲಿ. ಬಲಾಢ್ಯವಾದ ಸರ್ಕಾರವನ್ನೊಡನೆ ಇವರು ಹೋರಾಡಲು ಅಸಮರ್ಥರೆಂದೂ, ಇವರಿಂದ ಯಾವ ಜನಹಿತ ಕಾರ್ಯಗಳೂ ಅಸಾಧ್ಯವೆಂದೂ ಮತದಾರರೆಲ್ಲ ಅರಿತಿದ್ದಾರೆ. ಸಾಮಾನ್ಯ ಜನತೆಯಲ್ಲ ಇವರು ಸ್ವಾರ್ಥಸಾಧಕರೆಂಬ ಹೆಸರು ಪಡೆದಿದ್ದಾರೆ.

೪) ಸಮರ್ಥ ಧುರೀಣರಿಲ್ಲದ ಪಕ್ಷಕ್ಕೆ ಬೆಂಬಲವಿಲ್ಲ —

ದ್ರಾವಿಡಕಜಗಂ, ಮುನ್ನೇಟ್ರಕಜಗಂ, ಕಾಂಗ್ರೆಸ್ ರಿಫಾರ್ಮ್ ಕಮಿಟಿ, ಲೋಕಸೇವಾಸಂಘ, ಸೋಶಿಯಲಿಸ್ಟ್ ಪಾರ್ಟಿ, ಕಿಸಾನ್ಸ್, ಜನಸಂಘ, ರಾಮರಾಜ್ಯ ಪರಿಷತ್, ಕಮ್ಯೂನಿಷ್ಟ್ ಪಾರ್ಟಿ ವಿಭಜಿತ-ಕೂಲಿಕಾರಪಾರ್ಟಿ ವಗೈರೆ ಎಷ್ಟೋ ಪಕ್ಷಗಳಿವೆ. ಅನೇಕ ಪಕ್ಷಗಳು ತಿಪ್ಪೆಯಲ್ಲಿ ಕೊಡೆ-ಗಿಡಗಳಂತೆ ಹುಟ್ಟಿ ಚುನಾವಣೆಯಲ್ಲಿ ಗಟ್ಟಿಬನಬ್ಬಿಸಿ ನಾಯಮಾಗುತ್ತಲಿವೆ. ಯಾವ ಪಕ್ಷಕ್ಕೇ ಆಗಲಿ ಜನಸೇವಾ ಕಾಂಕ್ಷೆಯಾದಿ ಸಮರ್ಥ ಧುರೀಣನ ಅಗತ್ಯವಿರುವುದು. ಕಾಂಗ್ರೆಸ್‌ನ ಶಕ್ತಿ ಎಂದರೆ ನೆಹರೂ, ಪ್ರಸಾದ, ಆ ಪಕ್ಷದ ರಂಥ ಸಮರ್ಥ ಧುರೀಣರಿಂದಲೇ.

ಭಿನ್ನ ಭಿನ್ನ ಪಕ್ಷಗಳಲ್ಲೇ ಸ್ವಾರ್ಥ ಕಾರಣಗಳಿಂದಾಗಿ ಅನೇಕ ಒಳಕಚ್ಚೆಗಳ ಸ್ಪೋಟವಾಗಿ ಪಕ್ಷಗಳ ಐಕ್ಯಮತ್ಯಕ್ಕೆ ಭಂಗ ಬರುತ್ತಲಿದೆ. ಪ್ರಜಾಸೋಶಿಯಲಿಸ್ಟ್ ಪಾರ್ಟಿಯಂತೂ ಸಿಡಿದೆದ್ದು, ಲೋಹಿಯಾರವರು ತಮ್ಮ ಪಕ್ಷವನ್ನೇ ಸೀಲ್ ಮಾಡಿಕೊಂಡರು. ಶ್ರೀ ಜಯಪ್ರಕಾಶರು ತಮ್ಮ ಪಕ್ಷವನ್ನೇ ತ್ಯಾಗಿಸಿ ಭೂದಾನಕ್ಕೆ ಹೊರಟು ಹೋದರು.

೫) ಕ್ಷೇತ್ರದಲ್ಲಿ ಜನಪ್ರಿಯರಾದವರನ್ನು ಆರಿಸದಿದ್ದರೆ ಜಯವಿಲ್ಲ-

ಫಲಾನಿ ಕ್ಷೇತ್ರದಲ್ಲಿ ಒಳ್ಳೆ ಸಂಖ್ಯಾಕರಿಗೆ ಬೇಕಾದವರನ್ನು ಆರಿಸದಿದ್ದರೆ ಜಯವನ್ನು ಗಳಿಸುವುದು ಸಂಭವ. ವ್ಯಕ್ತಿಗೆ ಹೊರವಲಯಗಳಲ್ಲಿ ಪ್ರತಿಷ್ಠೆ ಇದ್ದರೂ ತನ್ನ ಕ್ಷೇತ್ರದಲ್ಲೇ ಜನಪ್ರಿಯತೆಯಿಲ್ಲದಿದ್ದರೆ ಸೋಲಿಗೆ ಕಾರಣವಾಗುತ್ತದೆ. ವೈಜಾಗ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಸೋಲಿನಿಂದ ನಾವು ಪಾಠ ಕಲಿಯಬೇಕು.

(ಮುಂದಿನ ಪುಟಕ್ಕೆ)

[ಹಿಂದಿನ ಪುಟದಿಂದ]

ಹೊರಗಿನ ದೃಷ್ಟಿಗೀತಲೂ, ಕ್ಷೇತ್ರದಲ್ಲಿನ ಬಹು ಸಂಖ್ಯಾಕರ ಮನೋಭಾವನೆಯ ಗಾಳಿಯು ಎತ್ತಕಡೆಗಿದೆ ಎಂಬುದನ್ನು ನಿಸ್ಪಕ್ಷಪಾತವಾಗಿ ಹೇಳಬೇಕು. ಈ ಕಾರಣ ಚುನಾವಣೆಗಳ ಮೊದಲು ಅಣ್ಣಾ ಆನಂದನಹೆಸರಾಂತ ಜನರ ಭಾವನೆಯನ್ನು ರಿಯುವುದು ಒಂದು ಮಾರ್ಗ.

೬) ಸಂಸ್ಥೆಯ ಪ್ರಚಾರದ ಅವಶ್ಯಕತೆ ...

ಸಂಸ್ಥೆಯ ಧ್ಯೇಯ, ಧೋರಣೆ ಆದರ್ಶಗಳ್ಯಾ, ಆಗಬೇಕಾದ ಕಾರ್ಯಕ್ರಮಗಳಾಗಿ ಪ್ರಚಾರ ನಡೆಯಬೇಕು. ಅನೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸಂಸ್ಥೆಯ ಪ್ರಚಾರವನ್ನು ಪರ್ಲಕ್ಷಿಸಿತು. ಎಲ್ಲೆಲ್ಲಿ ಸರಿಯಾದ ಪ್ರಚಾರ ನಡೆಯಿತೋ ವಿರೋಧ ಪಕ್ಷಗಳ ಹಣ, ಪ್ರತಿಭೆ–ಪ್ರಲೋಭನಗಳಿಂದ ಜನ ವಿಚಲಿತವಾಗಿಲ್ಲ. ತತ್ವವಾಗಿ ಉಮೇದುವಾರರ ಹೆಸರುಗಳನ್ನು ನಿಶ್ಚಯಿಸಿದುದು, ಕಾಂಗ್ರೆಸ್ ಸಂಸ್ಥೆಯಲ್ಲಿ ಹೊಸದ ಅಭಿಮಾನವಿದು ಈ ಕಾರಣಗಳಿಂದ ವೃತ್ತ ಪತ್ರಿಕೆಗಳ ಹೊರತಾಗಿ ಯಾವ ಕ್ಷೇತ್ರದಲ್ಲೂ ಶಾಸ್ತ್ರಿಕರವಾದ ಪ್ರಚಾರವು ನಾಗಲಿಲ್ಲ. ಇದರಿಂದಾಗಿ ವಿರೋಧ ಪಕ್ಷಗಳವರಿಗೆ ಗೃಹವಾನುಕೂಲವು ದೊರೆಯಿತು.

ಜಯ ಹೊಂದಲು ಇನ್ನೂ ಕಣ್ಣು ಪುಟ್ಟ ಕಾರಣಗಳುಂಟು ವಿವರಿಸು– ಕಾರ್ಯಕರ್ತರನ್ನು ಸರಿಯಾಗಿ ನಡೆಸಿಕೊಳ್ಳಬೇಕು. ಚುನಾವಣೆಯ ಕಾಲದಲ್ಲಾದರೂ, ಕಠಿಣ ಶಬ್ದಗಳನ್ನು ಉಪಯೋಗಿಸಬಾರದು. ಜಾತಿಗಳ ಮುಖಂಡರು, ಸ್ವಾಮಿಗಳನ್ನು ಬೆಂಬಲಕೊಡಲು ಕಷ್ಟಿದುಕೊಂಡು ಹೋಗಬೇಕು. ಬಂಧು–ಬಾಂಧವರಿಲ್ಲಿ ಈ ಕಾರ್ಯದಲ್ಲಿ ಹೃತ್ಪೂರ್ವಕವಾಗಿ ತೊಡಗಬೇಕು. ಆವಶ್ಯಕವಾಗಿ ನೆಚ್ಚಿಸಬೇಕಾದ ಹಣವನ್ನು ಕೈಬಿಟ್ಟುಕೊಂಡಿರಬೇಕು ತಮ್ಮವರಿಂದಾಗಿ ಕೆಲಸ ಮಾಡುತ್ತಿರುವವರಿಗೆ ಊಟ–ತಿಂಡಿ ಚಿಲ್ಲರೆಖರ್ಚುಗಳಿಗೆ ಕಷ್ಟವಾಗಬಾರದು. ದೇಶಸಂಚಾರದಲ್ಲಿ ವಿರುದ್ಧವಾಗಿ ಕೆಲಸ ಮಾಡುವವರನ್ನು ಉಪಾಯದಿಂದ ಯೋಗ್ಯವ ರ್ತನೆಯಿಂದ ಚಾಣಾಕ್ಷತನದಿಂದ ತಮ್ಮ ಕಡೆಮಾಡಿಕೊಳ್ಳಬೇಕು. ಹೀಗೆ ಗೆಲ್ಲಲು ಸಹಕಾರವಾಗುವ ಎಲ್ಲ ವಿಧಾನಗಳನ್ನೂ ಬಳಕೆಯಲ್ಲಿ ತರುವುದರಿಂದ ಜಯವು ಸುಲಭವಾಗುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸ್ಥೆಯ ಪರವಾಗಿ ಗೆದ್ದವರು

ಹಾರ್ಲಿಸೆಂಟಿನ ಒಂದು ಸ್ಥಾನ:—

ಶ್ರೀ ಟೇಕೂರ ಸುಬ್ರಹ್ಮಣ್ಯಂ.

ಮೈಸೂರು ವಿಧಾನ ಸಭೆಯ ಸ್ಥಾನಗಳು :—

ಹಡಗಲಿ :—

ಶ್ರೀ ನುರಿಬ್ಬಾಮಯ್ಯ ಮತ್ತೆವಾಟೀಲ

ಹೊಸಪೇಟೆ :—

ಶ್ರೀ ಡಾ॥ಬಿ. ನಾಗನಗೌಡ

ಸಂಡೂರು :—

ಶ್ರೀ ಹ. ರಾಯನಗೌಡ

ಸಿರುಗುಪ್ಪೆ :—

ಶ್ರೀ ಬಿ. ಇ. ರಾಮಯ್ಯ

ಕುರುಗೋಡು :—

ಶ್ರೀಮತಿ ಚಿಕ್ಕಂ ಸುಮಂಗಲಿಮ್ಮ

— ಸೋತವರು —

ಹರಪನಹಳ್ಳಿ ದ್ವಿಸದಸ್ಯ ಸ್ಥಾನ :—

1) ಶ್ರೀ ಇಜಾರಿ ಸಿದಪ್ಪ

2) ಶ್ರೀ ಮುಸಿಯಾನಾಕ್ಯ

ಬಳ್ಳಾರಿ :—

ಶ್ರೀ ಅಬ್ದುಲ್ ರಜಾಕ್ ಸಾಹೇಬ್

— ಗೆದ್ದ ಇತರರು —

ಹರಪನಹಳ್ಳಿ :—

1) ಶ್ರೀ ಪಿಪಿಸ್ವಾಮಿಶೆಟ್ಟಿ (P S P)

2) ,, ಎಂ. ದಾನಪ್ಪ ,,

ಬಳ್ಳಾರಿ :—

ಶ್ರೀ ಎಂ. ಗಂಗಪ್ಪ (ಸ್ವತಂತ್ರ)

ಬಳ್ಳಾರಿ ಜಿಲ್ಲೆಯ ಗ್ರಾಂಟು ಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳಲಿ

ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿರುವ ಪ್ರಾಥಮಿಕ ಶಾಲೆಗಳಲ್ಲಿ ಖಾಸಗೀ ಶಾಲೆಗಳೂ (ಗ್ರಾಂಟುಶಾಲೆ)ಇವೆ ಇವುಗಳಿಗೆ ಮೇನೇಜರ್‌ಕೆಂಬುವರನ್ನು ನೇಮಿಸಿ ಅವರಿಗೆ ಎಲ್ಲಾ ಆಡಳಿತಗಳನ್ನು ಕೊಟ್ಟಿರುತ್ತಾರೆ. ಇವರು ಉಳಿದ ಉಪಾಧ್ಯಾಯರಿಗೆ ಸಂಬಳವನ್ನು ಪರಿಯಾಗಿ ಕೊಡದೇ ಇಷ್ಟಿವೆ ಪ್ರತಿವರ್ಷ ಬರುವ ಸರಕಾರಿ ಸಹಾಯ ಧನವನ್ನು ಏನು ಮಾಡುತ್ತಾರೆ ಎಂಬುದು ನಮಗೊತ್ತಾಗದೆ ಶಾಲೆಗೆ ಬೇಕಾದ ವೆಚ್ಚಗಳಿಗಾಗಿ ಉಪಾಧ್ಯಾಯರ ಸಂಬಳದಲ್ಲಿ ಕಡಮೆ ಮಾಡುತ್ತಾರೆ. ಕೆಲಸಕ್ಕೆ ಉಪಾಧ್ಯಾಯರನ್ನು ಕರೆಸಿವಾಗ ಒಂದೆರಡು ತಿಂಗಳು ಲಂಚ ಬೇಡುತ್ತಾರೆ ಶಾಲೆಯಲ್ಲಿದ್ದ ಉಪಾಧ್ಯಾಯರನ್ನು ಪ್ರತಿ ವರ್ಷ ಒನಲಿ ಮಾಡುತ್ತಾರೆ. ಹೀಗಿರುವಲ್ಲಿ ಉಪಾಧ್ಯಾಯರಿಗೆ ಸಂಬಳ ಜಾಸ್ತಿಯಾಗುವುದಕ್ಕಿಂತ ಮುಂಚೆ ಎಲ್ಲಾ ಶಾಲೆಗಳನ್ನು ಸರ್ಕಾರವು ವಹಿಸಿಕೊಳ್ಳಬೇಕು

(H. ಸುಬ್ಬರಾಮಯ್ಯ ಹೊಸಪೇಟೆ)

ಉಪಾಧ್ಯಾಯರುಗಳ ಕುಂದು ಕೊರತೆಗಳು

ಮೈಸೂರು ರಾಜ್ಯದಲ್ಲಿ ಸರಕಾರಿ ಮುಂದಿ ಉಪಾಧ್ಯಾಯರುಗಳಿದ್ದಾರೆ. ಇವರಲ್ಲಿ ಅನೇಕರು ಬೋರ್ಡ್ ಖಾಸಗಿ ಮತ್ತು ಏಡೆಡ್ ಶಾಲೆಗಳಲ್ಲಿ ಉಪಾಧ್ಯಾಯರಾಗಿರುವವರು. ಸರ್ಕಾರವು ನಾನಾ ಜಿಲ್ಲೆಜಿಲ್ಲೆಗಳ ಅಧಿಕಾರಿಗಳ ಸಂಬಳ ಸಾಗೆ ಉತ್ತಮಪಡಿಸುವುದರಿಂದ ಸರ್ಕಾರಿ ಶಾಲೆಗಳಲ್ಲಿರುವ ಉಪಾಧ್ಯಾಯರುಗಳಿಗೇನೋ ತಕ್ಕಮಟ್ಟಿಗೆ ಅನುಕೂಲವಾಗಿದೆ. ಆದರೆ ಇತರ ಖಾಸಗಿ ಮತ್ತು ಏಡೆಡ್ ಶಾಲೆಗಳಲ್ಲಿ ಉಪಾಧ್ಯಾಯರ ಸ್ಥಿತಿ ಮಾತ್ರ ಉತ್ತಮಗೊಂಡಿಲ್ಲ. ಅವರುಗಳು ಪದೇ–ಪದೇ ಸಂಸ್ಥೆಗಳ ಮೂಲಕವೂ, ನಿರ್ದೇಶಗಳ ಮೂಲಕವೂ ಅಧಿಕಾರಿಗಳನ್ನೂ ಮಂತ್ರಿಗಳನ್ನೂ ಕಂಡು ಅರಿಕೆ ಮಾಡಿಕೊಳ್ಳುತ್ತಲೇ ಇದ್ದಾರೆ. ಸರ್ಕಾರದ ಕಡೆಯಿಂದ ಪ್ರೋತ್ಸಾಹಕರವಾದ ಉತ್ತರ ಇನ್ನೂ ಬರದೇ ಇರುವುದು ತುಂಬಾ ಕೋಚನೀಯ ಈಗಿನ ಮತ್ತು ಮುಂದಿನ ಜನಾಂಗದ ಪುನೋಭಿವೃದ್ಧಿಯು ಉಪಾಧ್ಯಾಯರುಗಳ ಕೈಯಲ್ಲಿವೆ ಎಂಬುದನ್ನು ಸರ್ಕಾರವು ನೆನೆಯಬಾರದು. ಆಶ್ಚರ್ಯಕರವಾದ ಉಪಾಧ್ಯಾಯರುಗಳ ಕಷ್ಟ ಜಾಗ್ರತೆ ಸರ್ಕಾರ ಪರಿತಾಪಿಸಿಕೊಂಡು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವರೆಂದು ನಂಬಿದ್ದೇನೆ.

ಮೈಸೂರಿನ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರು ಗೆದ್ದರು.

ಮೈಸೂರಿನ ಗೃಹ ಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಹರಿಹರದಲ್ಲಿ ಸೋತರು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಕಿರಿಜ್ವರ, ಮಲೇರಿಯಾ, ಮಾಂಸ
ಎಲ್ಲ ನೋವುಗಳಿಗೆ ದಿವ್ಯೌಷಧ

ಕಾಶ್ಮೀರ ಅರುಕ್

ಲೇಪನೆ, ಸೇವನೆ - ಎಂದೂ ಸಾಧ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಾಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ 3
ಸಚ್ಚಿ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ ೩
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪ್ಸು ಅಥವಾ
ರಿಪ್ಲೈಕಾರ್ಡು ಬರೆಯಿರಿ.
ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೩

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಭಾರತ

ಸೋಮವಾರ ಮಾರ್ಚಿ 18,25–3–1957

ವರ್ಷ 20 · ಸಂಚಿಕೆ 21–22

ಬ್ಯಾರಿಯು ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!! ಸ್ವಾಸ್ಥ್ಯವರಾನ್ನಿಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

ಪತ್ರಿಕೆಯಿಂದ 'ನವಭಾರತ' ಸಂಪಾದಕರಿಗೆ

—ಹರಿಜನರಿಗೆ ಕಾಂಗ್ರೆಸ್ ನಿಂದಾದ ಅನ್ಯಾಯ—
ಹರಪನಹಳ್ಳಿ ಚುನಾವಣೆ

1932 ರ ಸೆಪ್ಟೆಂಬರ್‌ನಲ್ಲಿ ಮಹಾತ್ಮಗಾಂಧಿಯವರು ಆಮರಣಾಂತ ಉಪವಾಸಹೂಡಿ ಅಸ್ಪೃಶ್ಯರನ್ನು ಹಿಂದೂಗಳಿಂದ ಪ್ರತ್ಯೇಕಿಸಬಾರದೆಂದು ಆಗಿನ ಬ್ರಿಟಿಷಿನ ಪ್ರಧಾನಿ ರ್ಯಾಮ್ಸೆ ಮ್ಯಾಕ್ಡೊನಲ್ಡ್‌ರಿಂದ ವಚನವಡೆದು ಪೂನಾಸಂಧಿಯ (Poona Pact) ನ್ನು ಮಾಡಿದವಂಗಿತ ಅಂಬೇಡ್ಕರ್, ರಾಜಭೋಜ್, ಮದ್ರಾಸಿನ ರಾ.ಬ ಶ್ರೀನಿವಾಸನ್ ವಗೈರೆ ಹರಿಜನ ಮುಖಂಡರಿಗೆ ತಾವು ವಚನ ಕೊಟ್ಟು ಅಸ್ಪೃಶ್ಯರೆಂದು ಕರೆಯಲ್ಪಡುವ ಹರಿಜನರಿಗೆ ಎಲ್ಲ ವಿಧದ ಸೌಲಭ್ಯವನ್ನು ದೊರಕಿಸುವ ಆಶ್ವಾಸನವಿತ್ತರು. ಅಂದಿನಿಂದ ಅಖಿಲ ಭಾರತ ಹರಿಜನ ಸೇವಕ ಸಂಘದಾರಂಭವಾಗಿ ಗಾಂಧೀಜಿಯ ಪ್ರೇರಣೆಯಿಂದ ಕಾರ್ಯಾರಂಭವಾಯಿತು 1934 ರಲ್ಲಿ ಗಾಂಧೀಜಿ ಅಸ್ಪೃಶ್ಯತಾನಿವಾರಣೆ ಮತ್ತು ಸೇವೆಗಾಗಿ ಅಖಿಲ ಭಾರತ ಸಂಚಾರವನ್ನು ಕೈಗೊಂಡರು. 1938 ರಲ್ಲಿ ಆರೂಢವಾದ ಕಾಂಗ್ರೆಸ್ ಮತ್ತು ಇತರ ಸರ್ಕಾರಗಳ ಶಾಸನ ಸಭೆಗಳಲ್ಲಿ ಹರಿಜನರ ಸ್ಥಾನಗಳು ಹೆಚ್ಚಿಸಲ್ಪಟ್ಟವು ಅಂದಿನಿಂದ ಹರಿಜನರ ಪರವಾಗಿ ಒಬ್ಬ ಮಂತ್ರಿಯೂ ಆರಿಸಲ್ಪಡುವ ರೂಢಿಯು ಆಚರಣೆಗೆ ಬಂದಿತು. ಮದ್ರಾಸ್ ಪ್ರಾಂತ್ಯದ 26 ಜಿಲ್ಲೆಗಳಿಗೆ 30 ಶಾಸನ ಸಭೆಯ ಸ್ಥಾನಗಳು ದೊರೆತಿದ್ದವು. **ಭಾರತದ ಎಲ್ಲ ಕ್ಷೇತ್ರಗಳಲ್ಲಿ ಗಾಂಧೀಜಿಯವರ ಸೂತ್ರದಂತೆ, ಅಸ್ಪೃಶ್ಯರೆಂದು ಕರೆಯಲ್ಪಡುವವರಿಗೇ ಸ್ಥಾನ ವಿಶೇಷವಾಗಿರಿಸಲ್ಪಡುತ್ತಿವೆ.**

ಬಳ್ಳಾರಿ ಜಿಲ್ಲೆಯನ್ನು ಮೈಸೂರಲ್ಲಿ ವಿಲೀನಗೊಳಿಸಿದಾಗಲೂ ಸಹ ಮದ್ರಾಸ್ ಸರ್ಕಾರವು ಲೀಟ್ಜಿಸಂತೆ ಹರಿಜನರಿಗೆ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂದು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿದ್ದು ವಾಸ್ತವಾಂಶಗಳು ಹೀಗಿರಬೇಕಾದರೆ, ಬಳ್ಳಾರಿಯ ಏಳು ತಾಲ್ಲೂಕುಗಳಲ್ಲಿ ಒಂದು ಲಕ್ಷಕ್ಕಿಂತಲೂ ಅಸ್ಪೃಶ್ಯರಾದ ಹರಿಜನರು ನಿವಾಸಿಸುತ್ತಿರಬೇಕಾದರೆ, ಗಾಂಧೀಜಿಯನ್ನು, ಅವರು ಮಾಡಿದ ಸಂಧಿಯನ್ನು (Poona Pact) ಮರೆತು ಕಾಂಗ್ರೆಸ್ ಸಂಸ್ಥೆಯು ಸುಧಾರಿಸಿದ ವರ್ಗದವರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿತು. ಮೈಸೂರು ರಾಜ್ಯದಲ್ಲಿ ಈ ಅನ್ಯಾಯವು ನಡೆದಿರುವುದಾಗಲಿ, ಭಾರತದ ಇನ್ನಾವ ರಾಜ್ಯವೆಲ್ಲಾ, ಅಸ್ಪೃಶ್ಯರಲ್ಲದ ಸುಧಾರಿಸಿದ ಜಾತಿಗಳವರಿಗೆ, ಅಸ್ಪೃಶ್ಯರ (ಹರಿಜನರ) ಸೌಲಭ್ಯಗಳನ್ನು ಕೊಡುತ್ತಿಲ್ಲ.

ಕೂಡ್ಲಿಗಿ–ಹರಪನಹಳ್ಳಿ ತಾಲೂಕುಗಳಲ್ಲಿ ಜಿಲ್ಲೆಯ ಶೇ ಭಾಗಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನರಿದ್ದಾರೆ. ಜಿಲ್ಲೆಯ ಹರಿಜನರು ಯಾವಾಗಲೂ ಗಾಂಧೀಜಿಯ ಹೆಸರಿನಲ್ಲಿ ಕಾಂಗ್ರೆಸಿಗೇ ತಮ್ಮ ಬೆಂಬಲ ಕೊಡುತ್ತಬಂದಿದ್ದಾರೆ. ಆದರೆ ತಮಗಾಗಿ ಕಾದಿರಿಸಿದ ಸ್ಥಾನವನ್ನು ಬೇರೆಯವರಿಗೆ ಕೊಟ್ಟಿದ್ದು ಆ ಫಲವನ್ನು ಸಹಿಸದಾಯಿತು. ಸುಮಾರು 25 ಸಾವಿರ ಮತದಾರರಲ್ಲಿ ಮತಗಟ್ಟೆಗಳಿಗೆ ಬಂದವರು ಸುಮಾರು 6000 ಜನರಿರಬಹುದು. ಅವರೆಲ್ಲ ಕಾಂಗ್ರೆಸ್‌ಗೆ ವಿರೋಧವಾಗಿ ನಿಂತ ತಮ್ಮ ಕುಲದಾತನಿಗೆ ವೋಟು ಕೊಟ್ಟಿದ್ದರಲ್ಲಿ ಸಂಶಯವೇಕಿಲ್ಲ. ಬಳ್ಳಾರಿಗೆ ಕಾಂಗ್ರೆಸ್ ಚುನಾವಣಾ ಪ್ರತಿನಿಧಿಗಳು ಬಂದಾಗ ಅವರಿಗೆ ಈ ವಿಷಯದ ಬಗ್ಗೆ ಗಮನವನ್ನು ಸೆಳೆಯಲಾಗಿದ್ದಿತು. ಭಾರತ ರಾಜ್ಯಾಂಗ ರಚನೆಯು ಕಾಲಕ್ಕೆ ಅಸ್ಪೃಶ್ಯರಾದ ಹರಿಜನರಿಗೆ 10 ವರ್ಷಗಳವರೆಗೆ ಗಾಂಧೀಜಿ ಸೂಚಿಸಿದಂತೆ ಶಾಸನ ಸಭೆಗಳಲ್ಲಿ ಸ್ಥಾನ ಇತರ ಸೌಲಭ್ಯಗಳನ್ನು ಕೊಡುವ ನಿಯಮಾನುಸಿಬಂಧನೆಗಳು ಘಟನೆ(Constitution) ಯಲ್ಲಿ ಕಾಣಿಸಲ್ಪಟ್ಟಿವೆ. ಆದರೇನು? ಈಗಿನ ಕಾಂಗ್ರೆಸ್ ಸರ್ಕಾರ ಅದನ್ನೂ ಧಿಕ್ಕರಿಸಲಾರಂಭಿಸಿದೆ. ಮೈಸೂರು ರಾಜ್ಯದಲ್ಲಿ ಇಂದು ಒಡ್ಡಲಂಬಾನಿಗಳು ಹರಿಜನರಾದರೆ— ನಾಳೆ ಕುರುಬ, ಮಾಲ್ಮೀಕಿ, ಬೇಡರೂ ಹರಿಜನರಾದಾರು. ಮೈಸೂರು ರಾಜ್ಯದ ಹರಿಜನರು ಸುಮ್ಮನೇ ಕೂತರೆ ಅವರ ಪ್ರಗತಿಯ ಹಿಂಪೆ ಬೀಳುತ್ತದೆಂಬ ಭಯವು ಅವರನ್ನು ಭಾಧಿಸುವುದರಲ್ಲಿ ತಪ್ಪಿಲ್ಲ. ಹರಿಜನಸಂಖ್ಯೆಯುಳ್ಳಾದ ಸೋಲು ಕಾಂಗ್ರೆಸಿಗರಿಗೆ ಪಾಠ ಕಲಿಸಿದರೆ ಉತ್ತಮ ಗಾಂಧೀ ಮತ್ತು ಕಾಂಗ್ರೆಸ್ ಭಕ್ತರಾದ ಹರಿಜನರನ್ನು ಯಾವಾಗಲೂ ಸಮ್ಮವರಂತೆಯೇ ಸರ್ವಸಮಷ್ಟಿ ದೃಷ್ಟಿಯಿಂದ ಕಾಣಲು, ನಮ್ಮ ಸ್ವಾರ್ಥವನ್ನು ಬದಿಗಿರಿಸಿ, ಅವರ ಸ್ವಾಸ್ಥ್ಯ – ಮಾನಗಳನ್ನು ಕಾಪಾಡಬೇಕು.

(ಹರಿಜನ ಹಿತೈಷಿ)

ಸ್ವೀಕಾರ – ವಿಮರ್ಶೆ

"ಸಮ್ಮೋಧೆ ಗುಣಿತ ಪದ್ಯಗಳು"

(ಶ್ರೀ ಆ. ಸಕ್ರಪ್ಪಸ್ವಾಮಿಗಳು.)

"ಸುಖಾಶ್ರಯ ಪ್ರಬೋಧೆ"

ರಾಯದುರ್ಗ

ಕ್ರಯ :— 0–8–0

ಗ್ರಂಥಕರ್ತರು ಜನತೆಗೆ ಭಕ್ತಿ ಜ್ಞಾನ ನೈಯಿಂಗ್ಯ ರೂಪವಾದ ಬೋಧೆಯನ್ನು ಸರಳ ಕನ್ನಡ ಛಾಪೆಯಲ್ಲಿ ಸಮ್ಮೋಧೆಯ ರೂಪದಿಂದ ಅಡಗಿಸಿರುವರು. ವಾರ್ಧಿಕ ಪತ್ರಿಕೆಯಲ್ಲಿ ಪದ್ಯಗಳು ರಚಿಸಲ್ಪಟ್ಟವೆ. ಇಂಥ ಸಮ್ಮೋಧೆಯು ಬಹಳ ಸುಲಭವಾಗಲು ಜೆಲೆಯನ್ನು 0—2—0 ಗೆ ಇಳಿಸುವಂತಾಗಬೇಕು. ಆಸ್ತಿಕ ಜನರು ಪುಸ್ತಕ-ಮುದ್ರಣದ ಸಂಪೂರ್ಣ ಖರ್ಚನ್ನು ವಹಿಸಿದರೆ ಇದು ಸಾಧ್ಯವಾಗಿ ಕೃತಿ ಸ್ವಯಂಪ್ರಭೆ ಮೂಲೆ ಮೂಲೆಯಲ್ಲಿ ಪ್ರಭಾವವ ಬೆಳೆದೀತು.

ರಾಷ್ಟ್ರೀಯ ಪಂಚಾಂಗ ಮಾರ್ಚ್ ೨೨ ರಿಂದ ಜಾರಿಗೆ ಬರುವುದು.

ಶಕ ಕಾಲಮಾನ ಪದ್ಧತಿಯ ಆಧಾರದ ಮೇಲೆ ಸಿದ್ಧಪಡಿಸಲಾಗಿರುವ ಏಕರೂಪದ ರಾಷ್ಟ್ರೀಯ ಪಂಚಾಂಗವು 1957 ರ ಮಾರ್ಚ್ 22 ರಿಂದ ಜಾರಿಗೆ ಬರಲಿದೆ. ಗ್ರಿಗರಿ ಪದ್ಧತಿಯ ಕ್ಯಾಲೆಂಡರನ್ನು ಈಗಿನಂತೆ ಮುಂದೆ ಕೂಡ ಸರ್ಕಾರಿ ಉದ್ದೇಶಗಳಿಗಾಗಿ ನೂತನ ಪಂಚಾಂಗದೊಂದಿಗೆ ಉದ್ದೇಶಿಸಲಾಗುವುದು.

ನೂತನ ಪಂಚಾಂಗದಲ್ಲಿ ಚೈತ್ರ ಮಾಸವೇ ಪ್ರಥಮ ಮಾಸ. ಸಾಮಾನ್ಯವಾಗಿ ಒಂದು ವರ್ಷದಲ್ಲಿ 365 ದಿನಗಳಿರುವುವು ಅಧಿಕ ದಿನದ ವರ್ಷದಲ್ಲಿ(ಲೀಪ್ ಇಯರ್) 366 ದಿನಗಳಿರುವುವು.

ಶಕ ಕಾಲಮಾನ ಪದ್ಧತಿಯನ್ನು ಭಾರತದ್ಯಂತವೂ ವ್ಯವಸಕವಾಗಿ ಬಳಸುತ್ತಿರುವ ವಿಚಾರವು ಕಂಡು ಬಂದಿರುವುದರಿಂದ ಈ ಕಾಲಮಾನ ಪದ್ಧತಿಯನ್ನು ನುಸರಿಸಲಾಗಿದೆ ವಿಖ್ಯಾತ ಖಗೋಳ ಶಾಸ್ತ್ರಜ್ಞರಾದ ವರಾಹಮಿಹಿರನ ಕಾಲದಿಂದಲೂ ಭಾರತೀಯ ಖಗೋಳ ಶಾಸ್ತ್ರಜ್ಞರು ಶಕ ಕಾಲಮಾನ ಪದ್ಧತಿಯನ್ನು ತಮ್ಮ ಲೆಕ್ಕಾಚಾರಗಳಿಗೆ ಉಪಯೋಗಿಸುತ್ತಿರುವರು. ಭಾರತೀಯ ಪಂಚಾಂಗಕರ್ತರು ಇಂದಿಗೂ ಶಕ ಕಾಲಮಾನ ಪದ್ಧತಿಯನ್ನೇ ತಮ್ಮ ಲೆಕ್ಕಾಚಾರಗಳಿಗೆ ಬಳಸುತ್ತಿರುವರು ½ ಮಾಸಗಳ ಅವಧಿಯನ್ನು ನಿಗದಿ ಮಾಡಲಾಗಿದೆ. ಯುಗಾದಿಗಳೂ ನೂತನ ವರ್ಷವು ಮೇಷ ಸಂಕ್ರಾಂತಿಯ ಮರುದಿನದಿಂದ ಪ್ರಾರಂಭವಾಗುವುದು.

.... ಸಮಿತಿಯ ಶಿಫಾರಸುಗಳು ....

ದೇಶದಲ್ಲಿ ಅನುಸರಿಸಲಾಗುತ್ತಿರುವ ಪಂಚಾಂಗಗಳನ್ನು ಪರೀಕ್ಷಿಸುವುದಕ್ಕಾಗಿ 1952ರ ನವೆಂಬರ್ ತಿಂಗಳಲ್ಲಿ ಸಮಿತಿಯೊಂದನ್ನು ನೇಮಿಸಲಾಗಿದೆ. ಇಡೀ ಭಾರತಕ್ಕೆ ಅನ್ವಯವಾಗುವಂತಹ ನಿಖರವಾದ ಹಾಗೂ ವೈಜ್ಞಾನಿಕ ಪಂಚಾಂಗದ ಬಗ್ಗೆ ಸೂಚನೆಗಳನ್ನು ಪಲ್ಲಿಸಬೇಕೆಂದು ಸಮಿತಿಗೆ ತಿಳಿಸಲಾಗಿತ್ತು. ಸಮಿತಿಯು 1955 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಕೇಂದ್ರ ಸರ್ಕಾರವು ಸಮಿತಿಯ ಶಿಫಾರಸುಗಳ ಮೇಲೆ ಏಕರೂಪದ ರಾಷ್ಟ್ರೀಯ ಪಂಚಾಂಗವೊಂದನ್ನು ಜಾರಿಗೆ ತರಲು ನಿರ್ಧರಿಸಿತು.

ದೇಶದ ವಿವಿಧ ಭಾಗಗಳಲ್ಲಿ 30ಕ್ಕೆ ಕಡಮೆ ಇಲ್ಲದಂತೆ ಪಂಚಾಂಗಗಳು ಬಳಕೆಯಲ್ಲಿರುವುದು ಸಮಿತಿಯ ಗಮನಕ್ಕೆ ಬಂದಿತು.

ಭಾರತೀಯ ಪಂಚಾಂಗಕರ್ತರು

ಭಾರತೀಯ ಪಂಚಾಂಗ ಕರ್ತರು ವರ್ಷದ ಅವಧಿಯನ್ನು 365 ¼ 5876 ದಿನಗಳೆಂದು ಪರಿಗಣಿಸಿದ್ದರು. ಆದರೆ ಸೌರವರ್ಷದ ನಿಜವಾದ ಅವಧಿಯು 365·24229 ದಿನಗಳು.

ವಿವಿಧ ಧಾರ್ಮಿಕ ಉತ್ಸವಗಳ ಆಚರಣೆಯಲ್ಲಿ ಈಗಿನ ಪದ್ಧತಿಗೆ ಅಡ್ಡಿ—ಆತಂಕಗಳುಂಟಾಗುವುದಿಲ್ಲ. ಧಾರ್ಮಿಕ ಉದ್ದೇಶಗಳಿಗಾಗಿ ನೂತನ ಪಂಚಾಂಗದಲ್ಲಿ ಚಾಂದ್ರಮಾನವನ್ನು ಅಮಾವಾಸ್ಯೆಯಿಂದ ಪ್ರಾರಂಭಿಸಲಾಗುವುದು.

ಸ್ಥಿರವಾದ ಸಣ್ಣ ನಾಣ್ಯವೆಂದರೆ, ಕಾಲಾಣೆ ಅಥವಾ 1 ರೂಪಾ 64 ನೆಯ 1 ಭಾಗ ಅನುದಿನದ ಬಳಕೆಯಲ್ಲಿ ಕಾಲಾಣೆಯೇ ಹೆಚ್ಚಾಗಿ ಬೇಕಾಗುವುದು. ಜನ ನಿಬಿಡ ಗ್ರಾಮಾಂತರ ಪ್ರದೇಶಗಳಲ್ಲಿ, ಜನಭರಿತ ಪಟ್ಟಣಗಳಲ್ಲಿ, ಬಸ್ಸುಗಳಲ್ಲಿ ಮತ್ತು ಟ್ರಾಂಗಳಲ್ಲಿ ಜನಸಾಮಾನ್ಯರ ಉಪಯೋಗಕ್ಕೆ ಬರುತ್ತಿರುವುದೆಂದರೆ ಕಾಲಾಣೆಯೇ 1 ಕಾಸಿನ ನಾಣ್ಯವು ಚಲಾವಣೆಯಿಂದ ದೂರವಿದೆ.

ಅದಾಗ್ಯೂ ಕಾಸು ಜನತೆಯ ಹಾಗೂ ಕಾಲದ ತೀರ್ಮಾನದ ವಿರುದ್ಧವಾಗಿ, ಲೆಕ್ಕ ಪತ್ರಗಳಲ್ಲಿ ತನ್ನ ಸ್ಥಾನಮಾನಗಳನ್ನು ಭದ್ರಪಡಿಸಿಕೊಂಡು ಬಿಟ್ಟಿದೆ. ನಮ್ಮ ಲೆಕ್ಕಪತ್ರಗಳನ್ನು ರೂಪಾಯಿ ಅಣೆಗಳಲ್ಲಿಯೇ ನಾವು ಇಡುತ್ತೇವೆ. ಆದರೆ, ಕಾಲಾಣೆ ಬಿಲ್ಲೆಗೆ ಯಾವ ಅಧಿಕೃತ ಸ್ಥಾನಮಾನ, ತಕ್ಕ ಬಾಧ್ಯತೆ ಹಾಗೂ ಪುರಸ್ಕಾರವಿರುವುದಿಲ್ಲ. ಪ್ರಸಿದ್ಧ ಪುರುಷನ ಪುತ್ರನಂತೆ, ಅದಕ್ಕೆ ತನ್ನ ಜನ್ಮದ ಹೆಸರಿಲ್ಲ. ಅಣೆಗಳಲ್ಲಿ ಯಾ ಕಾಸುಗಳಲ್ಲಿ ಅದನ್ನು ತನ್ನನ್ನು ಕರೆದುಕೊಳ್ಳಬೇಕು.

— ಮೂರು ಕಾಸಿನ ಸ್ಥಾನ —

ಹೊಸನಾಣ್ಯ ಪದ್ಧತಿಯ ತ್ರಿಕಾಸಿನ ನಾಣ್ಯಕ್ಕೆ ಅಗತ್ಯ ಸ್ಥಾನ-ಮಾನಗಳನ್ನು ದೊರಕಿಸಿಕೊಡುತ್ತದೆ. ಅದಕ್ಕೆ 'ನಯಾಪೈಸಾ' ಎಂಬ ನಾಮಧೇಯವನ್ನಿಡಲಾಗಿದೆ. ಈ ನಾಣ್ಯ ಸುಧಾರಣೆಯು ಇತರ ವಿಚಾರಗಳಿಂದಲೂ ಸಾಂಕೇತಿಕವೆನಿಸುತ್ತದೆ. ಪ್ರಗತಿಪರ ಪ್ರಜಾಸತ್ತೆಯು ಹಲವು ಉದ್ಧಾರಗಳನ್ನೆಳಗೊಂಡಿದೆ. "ಉಳುವವನಿಗೆ ಜಮೀನು" ಎಂಬುದಕ್ಕೆ ಸಮನಾದ ಪ್ರಾಮುಖ್ಯವನ್ನು ನಯಾ ಪೈಸಾಗೆ ರೂಪಾಯಿಯ ಪಕ್ಕದಲ್ಲಿ ಸ್ಥಾನ ಕೊಡಲಾಗಿದೆ. ರೂಪಾಯಿಗೂ ನಯಾ ಪೈಸಾಗೂ ಮಧ್ಯೆ ಯಾವ ಮಧ್ಯಂತರ ನಾಣ್ಯಗಳೂ ಇರುವುದಿಲ್ಲ. ಲೆಕ್ಕ ಪತ್ರಗಳ ಕ್ಷೇತ್ರದಲ್ಲಿ ಜಮೀನುದಾರನಂತೆ ಅದ್ವಿತೀಯವಾಗುತ್ತದೆ. ನಯಾ ಪೈಸಾದ ಸಂಬಂಧವನ್ನು ನೇರವಾಗಿ ಸರಳರೀತಿಯಲ್ಲಿ ಮುಖ್ಯನಾಣ್ಯವಾದ ರೂಪಾಯಿಯೊಂದಿಗೆ ಸೇರಿಸಲಾಗಿದೆ. 100 ನಯೇ ಪೈಸೆಗಳು ಒಂದು ರೂಪಾಯಿ. ಕಾಸು ಅಣೆಗಳು ಅದೃಶ್ಯವಾಗುವುದಕ್ಕೆ ಮೂರು ವರ್ಷಗಳ ಕಾಲವನ್ನೀಯಲಾಗಿದೆ. ನಮ್ಮ ಪರಂಪರೆಗಳಿಗನುಸಾರವಾಗಿ, ಆ ನಾಣ್ಯಗಳಲ್ಲಿ ಪೂರ್ಣ ಪರಿಹಾರವನ್ನು ನಯೇ ಪೈಸೆಗಳಲ್ಲಿ ಕೊಡಲಾಗುವುದು.

ಪರಿಹಾರದ ಪ್ರಮಾಣವನ್ನು ನಮ್ಮ ಪಾರ್ಲಿಮೆಂಟ್ ಅಳವಡಿಸುವಂತೆ ಸರ್ಕಾರದವರು ಪರಿವರ್ತನೆ ಪಟ್ಟಿ (ರೆಕಿನೆಕನರ್) ರೂಪದಲ್ಲಿ ಪ್ರಕಟಿಸಿದ್ದಾರೆ.

(ಮುಂದಿನ ಪುಟಕ್ಕೆ)

ದಶಮಾನ ನಾಣ್ಯ ಪದ್ಧತಿ

ನಮ್ಮ ದೇಶದಲ್ಲಿ 1—4—57 ರಿಂದ ಹೊಸ ನಾಣ್ಯಗಳು ಚಲಾವಣೆಗೆ ಬರುವುವು. ರೂಪಾಯಿ ಮೌಲ್ಯವನ್ನು ಯಾವ ರೀತಿಯಿಂದಲೂ ಬದಲಾಯಿಸದೆ ಭಾರತದಲ್ಲಿ ದಶಮಾಂಕ ನಾಣ್ಯ ಪದ್ಧತಿಯನ್ನು ಈ ಹೊಸ ನಾಣ್ಯಗಳು ಬಳಕೆಗೆ ತರುವುವು.

'ರೂಪಾಯಿ' ನಾಣ್ಯವನ್ನು ಈಗ 16 ಅಣೆಗಳನ್ನಾಗಿಯೂ, ಪ್ರತಿ ಅಣೆಯನ್ನು 4 ಕಾಲಾಣೆಯನ್ನಾಗಿಯೂ, ಪ್ರತಿ ಕಾಲಾಣೆಯನ್ನು 3 ಕಾಸುಗಳನ್ನಾಗಿಯೂ ವಿಭಾಗಿಸಲಾಗಿದೆ. ಆದರೆ ಈಗಿರುವ ಪತ್ತುಗಳ ಬೆಲೆಗಳ ಮಟ್ಟಗಳಿಗೆ ಹೋಲಿಸಿದಾಗ ಕಾಸಿನ ಬೆಲೆಯು ತೀರಾ ಕಡಮೆಯೆನಿಸುವುದು. ನಮ್ಮ ನಿತ್ಯಜೀವನದಲ್ಲಿ ಸಣ್ಣ-ಪುಟ್ಟ ವ್ಯವಹಾರದಲ್ಲಿಯೂ ಕಾಸನ್ನು ಉಪಯೋಗಿಸಲಾಗುತ್ತಿಲ್ಲ. ವಾಸ್ತವವಾಗಿ, 1942 ರಿಂದೀಚೆಗೆ ಚಲಾವಣೆಯಲ್ಲಿ ಕಾಸನ್ನು ತಯಾರಿಸಿಯೇ ಇಲ್ಲ ಅದು ಚಲಾವಣೆಯಿಂದಲೂ ಅದೃಶ್ಯಗೊಂಡಿರುವಂತೆ.

ನಮ್ಮ ತರುಣರಲ್ಲಿ ಒಂದು ಕಾಸನ್ನು ನೋಡಿರುವವರ ಸಂಖ್ಯೆಯೂ ಕಡಮೆ. ವಾಸ್ತವವಾಗಿ ಚಲಾವಣೆಯಿ

ದಶಮಾನ ನಾಣ್ಯ ಪದ್ಧತಿ

(ಹಿಂದಿನ ಪುಟದಿಂದ)

ಸಾರ್ವಜನಿಕರಿಗಾಗಿ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರಕ್ಕೆ ತರಲಾಗಿದೆ ಆಗಿಂದಾಗ್ಗೆ ವೈಶಿಷ್ಟ್ಯತೆಗಳು ಅವುಗಳನ್ನು ತಮ್ಮ ಪುಟಗಳಲ್ಲಿ ಪ್ರಕಟಿಸುತ್ತಿವೆ. ಚಿಲ್ಲರೆ ವ್ಯವಹಾರಗಳಿಗೆ ಕೋಷ್ಟಕಗಳು ಉಪಯೋಗಕ್ಕೆ ಒದಗುವುದಾದರೂ ಸಾರ್ವಜನಿಕರು ನಾಲ್ಕಣೆಯನ್ನು 25 ನಯೇ ಪೈಸೆಗಳಿಗೆ ಪರಿವರ್ತಿಸಿಕೊಳ್ಳಬಹುದೆಂಬುದನ್ನು ಸಾರ್ವಜನಿಕರು ಗಮನದಲ್ಲಿಟ್ಟುಕೊಂಡಿರಬೇಕು. ಅದೇ ಈಗ ಹೊಸ ಮತ್ತು ಹಳೆಯ ಪದ್ಧತಿಯ ನಾಣ್ಯಗಳ ನಡುವಿನ ಕಾರುಬಾರಿಕ್ಕಾದ ವಿನಿಮಯ ಸೂತ್ರವಾಗಿರುವುದು. ಸಾಮಾನ್ಯ ವ್ಯವಹಾರಗಳಲ್ಲಿ ಹಳೆಯ ಎರಡು ಕಾಲಾಣೆಗಳು ಮೂರು ಹೊಸ ನಯಾ ಪೈಸಾಗಳಿಗೆ ಸಮವೆಂದು ಪರಿಗಣಿಸಬಹುದು.

ಹಳೆಯ ಪದ್ಧತಿಯ 2 ಕಾಲಾಣೆಗಳನ್ನು 3 ನಯಾ ಪೈಸಾಕ್ಕೆ ಮತ್ತು ಯಾ ಒಂದಾಣೆಗೆ 6 ನಯಾ ಪೈಸಾಗಳೆಂದು ಪರಿಗಣಿಸಿದರೆ ಸಣ್ಣ-ಪುಟ್ಟ ವ್ಯವಹಾರಗಳಲ್ಲಿ ಆಗುವ ಲಾಭ ಅಥವಾ ನಷ್ಟ ಅತ್ಯಲ್ಪವೆನ್ನಬಹುದು. ಅಂಗಡಿಯವರು ಮತ್ತು ಕೊಳ್ಳುವ ಜನರು ತಮ್ಮ ಅನುದಿನ ವ್ಯವಹಾರದಲ್ಲಿ 4 ಅಣೆಗಳಿಂದ ಕಡಮೆ ನಾಣ್ಯಗಳ ವಿಷಯ ಬಂದಾಗ ಒಂದಾಣೆಗೆ 6 ನಯಾ ಪೈಸಾಗಳೆಂದು ಅಂಗೀಕರಿಸಿದರೆ ಯಾವ ರೀತಿಯ ಪರಿವರ್ತನೆಯ ತೊಡಕೂ ಇರುವುದಿಲ್ಲ

— ಹೆಚ್ಚಿನ ಉಪಯೋಗ —

ನಯಾ ಪೈಸಾ ನಾಣ್ಯತೆಯ ಮೌಲ್ಯದಲ್ಲಿ ಈಗಿನ ನಾಣ್ಯಕ್ಕಿಂತಲೂ ಕಡಮೆಯೆದ್ದು ಮುಖ್ಯವಾಗಿ ಬಡ - ಬಗ್ಗರಿಗೆ ಹೆಚ್ಚು ಉಪಯುಕ್ತವಾಗಿರುವುದು ಅದರಿ ಈಗ ಕಾಲಾಣೆಯು ಚಲಾವಣೆಯಲ್ಲಿ ಕಾಣಿಸಿಗದ ಕಾಸಿನ ಮೂರು ನಾಣ್ಯಗಳನ್ನು ಹೊಂದಿರುವುದು.

ಇದು ಹೇಗಾಗುವುದೆಂದು ನೋಡುವುದು ಸುಲಭ. ಉತ್ತಮ ಬ್ರಾಂಡಿನ 10 ಸಿಗರೇಟುಗಳಿರುವ ಪ್ಯಾಕೆಟ್ಟಿನ ಮಾರುಕಟ್ಟೆಬೆಲೆಯು 11 ಅಣೆಗಳಾಗುತ್ತದೆ ಇಮಗೆ 1 ಸಿಗರೇಟು ಬೇಕಾಗಿದ್ದರೆ ಕನಿಷ್ಠ 5 ಕಾಲಾಣೆಗಳನ್ನು ಕೊಡಬೇಕು ಅಂದರೆ, ಒಬ್ಬರ ಬೆಲೆ ವಾಸ್ತವವಾಗಿ 44 ÷ 10 ಅಥವಾ 4·4 ಕಾಲಾಣೆಗಳು ಅಥವಾ 13·2 ಕಾಸುಗಳು. ಆದರೆ ಅಲಾಣೆಯಲ್ಲಿ ಕನಿಷ್ಠ ನಾಣ್ಯವೆಂದರೆ ಕಾಲಾಣೆ ಆದ್ದರಿಂದ ಈ ಬ್ರಾಂಡಿನ ಒಂದು ಸಿಗರೇಟಿನ ಬೆಲೆಯನ್ನು [illegible] ಕಾಲಾಣೆಗಳಲ್ಲೇ 5 ಕಾಲಾಣೆಯಿಂದಾಗಲೀ ನಿಗದಿಪಡಿಸಬಲ್ಲ. 4 ಕಾಲಾಣೆಗಳಾದರೆ ಪ್ಯಾಕೆಟ್ಟಿಗೆ 10 ಆಣೆ ಮಾತ್ರ ಬರುವುದು ಅಂದರೆ ಅಂಗಡಿಯವನು ಒಂದು ಸಿಗರೇಟಿನ ಬೆಲೆಯನ್ನು 5 ಕಾಲಾಣೆ ಮಾಡದೆ ಏನಿ ಇಲ್ಲ.

ಈ ವ್ಯವಹಾರದಿಂದ ಬಳಕೆದಾರರು 2 ಕಾಸು ಹೆಚ್ಚು ಕೊಡಬೇಕಾಗುವುದು ಅಂದರೆ ಪ್ರಸ್ತುತದಲ್ಲಿ ನಾವು ಸಣ್ಣ ಪುಟ್ಟ ವ್ಯವಹಾರಗಳಲ್ಲಿ ಕೇವಲ ಕಾಸಿನ ಪೈನ್ನಾಶಗಳಲ್ಲದೆ, ಇಡೀ ಕಾಸುಗಳನ್ನೇ ನಷ್ಟಮಾಡಿಕೊಳ್ಳುತ್ತಿದ್ದೇವೆಂದು ಎಣಿಯಬಾರದು.

ದಶಮಾಂಶ ನಾಣ್ಯ ಪದ್ಧತಿಯು ಆಚರಣೆಗೆ ಬಂದಾಗ ಇದೇ ನಾಗುತ್ತದೆಯೋ ನೋಡೋಣ. ಆದೇ ಸಿಗರೇಟಿನ ಬೆಲೆಯು ನಯೇ ಪೈಸೆಗಳಲ್ಲಿ 69 ಆಗುವುದು. ಒಂದು ಸಿಗರೇಟಿನ ಬೆಲೆಯು 7 ನಯೇ ಪೈಸೆಗಳಾಗುವುದು. ಇದು 5 ಕಾಲಾಣೆಗಳ ಸೊತ್ತು, ಅಂದರೆ 8 ನಯೇ ಪೈಸೆಗಿಂತ 1 ನಯಾ ಪೈಸ ಕಡಮೆಯಾಗುವುದು. ಆದರೆ ಅಂಗಡಿಯವನು ತನಗೆ ಉಪಯೋಗವಾಗುವ ಈ ಸದವಕಾಶವನ್ನು ಬಿಟ್ಟುಕೊಡುವನೇ ಎಂಬ ಅನುಮಾನ ಹಲವರಿಗೆ ಬರಬಹುದು. ಈ ರೀತಿಯಾಗುವುದು, ಆ ಕ್ಷೇತ್ರದಲ್ಲಿ ಅನೇಕ ವರ್ತಕರಿಂದಲೂ, ಅವರಲ್ಲಿ ಸ್ಪರ್ಧಾಮನೋಭಾವವಿರುವುದರಿಂದಲೂ ಅವರು ಹೆಚ್ಚಿನ ಬೆಲೆಯನ್ನು ಇ[illegible] ಮಾಡಲಾಗುವುದಿಲ್ಲ

— ಚಿಲ್ಲರೆ ವ್ಯಾಪಾರ —

ಚಿಲ್ಲರೆ ವ್ಯಾಪಾರದಲ್ಲಿ ವಸ್ತುಗಳ ಬೆಲೆಯನ್ನು ನಯಾ ಪೈಸಾಗಳಲ್ಲಿ ಸೂಚಿಸಿದಾಗ ಕೊಳುವವರಿಗೆ ಅನುಕೂಲವಾಗುವುದು. ರೂಢಿ ವ್ಯಾಪಾರದಲ್ಲಿ (ಹೋಲ್‌ಸೇಲ್) ಆಣೆ ಮತ್ತು ಕಾಸುಗಳ ಪರಿವರ್ತನೆಯಲ್ಲಿ ಅರ್ಧ ನಯಾ ಪೈಸಾ ಅಥವಾ ಕಾಲು ನಯಾ ಪೈಸಾಗಳ ವ್ಯತ್ಯಾಸದಿಂದ ಯಾವ ರೀತಿಯಲ್ಲೂ ಗಮನಾರ್ಹವಾದ ನಷ್ಟ ಸಂಭವಿಸುವುದಿಲ್ಲ.

ಪರಿವರ್ತನೆಯ ಪರಿಣಾಮವಾಗಿ ವಸ್ತುಗಳ ಬೆಲೆಗಳಲ್ಲಿ ಅಲ್ಪ - ಸ್ವಲ್ಪ ಹೆಚ್ಚಾಗುವುದರಿಂದ ಒಟ್ಟಿನಲ್ಲಿ ನಡೆಯುವಂತಹ ವ್ಯಾಪಾರವಲ್ಲಿ ನಷ್ಟವಾಗುವುದಿಲ್ಲವೆ? ಎಂಬ ಪ್ರಶ್ನೆ ಬರುವುದೇ. ಆದರೆ ಚಿಲ್ಲರೆ ಅಂಗಡಿಯಲ್ಲಿ ಅಕ್ಕಿಯನ್ನು ಚಟಾಕಿನ ದರದಲ್ಲಿ ಮಾರುತ್ತಾರೆ, ಎಷ್ಟೋಣ ಅದರಿ ಯಾರೂ 1 ಮಣ ಅಕ್ಕಿಯನ್ನು ಈ ಚಟಾಕಿನ ದರದಲ್ಲಿಯೇ ಕೊಂಡು ಕೊಳ್ಳುವುದಿಲ್ಲ.

ರೈಲ್ವೆ ಪ್ರಯಾಣಕ್ಕೆ ಮೈಲಿಗೆ 3 ಕಾಸುಗಳು ಆದರೆ ಸಾಮಾನ್ಯ ಜನರು ತಮ್ಮ ರೈಲ್ವೆ ಟಿಕೆಟ್ಟಿನ ಹಣವನ್ನು ತಾವೇ ಕಂಡುಹಿಡಿಯಬೇಕಾದ ಪ್ರಮೇಯವಿರುವುದಿಲ್ಲ. ಇನ್ನು ಮುಂದೆ ರೈಲ್ವೆ ಟಿಕೆಟ್ಟಿನ ಮೇಲೆ ಪೊಲಿಗಳನ್ನು ರೂ. ಹಾಗೂ ನಯೇ ಪೈಸೆಗಳಲ್ಲಿ ಹಾಕಲಾಗುವುದು. ಟಿಕೆಟ್ಟಿನ ದರಗಳನ್ನು ಗೊತ್ತುವಾಸುವವರು ಲೆಕ್ಕಾಚಾರ ಮಾಡಿ ಗೊತ್ತುಮಾಡಿರುವರು

ಇನುವರೆಗೂ ನಯಾ ಪೈಸಾದಿಂದ ಜನಸಾಮಾನ್ಯರಿಗೆ ಅನುದಿನದ ವ್ಯವಹಾರದಲ್ಲಿ ದೊರೆಯುವ ಅನುಕೂಲಗಳನ್ನು ಕುರಿತು ಹೇಳುತ್ತಿದ್ದೆವು. ದಶಮಾಂಶ ನಾಣ್ಯ ಪದ್ಧತಿಯಿಂದ ದೊಡ್ಡಿಯುವ ದೊಡ್ಡ ಪ್ರಯೋಜನವೆಂದರೆ ಲೆಕ್ಕಾಚಾರಗಳಲ್ಲಿ ಹೆಚ್ಚಿನ ಸರಳತೆ ದೊರೆಯುವುದು.

ಭಾರತದ ಚರಿತ್ರೆ

ಉತ್ತಮ ಹಸ್ತ ಪ್ರತಿಗಳಿಗೆ

೫,೦೦೦ ರೂಗಳ ಬಹುಮಾನ

ಇತ್ತೀಚೆ ಸರ್ಕಾರದ ಶಿಕ್ಷಣ ಮಂತ್ರಿ, ಶಾಪೆಯವರು ಪ್ರಖ್ಯಾತ ಇತಿಹಾಸಜ್ಞರು ಮತ್ತು ಲೇಖಕರು ಬರೆದ ಭಾರತ ಚರಿತ್ರೆಯ ಅತ್ಯುತ್ತಮ ಹಸ್ತಪ್ರತಿಗೆ ೫,೦೦೦ ರೂಗಳ ಬಹುಮಾನವನ್ನು ಕೊಡಲು ನಿರ್ಧರಿಸಿರುವರು.

ಈ ಹಸ್ತ ಪ್ರತಿಯು ಇಂಗ್ಲೀಷಿನಲ್ಲಿದ್ದು 40,000 ಶಬ್ದಗಳಿಗಿಂತಲೂ ಹೆಚ್ಚಾಗಿರಬಾರದು. ಅದು ಓದಲು ಹುದುಂಬಿಸುವಂತಹ ರೀತಿಯಲ್ಲಿ ಅರ್ಥವತ್ತಾದ ಸಾಮಗ್ರಿಯನ್ನು ಉತ್ತಮ ರೀತಿಯಲ್ಲಿ ಪ್ರತಿಪಾದಿಸಿರಬೇಕು. ಚಾರಿತ್ರಿಕ ಅಂಶಗಳನ್ನು, ಜನಸಾಮಾನ್ಯರಿಗೆ ಜನಪ್ರಿಯ ರೀತಿಯಲ್ಲಿ ಹೇಗೆ ತಿಳಿಸಬಹುದೆಂಬುದಕ್ಕೆ ಉತ್ತಮ ಉದಾಹರಣೆಯಂತಿರಬೇಕು.

ಹಸ್ತ ಪ್ರತಿಗಳನ್ನು ಸ್ವೀಕರಿಸಲು 30—8—1957 ನೆಯ ದಿನಾಂಕವೇ ಕೊನೆಯದಿನ. ಈ ವಿಷಯಗಳ ವಿವರಗಳಿಗೆ- ಅಸಿಸ್ಟೆಂಟ್ ಎಜಿಕೇಷನಲ್ ಅಡ್ವೈಸರ್ [ಬಿ-6] ಶಿಕ್ಷಣ ಮಂತ್ರಿ ಕಾಪೆ. ಭಾರತ ಸರ್ಕಾರ, ನವದೆಹಲಿ ಎಂಬ ವಿಳಾಸಕ್ಕೆ ಪತ್ರ ಬರೆದು ತಿಳಿಯಬಹುದು.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ತಲೆನೋವು, ಮೈಕೈಯಿ, ಮತ್ತು
ಎಲ್ಲ ನೋವುಗಳಿಗೆ ದಿವ್ಯೌಷಧ

ಕಾಶ್ಮೀರ ಆರುಕ್

ಲೇಪನ, ಸೇವನ - ಎಂದೂ ಸಾಧ್ಯ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಎ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸರಳ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ II
ಸಿಜ್ಜಾ ಇನ್ ಹಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ II
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪ್ಸು ಅಥವಾ
ರಿಪ್ಲೈಕಾರ್ಡ್ ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ವಿದ್ಯಾಪೀಠ
ಬಳ್ಳಾರಿ ೩

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಅದಕ್ಕಿಂತಲೂ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಭಾರತ

ಸೋಮವಾರ ಏಪ್ರಿಲ್ 1–4–1957

ವರ್ಷ 20 ಸಂಚಿಕೆ 23–	ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!!	ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್

ಮೋಟಾರು ವಾಹನಗಳ ಇಲಾಖೆಯ ಪುನರ್ವ್ಯವಸ್ಥೆ

1956 ನೆಯ ಇಸವಿ ನವೆಂಬರ್ 1 ನೇ ತಾ. ರಾಜ್ಯಗಳ ಪುನರ್ವ್ಯವಸ್ಥೆಯ ಪರಿಣಾಮವಾಗಿ ಮೈಸೂರು ರಾಜ್ಯದಲ್ಲಿ ಸಂಪೂರ್ಣವಾಗಿ ಹೊಸ ಪರಿಸ್ಥಿತಿಗಳು ಉಂಟಾಗಿವೆ. ಆದುದರಿಂದ ಮೋಟಾರು ವಾಹನಗಳ ಕಾನೂನು ಮತ್ತು ನಿಯಮಗಳನ್ನು ಮತ್ತು ತೆರಿಗೆ ಕಾನೂನುಗಳನ್ನು ಆಚರಣೆಗೆ ತರುವುದರಲ್ಲಿ ಸಮಾನ ರೀತಿಯ ಪದ್ಧತಿಯನ್ನು ರೂಪಿಸುವುದು ಅಗತ್ಯವೆಂದು ಕಂಡು ಬಂದು ಸರ್ಕಾರವು ಇಡೀ ರಾಜ್ಯವನ್ನು ಈ ಕೆಳಗಿನಂತೆ ಮೂರು ಪ್ರದೇಶಗಳಾಗಿ ವಿಭಾಗಿಸಬೇಕೆಂದು ನಿರ್ಧಾರ ಮಾಡಲಾಗಿದೆ.

..... ಕೆಂದಾಯದ ಜಿಲ್ಲೆಗಳು .....

೧) ಬೆಂಗಳೂರು ಪ್ರದೇಶ :—

ಬೆಂಗಳೂರು, ಬಳ್ಳಾರಿ, ಚಿತ್ರದುರ್ಗ ಕೋಲಾರ ಮತ್ತು ತುಮಕೂರು ಇವುಗಳ ಮುಖ್ಯ ಕಛೇರಿ ಬೆಂಗಳೂರಿನಲ್ಲಿ.

೨) ಬೆಳಗಾವಿ ಪ್ರದೇಶ :—

ಬೆಳಗಾವಿ, ವಿಜಾಪುರ, ಧಾರವಾಡ, ಉತ್ತರ ಕನ್ನಡ ಇವುಗಳ ಮುಖ್ಯ ಕಛೇರಿ ಬೆಳಗಾವಿಯಲ್ಲಿ.

೩) ಕಲ್ಬುರ್ಗಿ ಪ್ರದೇಶ :—

ಕಲುಬುರ್ಗಿ, ರಾಯಚೂರು, ಮತ್ತು ಬೀದರ್ ಇವುಗಳ ಮುಖ್ಯ ಕಛೇರಿ ಕಲುಬುರ್ಗಿಯಲ್ಲಿ.

೪) ಮಂಗಳೂರು ಪ್ರದೇಶ :—

ಮಂಗಳೂರು, ಕೊಡಗು, ಮತ್ತು ದ. ಕನ್ನಡ ಇವುಗಳ ಮುಖ್ಯ ಕಛೇರಿ ಮಂಗಳೂರಿನಲ್ಲಿ.

೫) ಮೈಸೂರು ಪ್ರದೇಶ :—

ಚಿಕ್ಕಮಗಳೂರು, ಹಾಸನ, ಮಂಡ್ಯ ಮೈಸೂರು (ಕೊಳ್ಳೇಗಾಲ ತಾಲ್ಲೂಕು ನ್ನೊಳಗೊಂಡು) ಮತ್ತು ಶಿವಮೊಗ್ಗಾ ಇವುಗಳ ಮುಖ್ಯ ಕಛೇರಿ ಮೈಸೂರಿನಲ್ಲಿ.

ಇಡೀ ರಾಜ್ಯಕ್ಕೆ ಅನ್ವಯಿಸುವಂಥ ಒಂದೇ ಬಗೆಯ ಕಾಯದೆಗಳ ರಚನೆಯಾಗುವವರೆಗೆ ರಾಜ್ಯ ಸಂಚಾರದ ಮತ್ತು ಪ್ರಾದೇಶಿಕ ಸಂಚಾರ ಅಧಿಕಾರಿಗಳು ತಮಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಪದ್ಯದ ಕಾಯಿದೆಗಳನ್ನೇ ಬಳಕೆಯಲ್ಲಿ ತರುವರು. ಪ್ರಾದೇಶಿಕ ಸಂಚಾರ ಅಧಿಕಾರಿಗಳು ವಾಹನ ಪೌಕರ್ಯಗಳ ಕಾಯಿದೆ ಹಾಗೂ ನಿಯಮಾವಳಿಗಳು ಮತ್ತು ವಾಹನಗಳ ನೋಂದಣಿ ಪುಸ್ತಕದ ನಿಯಮಾವಳಿಗೆ ಸಂಬಂಧಿಸಿದ ಎಲ್ಲ ಕೆಲಸಗಳನ್ನೂ ನೋಡಿಕೊಳ್ಳುವರು ಹಾಗೂ ಪದ್ಯಕ್ಕೆ ಕೆಲಭಾಗಗಳಲ್ಲಿ ಈ ಕೆಲಸ ನೋಡಿಕೊಳ್ಳುತ್ತಿರುವ ಪೋಲೀಸ್ ಮತ್ತು ರೆವೆನ್ಯೂ ಅಧಿಕಾರಿಗಳನ್ನು ಈ ಕೆಲಸದಿಂದ ನಿವೃತ್ತಿಮಾಡಲಾಗುವುದು. ಹಲವೆ ಕ್ಷೇತ್ರಗಳಲ್ಲಿ ಬಳಕೆಯಲ್ಲಿರುವ ಕಾಯಿದೆ ನಿಯಮಾವಳಿಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಮಾಡಲಾಗುವುದು.

ಇಡೀ ರಾಜ್ಯಕ್ಕೆ ರಾಜ್ಯಸಂಚಾರ ಅಧಿಕಾರವನ್ನು ಹಾಗೂ ಹೊಸದಾಗಿ ರಚಿತವಾದ ಪ್ರದೇಶಗಳಿಗೆ ಪ್ರಾದೇಶಿಕ ಸಂಚಾರ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಮಾಡಲಾಗುವುದು.

ಹೀಗೆ ಗೊತ್ತುಮಾಡಿರುವ ಪ್ರತಿಯೊಂದು ಪ್ರದೇಶದ ಮೋಟಾರುವಾಹನಗಳಿಗೂ ಪ್ರತ್ಯೇಕವಾಗಿ ರಿಜಿಸ್ಟ್ರೇಷನ್ ನಂಬರುಗಳನ್ನು ಕೊಡುವುದರಿಂದ ಮೋಟಾರು ವಾಹನಗಳ ಮಾಲೀಕರು ತಮ್ಮ ತಮ್ಮ ವಾಹನಗಳಿಗೆ ಹೊಸ ನಂಬರುಗಳನ್ನು ಪಡೆದು ಮತ್ತೆ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕಾಗಿದೆ.

ಸಾರ್ವಜನಿಕರಿಗೆ ತೊಂದರೆಯಾಗದಿರುವಂತೆ ಪ್ರಾದೇಶಿಕ ವಾಹನ ಸಂಚಾರ ಅಧಿಕಾರಿಗಳ ಪ್ರತಿನಿಧಿಗಳು ಅಲಗಲ್ಲೊಂದು ಸಲವಾದರೂ ಮೊದಲೇ ಗೊತ್ತಾದ ಕಾರ್ಯಕ್ರಮದಂತೆ ಪ್ರತಿ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ಸಂಚರಿಸಿ ಅಲ್ಲಿ ಲೈಸನ್ಸುಗಳನ್ನು ನೀಡುವ ಮತ್ತು ಅರ್ಹತೆಯ ಸರ್ಟಿಫಿಕೆಟ್‌ಗಳನ್ನು ಕೊಡುವ ಕಾರ್ಯ ನಡೆಸುತ್ತಾರೆ.

ಪತ್ರವ್ಯವಹಾರ

"ನವಭಾರತ" ಸಂಪಾದಕರಿಗೆ

ಹರಪನಹಳ್ಳಿ ಚುನಾವಣೆ ಹರಿಜನರಿಗೆ ಅನ್ಯಾಯ

— ಏಕಾಗಿಲ್ಲ —

ನಿಮ್ಮ 25-3-57 ನೇ ಸಂಚಿಕೆಯಲ್ಲಿ ಪ್ರಕಟವಾದ ಹರಪನಹಳ್ಳಿ ಚುನಾವಣೆಯಲ್ಲಿ ಹರಿಜನರಿಗಾದ ಅನ್ಯಾಯ ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನ ನೋಡಿ ವಿಷಾದವಾಗಿ ಈ ಕೆಳಕಂಡ ಉತ್ತರವನ್ನು ಬರೆದಿರುತ್ತೇನೆ. ದಯವಾಡಿ ಪ್ರಕಟಿಸಬೇಕು.

ಹರಿಜನರು ಮಹಾತ್ಮಾಗಾಂಧಿಯವರಿಂದ ಸಕಲ ಸೌಲಭ್ಯಗಳನ್ನೂ ಹೊಂದಿ; ಕಾಂಗ್ರೆಸ್ ಸಂಸ್ಥೆ ಸರಕಾರಗಳಿಂದ ಸಕಲ ಉಪಕಾರಗಳನ್ನು ಪಡೆದು ತಾವೂ ಕೂಡ ಸ್ವತಂತ್ರ ಭಾರತದ ಗಣ್ಯ ಪ್ರಜೆಗಳೆಂದು ಪರಿಗಣಿಸಲ್ಪಟ್ಟು ಈ ಸಲದ ಚುನಾವಣೆಯಲ್ಲಿ ಯಾವ ಸಂಸ್ಥೆಯಿಂದ ತಾವು ಸಮಾಜದಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ್ದರೋ ಅದೇ ಸಂಸ್ಥೆಗೆದ್ರೋಹ ಬಗೆದಿರುವುದು ಹರಿಜನರ ಅನ್ಯಾಯವೆಂದು ನಂಬುವೆ.

ಈ ಕೂಡ್ಲಿಗಿ ತಾಲ್ಲೂಕಿನ ಹರಿಜನರಿಂದಲೇ ಇನ್ನೊಂದು ಕಾದಿದ್ದು ಮುಂದೆ ಅಗ

ಓರ್ವ ಕಾಂಗ್ರೆಸಿಗ
ವಿ. ಅನಂತಗಿರಿ

— ಗೌರವಿಸಿ ಸೋಲಿಸಿದರು —

ಬ್ರಿಟನ್ನಿನ ಸೂರ್ಯ ಸ್ನಾನ ಸಂಸ್ಥೆಯು ಹೀಸ್ ಗ್ರೇಸ್, ಡ್ಯುಕ್ ಆಫ್ ಬೆಟ್‌ಫೋರ್ಡ್ ಅವರಿಗೆ "ನ್ಯೂಡಿಸ್ಟ್ ಆಫ್ ಆನರ್" (ಗೌರವಿತ ನಗ್ನ) ಎಂಬ ಪದವಿಯನ್ನಿತ್ತು ಗೌರವಿಸಿತು. ಇತ್ತೀಚೆಗೆ ಈ ಸಂಸ್ಥೆಯ ಅಧ್ಯಕ್ಷರಾದ ಡಾ|| ಜೊಗ್ಲಾಸ್ ಗಿಬ್ಬನ್ ರವರು ಡ್ಯುಕ್‌ರಿಗೆ ಈ ಪದವಿಯನ್ನು ಕೊಡಲು ಕಾರಣವೆಂದರೆ ಇವರಲ್ಲೇ ನಡೆಯಲಿರುವ ಅಂತರಾಷ್ಟ್ರೀಯ ಬೆತ್ತಲೆಯವರ ಕಾಂಗ್ರೆಸ್ ಅಧ್ಯಕ್ಷತೆಯನ್ನು ಡ್ಯುಕ್‌ರು ದಯವಿಟ್ಟು ಒಪ್ಪಿದುದು. ಡ್ಯುಕ್‌ರು ಕಾನ್ಸ್ ರಾಜ ಭವನಕ್ಕೆ ನಗ್ನ ಜಾಥವನ್ನು ಸ್ವಾಗತಿಸಲಿರುವರು. ಈ ಬೆತ್ತಲೆಯವರನ್ನು ಹೇಗೆ ಸ್ವಾಗತಿಸುತ್ತೀರಿ? ಎಂದು ಕೇಳಿದ್ದಕ್ಕೆ ಡ್ಯುಕ್‌ರು ಕೊಟ್ಟ ಉತ್ತರ— ಒಂದಿಷ್ಟಾದರೂ ಬಟ್ಟೆ ತೊಟ್ಟು

ಒಂದು ಬಾಣ ೧೦೦೦ ಡಾಲರ್

ವಿಲಿಯಂ ಸಿಗ್ಲೆ ಎಂಬ ಟೆಕ್ಸಾಸ್ ನಲ್ಲಿಯ ಶೈಲ ಪೂರೈಯೊಬ್ಬ ಇತ್ತೀಚೆಗೆ ಭೂರೀ ಗಾತ್ರದ ಸಂಪೂರ್ಣ ಬೆಳೆದ ಆನೆಯೊಂದನ್ನು ಒಂದೇ ಬಾಣದಿಂದ ಕೊಂದು ೧೦೦೦ ಡಾಲರುಗಳನ್ನು ಸಂಪಾದಿಸಿದ. ಸಿಗ್ಲೆ ಆನೆಯಿಂದ ಕೇವಲ ೨೦ ಅಡಿಗಳಷ್ಟು ದೂರ ಇದ್ದು ನಿಷ್ಕರೆಸಿ ತನ್ನಲ್ಲಿದ್ದ ಕಬ್ಬಿಣದ ಬಾಣವನ್ನು ತನ್ನ ಕಾರ್ಬೀ-ಬಿಲ್ಲಿನಿಂದ ಬಿಟ್ಟಿದ್ದ.

ನಿದ್ರಾ ನಿದ್ರೆ

ಮೆದುಳಿನಲ್ಲಿ ಏದ್ಯುತ್ಶಕ್ತಿಯನ್ನು ಹರಿದುಬಿಟ್ಟು ಮನುಷ್ಯನು ಧೀರ್ಘನಿದ್ರೆ ಹೋಗುವಂತೆ ಮಾಡಬಹುದೆಂದು ಫ್ರೆಂಚ್ ವಿಜ್ಞಾನಿಗಳು ಹೇಳುತ್ತಾರೆ. ಈ ವಿಧಾನವನ್ನು ಪ್ರೇಗ್‌ನಲ್ಲಿಯ ಮಕ್ಕಳ ಮತ್ತು ಮಾತೆಯರ ಹಿತಚಿಂತನೆಯ ಆಸ್ಪತ್ರೆಯೊಂದರಲ್ಲಿ ರೋಗಿಯೊಬ್ಬರ ಮೇಲೆ ಪ್ರಯೋಗಿಸಲಾಯಿತೆಂದೂ ಅತ್ಯಂತ ಸಹಕಾರಿಯಾದ ಫಲಿತಾಂಶಗಳು ದೊರೆತಿವೆಯೆಂದೂ ಕೇಳಲಾಗಿದೆ.

ಚಟ
ಂದೂ
ನ್ನು
ವಿಜ್ಞಾ
ನಿದ್ರೆ
ನಿದ್ರೆ
ಯ
ವರು

ಗೋಧಿ ಬೆಳೆ ಚೆನ್ನಾಗಿ ಬರಲಿ

ಬೋಕಾರ್ನ್(ಹಿರಂಗಾದಾಬಾದ್) ಮತಗಟ್ಟೆಯಲ್ಲಿ ನುಂಗಿಳಿಯೊಂದು 'ಮತಶಕ್ತಿ' ಯನ್ನು ಪ್ರಾರ್ಥಿಸುತ್ತಿರುವಂತಾಗಿ ಅಧಿಕಾರಿಗಳಿಗೆ ತಿಳಿದು ಬಂದಿತು ಆಕೆ ಏನು ಕಾಲವಾದರೂ ಹೊರಗೆ ಬಾರದಿರಲಿ :—

ಪೋಲಿಂಗ್ ಆಫೀಸರರು ಒಳಹೊಕ್ಕು ನೋಡಿದಾಗ ಆ ಮಹಿಳೆ ಪೆಟ್ಟಿಗೆಯ ಬಿಲ್ಲೆಟ್ ಬಾಕ್ಸ್‌ನಿಮುಂದೆ ಕುಳಿತು ಚಿಂತನೆಯಲ್ಲಿ ಮುಳುಗಿದ್ದಳು. ಮತ ಪೆಟ್ಟಿಗೆಗೆ ಹೂವು ಕುಂಕುಮಗಳ ಅಲಂಕಾರವಾಗಿತ್ತು. ಅಧಿಕಾರಿಗಳಿಗೆ ಬೇಗನೆ ಹೊರಗೆ ಬರಬೇಕೆಂದು ತಿಳಿದಾಗ ಆಕೆಯು ಹೊರಗೆ ಬಂದು ಹೇಳಿದಳು! "ಮತ ಪೆಟ್ಟಿಗೆಯಲ್ಲಿ ಒಂದಾ ಮುಷ್ಟಿ ಗೋಧಿ ಕಾಳುಗಳನ್ನೂ ಕೂಡಾ ಹಾಕಿದ್ದೇನೆ. ಗೋಧಿ ಬೆಳೆ ಈ ಸಾರಿ ಸಮೃದ್ಧಿಯಾಗಿ ಬೆಳೆಯಬೇಕೆಂಬುದೇ ನನ್ನ ಪ್ರಾರ್ಥನೆ.

.... ಭಾರತದ ಗೋಣಿ ...

ಭಾರತದ ಸೆಂಟ್ರಲ್ ಜ್ಯೂಟ್ ಕಮಿಟಿಯು 1 ಅಂಶವನ್ನು ಸ್ಪಷ್ಟಪಡಿಸಿದೆ.

ಭಾರತದ ಗೋಣಿಯಿಂದ ಸಿದ್ಧವಾದ ಚೀಲವೊಂದು 82 ವರ್ಷಗಳ ಕಾಲ ಸೇವೆ ಸಲ್ಲಿಸಿದುದು ಕಂಡು ಬಂದಿದೆ ಬ್ರಿಟಾನಿಯಲ್ಲಿ ಕಾಳಿನ ವ್ಯಾಪಾರಿಗಳಲ್ಲಿ ಚೀಲವೊಂದು ಉತ್ತಮ ಸ್ಥಿತಿಯಲ್ಲಿದ್ದುದೆಂದು ಗೊತ್ತಾಗಿದೆ. ಅದರ ಮೇಲೆ 1874 ನೇ ಇಸ್ವಿಯ ಮುದ್ರೆ ಇದೆ. ಡಿಸ್ರೇಲಿ ಆಗ ಮುಖ್ಯ ಮಂತ್ರಿಗಳಾಗಿದ್ದರು.

ಮೈಸೂರು ಮಹಾ ಜನಾವಣೆಯ ಪಾಠ

ಮೈಸೂರು ಸಂಸ್ಥಾನದಲ್ಲಿ ಮಹಾ ಜನಾವಣೆಯು ಮುಗಿದು, ಎಲ್ಲ ಫಲಿತಾಂಶಗಳು ಬಂದ ನಂತರ, ಈಗ ಕಾಂಗ್ರೆಸ್ ಪಕ್ಷವು ಕಳೆದ ಬಾರಿಗಿಂತ 27 ಹೆಚ್ಚಿನ ಸ್ಥಾನಗಳನ್ನು ಪಡೆದು, ಕ್ಯಾದಿಗಿ ಬಲದಿಂದ ಜರ್ಜರಿತವಾಗಿ ನಿಂತಿವೆ. 208 ಸದಸ್ಯ ಸಂಖ್ಯೆಯ ನೂತನ ಮೈಸೂರು ವಿಧಾನ ಸಭೆಯಲ್ಲಿ 150 ಸ್ಥಾನಗಳನ್ನು ಪಡೆದಿರುವ ಕಾಂಗ್ರೆಸ್ ಪಕ್ಷವು ಅಗತ್ಯ ಬಹುಮತಕ್ಕಿಂತ 45 ಸ್ಥಾನಗಳನ್ನು ಅಧಿಕವಾಗಿ ಗಳಿಸಿದ್ದರೂ ಸಹ, ಅದರ ವಿರುದ್ಧ ಪಕ್ಷಗಳಲ್ಲಿ ಒಟ್ಟು 58 ಜನ ಸದಸ್ಯರಿದ್ದಾರೆ. ಅದೇ ಪ್ರಕಾರ ವಿಧಾನ ಸಭೆಯಲ್ಲಿ ಕಾಂಗ್ರೆಸ್‌ನವರು 177 ರಷ್ಟು ಬಹು ಸಂಖ್ಯೆಯಲ್ಲಿದ್ದಾರು. ವಿರೋಧ ಪಕ್ಷಗಳಲ್ಲಿ 30 ಮಂದಿ ಸದಸ್ಯರು ಮಾತ್ರ ಇದ್ದಾರೆ.

ಕಾಂಗ್ರೆಸ್‌ನ ಶಕ್ತಿಯು ಈರೀತಿ ಕುಂಠಿತವಾದುದು ಪಕ್ಷದ ದೃಷ್ಟಿಯಿಂದ ವಿಷಾದಕರವಾದರೂ, ದೇಶದ ಹಿತದೃಷ್ಟಿಯಿಂದ ಪಕ್ಷದಲ್ಲಿ ಈ ರೀತಿಯ ಕುಲುಕಾಟ ಆಗುವುದು ಅತ್ಯಗತ್ಯವಾಗಿದ್ದಿತು! ಆ ಕುಲುಕಾಟವು ಈಗಲಾದರೂ ಕಾಂಗ್ರೆಸ್ ಪಕ್ಷವನ್ನು ಎಚ್ಚರಿಸಲು ಸಾಧಕವಾಗುವುದೆಂದು ನಂಬುತ್ತೇವೆ. ಈ ರೀತಿ ಕಾಂಗ್ರೆಸ್ ಪಕ್ಷದ ಶಕ್ತಿ ಕಡಮೆ ಆಗಲು ಮುಖ್ಯವಾದ ಕಾರಣವೆಂದರೆ, ಜನಸಾಮಾನ್ಯರ ಮುನ್ನಡೆಗಾಗಿ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಕಾಂಗ್ರೆಸ್ ನಾಯಕರು ಆಗಿಂದಾಗ್ಗೆ ಸುಚಾರ ವೈಖರಿಯು ಸಿಸ್ವತ್ಸವೂರ್ಣವಾಗಿದ್ದುದು; ಕಾಂಗ್ರೆಸ್ ಪ್ರಮುಖರು ಇತ್ತೀಚೆಗೆ ರೀತಿ-ನೀತಿಗಳ ಬಗ್ಗೆಯೂ ಜನರು ನಿರ್ಜನವಾಗಿ ಕಳವಳಗೊಂಡಿರುವುದು, ಕಾಂಗ್ರೆಸ್‌ನ ಕೆಲವು ವ್ಯಕ್ತಿಗಳಿಂದ ನಡೆದಿರುವ ಅನ್ಯಾಯ – ಅಪಚಾರಗಳ ಬಗ್ಗೆ ಜನರು ರೋಸಿಹೋಗಿದ್ದರು. ಹೀಗಿದ್ದರೂ ಕಾಂಗ್ರೆಸ್‌ಗೆ ಇಷ್ಟಾದರೂ ಸ್ಥಾನಗಳು ಬಂದಿರುವುದನ್ನು ನೋಡಿದರೆ, ಜನತೆಯು ವ್ಯಕ್ತಿಗಳ ಮೇಲಿನ ಅಭಿಮಾನಕ್ಕಿಂತ ಸಂಸ್ಥೆಯ ಮೇಲಿನ ಮಮತೆಯಿಂದ ಮತ್ತು ಸಂಸ್ಥೆಯ ವಿಷಯದಲ್ಲಿನ ಹೆಮ್ಮೆಯಿಂದ ಮತದಾನ ಮಾಡಿದ್ದಾರೆಂಬುದು ವ್ಯಕ್ತಪಡುವುದು. ಜನರು ಎಚ್ಚೇ ಅವಧಾನಗಳಾಗಿರುವುದೂ ಕಾಂಗ್ರೆಸ್‌ನ ವಿಚಾರದಲ್ಲಿ ತನ್ಮೂಲಕ ರೂಢಮೂಲವಾಗಿರುವ ಸ್ಥಿರ ವಿಶ್ವಾಸಗಳನ್ನು ಈ ಜನಾವಣೆಯ ಮೂಲಕ ವ್ಯಕ್ತಪಡಿಸುತ್ತಾರೆ

ಪ್ರಜಾ ಪ್ರಭುತ್ವದ ದೃಷ್ಟಿಯಿಂದ ಪ್ರಬಲವಾದ ವಿರೋಧ ಪಕ್ಷವು ಇರುವುದು ಅವಶ್ಯಕ ಉನ್ನತ ತತ್ವಗಳ ಆಧಾರದ ಮೇಲೆ ರೂಪಿತವಾದ ಭದ್ರ ವಿರೋಧ ಪಕ್ಷವು ನಮ್ಮಲ್ಲಿಲ್ಲವೆಂದೇ ಹೇಳಬೇಕಾಗಿದೆ. ಇದಕ್ಕೆ ಕಾರಣವೆಂದರೆ ಅವಿಧಾನ ಸಂಯೋಜನೆಯವು ವಿರೋಧ ಪಕ್ಷಗಳಿಗೆ ಇಲ್ಲದಿರುವುದೇ; ಒಂದಾನ ಉತ್ತಮ ಪರಿಸ್ಥಿತಿಯಲ್ಲಿ, ಜನತೆಯು ತನ್ನ ಬಲಿಷ್ಠ ರಕ್ಷಣೆಗಾಗಿ ಕಾಂಗ್ರೆಸಿಗೇ ಮೊರೆ ಹೋಗಬೇಕಾಗಿದೆ. ಅಡಳಿತದಲ್ಲಿರುವ ಕಾಂಗ್ರೆಸ್ ಪಕ್ಷವು ತಪ್ಪು ಹಾದಿ ಹಿಡಿದರೂ, ಅವನ್ನು ಎಚ್ಚರಿಸಿ ತಿದ್ದುವಂತಹ ಬಲಿಷ್ಠ ವಿರೋಧ ಪಕ್ಷವು ಇಲ್ಲದಿರುವುದೇ ವಿರೋಧ ಪಕ್ಷವು ಬೆಳೆದು ಬರುವ ತನಕ, ಜನತೆಯು ಕಾಂಗ್ರೆಸ್‌ನ ತಪ್ಪುಗಳನ್ನು ನುಂಗಿಕೊಳ್ಳಬೇಕಾಗಿದೆ.(ನುಂಗಿದರೆ ಗಂಟಲು ಸುಡುತ್ತದೆ ಉಗುಳಿದರೆ ತುಪ್ಪ ಚಲ್ಲುತ್ತದೆ ಎನ್ನುವ ಹಾಗಾಗಿದೆ)

[ಮುಂದಿನ ಪುಟಕ್ಕೆ]

ಮೈಸೂರು ಮಹಾ ಚುನಾವಣೆಯ ಪಾಠ

(ಹಿಂದಿನ ಪುಟದಿಂದ)

ಕಾಂಗ್ರೆಸ್‌ನಲ್ಲಿ ದೇಶಕ್ಕೋಸ್ಕರ ತ್ಯಾಗ ಮಾಡಿದವರೂ ನಿಸ್ವಾರ್ಥತೆಯಿಂದ ಕೂಡಿದವರೂ, ನೀತಿವಂತರೂ ಅನೇಕ ಮಂದಿ ಇದ್ದಾರೆ. ಈ ಚುನಾವಣೆಯಿಂದ ಕಾಂಗ್ರೆಸ್ ಮುಖಂಡರು ಒಂದು ಪಾಠ ಕಲಿಯಬೇಕಾಗಿದೆ. ಕಾಂಗ್ರೆಸ್‌ನಲ್ಲೇ ಗುಂಪುಕಟ್ಟುವುದು, ಪರಸ್ಪರ ಅಪಪ್ರಚಾರಮಾಡುವುದು; ಕೋಮುವಾರು ಭಾವನೆಗಳಿಂದ ವರ್ತಿಸುವುದು, ಮತ್ತು ಸ್ವಾರ್ಥ ಹಿತಕ್ಕೋಸ್ಕರ ಯಾವ ಮಾರ್ಗವನ್ನಾದರೂ ಹಿಡಿಯುವುದು ಹೀಗೆ ಮಾಡುವುದರಿಂದ ಸಂಸ್ಥೆಗೇ ಹಾನಿ ಎಂಬುದನ್ನು ಕಾಂಗ್ರೆಸ್‌ನವರು ಇನ್ನಾದರೂ ಸರಿಯಾಗಿ ಅರಿತು ವರ್ತಿಸಬೇಕಾಗಿದೆ. ಇಂತಹ ಅಪಮಾರ್ಗಗಳನ್ನು ಕಾಂಗ್ರೆಸಿಗರು ತ್ಯಜಿಸಿದ್ದರೆ, ಸಂಸ್ಥೆಯ ಪುನರುದ್ಧಾರವಾಗುವುದು ಸಾಧ್ಯವಿಲ್ಲ. ಆದ್ದರಿಂದ ಕಾಂಗ್ರೆಸ್ ನಾಯಕರು ಈಗಲಾದರೂ ದೂರದೃಷ್ಟಿಯಿಂದ ಸರಿಯಾಗಿ ವರ್ತಿಸದಿದ್ದಲ್ಲಿ ಮುಂದಿನ ಚುನಾವಣೆಯ ಸಮಯ ಕ್ಕೆ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯು ಭೂಗತವಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಸಂಸ್ಥೆಗೆ ಇಂತಹ ದುರ್ಗತಿ ಬಂದಿತೆಂದರೆ ದೇಶಕ್ಕೆ ಅಪಕಾರ ಎಂಬುದನ್ನೂ ನಾವು ಒತ್ತಿ ಹೇಳಬೇಕಾಗಿದೆ. ಏಕೆಂದರೆ ನಾಡಿನಲ್ಲಿ ಸರಿಯಾದ ವಿರೋಧ ಪಕ್ಷವು ಉತ್ತಮ ನ್ಯಾಯಕತ್ವದಲ್ಲಿ ಬಲಪಡಬೇಕು ಇರುವಂತಹ ಸಂದರ್ಭದಲ್ಲಿ, ಕಾಂಗ್ರೆಸ್ ಪಕ್ಷವು ಕುಸಿಯಿತೆಂದರೆ, ದೇಶದಲ್ಲಿ ಅನಾಯಕತ್ವವೂ, ಅಸ್ಥಿರವೂ ತಲೆದೋರುವುದು. ಆದ್ದರಿಂದ ಕಾಂಗ್ರೆಸ್ ಸಂಸ್ಥೆಯನ್ನು ದೇಶದ ಹಿತದೃಷ್ಟಿಯಿಂದ ಎತ್ತಿ ಹಿಡಿದು ನಿಲ್ಲಿಸಬೇಕಾಗಿದೆ; ಇದನ್ನು ಕಟ್ಟಬೇಕಾಗಿದೆ. ಆದ್ದರಿಂದ ಇನ್ನಾದರೂ ಕಾಂಗ್ರೆಸ್ ಮುಖಂಡರುಗಳು ಪ್ರಸಕ್ತ ಚುನಾವಣೆಯಿಂದ ಪಾಠ ಕಲಿತು, ಹಿಂದಿನ ತಮ್ಮ ಪರಸ್ಪರ ವೈಮನಸ್ಸನ್ನೆಲ್ಲಾ ಮರೆತು ದೇಶದ ಹಿತ ಮತ್ತು ಕಾಂಗ್ರೆಸ್ ಪಕ್ಷದ ಹಿತವನ್ನೇ ದೊಡ್ಡದಾಗಿ ಇಟ್ಟುಕೊಂಡು ದುಡಿಯಬೇಕಾಗಿದೆ; ಕಾಂಗ್ರೆಸ್ ಸಂಸ್ಥೆಗೆ ಅಂಟಿರುವ ಕಳಂಕವನ್ನು ತೊಡೆದು ಹಾಕಬೇಕಾಗಿದೆ.

ದ್ವಿತೀಯ ಯೋಜನೆಯ ಅವಧಿಯಲ್ಲಿ

ಒಂದು ಕೋಟಿ ಟನ್ನುಗಳಷ್ಟು ಹೆಚ್ಚು ಸಿಮೆಂಟ್ ಹೊಸದಾಗಿ ಕಂಪನಿಗಳ ಸ್ಥಾಪನೆ-

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಿಮೆಂಟಿನ ಉತ್ಪಾದನೆಯ ಪ್ರಮಾಣವು ಒಂದು ಕೋಟಿ ಟನ್ನುಗಳಷ್ಟು ಹೆಚ್ಚುವುದು.

ಈಗ ಸಿಮೆಂಟಿನ ಉತ್ಪಾದನೆಯ ಪ್ರಮಾಣವು ವರ್ಷಕ್ಕೆ 60 ಲಕ್ಷ ಟನ್ನು ಗಳಷ್ಟಿರುವುದು. ದ್ವಿತೀಯ ಯೋಜನೆಯ ಅವಧಿಯಲ್ಲಿ ಅದು 1·6 ಕೋಟಿ ಟನ್ನುಗಳಷ್ಟಕ್ಕೆ ಏರುವುದೆಂದು ನಿರೀಕ್ಷಿಸಲಾಗಿದೆ.

ಭಾರತದಲ್ಲಿ ಈಗ ಸುಮಾರು 28 ಸಿಮೆಂಟ್ ಕಾರ್ಖಾನೆಗಳಿರುವುವು. ಅವುಗಳಲ್ಲಿ ಉತ್ತರ ಪ್ರದೇಶ ಸರ್ಕಾರವು 2 ಕಾರ್ಖಾನೆಗಳನ್ನು, ಮೈಸೂರು ರಾಜ್ಯ ಸರ್ಕಾರವು 1 ಕಾರ್ಖಾನೆಯನ್ನು ಹೊಂದಿದೆ. 1960 ರ ನೇಳಿಗೆ ಭಾರತದಲ್ಲಿ ಸಿಮೆಂಟ್ ಕಾರ್ಖಾನೆಗಳ ಸಂಖ್ಯೆಯನ್ನು 64 ಕ್ಕೆ ಏರಿಸುವ ನಿರೀಕ್ಷೆಯಿರುವುದು. ಈಗಿರುವ ಸಿಮೆಂಟ್ ಕಾರ್ಖಾನೆಗಳ ವಿಸ್ತರಣೆಯ ಜೊತೆಗೆ ಹೊಸದಾಗಿ 31 ಕಾರ್ಖಾನೆಗಳನ್ನು ಸ್ಥಾಪಿಸುವ ಯೋಜನೆಯನ್ನು ಭಾರತ ಸರ್ಕಾರದವರು ಅನುಮತಿಸಿರುವರು. ಈ ಕಾರ್ಖಾನೆಗಳು 56 ಲಕ್ಷ ಟನ್ನು ಗಳಷ್ಟು ಸಿಮೆಂಟಿನ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿರುವುವು. ಅವು ಆಂಧ್ರಪ್ರದೇಶ 7 ಮುಖ್ಯ 7) ರಾಜಾಸ್ಥಾನ 3) ಅಸ್ಸಾಂ 2) ಪಶ್ಚಿಮ ಬಂಗಾಳ 2) ಮದರಾಸ್ 2) ಉತ್ತರ ಪ್ರದೇಶ 1) ಬಿಹಾರ 1) ಒರಿಸ್ಸಾ 1) ಪಾಂಡಿಚೆರಿ 1) ಮೈಸೂರು 1) ಈಗಿರುವ ಸಿಮೆಂಟ್ ಕಾರ್ಖಾನೆಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಒಟ್ಟು 44 ಲಕ್ಷ ಟನ್ನುಗಳಷ್ಟು ಹೆಚ್ಚು ಮಾಡಿಕೊಳ್ಳುವಂತೆ ಕಾರ್ಖಾನೆಗಳನ್ನು ವಿಸ್ತರಿಸಲಾಗುವುದು

(1 ನೇ ಪುಟದಿಂದ)

ಕಾದಿರಿಸಿದೆಯೆಂದು ಅದರಲ್ಲಿ ಹೇಳಿಲ್ಲ. ಸರ್ಕಾರಿ ಪ್ರಕಟನೆಯಲ್ಲಿ ಬಾರಿಕಾ, ಬಾರಕಿ, ಕೊರಚ, ಕೊರಮ, ಲಂಬಾಣಿ ಹರಿಜನ ಇತ್ಯಾದಿಯಾಗಿ ನಮೂದಿಸಿದೆ. ಹೀಗಿದ್ದು ಕಾಂಗ್ರೆಸ್, ಲಂಬಾಣಿಗಳಿಗೆ ಆ ಸ್ಥಳಕೊಟ್ಟಿದ್ದು ತಪ್ಪೇನು? ಹರಿಜನರಿಗಾಗಿಯೇ ಆ ಸ್ಥಳ ಮೀಸಲಿದ್ದು ಕಾಂಗ್ರೆಸ್ ಅದನ್ನು ಕಡೆಗಣಿಸಿ, ಬೇರೆ ಪರಿಶಿಷ್ಟ ವರ್ಗದವರಿಗೆ ಕೇಡುಮಾಡಿದ್ದರೆ ಕಾಂಗ್ರೆಸ್ ತಪ್ಪಿತಸ್ಥನಾಗುತ್ತಿತ್ತು.

ಒಂದುವೇಳೆ ಹರಿಜನರನ್ನು ಕಡೆಗಣಿಸಿರುವರೆಂದು ಒಪ್ಪಿಕೊಳ್ಳೋಣ ಹಾಗಿದ್ದಲ್ಲಿ ತಮ್ಮ ನ್ಯಾಯವಾದ ಹಕ್ಕನ್ನು ಬೇರೆ ಮಾರ್ಗವಾಗಿ ಸುಸಂಘಟಿತರೀತಿಯಾಗಿ ಗೆದ್ದುಗುಬಹುದಿತ್ತು. ಅದು ಬಿಟ್ಟು ಕಾಂಗ್ರೆಸ್‌ನಿಂದ ಯಲ್ಲಾರೀತಿಯಿಂದಲೂ ಉಪಕಾರ ಹೊಂದಿ ಈಗ ಕಾಂಗ್ರೆಸ್‌ನ ವಿರುದ್ಧ ಮತವಿತ್ತದ್ದು, ಅಕ್ಷಮ್ಯ ಅಪರಾಧವಲ್ಲದೆ ಮತ್ತೇನು? ಸಮಾಜದಲ್ಲಿ ಸ್ಥಾನ ಸಿಗಬೇಕಾದಾಗ ಮತ್ತು ಇತರ ಸೌಲಭ್ಯಗಳನ್ನು ಪಡೆಯಬೇಕಾದಾಗ ಕಾಂಗ್ರೆಸ್ ಬೇಕಾಗಿತ್ತು, ಅಸ್ಪೃಶ್ಯತೆ ನಿವಾರಣೆಯಾಗಬೇಕಾದಾಗ ಬೇಕೆತ್ತು. ಈಗಲಾದ ಚುನಾವಣೆಯಲ್ಲಿ ಯಃಕಶ್ಚಿತ ಒಂದು ಸ್ಥಳವನ್ನು ಇನ್ನೊಂದು ಪರಿಶಿಷ್ಟ ವರ್ಗದವರಿಗೆ ಕೊಟ್ಟ ಮಾತ್ರಕ್ಕೆ ಆ ಮಹಾ ಸಂಸ್ಥೆಗೆ ವಿರುದ್ಧ ಮತವಿತ್ತದ್ದು ಮಹಾಪರಾಧವಲ್ಲದೆ ಮತ್ತೇನು? ಈ ಚುನಾವಣೆಯಲ್ಲಿ ಹರಿಜನರು ಜಾತೀಯತೆಗೆ ಪ್ರಾಮುಖ್ಯತೆಯನ್ನು ಕೊಟ್ಟರಲ್ಲದೆ, ಕಾಂಗ್ರೆಸ್‌ನಲ್ಲಿ ವಿಶ್ವಾಸವಾಗಲಿ ನಿಷ್ಠೆಗಲಿ ಕಾದುಕೊಂಡು ಬರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಹರಪನಹಳ್ಳಿಯಲ್ಲಾದ ಸೋಲು ಕಾಂಗ್ರೆಸ್ ಸಂಸ್ಥೆಗಾಗಲಿ, ನಿಂತವ್ಯಕ್ತಿಗಾಗಲಿ, ಪ್ರತಿಷ್ಠೆಗೆ, ಆಗಲಿ ಯಾವತರಹವಾದ ಪೆಟ್ಟು ಕುಂದಿಲ್ಲ.

ಮತದಾರರಲ್ಲಿ ತಿಳುವಳಿಕೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಕೂಡ್ಲಿಗಿ—ಹರಪನಹಳ್ಳಿ ಮತದಾರರ ಕ್ಷೇತ್ರಕ್ಕೆ ದಿಕ್ಕಿಲ್ಲದಂತೆ ಆಯಿತು. ಈ ತಾಲ್ಲೂಕುಗಳಲ್ಲಿ ಆಗಬೇಕಾಡ ಆಭಿವೃದ್ಧಿ ಕೆಲಸಗಳು ಸ್ಥಗಿತಗೊಳ್ಳುವುದರಲ್ಲಿ ಸಂದೇಹವಿಲ್ಲ. ಕೂಡ್ಲಿಗಿ—ಹರಪನಹಳ್ಳಿ ಮತದಾರರು ಹರಿಜನರಂತೆ ಜಾತೀಯತೆಗೇನೆ ಪ್ರಾಮುಖ್ಯತೆ ಕೊಟ್ಟು ಇಡೀಮತದಾರ ಕ್ಷೇತ್ರಕ್ಕೇನೇ ಅನ್ಯಾಯಮಾಡಿದ್ದಾರೆ. ಮುಂದೆಯಾದರೂ ಮತದಾರರು ತಮ್ಮ ಸದಸದ್ವಿವೇಕನವನ್ನು ಉಪಯೋಗಿಸಿ ಮತದಾನಮಾಡುವರೆಂದು ನಂಬುವ.

ಓರ್ವ ಕಾಂಗ್ರೆಸಿಗ
ವಿ ಅನಂತಗಿರಿ

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯೌಷಧ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎಂದೂ ಸಾಧ್ಯ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—,,— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ ೪
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಅಥವಾ
ರಿಪ್ಲೈಕಾರ್ಡು ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ

Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. S. KESHAVA RAO at Nava Bharat Printing Press, Bellary.

ಸಮಾಚಾರ

ಸೋಮವಾರ ಏಪ್ರಿಲ್ 8,15–4–1957

ವರ್ಷ 20 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ಪಾಂಕಿಕ್ಕೆ. | ಸಂಪಾದಕ ಮತ್ತು ಪ್ರಕಾಶಕ
ಸಂ 21–25 | ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!! | ಟಿ. ಜಿ. ಕೇಶವರಾವ್

ಬಳ್ಳಾರಿ ರೇಟು ಪೇಯರ್ಸ್ ಸಂಘದ ತೀರ್ಮಾನಗಳು

ಅಡ್ವೊಕೇಟ್ ಶ್ರೀ ಗುಂಡೂರಾವ್ ಅವರ ಅಧ್ಯಕ್ಷತೆಯಲ್ಲಿ ರೇಟ್ ಪೇಯರ್ಸ್ ಸಂಘದ ಸಭೆಯು ಪರಿಶೀಲನೆಗೆ ತಂದಿದ್ದ ಅನೇಕ ವಿಷಯಗಳ ಬಗ್ಗೆ ಬಹಳ ಚರ್ಚೆ ನಡೆಯಿತು. ಪ್ರಜಾತಂತ್ರದ ಆಡಳಿತದಲ್ಲಿ ಅಧಿಕಾರಿಗಳ ಮತ ಭಿನ್ನತೆಯನ್ನು ಸಂಯಮದಿಂದ ತೆಗೆದು ಕೊಂಡು ನಡೆದುಕೊಳ್ಳುವುದು ಟೀಕೆಗೆ ಗುರಿಯಾಯಿತು. ಈ ಮುಂದೆ ಕಂಡ ಹಲವು ತೀರ್ಮಾನಗಳಾದುವು.

ಒಂದು ಕಡೆ ಸಂಚಾರ ವ್ಯವಸ್ಥೆ

ಮದುವೆ ಮೆರವಣಿಗೆ, ಶವಗಳನ್ನೊಯ್ಯುವ ಕಾಲದಲ್ಲಿ ಏಕಮಾರ್ಗ ನಿರ್ಬಂಧವನ್ನು ಹೇರಬಾರದು. ಬಿಂಗಳೂರು ರೋಡ್–ಕೃಷ್ಣಸಾಚಾರ್ ರೋಡಿನಿಂದ–ಗೋಲ್ಡಸ್ಮಿತ್ ರೋಡ್‌ವರೆಗಿನ ಒಂದುಕಡೆ ಸಂಚಾರವನ್ನು ಅದರಿ ಅಲ್ಲಿಂದ ಮುಂದೆ ಕಟುಕರಂಗಡಿ ಬೀದಿಯವರೆಗೆ ಬಿಂಗಳೂರು ರಸ್ತೆಯ ಅಗಲವಿರುವ ಕಾರಣ ಎರಡೂ ಕಡೆ ಸಂಚಾರಕ್ಕೆ ಅಡ್ಡಿ ಇರಬಾರದು. ಇದಕ್ಕೆ ಅನುಕೂಲಪಡಿಸಲು ಎರಡೂ ಕಡೆ ಇರುವ ಹಣ್ಣಿನಂಗಡಿ ಚಿಲ್ಲರೆ ಅಂಗಡಿಯವರನ್ನು ತಪ್ಪಿಸಬೇಕು. ಜನರು ಓಡಾಡುವ ಬದಿದಾರಿಗಳನ್ನು ರಿಪೇರಿ ಮಾಡಿಸಬೇಕು. ಮುನಿಸಿಪಾಲಟಿಯವರು ತಮ್ಮ ಮಾರ್ಕೆಟ್ಟಿನಲ್ಲಿ ಹಣ್ಣಿನವರಿಂದ ಕಂಟ್ರಾಕ್ಟರ ಮೂಲಕ ಹೇರಳ ಹಣ ವಸೂಲಿಮಾಡುವ ಪದ್ಧತಿ ಹೋಗಬೇಕು ಪೋಲೀಸ್‌ನವರ ಎಚ್ಚರಿಕೆಯಿದ್ದರೆ ಸಂಚಾರಕ್ಕೆ ತೊಂದರೆಯಾಗಲಾರದು. ಇತರ ಸ್ಥಳಗಳಲ್ಲಿ ಒಂದು ಕಡೆ ಸಂಚಾರ (ಅಂದರೆ– ಕೂಬಾಜಾರ್ ರಸ್ತೆ ಹಾಗೂ ಮೈನಾರಿಟಿರೋಡ್ ಬಿಟ್ಟು ಅವಶ್ಯಕ ಸೈಕಲ್‌ರಿಕ್ಷಾ ಇತರ ಭಾಗಗಳಲ್ಲಿರುವ ವಿದ್ಯಾಬ್ಯಾಸ ತೆರಿಗೆ ಪುಸ್ತಕ ಭಂಡಾರದವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಜಾಗೆ ತಂದಿರುವುದು ಅನ್ಯಾಯ ಇದನ್ನು ತೆಗೆದು ಹಾಕಬೇಕು"

"ಚಿತ್ರದುರ್ಗ, ದಾವಣಗೆರೆ ಹರಿಹರ ವಗೈರೆ ಮುನಿಸಿಪಾಲಟಿಗಳಲ್ಲಿರುವಂತೆ ಆಕ್ಟ್ರಾಯ್ ದರವಸ್ತುಗಳ ವ್ಯಾಪ್ತಿಯನ್ನು ಬಳ್ಳಾರಿ ಮುನಿಸಿಪಾಲಟಿಯಲ್ಲೂ ಜಾರಿಗೆ ತರಬೇಕು. ಒಂದು ಕಣ್ಣಲ್ಲಿ ಸುಣ್ಣ ಒಂದು ಕಣ್ಣಿನಲ್ಲಿ ಬೆಣ್ಣೆ ನೀತಿಯು ಹೋಗಬೇಕು"

"ಬಳ್ಳಾರಿ ಮುನಿಸಿಪಾಲಟಿಯವರು ರಿಜಿಸ್ಟರ್ಡ್ ಸಂಸ್ಥೆಯು ಕೇಳಿದ ಪ್ರಶ್ನೆಗಳಿಗೆಲ್ಲ ತೃಪ್ತಿಕರವಾದ ಜವಾಬು ಕೊಡಬೇಕು ಸದಸ್ಯರುಗಳೆಲ್ಲ ಮೌನವಾಗಿರುವುದು ಒಳ್ಳೆಯದಲ್ಲ.

ಸರ್ಕಾರದ ಶಾಖಾ ಕಚೇರಿಗಳು

ಮೈಸೂರು ಸರ್ಕಾರವು ಶಾಖಾ ಕಚೇರಿಗಳನ್ನೆಲ್ಲ ಬೆಂಗಳೂರು ಮೈಸೂರುಗಳಲ್ಲಿ ತುಂಬುತ್ತಿರುವುದು ಬಳ್ಳಾರಿ ಜನತೆಯ ದೃಷ್ಟಿಯಲ್ಲಿ ಸ್ವಹಿತಕ್ಕೆ ಅಭಿಮಾನವನ್ನು ಸೂಚಿಸುತ್ತದೆ. ಮದ್ರಾಸ್ ರಾಜ್ಯದಲ್ಲಿ ದ್ದಾಗ ಬಳ್ಳಾರಿ ನಗರದಲ್ಲಿ ಶಾಖಾ ಕಚೇರಿಗಳಿದ್ದವು. ಈಗ ಮೈಸೂರವರು ಇದ್ದ ಡಿ. ಐ. ಜಿ ಕಚೇರಿ ತೆಗೆದು, ಐ.ಜಿ. ಪಿ.ಓ. ಕಚೇರಿ ತೆಗೆಯಲಿದ್ದಾರೆ. ಸರ್ಕಾರದವರು ಶೀಘ್ರವಾಗಿ ಬಳ್ಳಾರಿಗೆ ಗಮನ ಕೊಡಬೇಕು.

ಕೇಂದ್ರ ಸರ್ಕಾರದ ರೈಲ್ವೆ ಖಾತೆಯು ಬಳ್ಳಾರಿಯಲ್ಲಿ ಡಿವಿಜನಲ್ ಸೂಪರಿಂಟೆಂಡೆಂಟರ ಕಚೇರಿ ಸ್ಥಾಪಿಸಬೇಕು. ನೌಕರರು ಗೃಹನಿಕ್ಕಾಗಿ ಬಳ್ಳಾರಿಯಿಂದ ಗಂಟಲ್ಲಿಗೆ ಹೋಗಬೇಕಾಗಿದೆ ಗುಂತಕಲ್ಲಿನಲ್ಲಿ ಕೆಲಸಿರುವ ನೀವಾಗಿ ಕ್ವಾರ್ಟರ್ಸ್ ಅಭಾವದಿಂದ ಹಾಗೆಯೇ ರೈಲ್ವೆ ಕಂಪೆಯು ಬಳ್ಳಾರಿ ಗುಂತಕಲ್ಲು ರೋಲ್ ಗಾಡಿಗಳನ್ನು ಪುನಃ ಪ್ರಾರಂಭಿಸಿ, ಗಾಡಿಗಳಲ್ಲಿನ ಜನಸಂದಣಿಯ ಅವ್ಯವಸ್ಥೆಯನ್ನು ತಪ್ಪಿಸಬೇಕು ಇವಗಳಿಂದ ರೈಲ್ವೆ ಪ್ರಯಾಣ ಕಾಲಕ್ಕೂ ಸಮಾಧಾನವುಂಟಾಗಿ.

ಮೈಸೂರು ಮುಖ್ಯಮಂತ್ರಿಗಳು

ಶ್ರೀ ಯಸ್. ನಿಜಲಿಂಗಪ್ಪನವರು—

ಗ—4—57ರ ದಿನಾಂಕ ಮೈಸೂರು ಶಾಸನಸಭೆಯ ಕಾಂಗ್ರೆಸ್ ನಾಯಕರಾಗಿ ಶ್ರೀ ಯಸ್. ನಿಜಲಿಂಗಪ್ಪನವರು ಅವಿರೋಧವಾಗಿ ಆರಿಸಲ್ಪಟ್ಟರು. ಅವರೇ ಮುಖ್ಯ ಮಂತ್ರಿಗಳಾಗಲಿದ್ದು, ಇನ್ನು ಕೆಲವೇ ದಿನಗಳಲ್ಲಿ ಮಂತ್ರಿಗಳ ಯಾದಿಯನ್ನು ಗವರ್ನರವರಿಗೆ ಒಪ್ಪಿಸಲಿದ್ದಾರೆ.

ಒರಿಸ್ಸಾನಲ್ಲಿ ಕಾಂಗ್ರೆಸ್ ನಾಯಕ ಹರೇಕೃಷ್ಣಮಹತಾಬರು ಒಂಭತ್ತು ಜನ ಮಂತ್ರಿ ಮಂಡಲ ರಚಿಸಿದರು.

ಸಂಯುಕ್ತ ರಾಷ್ಟ್ರ ಪ್ರತಿನಿಧಿ ಜಾರಿಂಗ್ ರವರು ಕಾಶ್ಮೀರದ ವಿಷಯಕ್ಕೆ ಕರಾಚಿಯಲ್ಲಿ ಚರ್ಚೆನಡೆಸಿ ಮತ್ತೆ ದೆಹಲಿಗೆ ಬಂದಿದ್ದಾರೆ.

ಮೂಲಸ್ ಶಾಲೆಯಲ್ಲಿ ಓದುವ ಹುಡುಗರು ಇಜ್ಜೇಗೆ ಎಲ್ಲ ಹುಂಜ ಕೊಡಬೇಕೆಂದು ಸರ್ಕಾರವು ನಿಶ್ಚಯಿಸಿದೆ

— ನೋಟೀಸು —

— ಬಳ್ಳಾರಿ ಮುನ್ಸೀಫರ ಕೋರ್ಟಿನಲ್ಲಿ —

O. S. 93/57

ವಾದಿ :— ರಾಜೆಸಲ್ಲಿ ಸುಬ್ಬಯ್ಯ — ತಂದೆ ಶೇಷಯ್ಯ
ವಯಸ್ಸು 46, ಕಮ್ಮ - ವಾಸಸ್ಥಳ ಬಳ್ಳಾರಿ

Vs

ಪ್ರತಿವಾದಿ :— ಕೋನಮ್ಮ. ಗಾರಿ ದಬ್ಬರ ಹಾಸಿಫಾಮಯ್ಯ
ತಂದೆ - ಕೊಂಡಯ್ಯ ವಯಸ್ಸು 40, ಕಮ್ಮ ಕೃಷಿಕಾಪು
ಸುಗ್ಗನಹಳ್ಳಿ ಕೊಟ್ಟಾಲ (ಕಾಡತನಿ ಮಾರ್ಗ)

— ಪ್ರತಿವಾದಿಗೆ ನೋಟೀಸು —

ಮೇಲ್ಕಾಣಿಸಿದ ನಂಬರಿನ ದಾವೆಯು, ನೀವು ವಾದಿಗೆ ಒರಿಸುಕೊಟ್ಟ ಪ್ರಾಮಸರಿ ನೋಟಿನ ಪ್ರಕಾರಕ್ಕೆ ರೂ 156—9—0 ವಸೂಲಿ ಮಾಡಿಕೊಳ್ಳಲು ದಾಖಲಾಗಿದ್ದು, ಇದರ ವಿಚಾರಣೆಯು 12—4—1957 ಕ್ಕೆ ನಿಮ್ಮ ಹಾಜರಿಗಾಗಿ ಪತ್ರಿಸಲಾಗಿದೆ. ಆ ದಿನ ನೀವು ಖುದ್ದಾಗಲಿ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದರೆ ನಿಮ್ಮ ಪರೋಕ್ಷದಲ್ಲಿ ಇದರ ವಿಚಾರಣೆಯಾಗಿ ಡಿಕ್ರಿಯಾಗುವುದೆಂದು ಈ ನೋಟೀಸು ಮೂಲಕ ತಿಳಿಸಲಾಗಿದೆ.

ಬಳ್ಳಾರಿ
4—4—57

S. ಗುರುರಾಜರಾವ್ B.A.B.L.
ವಾದಿಯ ಅಡ್ವೋಕೇಟ್

— ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ —

ಭಾರತದಲ್ಲಿನಿಯೇ ಪ್ರಥಮವಾಗಿ ಕೇರಳದಲ್ಲಿ ಕಮ್ಯೂನಿಷ್ಟ ಸರಕಾರವನ್ನು ೬—೪—೫೭ ರಂದು ಮುಖ್ಯಾಸ್ಥಾನದಲ್ಲಿ ೩೦ ಗಂಟೆಗೆ ಅಧಿಕಾರ ಸ್ವೀಕರಿಸಿತು

ಮುಖ್ಯ ಮಂತ್ರಿ ಶ್ರೀ ಇ. M. S ನಂಬೂದಿರಿಪಾಡರವರೂ ಅವರ ಮಂತ್ರಿಮಂಡಲದ ಇತರ ಮಂತ್ರಿಗಳೂ ಗವರ್ನರ್ ರಾಮಕೃಷ್ಣರಾವ್ ರವರ ಮುಂದೆ ಅಧಿಕಾರ ಸ್ವೀಕಾರ ಮತ್ತು ಅಧಿಕಾರ ರಹಸ್ಯ ಪ್ರಮಾಣ ವಚನವನ್ನು ಸ್ವೀಕರಿಸಿದರು.

ರಾಜಭವನದಲ್ಲಿಯ ಹೊರ ಪ್ರಾಂಗಣದಲ್ಲಿ ವಿಶೇಷವಾಗಿ ನಿರ್ಮಿಸಿದ್ದ ಚಪ್ಪರದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಿತು.

ಕೊಚ್ಚಿನ್ ಚುನಾಯಿತ ವಿಧಾನಸಭಾ ಸದಸ್ಯರುಗಳೂ, ಪಾರ್ಲಿಮೆಂಟಿನ ಕೇರಳದ ಸದಸ್ಯರುಗಳೂ ಪ್ರಮುಖ ಅಧಿಕಾರಿಗಳೂ, ಪಾಪಕೀರ್ತಿ ಮಹನೀಯರುಗಳೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಪ್ರಮಾಣ ವಚನ ಸ್ವೀಕಾರವಾಗಿ ಕಮ್ಯೂನಿಸ್ಟ್ ಮಂತ್ರಿಗಳು ಭಾರತ ರಾಷ್ಟ್ರಾಂಗಿಯಲ್ಲಿ ವಿಶ್ವಾಸವನ್ನೂ ನಿಷ್ಠೆಯನ್ನು ವ್ಯಕ್ತಪಡಿಸಿದರು. ಸ್ವತಂತ್ರ ಮಂತ್ರಿಗಳಿಬ್ಬರೂ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕಾರಕ್ಕಾಗಿ ಮಂತ್ರಿಗಳಿಬ್ಬರು ಮೂವರಂತೆ ರಾಜಭವನಕ್ಕೆ ಆಗಮಿಸಿದರು.

ಅವರು ಬಂದಾಗ ಕಾರ್ ಗಳಲ್ಲಿ ಕಮ್ಯೂನಿಷ್ಟ್ ಸಕ್ಷದ ಧ್ವಜ ಹಾರಾಡುತ್ತಿತ್ತು. ಅವರಿ ಅವರು ಪ್ರಮಾಣವಚನ ಸ್ವೀಕರಿಸಿ ಹಿಂದಿರುಗಿ ಹೋಗುವಾಗ ಅವರ ಕಾರಿನಲ್ಲಿ ರಾಷ್ಟ್ರಧ್ವಜ ಹಾರಾಡುತ್ತಿತ್ತು.

ಪಂಚೆ ಮತ್ತು ಷರಟು ಧರಿಸಿದ ಮುಖ್ಯಮಂತ್ರಿ

ಸಂಜೆ ಮತ್ತು ಪದವಿನ್ನು ಧರಿಸಿದ್ದ ಮುಖ್ಯಮಂತ್ರಿ ಶ್ರೀ ಶಂಕರನ್ ನಂಬುದರಿಪಾಡರವರು ಪೇದಿಕೆಗೆ ಹೋಗಿ ನೋಡಲು ಪ್ರಮಾಣವಚನ ಸ್ವೀಕರಿಸಿದರು

ಅನಂತರ ಶ್ರೀಗಳಾದ C. ಅಚ್ಯುತ ಮೆನನ್, K. C. ಜಾರ್ಜ್, K. P. ಗೋಪಾಲನ್, T. V. ಥಾಮಸ್, K. P. ಜಾತನ್, ಶ್ರೀಮತಿ K. R. ಗೌರಿ, T. A. ಮಜೀದ್, ಜೋಸೆಫ್ ಮುಂಡಶ್ಶೇರಿ, ಡಾ|| A. R. ಮೆನನ್ ಮತ್ತು V. R. ಕೃಷ್ಣಐಯ್ಯರ್ ಇವರುಗಳು ಕ್ರಮವಾಗಿ ಒಬ್ಬರಾಗುತ್ತಾ ಒಬ್ಬರಂತೆ ಬಂದು ಪ್ರಮಾಣ ವಚನ ಸ್ವೀಕರಿಸಿದರು.

ಅಧಿಕಾರಿಗಳ ಬಗ್ಗೆ ಪರಿಚಯ

ಪ್ರಮಾಣ ವಚನ ಸ್ವೀಕಾರವಾದ ಮೇಲೆ ಸರ್ಕಾರದ ಚೀಫ್ ಸೆಕ್ರೆಟರಿಯವರು ಮುಖ್ಯಮಂತ್ರಿ ಮತ್ತು ಇತರ 10 ಮಂದಿ ಮಂತ್ರಿಗಳಿಗೆ ಅಲ್ಲಿ ಹಾಜರಿದ್ದ ಅಧಿಕಾರಿಗಳನ್ನೂ ಪೊಲೀಸ್ ಮಹನೀಯರನ್ನೂ ಪರಿಚಯಮಾಡಿಕೊಟ್ಟರು.

ಅನಂತರ 11 ಜನ ಮಂತ್ರಿಗಳೂ ರಾಜಭವನದಿಂದ ಪೊಲೀಸ್ ಬೆಂಗಾವಲಾಗಿ ಮಾರ್ಗದಲ್ಲಿ ಕಮ್ಯೂನಿಷ್ಟ್ ಪಕ್ಷದ ಜಿಲ್ಲಾ ಕಮಿಟಿಯ ಕಛೇರಿಯಲ್ಲಿ ಕೆಲ ನಿಮಿಷ ಕಾಲಕಳೆದು ಹೋಟರು.

ಕೇರಳದಲ್ಲಿ ಮಂತ್ರಿಗಳ ಸಂಬಳ

ಕೇರಳದ ಕಮ್ಯೂನಿಷ್ಟ್ ಮಂತ್ರಿಗಳು ತಿಂಗಳಿಗೆ ೫೫೦ ರೂಗಳ ಸಂಬಳವನ್ನು ಪಡೆಯುವರು ಎಂದು ಗೊತ್ತಾಗಿದೆ. ಭಾರತದ ಇತರ ಯಾವ ರಾಜ್ಯದಲ್ಲೂ ಕೂಡ ಇಷ್ಟು ಕಡಿಮೆ ಸಂಬಳವನ್ನು ಮಂತ್ರಿಗಳಿಗೆ ಕೊಡುತ್ತಿಲ್ಲ. ಹೀಗೆ ಕೇರಳದಲ್ಲಿ ಶ್ರೀ ಪಟ್ಟಂ ತಾನು ಪಿಳ್ಳೆಯವರ ಮುಖ್ಯ ಮಂತ್ರಿತ್ವದಲ್ಲಿ P. ಜಿ P. ಮಂತ್ರಿಮಂಡಲ ಸ್ಥಾಪಿತವಾದಾಗ ಮಂತ್ರಿಗಳು ೫೫೦ ರೂ ಸಂಬಳವನ್ನು ಪಡೆಯುತ್ತಿದ್ದರು.

ಸಂಸ್ಕೃತ ಶಾಲೆಯ ವಾರ್ಷಿಕೋತ್ಸವ

5—4—57 ನೆಯ ದಿನಾಂಕ ಶುಕ್ರವಾರ ಸಾಯಂಕಾಲ ದಿವ್ಯಜ್ಞಾನ ಮಂದಿರದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಸಂಸ್ಕೃತ ಶಾಲೆಯ ವಾರ್ಷಿಕೋತ್ಸವವು ನೆರವೇರಿತು. ಗೀತಾ ಶ್ಲೋಕಗಳ ವಾಚನದಲ್ಲಿ ಬಹುಮಾನಗಳನ್ನು ಪಡೆದ ಶ್ರೀಗಳಾದ ಸಂಜೀವ ರಾವ್, M.L.N ರವರೂ ಇನ್ನೂ ಅನೇಕರು ಬಹುಮಾನಗಳನ್ನು ಪಡೆದರು. ಅಧ್ಯಕ್ಷರ ಸಮಾರೋಪ ಭಾಷಣಾನಂತರ ಸಭೆಯು ಮುಕ್ತಾಯವಾಯಿತು.

ನಾಣ್ಯ ಬದಲಾವಣೆ ಯಾಕೆ?

ನಮ್ಮ ದೇಶದಲ್ಲಿ ಇಂದಿನ ಏಪ್ರಿಲ್ ೧ರಿಂದ ಹೊಸ ನಾಣ್ಯಗಳು ಚಲಾವಣೆಗೆ ಬರುತ್ತವೆ ರೂಪಾಯಿಯು ಪೌಲ್ಯವನ್ನು ಯಾವ ರೀತಿಯಿಂದಲೂ ಬದಲಾಯಿಸದೆ, ಭಾರತದಲ್ಲಿ ನಾವು ಂಶ ನಾಣ್ಯ ಪದ್ಧತಿಯನ್ನು ಈ ಹೊಸ ನಾಣ್ಯಗಳು ಬಳಕೆಗೆ ತರುವವು. ಅದೇ ಸಮಯದಲ್ಲಿ ಈಗಿನ ವರ್ತುಲಯಲ್ಲಿರುವ ಕೆಲವು ಣ್ಯಶಿಕ್ರವಾ (ಆಣಾಲಿ)ಗಳನ್ನೂ ಅವು ಕೊನೆಗಾಣಿಸುವವು.

'ರೂಪಾಯಿ' ನಾಣ್ಯವನ್ನು ಈಗ ೧೬ ಆಣೆಗಳನ್ನಾಗಿಯೂ ಪ್ರತಿ ಆಣೆಯನ್ನು ೪ ಕಾಲಾಣೆಗಳನ್ನಾಗಿಯೂ, ಪ್ರತಿ ಕಾಲಾಣೆಯನ್ನು ೫ ಕಾಸುಗಳನ್ನಾಗಿಯೂ ವಿಭಾಗಿಸಲಾಗಿದೆ. ಆದರೆ ಈಗಿರುವ ನಮ್ಮ ಗಳ ಬೆಲೆಗಳ ಮಟ್ಟಗಳಿಗೆ ಹೋಲಿಸಿದಾಗ ೫ ಕಾಸಿನ ಬೆಲೆಯು ತೀರಾ ಕಡಿಮೆಯೆನಿಸುವುದು. ನಮ್ಮ ನಿತ್ಯ ಜೀವನದಲ್ಲಿ ಸಣ್ಣ ಸಣ್ಣ ವ್ಯವಹಾರದಲ್ಲಿಯೂ ಕಾಸನ್ನು ಉಪಯೋಗಿಸಲಾಗುತ್ತಿಲ್ಲ. ಸಾಧ್ಯವಾಗಿ ೧೬ನೆಯ ಶತಮಾನದಿಂದೀಚೆಗೆ ಟಂಕಸಾಲೆಯಲ್ಲಿ ಕಾಸನ್ನು ತಯಾರಿಸಿಯೇ ಇಲ್ಲ; ಅದು ಚಲಾವಣೆಯಿಂದಲೂ ಕಣ್ಮರೆಯಾಗಿರುವುದು.

ನಮ್ಮ ತಯಾರರಲ್ಲಿ ಒಂದು ಕಾಸನ್ನು ನೋಡಿರುವವರ ಸಂಖ್ಯೆಯೂ ಕಡಿಮೆ. ವಾಸ್ತವವಾಗಿ ಚಲಾವಣೆಯಲ್ಲಿರುವ ಸಣ್ಣ ನಾಣ್ಯವೆಂದರೆ, ಕಾಲಾಣೆ ಅಥವಾ ರೂಪಾಯಿನ ೧೬ನೆಯ ಒಂದು ಭಾಗ. ಅನುದಿನದ ಬಳಕೆಯಲ್ಲಿ ಕಾಲಾಣೆಯೇ ಹೆಚ್ಚಾಗಿ ಬೇಕಾಗುವುದು. ಜನನಿಬಿಡ ಗ್ರಾಮಾಂತರ ಪ್ರದೇಶಗಳಲ್ಲಿ, ಜನಭರಿತ ನಗರಗಳಲ್ಲಿ, ಬಸ್ಸುಗಳಲ್ಲಿ ಮತ್ತು ಟ್ರಾಂಗಳಲ್ಲಿ ಜನ ಸಾಮಾನ್ಯರ ಉಪಯೋಗಕ್ಕೆ ಬರುತ್ತಿರುವುದೆಂದರೆ ಕಾಲಾಣೆಯೇ ಒಂದು ಕಾಸಿನ ನಾಣ್ಯವು ಚಲಾವಣೆಯಿಂದ ಮಾಯವಾಗಿದೆ. ಅದು ತನ್ನ ಪತ್ರವನ್ನು ವಹಿಸುತ್ತಿದೆ ಎನ್ನುವುದಾದರೆ, ದರಗಳನ್ನು ಸೊತ್ತು ಮಾಡುವವರು, ಲೆಕ್ಕಾಚಾರ ಮಾಡುವ ಕಾರಕೂನರು ಮುಂತಾದವರ ಮಧ್ಯದಲ್ಲಿ ಮಾತ್ರ.

ಮೂರು ಕಾಸಿನ ನಾಣ್ಯ

ಹೊಸ ನಾಣ್ಯ ಪದ್ಧತಿಯು ಮೂರು ಕಾಸಿನ ನಾಣ್ಯಕ್ಕೆ ಅಗತ್ಯ ಸ್ಥಾನ ಮಾನಗಳನ್ನು ಕೊಡಿಸಿಕೊಡುತ್ತದೆ. ಅದಕ್ಕೆ "ನಯಾ ಪೈಸಾ" ಎಂಬ ನವನಾಮಧೇಯವನ್ನೀಯುತ್ತದೆ. ಈ ನಾಣ್ಯ ಪದ್ಧತಿಯ ಪ್ರಕಾರ ನೆಯ ಇಪ್ಪತ್ತೊಂದು ಭಾಗಗಳಿಗೆ ಸಮಾನವಾಗಿರುತ್ತದೆ. ಸ್ವಾತಂತ್ರ್ಯ ಪ್ರಜಾಸತ್ತೆಯ ಪಲ್ಲಂತ ಉದ್ಘೋಷಗಳನ್ನೊಳಗೊಂಡ "ಉಳುವವನಿಗೆ ಜಮೀನು" ಎಂಬಿವುದಕ್ಕೆ ಸಮಾನಾದ ಪ್ರಾಮುಖ್ಯವನ್ನು ನಯಾ ಪೈಸಾಗೆ ಕೊಡಲಾಗಿದೆ. ಆತಿ ಹೆಚ್ಚಾಗಿ ಚಲಾವಣೆಯಲ್ಲಿರುವ ನಯಾ ಪೈಸಾಗೆ ರೂಪಾಯಿಯ ಪಕ್ಕವಲ್ಲಿ ಸ್ಥಾನ ಕೊಡಲಾಗಿದೆ. ಗೂಪಯಿಗೂ, ನಯಾ ಪೈಸಾಗೂ ಮಧ್ಯೆ ಯಾವ ಮೆಧ್ಯಂತರ ನಾಣ್ಯಗಳೂ ಇರುವುದಿಲ್ಲ.

ಆಣೆ ಲೆಕ್ಕ ಪತ್ರಗಳ ಕ್ಷೇತ್ರದಲ್ಲಿ ಜಮೀನುದಾರನಂತಿ ಅದೃಶ್ಯವಾಗುತ್ತದೆ. ನಯಾ ಪೈಸಾವು ಸಂಬಂಧವನ್ನು ನೇರವಾಗಿ ಕರಣ ರೀತಿಯಲ್ಲಿ ಮುಖ್ಯ ನಾಣ್ಯವಾದ ರೂಪಾಯಿಯೆ. ಂದಿಗೆ ಸೇರಿಸಲಾಗಿದೆ. ಗಂಧಿಸಿಯ ಪೈಸೆಗಳು ಒಂದು ರೂಪಾಯಿ, ಕಾಸು, ಆಣೆಗಳು ಅದೃಶ್ಯವಾಗುವುದಕ್ಕೆ ಮೂರು ವರ್ಷಗಳ ಕಾಲಾವಕಾಶವಿರಿಸಲಾಗಿದೆ. ನಮ್ಮ ಸಂಪ್ರದಾಯಗಳನುಸಾರವಾಗಿ ಆ ನಾಣ್ಯಗಳಿಗೆ ಪೂರ್ಣ ಪರಿಹಾರವನ್ನು ನಯಾ ಪೈಸೆಗಳಲ್ಲಿ ಕೊಡಲಾಗುವುದು.

ಪರಿವಾರದ ಪ್ರಮಾಣವನ್ನು ನಮ್ಮ ಪಾಲಿಸಿಂಟ್ ಹಿಂಗಿಸಿರುವಂತೆ ಸರ್ಕಾರವೆನಾ ಪರಿವರ್ತನೆ ಚಕ್ರಗಳಿಗೆ ಸಲಹೆಗಳನ್ನು ಪ್ರಕಟಿಸಿರುವರು. ಸಾರ್ವಜನಿಕರಿಗಾಗಿ ಇವನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರಕ್ಕೆ ತರಲಾಗಿದೆ. ಲಂಡಾಗ್ಗೆ ವೃತ್ತ ಪತ್ರಿಕೆಗಳೂ ಅವುಗಳನ್ನು ತಮ್ಮ ಪುಟಗಳಲ್ಲಿ ಪ್ರಕಟಿಸುತ್ತಿವೆ. ಚಿಲ್ಲರೆ ವ್ಯವಹಾರಗಳಿಗೆ ಕೋಸ್ಕರವು ಉ ಯೋಗಕ್ಕೆ ಬರುವುದಾದರೂ ಸಾರ್ವಜನಿಕರು ನಾಲ್ಕಾಣೆಯನ್ನು ೫ನ ನಯೇ ಪೈಸೆಗಳಿಗಳಿಗೆ ಪರಿವರ್ತಿಸಿಕೊಳ್ಳಬಹುದೆಂಬುವನ್ನು ಗಮನದಲ್ಲಿಟ್ಟುಕೊಂಡಿರಬೇಕು. ಅದೇ ಈಗ ಹೊಸ ಮತ್ತು ಹಳೆಯ ಪದ್ಧತಿ ನಾಣ್ಯಗಳ ನಡುವಿನ ಕಾವುಹೆಕ್ಕಾಪು ಏಪ್ರಿಲಿಯ ಸೂತ್ರವಾಗಿರುವುದು. ಸಾಮಾನ್ಯ ವ್ಯವಹಾರಗಳಲ್ಲಿ ಹಳೆಯ ಎರಡು ಕಾಲಾಣೆಗಳ ಮೂರು ನಯಾ ಪೈಸಾಗಳಿಗೆ ಸಮನೆಂದು ಪರಿಗಣಿಸಬಹುದು.

ಹಳೆಯ ಪದ್ಧತಿಯ ೨ಕಾಲಾಣೆಗಳನ್ನು ೩ನಯಾ ಪೈಸಾಗಳೆಂದು ಅಥವಾ ಒಂದಾಣೆಗೆ ೬ ನಯಾ ಪೈಸಾಗಳೆಂದು ಪರಿಗಣಿಸುವೆ ಸಣ್ಣ ಪುಟ್ಟ ವ್ಯವಹಾರಗಳಲ್ಲಿ ಅಗುವ ಲಾಭಕಥವಾ ನಷ್ಟ ತೀರ್ಮಲ್ಪವೆನ್ನಬಹುದು ಅಂಗಡಿಯವರು ಮತ್ತು ಕೊಳ್ಳುವ ಜನರು ತಮ್ಮ ಅನುದಿನದ ವ್ಯವಹಾರದಲ್ಲಿ ನಾಲ್ಕಾಣೆಗಿಂತ ಕಡಿಮೆ ನಾಣ್ಯಗಳ ವಿಷಯ ಬಂದಾಗ ಒಂದಾಣೆಗೆ ೬ ನಯಾ ಪೈಸೆಯು ಪರಿವರ್ತನೆಯ ಸೂತ್ರವೆಂದು ತೋರಿಸಿಕೊಡಲಿದ್ದಾರೆ.

ನಿಮಗಿದು ಗೊತ್ತೆ?

(೧) ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಜಲಜನಕ ಶಕ್ತಿಯನ್ನು (ಹೈಡ್ರೋ) ಮತ್ತು ಉಷ್ಣ ಜನಿತ (ಥರ್ಮಲ್) ವಿದ್ಯುಚ್ಛಕ್ತಿಯ ಉತ್ಪಾದನೆಯು ೩೬ ಲಕ್ಷ ಕಿಲೋ ವ್ಯಾಟ್‌ಗಳಿಂದ 80 ಹೆಚ್ಚುವರಿ ೫೦ ಲಕ್ಷ ಕಿಲೋ ವ್ಯಾಟ್‌ಗಳನ್ನು ದ್ವಿತೀಯ ಯೋಜನೆಯ ಅವಧಿಯಲ್ಲಿಯೂ, ೨೧೦ ಲಕ್ಷ ಕಿಲೋ ವ್ಯಾಟ್‌ಗಳನ್ನು ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೂ ಹೆಚ್ಚುವುದು.

(೨) ಭಾರತದಲ್ಲಿ ವರ್ಷಕ್ಕೆ ೨೦ ಕೋಟಿ ರೂಗಳನ್ನು ಬೆಲೆ ಬಾಳುವ ವಿದ್ಯುಚ್ಛಕ್ತಿ ಸಂಬಂಧವಾದ ಸಾಮಗ್ರಿಗಳ ಉತ್ಪಾದನೆಯನ್ನು ಹೆಚ್ಚಿಸಲಾಗುವುದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 60 ಕೋಟಿ ರೂಗಳನ್ನು ಬೆಲೆ ಬಾಳುವ ವಿದ್ಯುಚ್ಛಕ್ತಿ ಸಂಬಂಧ ಸಾಮಗ್ರಿಗಳನ್ನು ಉತ್ಪಾದಿಸಲಾಗುವುದು.

(೩) ೧೯೫೧ ರಲ್ಲಿ ವಿದ್ಯುಚ್ಛಕ್ತಿ ಸಂಬಂಧಿ ಕೈಗಾರಿಕೆಗಳಲ್ಲಿ ಬಂಡವಾಳ ತೊಡಗಿಸಿದ ಮೌಲ್ಯವು ಸುಮಾರು 7 ಕೋಟಿ ರೂಗಳಷ್ಟಿತ್ತು. ೧೯೫೬ ರಲ್ಲಿ ಅದು 17.೫ ಕೋಟಿ ರೂಗಳಿಗೆ ಏರಿತು.

(೪) ೧೯೫೧ ರಿಂದ ೧೯೫೬ ರ ವರೆಗಿನ ಅವಧಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಉತ್ಪಾದನೆಯು ೧೮೩,೦೦೧ ಕೆ. ವಿ. ಎ. ಗಳಿಂದ ೫೫೪,೦೦೦ ಕೆ.ವಿ. ಎ. ಗಳಿಗೆ ಏರಿದೆ. ವಿದ್ಯುತ್ ಮೀಟರುಗಳ ಸಂಖ್ಯೆಯು 14೨,೫೬೦ ಅಕ್ಷರಕ್ಕೆ ಯಿಂದ ೫೬೦,೦೦೦ ಅಕ್ಷರಕ್ಕೆ ಗಿಂತ.

(೫) ಕೇಬಲ್ ವಾಹಕ ವೈರ್‌ಗಳ ಉತ್ಪಾದನೆಯು ಮೌಲ್ಯವು ಮಾತ್ರ ೪ ಕೋಟಿ ರೂಗಳಷ್ಟಿದ್ದು, ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 11 ಕೋಟಿ ರೂಗಳಿಗೆ ಏರಿದೆ.

ತಲೆನೋವು, ತಲೆಸುತ್ತು, ಜ್ವರ, ಮೈಕೈ ನೋವು, ಶೀತಜ್ವರ, ಮಲೇರಿಯಾ, ಮತ್ತು ಎಲ್ಲ ನೋವುಗಳಿಗೆ ದಿವ್ಯೌಷಧ

ಕಾಶ್ಮೀರ ಅರುಕ್

ಲೇಪನೆ, ಸೇವನೆ - ಎಂದೂ ಸಾಧ್ಯ ಎಲ್ಲಾ ಔಷಧಗಳಲ್ಲೂ ದೊರೆಯುತ್ತದೆ.

H. S & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಬಟ್ಟೆಯನ್ನು
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ದನದ ಬೆಣ್ಣೆಯಿಂದ, ಅತ್ಯುತ್ತಮ ರಾಸಾಯನಿಕ
ದ್ರವ್ಯಗಳಿಂದ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.

ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.

ಮೇನೇಜರ್, ಎ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸಾಗರ ಹಿಂದೀ ಬೋಧಿನಿ
ಸುಗಮ ಹಿಂದಿ I
" " II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3 0-0

ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ತಾತ್ಪರ್ಯಿಕ ಕಹಾನಿ
ಹಿಂದೀರಚನೆ ೪
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಯಾಂಪಲ್ಸ್ ಅಥವಾ ರೂಲ್ಸ್‌ಕಾರ್ಡ್ ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೨

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
೬ ತಿಂಗಳಿಗೆ 3—0—0	Six months 3—0—0
ಚಂದಾದಾರಿಕೆ ಕಡಿಮೆ ಅಂದರೆ ೬ ತಿಂಗಳಿಗೆ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ನವಚೇತನ

ಸೋಮವಾರ ಏಪ್ರಿಲ್ 29–4–1957

ವರ್ಷ 20· ಸಂಚಿಕೆ 27– | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. 6-5-57 | ಸಂಪಾದಕ ಮತ್ತು ಪ್ರಕಾಶಕ
ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!! | ಟಿ. ಬಿ. ಕೇಶವರಾವ್

ಮಾತೃ ಪ್ರಧಾನ ಸಮಾಜ ರಚನೆ !

—: ವಿನೋಬಾ :—

ಸ್ತ್ರೀಯರು ಸಮಾಜ ರಚನೆಯ ಕಾರ್ಯದಲ್ಲಿ ನೇತೃತ್ವ ವಹಿಸಬೇಕು. ಮಾತೃಪ್ರಧಾನ ಸಮಾಜ ರಚನೆ ಎಗ್ಗೆಬೇಕು. ಇದು ಹೊಸ ವಿಚಾರವೇನೂ ಅಲ್ಲ. ಆದರೆ ಸಾಮಾಜಿಕ ಕ್ಷೇತ್ರದಲ್ಲಿ ಅವರ ಪ್ರಯೋಗ ಆಗಿಲ್ಲ ಎಂದು ಮನುಷ್ಯನು ಹೇಳುತ್ತಾನೆ. ಮಂತ್ರ ಹೇಳುವ ಉಪಾಧ್ಯಾಯ, ಅರ್ಥ ಹೇಳುವವ ಆಚಾರ್ಯ—

ಉಪಾಧ್ಯಾಯಾನ್ ದಶ ಆಚಾರ್ಯಃ
ಆಚಾರ್ಯಾನಾಂಶತಂಪಿತಾ,
ಪಿತರಂಶತು ಪಿತೃನ್ ಮಾತಾ,
ಗೌರವೇಣ ಅತಿ ಉಚ್ಯತೇ

ಅರ್ಥ :— 10 ಜನ ಉಪಾಧ್ಯಾಯರಿಗೆ ಒಬ್ಬ ಆಚಾರ್ಯ ಸಮ, ನೂರು ಮಂದಿ ಆಚಾರ್ಯರಿಗೆ ಒಬ್ಬ ತಂದೆ ಸಮ 1000 ತಂದೆಗಳಿಗಿಂತ ಒರ್ವ ತಾಯಿಯ ಗೌರವ ಹೆಚ್ಚು ಎಂಬುದು ಈ ಪದ್ಯದ ಅರ್ಥ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಇಷ್ಟೊಂದು ಗೌರವವನ್ನು ಕೊಟ್ಟಿದ್ದಾರೆ. ಸ್ತ್ರೀ ಎಂಬ ಶಬ್ದಕ್ಕೆ 'ಮಹಿಳಾ' ಎಂಬ ಶಬ್ದವೂ ಇದೆ. ಮಹಿಳೆ ಎಂದರೆ 'ಮಹಾನ್' ಎಂಬರ್ಥ. ಇದುವರೆಗೆ ಸಮಾಜರಚನೆ ಪುರುಷರ ಕೈಯಲ್ಲಿ ಕುಟುಂಬ ರಚನೆ ಸ್ತ್ರೀಯರ ಕೈಯಲ್ಲಿತ್ತು ಇನ್ನು ಮುಂದೆ ಕುಟುಂಬ ರಚನೆಯಲ್ಲಿ ಗಂಡಸರೂ ಸ್ವಲ್ಪಭಾಗ ತೆಗೆದುಕೊಳ್ಳಬೇಕು. ಒಂದು ಹೊಸ್ತಿನ ಅಡಿಗೆಯನ್ನು ಗಂಡಸರೇ ಮಾಡಬೇಕು. ಪ್ರತಿಯೊಬ್ಬ ಹುಡುಗನಿಗೂ ಪಾಕಶಾಸ್ತ್ರ ವಿಜ್ಞಾನ ಒಲಿತಾಗಿ ಇರಬೇಕು. ಈ ನಿಟ್ಟಿಗೆ ಅಡಿಗೆ ಮಾಡುವುದು ಹೆಂಗಸರ ಕೆಲಸ ಎಂಬ ಭಾವನೆ ಹೋಗಿ ಎಲ್ಲರೂ ಅಡಿಗೆ ಮಾಡುವುದು ಸಾಮಾನ್ಯ ಗಂಡಸರಿಗೆ ಊಟವೂ ಬಡಿಸಲು ಅನಿಷ್ಟಾರ ಹೊರೆಯುವಂತಾಗಬೇಕು. ಹೆಂಗಸರೂ ಸಮಾಜ ರಚನೆಯ ಕಾರ್ಯದಲ್ಲಿ ತಮ್ಮ ಪಾತ್ರ ವಹಿಸಬೇಕು. ಗಂಡಸರು ಮನೆಗೆ ಲಸದಲ್ಲಿ ಸ್ವಲ್ಪಭಾಗ ವಹಿಸಬೇಕು. ಇದು ಸಮಾಜ ರಚನೆಯ ಜವಾಬ್ದಾರಿಯನ್ನು ಪೂರ್ಣವಾಗಿ ಗಂಡಸರೇ ಹೊತ್ತಿದ್ದರು. ಅದರ ಪರಿಣಾಮವಾಗಿ ಎಷ್ಟೋ ಮಹಾಯುದ್ಧಗಳಾದವು, 3 ನೇ ಮಹಾಯುದ್ಧದ ಭೀತಿಯೂ ಅನೇಕ ಕಡೆ ಹರಡಿದೆ.

ಸಮಾನತೆಯೇ ? ಮಾನತೆಯೇ ?

ಈಗಿನ ಕಾಲದ ಸ್ತ್ರೀಯರು ತಾವು ಪುರುಷರಿಗೆ ಸಮಾನರಾಗಬೇಕೆಂದು ಹೇಳುತ್ತಾರೆ. ಗಂಡಸರಿಗೆ ಸರಿ ಮಿಗಿಲಾದರೆ, ತಾವು ಬಹಳ ಉಚ್ಚಸ್ಥಿತಿಗೆ ಬರುವುದಾಗಿ ಭಾವಿಸುವ 'ಮೂರ್ಖತನ' ಅವರಲ್ಲಿದೆ. ಮನು ಅವರಿಗೆ ಸಹಸ್ರಶಃ ಹೆಚ್ಚಿನ ಸ್ಥಾನ ಕೊಟ್ಟಿದ್ದ. ಆದರೆ ತಾವು ಗಂಡಸರಿಗೆ ಸಮಾನರಾದರೆ ಸಾಕು ಎನ್ನುತ್ತಾರೆ ಈ ಹೆಂಗಸರು! ಆದೆಷ್ಟಾ ಇರಲಿ 1) ಗಂಡಸರು ಬೀಡಿ ಕುಡಿದರೆ ಇವರೂ ಕುಡಿವರೇ ? 2) ಗಂಡಸರು ಹೆಂಡ ಕುಡಿದರೆ ಇವರೂ ಕುಡಿವರೇ ? ಈ ದೇಶದಲ್ಲಿ ಎಲ್ಲರೂ ಸರಿಸಮಾನರಾಗಬೇಕೆಂಬ ಮಾತೇನಾ ಗಂಡಸರು ಹೆಂಗಸರಿಗೆ ಯಾವ ರೀತಿಯ ಸಮಾನತೆ ಕೊಡುವರು? ಗಂಡಸರ ಸೇನೆಯ ತುಕಡಿಗಳನ್ನು ಮಾಡುವಂತೆ ಹೆಂಗಸರ ಸೇನೆಯ ತುಕಡಿಗಳನ್ನು ಮಾಡುವುದು ತಾನೆ? ಸಂಹಾರ ಕಾರ್ಯ ಗಂಡಸರಿಂದ ಪೂರ್ಣವಾಗಿ ಆಗಿಲ್ಲವೆಂದು ಹೆಂಗಸರನ್ನೂ ಆ ಕಾರ್ಯಕ್ಕೆ ಕರೆಸಬೇಕೇ? ಇಂಗ್ಲೆಂಡ್ ಅಮೇರಿಕಾಗಳಲ್ಲಿ ಸ್ತ್ರೀ ರಾಜ್ಯಸೇನಾ ತುಕಡಿಗಳು ಅಸ್ತಿತ್ವದಲ್ಲಿವೆ. ಈ ಸ್ಥಿತಿಯಲ್ಲಿ ಸ್ತ್ರೀಯರೂ ಸಮಾಜರಚನೆಯ ಕಾರ್ಯದಲ್ಲಿ ಪ್ರವೇಶಿಸಬೇಕಾದ ಅವಶ್ಯಕತೆಯಿದೆ. ಹಾಗೆ ಮಾಡುವುದರ ಮೂಲಕ, ಗಂಡಸರ ಕೈಯನ್ನು ತಡೆಗಟ್ಟಬೇಕು. ಇದರ ಹೆಸರೇ 'ಮಾತೃ ಪ್ರಧಾನ ಸಮಾಜ ರಚನೆ' ಅಂದರೆ ಅಹಿಂಸಾ ಪ್ರಧಾನ ಸಮಾಜ ರಚನೆ ಮಾತೆ ಮಕ್ಕಳಿಗೆಲ್ಲ ತಿನ್ನಿಸಿದ ಮೇಲೆಯೇ ತಾನು ತಿನ್ನುತ್ತಾಳೆ. ಆಕೆ ಮಕ್ಕಳಿಗೆ 'ನನ್ನಿಂದ ತಾನೆ ನೀವು! ನಾನು ದೃಷ್ಟ ಪುಷ್ಟವಾಗದೆ ಹೇಗೆ ಉಣಿಸಲು ಸಾಧ್ಯ? ಮನೆಯಲ್ಲಿ ಹಾಲು ಹೆಚ್ಚಾಗಿಲ್ಲ. ಆದ್ದರಿಂದ ನಾನೇ ಮೊದಲು ಕುಡಿದುಬಿಡುವೆನು—' ಎಂದು ಹೇಳಿಯಾಳೆ? ತಾಯಿ ಎಲ್ಲಕ್ಕಿಂತ ಮೊದಲು ಮಕ್ಕಳಿಗೆ ಹಾಲುಣಿಸುವಳು. ಆ ಮೇಲೆ ಮನೆಯಲ್ಲಿರುವ ಬೇರೆಯವರಿಗೆ ಆಹಾರ ಕೊಡುವಳು ಕೊನೆಗೇನಾದರೂ ಉಳಿದರೆ ಮಾತ್ರ ತಾನು ತಿನ್ನುವಳು. ಇದಕ್ಕೇ ಅಹಿಂಸೆ' ಯನ್ನುವುದು. ಇದುವೇ ಮಾತೃ–ಪ್ರಧಾನ ಸಮಾಜ ರಚನೆ! ಇಂಥ ಸಮಾಜದಲ್ಲಿ ಮಾತೆಯದು ಎಲ್ಲದಕ್ಕಿಂತ ಉಚ್ಚವಾಣಿ! ಇಂಥ ಅಹಿಂಸಾಯುಕ್ತ ಮಾತೃ ಪ್ರಧಾನ ರಚನೆಯೇ ಮುಂದೆ ಆಗಬೇಕಾಗಿರುವುದು.

— ಮೂತು ಮಂತ್ರ ಆಗುವುದೆಂತು —

— ಕಾಂಗ್ರೆಸ್ ಅಧ್ಯಕ್ಷರ ಸಲಹೆ —

ರಾಜಕೀಯೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಧೇಬರ್‌ರವರು ಕಾಂಗ್ರೆಸ್ ಕಾರ್ಯಕರ್ತರಿಗೆ ರಚನಾತ್ಮಕ ಕಾರ್ಯಗಳನ್ನು ಮಾಡಲು ಹಿತೋಪದೇಶಮಾಡಿದ್ದಾರೆ. "ಸ್ವಾರ್ಥಸಾಧಕರಿಂದ" ಸಂಸ್ಥೆಗೆ ಧಕ್ಕೆ ಒದಗುತ್ತಿದೆ. ಎಂದು ಎಚ್ಚರಿಸಿದ್ದಾರೆ. ಸೌರಾಷ್ಟ್ರ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ, ಶಾಸನ ಸಭೆಗಳಿಗೆ ಚುನಾಯಿತರಾಗಬೇಕೆಂಬ ಆಶೆ ದಿನದಿನಕ್ಕೆ ಕಾರ್ಯಕರ್ತರಲ್ಲಿ ಹೆಚ್ಚುತ್ತಿರುವುದಕ್ಕಾಗಿ ವಿಷಾದಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರು ತಮ್ಮ ಅಧ್ಯಕ್ಷ ಗದ್ದುಗೆಯಿಂದ ಉಪದೇಶಮಾಡುವ ಅಧಿಕಾರ ಪಡೆದಿದ್ದಾರೆ ಆದರೆ ವಾಸ್ತವಿಕತೆಯನ್ನು ಪರಿಶೀಲಿಸಿದರೆ ಶ್ರೀ ಧೇಬರ್‌ಜೀರವರ ಹಿತವಚನಗಳು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಶಾಶ್ವತವಾದ ಪರಿಣಾಮವನ್ನುಂಟುಮಾಡಬಲ್ಲವೇ ?— ಸಾಮ್ಯ ಅಧ್ಯಕ್ಷರ ನೀತಿ ಮಂತ್ರವಾಗುವುದೇ? —ಎಂಬ ಪ್ರಶ್ನೆ ತೆರೆಯು ಕಣ್ಣಿನ ಮುಂದೆ ಎದ್ದು ನಿಲ್ಲುತ್ತದೆ.

ಈ ಪರಿಸ್ಥಿತಿಗೆ ಕಾರಣವಾರು? ಎಂದು ಯೋಚಿಸಿದರೆ, ಇದಕ್ಕೆ ಎಲ್ಲಾ ಕಾಂಗ್ರೆಸ್ ಬಂಧುಗಳೂ ತಕ್ಕಮಟ್ಟಿಗೆ ಕಾರಣರಾಗಿರುವಂದೇ ಹೇಳಬೇಕಾಗಿದೆ. ಕಾಂಗ್ರೆಸ್ ಹೈಕಮ್ಯಾಂಡ್ ಎಂಬ ಈ ಪರಿಸ್ಥಿತಿಗೆ ಕಾರಣವೆಂದು ನಾವು ಕಡು ದುಃಖದಿಂದ ತಿಳಿಸುವಂತಾಗಿದೆ.

ಕೆಲವು ವರ್ಷಗಳಿಂದ ಕಾಂಗ್ರೆಸ್ ಹೈಕಮ್ಯಾಂಡ್ ಅತ್ಯಂತ ಪಡಿಯಚ್ಚಿನ ರೀತಿ ಅನುಸರಿಸುತ್ತಾ ಬಂದಿದೆ. ದೇಶದನಾನಾ ಮೂಲೆಗಳಲ್ಲಿ ಕಾಂಗ್ರೆಸ್ ಸದಸ್ಯ ಸಂಖ್ಯೆ ಹಣೆ ಕಾರ್ಯವನ್ನು ಅನೀತಿಯ ಹಾದಿ ಒಡಿದು ಮಾಡಲಾಗುತ್ತಿದೆ ಎಂಬ ದೂರು ಪ್ರತಿ ದ್ವನಿಸುತ್ತಿದ್ದರೂ, ಹೈಕಮ್ಯಾಂಡ್ ಈ ನ್ಯೂನತೆಯನ್ನು ಪರಿಪಡಿಸಲು ಸಾಹಸದಿಂದ ಕೆಲಸಮಾಡಲಿಲ್ಲ. ಹೀಗಾಗಿ ಅನೇಕ ಕಡೆ ಕಾಂಗ್ರೆಸ್ ಪಕ್ಷಗಳು ಸ್ವಾರ್ಥಿ ಕಾಂಗ್ರೆಸಿಗರ ಪಾಳಯವಾಗಿಸಲು ಅವಕಾಶವಾಯಿತು. ಇದರಿಂದ ಅನೇಕ ನೀತಿವಂತರಾದ ಕಾಂಗ್ರೆಸ್ಸಿಗರಿಗೆ ಕಾಂಗ್ರೆಸ್ ಸಂಸ್ಥೆಗಳಲ್ಲಿ ಸ್ಥಳಾವಕಾಶವೇ ಇಲ್ಲದಂತಾಯಿತು. ಕಾರಣ ಇವರಲ್ಲಿ ಅನೇಕರು ಬೇರೆ ರಾಜಕೀಯ ಸಂಸ್ಥೆಗಳಿಗೆ ಹೋಗುವಂತಾಯಿತು.

ಈ ಮೂಲವನ್ನು ಎದಪಡಿಸುವುದೇ ಕಾಂಗ್ರೆಸ್ ಹೈಕಮ್ಯಾಂಡ್ ಎಷ್ಟು ಸಂತಪಿಸಿದರೂ, ಕಾಂಗ್ರೆಸ್ ಸಂಸ್ಥೆಯು ಜೈತನ್ಯದಾಯಕವಾದುದಾಗುವುದಿಲ್ಲ.

ಪ್ರಜಾಪ್ರಭುತ್ವ ಸಿದ್ಧಾಂತವನ್ನು ಮೂರ್ತಿ ಮಾಡುತ್ತಿದ್ದೇವೆಂದು ಜಗತ್ತಿಗೆ ಸಾರುವ ಕಾಂಗ್ರೆಸ್ ಹೈಕಮ್ಯಾಂಡ್, ತೀವ್ರಗತಿಯಿಂದ ಆಲೋಚಿಸಬೇಕೆಂದು, ನಮಗೆ ಅನಿಸುತ್ತಿದೆ.

ಮಹಾ ಚುನಾವಣೆಯಲ್ಲಿ, ಜನತೆಯಲ್ಲಿ ಹೆಚ್ಚು ವಿಶ್ವಾಸ ಹೊಂದಿದಿರುವ ಕೆಲ ಕಾಂಗ್ರೆಸ್ ಘೋಷಣೆಯೂ, ಅವರು ಪರಾಜಿತರಾದರೂ, ಕಾಂಗ್ರೆಸ್ ಅಧಿಕಾರ ಕ್ಷೇತ್ರವನ್ನು ಅವರು ಬಿಡಿಸಲು ಸಿದ್ಧರಾಗುತ್ತಿಲ್ಲ. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ಸಿನಲ್ಲಿ ಮತ್ತೆ ಜವಬ್ದಾರೀಸ್ಥಾನಗಳಿಸಲು ಹವಣಿಸುತ್ತಿದ್ದು ಇನಂಗೆ ಪುನಃ ಅನುಕೂಲ ವಾತಾವರಣವನ್ನು ಕಾಂಗ್ರೆಸ್ ಹೈಕಮ್ಯಾಂಡ್ ರಚಿಸುತ್ತ ಹೋದಲ್ಲಿ ಜನಾಭಿಪ್ರಾಯವು ಕಾಂಗ್ರೆಸ್ ಸಂಸ್ಥೆಗ ಯಾವ ರೀತಿಯಿಂದ ವಿಶೇಷವಾಗಿ ಅನುಗ್ರಹಿಸಿಕೊಳ್ಳಲು ಸಾಧ್ಯವಾಗುವುದು?

ಯಾವ ಮುಖಂಡರು ಚುನಾವಣೆಯಲ್ಲಿ ಜಯ ಪಡೆಯುವೆ ಎಂಬ ಆತ್ಮವಿಶ್ವಾಸ ಸಹಾ ಹೊಂದದೇ ಚುನಾವಣೆಗೇ ನಿಲ್ಲದಿದ್ದರೆ ಅಂಥವರಿಗೆ ಮಂತ್ರಿ ಪದವಿಯನ್ನು, ಹಿಂದಿನ ಬಾಗಿಲಿನಿಂದ ದೊರಕುವಂತಾಗುವುದಲ್ಲ ಇದರ ಪರಿಣಾಮ ದೇಶದ ಮೇಲೆ ಏನಾಗಬಹುದು?

ಕಾಂಗ್ರೆಸ್ ಸರ್ಕಾರದ ಮುಖ್ಯ ಮಂತ್ರಿಗಳ ಪರಿಷ್ಕೃತ ಅದೇ ಮಂತ್ರಿ ಮಂಡಲದಲ್ಲಿ ಅಕಸ್ಮಾತಾಗಿ ಗಳಿಗೆಯವರೆಗೂ ಇದ್ದ ಮಂತ್ರಿಗಳು, ಚುನಾವಣೆಗೆ ನಿಂತಲ್ಲಿ, ಈ ರೀತಿಯ ನೀತಿಗೆ ಕಾಂಗ್ರೆಸ್ ಹೈಕಮ್ಯಾಂಡ್ ಅತೀರ್ವಾದ ಮಾಡಿ ಇದರ ಪರಿಣಾಮ ಕಾಂಗ್ರೆಸ್ ಮಹಾ ಸಂಸ್ಥೆಗೆ ಹೇಗೆ ಅನುಕೂಲಿಸೀತು?

ಈ ರೀತಿಯ ಮೂಲ ತತ್ವಗಳಿಗೆ ಸಂಬಂಧಿತ ಪ್ರಶ್ನೆಗಳು ಒಂದಾನಿಲ್ಲವಾ ಕಾಂಗ್ರೆಸ್ ಹೈಕಮ್ಯಾಂಡ್ ಸಡಿಲ ನೀತಿ ಅನುಸರಿಸುತ್ತಾ ಒಂದ ಪ್ರಯುಕ್ತ ಕಾಂಗ್ರೆಸ್‌ದ ಸ್ವಾರ್ಥ ಶಕ್ತಿಗಳು ತಾವೇ ತಾವಾಗಿ ಬೆಳೆಯಲು ಕಾರಣಾಂಗುತ್ತಿಲ್ಲವೆ?

ಕಾಂಗ್ರೆಸ್ ಮಾನ್ಯ ಅಧ್ಯಕ್ಷರ ಮಾತು ಮಂತ್ರವಾಗುವ ಕಾಲ ಬರಲು ಎಲ್ಲಾ ನಿಷ್ಪಾವಂತ ಕಾಂಗ್ರೆಸಿಗರೂ ತ್ಯಾಗ ವೆಸಗಬೇಕೆನ್ನುವುದರ ಜೊತೆಗೆ ಕಾಂಗ್ರೆಸ್ ಹೈಕಮ್ಯಾಂಡ್ ನಿರ್ಧಾರವ ನೀತಿಯನ್ನು ಅನುಸರಿಸುವುದು ಅತ್ಯಗತ್ಯ. ಕಾಂಗ್ರೆಸಿನ ನೀತಿ ತಿಲಾಂಜಲಿ ಕೊಟ್ಟವರ ಮೇಲೆ ಶಿಸ್ತಿನ ಕಾರ್ಯಕ್ರಮ ತೆಗೆದುಕೊಂಡು ಹೊರಗೆ ಹಾಕದಿದ್ದ ಸಲುವಾಗಿ ಕಾಂಗ್ರೆಸ್ ರಾಜಕೀಯ ಶರೀರದಲ್ಲಿ ತೂರಿದ ಒಂದು ಛಾಗದ ವಿಷವು-ಇಡೀ ಶರೀರವನ್ನೇ ವ್ಯಾಪಿಸುವಂತಾಗಿದೆ.

ಶ್ರೀ ಧೇಬರ್‌ಜೀಯವರು ಮಹಾತ್ಮರ ಶಿಷ್ಯರು. ಗಾಂಧೀಜೀ ಉಪವಾಸ ಎಸಗಿದ ರಾಜಕೀಯ ಲ್ಲಿ ಅವರು ತಮ್ಮ ಹೃದಯದ ದುಃಖವನ್ನು ವ್ಯಕ್ತಪಡಿಸಿದ್ದಾರೆ. ಗಾಂಧೀಜಿಯವರ ಪವಿತ್ರಾತ್ಮವು ಅವರಿಗೆ ಮಾರ್ಗದರ್ಶನ ಮಾಡಿ, ಅವರಿಂದ ಕಾಂಗ್ರೆಸ್ ಹೈಕಮಾಂಡಿಗೂ ತನ್ಮೂಲಕ ದೇಶಕ್ಕೂ ಹೊಸ ಬೆಳಕು ಹರಿಯುವಂತಾಗಲೆಂದು ಆಶಿಸುವ.

ಕಿರಣ ಪ್ರಸರಣವು ಮಾನವ ಜನಾಂಗಕ್ಕೇ ವಿನಾಶಕಾರಿ

ನೊಬೆಲ್ ಶಾಂತಿ ಬಹುಮಾನಿತರ ಎಚ್ಚರಿಕೆ

ಕಿರಣಪ್ರಸರಣ ಜಟುವಟಿಕೆಯು ಮಾನವ ಜನಾಂಗಕ್ಕೆ ವಿನಾಶಕಾರಿಯಾದುದು. ಅದುದರಿಂದ ನ್ಯೂಕ್ಲಿಯರ್ ಶಕ್ತಿ ಪ್ರಯೋಗಗಳನ್ನು ನಿಲ್ಲಿಸಲು ಸಾರ್ವಜನಿಕಾಭಿಪ್ರಾಯ ಎಲ್ಲೆಲ್ಲೂ ರೂಪಗೊಳ್ಳಬೇಕು ಎಂದು ನೊಬಲ್ ಶಾಂತಿಬಹುಮಾನಿತರಾದ ಡಾ|| ಅಲ್ಬರ್ಟ್ ಶ್ವೈಟ್ಸರ್ ರವರು ತಿಳಿಸಿದ್ದಾರೆ.

ನ್ಯೂಕ್ಲಿಯರ್ ಪರೀಕ್ಷಾಸ್ಫೋಟಗಳನ್ನು ನಿಲ್ಲಿಸಬೇಕೆಂದು ಸಾರ್ವಜನಿಕಾಭಿಪ್ರಾಯ ಹೊರಪಟ್ಟಿರುವುದು ಜಿನೀವಾ ಪಟ್ಟಣದಲ್ಲಿ ಮಾತ್ರ ಎಂಬುದನ್ನು ನೊಬೆಲ್ ಪಾರಿತೋಷಕ ಪಡೆದಿರುವ ಡಾ|| ಅಲ್ಬರ್ಟ್ ಶ್ವೈಟ್ಸರ್‌ರವರು ಖೇದದಲ್ಲಿ ಒಂದು ಛಾಪಣಿಯಲ್ಲಿ ತಿಳಿಸಿದರು.

ಬೆಲ್ಜಿಯನ್ ಕಾಂಗೋ ಪ್ರದೇಶದಲ್ಲಿ ಹಿಂದು ಆಸ್ಪತ್ರೆಯಲ್ಲಿರುವ ಅವರು ಲಿಖಿತ ಮುಖೇನ ಈ ಛಾಪಣಿಯನ್ನಿತ್ತರು. ಈ ಛಾಪಣಿಯನ್ನು ರೇಡಿಯೋ ಮೂಲಕ ಪ್ರಸಾರಮಾಡಲಾಯಿತು.

ನ್ಯೂಕ್ಲಿಯರ್ ಪರೀಕ್ಷಾ ಪ್ರಯೋಗಗಳಬಗ್ಗೆ ಹಿಂದೆ ರಾಷ್ಟ್ರಗಳೆಲ್ಲ ಒಂದು ಒಪ್ಪಂದಕ್ಕೆ ಬರುವಂತೆ ಒತ್ತಾಯಪಡಿಸಿ ಎಲ್ಲ ದೇಶಗಳಲ್ಲಿಯೂ ಜನಾಭಿಪ್ರಾಯ ರೂಢಿಸುವಂತೆ ಮಾಡಬೇಕೆಂದವರು ಪ್ರಸ್ತಾಪಿಸಿದ್ದಾರೆ.

IN THE COURT OF THE DISTRICT JUDGE, BELLARY.

O. S. 3 / 1957

Between :—

Yeligara Venkobanna. son of Sankarappa, Manager of the Hindu Joint family, Kampli ..... Plaintiff.

And

1) The Managing Director, M/S; Asquith and Co Fort, Bellary.

2) The Manager, M/S Hindusthan Mining Co, Fort, Bellary.

Please take notice that the above plaintiff has filed the above suit to recover Rs. 25,800/- costs and future interest till recovery. The suit is posted to 8—6—1957 for your appearance to state your objections, if any, and in case of default, the matter will be decided exparte

D. Parimala Char.
Advocate for the plaintiff.

— ವಿನೋಬಾ ಪ್ರಧಾನ ಸರ್ವೋದಯ ಪಜನೆ —

— ವಿನೋಬಾ —

(1 ನೇ ಪುಟದಿಂದ)

ರಂಕರಾಚಾರ್ಯರಂಥ ಮಹಾ ಜ್ಞಾನಿ ಪುರುಷರು ಹುಟ್ಟಿ ಕೊಂಡು ಧನ್ಯವಿದ ಸ್ವರೂಪವನ್ನೇ ಒದಲಿಸಿದರು. ಹಾಗೆಯೇ ಮಹಾ ಜ್ಞಾನಿ ಸರಸ್ವತೀ ಸ್ವರೂಪಿಣಿಯಾದರೂ, ನೈ ಜಾಗತಿಯದ ಪ್ರತ್ಯಕ್ಷಾಣಿಯೂ ಆದ ಸ್ತ್ರೀಯರು ಹುಟ್ಟಿ ಒಂದು ಸರ್ವಾಜದ ರೂಪವನ್ನು ಒದಲಿಸಬೇಕು. ಸ್ತ್ರೀಯರು ಪುರುಷರಿಗೆ ಸಹಾಯಕರಾಗಿ ಒಂದಿಷ್ಟು ಕಾರ್ಯ ಮಾಡಿದರೆ ಸಾಲದು. ಅಷ್ಟರ ಮಾತ್ರ ಮಾಡಿದರೆ ಕೆಲಸವನ್ನು ಹೆಂಗಸರು ಸ್ವತಂತ್ರವಾಗಿಯೇ ಮಾಡಬೇಕು. ಅಂತಲೆ ಗಾಂಧಿಜಿ ಸ್ತ್ರೀಯರ ವಿಷಯವಾಗಿ ಯಾವಾಗಲೂ ಮಾತನಾಡುತ್ತಿದ್ದರು.

ಮಾತೆ .... ಸರ್ವಶ್ರೇಷ್ಠ ಗುರು

ಹೆಂಗಸರು ಗಂಡಸಿಗೆ ಸರಿ ಸಮಿಲಾವರೆ ಸಾಲದು. ಗಂಡಸರು ಬುದ್ಧಿವಂತರಾಗಿದ್ದರೆ ಅದು ಸರಿಯೋಗುತ್ತದ್ದು. ಅವರೆ ಗೆಂಡಸರು ಇಂದು ಮೂರ್ಖರಾಗಿ ಕಾಣಿತಿದ್ದಾರೆ! ಅದ ಕಾರಣ ಹೆಂಗಸರು ಅವರಿಗೆ ಸಮಾನರಾದರೆ, ಸಮಿಪಾದ ಗಂಡಸರನ್ನು ಅಂಕುಶದಲ್ಲಿರಿಸಿ ಕೆಲಸ ಹೆಂಗಸರಿಂದ ಆಗಬೇಕಾಗಿದೆ. ಸಮಾಜ ರಚನೆಯ ಅಂತಿಮ ನಿರ್ಣಯ ಸ್ತ್ರೀಯರಿಂದಲೇ ಆಗಬೇಕು. ಅದ ಕಾರಣ ಸ್ತ್ರೀಯರಿಗೆ ಏನೋ ಒಂದಿಷ್ಟು ಶಿಕ್ಷಣ ಕೊಟ್ಟರೆ ಸಾಲದು. ಗಂಡಸರಿಗೆ ಸ್ವಲ್ಪನೇ ಶಿಕ್ಷಣ ಕೊಟ್ಟರೂ ಸಾಕು ಅವರು ಹೊಲದಲ್ಲಿ ಕೆಲಸಮಾಡಿ ಜನತೆಯಲ್ಲೇ ಜ್ಞಾನವನ್ನು ಪೆಚ್ಚಿಸಿಕೊಳ್ಳುವರು. ಸ್ತ್ರೀಯರಿಗೆ ಒಂದಿಷ್ಟು ಓದಿಸಿಬಿಟ್ಟರೆ ಸಾಲದು. ಅವರಿಗೆ ಸಂಸ್ಕಾರಗಳ ಉತ್ತಮ ಜ್ಞಾನ ಮೂಡಿಸಬೇಕು. 'ಜ್ಞಾನ ಸಾಗರವೇ' ಅವರಿದಾಗಬೇಕು. ಮಾತೆ ಸರ್ವಶ್ರೇಷ್ಠ ಗುರು ವಿನಂತೆ ಮನೆ ಹಾಗೂ ಸರ್ವಾಜದ ನಿಯಂತ್ರಣ ಮಾಡುವವಳಾಗಬೇಕು.

ಮದುವೆಯಲ್ಲಿ ತನ್ನ ಮಕ್ಕಳಿಗೆ ಅಧ್ಯಾತ್ಮಿಕ ಜ್ಞಾನ ನೀಡುವಂತೆ ಮನೆಯವರಿಗೆ ಹಾಗೂ ಇಡೀ ಸಮಾಜಕ್ಕೆ ಅಧ್ಯಾತ್ಮಿಕ ಜ್ಞಾನ ನೀಡುವಂತೆ ಜ್ಞಾನಿಗಳಾದ ಸ್ತ್ರೀಯರು ಹುಟ್ಟಿ ಕೊಳ್ಳಬೇಕು. ವ್ಯಕ್ತಿ ಸಮಾಜ ಜೀವನದಲ್ಲಿ ಲೀನವಾದಾಗಲೇ ಭಾರತದ ಹಾಗೂ ಪ್ರಪಂಚದ ಉದ್ಧಾರವಾದೀತು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಾಧಾರಣ ಸಭೆ

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ನ ವಿರಾಟ್ ಸಮಿತಿಯು 4....5....1957 ರ ಶನಿವಾರ ಸಾಯಂಕಾಲ ಸರ್ದಾರ್ ಪಟೇಲ್ ಆತಿಥ್ಯದಲ್ಲಿ ಜಿ. ಕಾಂ. ಅಧ್ಯಕ್ಷರಾದ ಶ್ರೀ ಟೇಕೂರು ಸುಬ್ರಮಣ್ಯಂರವರ ಅಧ್ಯಕ್ಷತೆಯಲ್ಲಿ ಸರ್ವಾವೇಶವಾಗಿದ್ದಿತು. ಎಲ್ಲ ತಾಲೂಕುಗಳ ಪ್ರತಿನಿಧಿಗಳ ಅಪೇಕ್ಷೆಯಲ್ಲದೆ ಜಿಲ್ಲೆಯಿಂದ ಆರಿಸಲ್ಪಟ್ಟ ಕಾಂಗ್ರೆಸ್ ರಾಷ್ಟ್ರೀಯ ಸಭೆಯ ಸದಸ್ಯರಾದ ಶ್ರೀಮತಿ ಅಲ್ಲಂ ಸುಮಂಗಲಮ್ಮ, ಶ್ರೀ B. E. ರಾಮಯ್ಯ, ಶ್ರೀ ಡಾ|| ನಾಗನಗೌಡ, ಶ್ರೀ H. ರಾಯಸಗೌಡರೂ ಅಲ್ಲದೆ ಇನ್ನು ಕೆಲ ಅಹ್ವಾನಿತರೂ ಬಂದಿದ್ದರು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸ್ಥಿತಿಯ [illegible] ಕಾರ್ಯಕರ್ತರು ತಮ್ಮ ಭಾಗದ ಕುಂದುಕೊರತೆ ಬೇಡಿಕೆಗಳ ಬಗ್ಗೆ ವರದಿಯನ್ನು ಕಳಿಸಬೇಕೆಂಬ ತೀರ್ಮಾನವಾಯಿತು. ಕಾಂಗ್ರೆಸ್ಸಿನಲ್ಲಿ ಮಹಿಳಾ ವಿಭಾಗ ಮತ್ತು ತರುಣರ ವಿಭಾಗವನ್ನು ಪ್ರಾರಂಭಿಸಲು ನಿರ್ಣಯವಾಗಿ ಶ್ರೀಮತಿ ಸರ್ವಮಂಗಳಮ್ಮ ಮತ್ತು ಶ್ರೀ ಪಾರ್ಥಸಾರಥಿಯವರು ವ್ಯವಸ್ಥಾಪಕರಾಗಿರಲು ಸ್ವೀಕೃತವಾಯಿತು. ಮೈಸೂರು ರಾಜ್ಯಸಭೆಯ ಕಾಂಗ್ರೆಸ್ ನಾಯಕರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟ ಶ್ರೀ ಮಾನ್ ನಿಜಲಿಂಗಪ್ಪನವರಿಗೆ ಯಶಸ್ಸನ್ನು ಕೋರಿ, ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅವರು ಸಹಾಯವಾಗಬೇಕೆಂದು ಕೇಳಬೇಕೆಂದಾಯಿತು. ಭಾರತೀಯ ಸ್ವಾತಂತ್ರ್ಯೋದ್ಯಮದ ಶತ ಸಾಂವತ್ಸರಿಕ ಉತ್ಸವವನ್ನು ಆಚರಿಸಲು ಜಿಲ್ಲಾದ ಎಲ್ಲಾ ಭಾಗಗಳಲ್ಲೂ ಕೋರಲಾಯಿತು

4 ನೇ ರಾತ್ರಿ ಸುಮಾರು 200 ಅತಿಥಿಗಳಿಗೆ ಜಿಲ್ಲಾ ಕಾಂಗ್ರೆಸ್ಸಿನವರು ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು.

— ಬಳ್ಳಾರಿ ಜಿಲ್ಲೆ —

ಜನತೆಯ ಯೋಗ್ಯ ಬೇಡಿಕೆಗಳು

ಶ್ರೀಮತಿ ಅಲ್ಲಂ ಸುಮಂಗಲಮ್ಮ M.L.A ಇವರಪತ್ರ

೧) ವೆಟರ್ನರಿಕಾಲೇಜು :—

ಬಳ್ಳಾರಿಯ ವಿಧಾನ ಸಭೆಸದಸ್ಯರಾದ ಶ್ರೀಮತಿ ಅಲ್ಲಂ ಸುಮಂಗಲಮ್ಮ M. L. A. ಇವರು ಬಳ್ಳಾರಿ ಜಿಲ್ಲೆಯ ಜನತೆಯ ಬೇಡಿಕೆಯ ಬಗ್ಗೆ ಮೈಸೂರು ಮಂತ್ರಿಗಳ ಮನವನ್ನು ಸೆಳೆದು ಹೇಳಿಕೆಯನ್ನು ಪತ್ರಿಕಾ ಪ್ರಕಟನೆಗೆ ಕೊಟ್ಟಿರುತ್ತಾರೆ. 'ಬಳ್ಳಾರಿ ಜಿಲ್ಲೆಯು ಮೈಸೂರು ರಾಜ್ಯದಲ್ಲಿ ವಿಲೀಯನ ವಾದನಂತರ ಸರ್ವತೋಮುಖವಾಗಿ ಅಭಿವೃದ್ಧಿಯನ್ನು ಸಿರೀಕ್ಷಿಸುತ್ತಿರುವುದು ಸ್ವಭಾವಿಕವಾಗಿದೆ—

ಹಾಲ್ಕೆ ನಂತರದ ವೆಟರ್ನರಿ ಕಾಲೇಜ್ ಸ್ಥಾಪನೆಗೆ ಮುಂಜೂರಾಗಿದೆ. ಬಳ್ಳಾರಿ ಆಸ್ಪತ್ರೆಯಲ್ಲಿ ಸಾಕಷ್ಟು ಸೌಲಭ್ಯದ ರೋಗಶಯ್ಯೆಗಳಿದ್ದು, ಪದವಿ ಕಾಲೇಜನ್ನು ಇಲ್ಲೇ ಸ್ಥಾಪಿಸಲು ಹೆಚ್ಚು ಅನುಕೂಲಗಳಿವೆ. ಈಗ ರಾಜ್ಯದಲ್ಲಿ ವೆಟರ್ನರಿ ಕಾಲೇಜು (ಪಶುವೈದ್ಯಶಾಲೆ) ಸ್ಥಾಪಿಸಲು ನಿರ್ಣಯವಾಗಿದೆ. ಅದನ್ನಾದರೂ ಬಳ್ಳಾರಿಯಲ್ಲಿ ಸ್ಥಾಪಿಸುವುದಾಗಿ ಬೇಕು.ಏಕೆಂದರೆ ಬಳ್ಳಾರಿಯ ಅಲಿಪುರಂ ಜೈಲಿನ ವಿಸ್ತೃತ ಕಟ್ಟಡಗಳು, ಆಸ್ಪತ್ರೆ ಕಾಲೇಜುಗಳಿಗೆ ಸಾಕಷ್ಟಿವೆ. ಹಗರಿ ಸಿರುಗುಪ್ಪೆಯಲ್ಲಿನ ವ್ಯವಸಾಯ ಪರೀಕ್ಷಣ ಕೇಂದ್ರಗಳು ಭೂಗುಣ ಪರೀಕ್ಷಣ ಕೇಂದ್ರ, ಕುರಿಕುಪ್ಪೆಯಲ್ಲಿನ ಪಶುಸಂರಕ್ಷಣಾ ವಿಧಾನ ಕೇಂದ್ರಗಳು ಬಳ್ಳಾರಿ ನಗರದಲ್ಲೇ ಪಶುವೈದ್ಯ ಉನ್ನತ ಶಿಕ್ಷಣಾಶಯವನ್ನು ತೆರೆಯಲನುಕೂಲವಾಗಿದೆ.

೨) ಶಾಖಾ ಕಛೇರಿ :—

ಬಳ್ಳಾರಿ ಶಾಖಾ ಕಛೇರಿಯು ಈಗ ಬೆಂಗಳೂರಲ್ಲಿದೆ. ಅದನ್ನು ಬೆಂಗಳೂರಲ್ಲೇ ಇರಿಸಬೇಕೆಂಬುದು ಇನ್ನೂ ನಿಶ್ಚಯವಿಲ್ಲ ಈ ಶಾಖಾ ಕಾರ್ಯಾಲಯವನ್ನು ಬಳ್ಳಾರಿಯಲ್ಲೇ ಸ್ಥಾಪಿಸಲು ಸಾಕಷ್ಟು ಅನುಕೂಲಗಳೂ, ಕಟ್ಟಡಗಳೂ ಇವೆ. ಚಿತ್ರದುರ್ಗ ಜಿಲ್ಲೆಯವರೂ ಇದಕ್ಕೆ ಒಪ್ಪಿರುತ್ತಾರೆ. ಈ ಕಾರಣ ಶಾಖಾ ಕಛೇರಿಯನ್ನು ಇಲ್ಲೇ ತೆರಿಸಬೇಕು.

೩) ಸಾರಿಗೆ ಶಾಖೆ :—

ಸಾರಿಗೆ ಶಾಖೆಯನ್ನು ಇಲ್ಲಿಂದ ತೆಗೆದು ಹಾಕಿರುವುದು, ಬಹಳ ವಿಷಾದಕರವಾಗಿದೆ. ಇದು ನಮ್ಮ ಹಿತಗಳಿಗೆ ಧಕ್ಕೆಯಂಟುಮಾಡಿದೆ. ಈ ಹಿಂದೆ ಟಿವ್ರಾಸ್ ಸರ್ಕಾರ ಪ್ರಯತ್ನಿಸಿ ವಿಫಲವಾಯಿತು.

ಈ ಕಾರಣ ಸರ್ಕಾರವು ಇದನ್ನು ಪರ್ಯಾಲೋಚಿಸಿ ಪದರಿ ಶಾಖೆಯನ್ನು ಇಲ್ಲೇ ಇರಿಸಲು ಆಜ್ಞೆನಗಡಬೇಕು.

೪) ಬಳ್ಳಾರಿ ನಿರಣಿ :—

ಜಿಲ್ಲೆಯಲ್ಲಿ ಬೇಕಾದಷ್ಟು ಪತ್ತಿ ಬೆಳೆಯುತ್ತಲಿದ್ದು ಇಲ್ಲಿ ಎರಡು ಬಟ್ಟೆಯ ಗಿರಣಿಗಳನ್ನು ಸ್ಥಾಪಿಸಲಪಕಾಶವುಂಟು. ಕೊನೆಯಪಕ್ಷ ಒಂದಾ ಗಿರಣಿಯನ್ನಾದರೂ ಪ್ರಾರಂಭಿಸಲು ಖಾಸಗಿ ಸಂಸ್ಥೆಗಳ ಮೇಗೆ ಸರ್ಕಾರವು ಸಹಾಯಮಾಡಬೇಕು.

ಬಳ್ಳಾರಿ ಜನಸಂಖ್ಯೆಯು ಹೆಚ್ಚಿದಂತೆ ನೀರಿನ ಪೊರೈಕೆಗೆ ಗಮನ ಕೊಟ್ಟಿಲ್ಲ. ಸರ್ಕಾರವು ಜರಂಡಿಪ್ರಸ್ಥಕ್ಕೆ ನೀರಿನ ಪೂರೈಕೆಗಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಿದೆ. ಬಳ್ಳಾರಿ ಮುನಿಸಿಪಾಲಟಿಯು ಅಕ್ವಾಯ್ ಸಂಸ್ಥೆಯನ್ನು ವಿಧಿಸಿ ಅಧಿಕಾರವಾಗಿರುವ ಕಾರಣ ಸರ್ಕಾರದ ಸಾಲವನ್ನು ನಿರ್ದಿಷ್ಟ ಸಮಯಧಲ್ಲಿ ತೀರಿಸಬಲ್ಲದು ಇದರಿಂದ ಇದನ್ನು ತ್ವರಿತಗೊಳಿಸಬೇಕು.

6) ಬಳ್ಳಾರಿಯು 'ಎ' ಜಿಲ್ಲೆಯಾಗಿ 80 ಸಾವಿರಕ್ಕಿಂತಲೂ ಹೆಚ್ಚಿನ ಪ್ರಜಾ ಸಂಖ್ಯೆಯುಳ್ಳದಾಗಿದೆ. ಇದಕ್ಕೆ ನಗರ ಭವನದಾವಶ್ಯಕವಿದೆ. ಮುನಿಸಿಪಾಲಟಿಯು ಇದರ ನಿರ್ಮಾಣಕ್ಕೆ ಧನವಿಸಲು ಸರ್ಕಾರದ ಸೂಚನೆಯಾಗಬೇಕು.

7) ಕುಡಿತನ್ನು, ಕುರಿ ಗೋದು, ಸಿರುಗುಪ್ಪೆಗಳಿಗೆ ವಿದ್ಯುಚ್ಛಕ್ತಿಯ ಸರಬರಾಯಿ ಆಗಬೇಕು.

8) ಬಳ್ಳಾರಿ ಜಿಲ್ಲೆ ಮುಖ್ಯವಾಗಿ ಬಳ್ಳಾರಿ ತಾಲ್ಲೂಕಿಗೆ ಒಳ್ಳೆಯ ರಸ್ತೆಗಳು ಆಸ್ಪತ್ರೆ, ಶಾಲೆಗಳು ಬೇಕು.

ನಮ್ಮ ಬೇಡಿಕೆಗಳನ್ನು ಪೂರೈಸಲು ಸರ್ಕಾರವು ಸಹಾನುಭೂತಿಯುಂದೆ ಬರಬೇಕು.

ಅಂಕಿ ಅಂಶ

1) ಭಾರತದ ರಾಷ್ಟ್ರೀಯ ಆದಾಯವು ಗ್ರಾಮ ಪಂಚವರ್ಷಿಕ ಯೋಜನೆಯ ಪ್ರಾರಂಭದಲ್ಲಿ 9,110 ಕೋಟಿ ರೂಗಳಷ್ಟಿತ್ತು. 1955 – 1956 ರಲ್ಲಿ 10,800 ಕೋಟಿ ರೂಗಳಿಗೆ ಏರಿದೆ. ರಾಷ್ಟ್ರೀಯ ಆದಾಯವು ಶೇಕಡ 18 ರಷ್ಟು ಹೆಚ್ಚಾಗಿದೆ.

2) ದ್ವಿತೀಯ ಯೋಜನಾವಧಿಯ ಕೊನೆಯ ವೇಳೆಗೆ ನಿಗದಿಯಾದ ಬೆಲೆಗಳ ಪ್ರಕಾರ ರಾಷ್ಟ್ರೀಯ ಆದಾಯವು ಸುಮಾರು 13,180 ಕೋಟಿ ರೂಗಳಷ್ಟು ರಾಷ್ಟ್ರೀಯ ಆದಾಯವು ಪ್ರಸ್ತುತ ಬೆಲೆಗಳಲ್ಲಿ ಇರುವ ಆದಾಯದ ವೇಳೆಗೆ ನೂರಕ್ಕೆ 25 ರಷ್ಟು ಹೆಚ್ಚಾಗುವುದು.

3) ಪ್ರತಿಯೊಬ್ಬನ ಆದಾಯವೂ 1950–51 ರಲ್ಲಿ 281 ರೂಗಳಿಗೆ ಏರಿದೆ 1960–61 ರಹೊತ್ತಿಗೆ 330 ರೂಗಳಿಗೆ ಏರುವುದು.

4) 1955–56 ರಲ್ಲಿ ರಾಷ್ಟ್ರೀಯ ಆದಾಯದಲ್ಲಿ ವ್ಯವಸಾಯ ಹಾಗೂ ತತ್ಸಂಬಂಧ ಉದ್ಯೋಗಗಳ ಪಾಲು ಶೇ-48 ರಷ್ಟಿತ್ತು- ಇದು 1960 — 1961 ರಹೊತ್ತಿಗೆ ಶೇಕಡ 46 ಕ್ಕೆ ಇಳಿಯುವುದು. ಗಣಿಗಳು ಮತ್ತು ಕಾರ್ಖಾನೆ ಸಂಸ್ಥೆಗಳ ಪಾಲು ಇದೇ ಅವಧಿಯಲ್ಲಿ ನೂರಕ್ಕೆ 9 ರಿಂದ 11 ರವರೆವಿಗೆ ಏರುವುದು.

5) ದ್ವಿತೀಯ ಯೋಜನಾವಧಿಯಲ್ಲಿ 6,200 ಕೋಟಿ ರೂಗಳ ಹಣವನ್ನು ಕೂಡಿಸುವ ಕಾರ್ಯಕ್ರಮವನ್ನು ನಿರೂಪಿಸಲಾಗಿದೆ. ರಾಷ್ಟ್ರೀಯ ಆದಾಯದಲ್ಲಿ ಹಣ ಉಳಿಸುವ ಪ್ರಮಾಣವನ್ನು ಸುಮಾರು ನೂರಕ್ಕೆ 7 ರಿಂದ, 1965—61 ರ ವೇಳೆಗೆ ನೂರಕ್ಕೆ 10 ರಷ್ಟನ್ನು ಹೆಚ್ಚಿಸಬೇಕಾಗುವುದು.

6) ಗಣಿಗಳು ಮತ್ತು ಕಾರ್ಖಾನೆಗಳಲ್ಲಿ ನಿವ್ವಳಉತ್ಪಾದನೆಯು ಗಮನಾರ್ಹವಾದ ಪ್ರಮಾಣದಲ್ಲಿ ಇದ್ದಾಗ್ಯೂ ಆರ್ಥಿಕವ್ಯವಸ್ಥೆಯ ರಚನೆಯು ಯೋಜನಾವಧಿಯ ಅಂತಿಸಸ್ಥಿಯೇ ಪರಿವರ್ತನೆಗೊಳ್ಳುವುದು.

— ನೋಟೀಸು —

— ಬಳ್ಳಾರಿ ಮುನ್ಸಿಫರ ಕೋರ್ಟ್‌ನಲ್ಲಿ —

O. S. 646 / 1956

Between

ವಾದಿ :— ಜೆ. ಸಣ್ಣಬಸವನಗೌಡ-ತಂದೆ
ಸಣ್ಣನಗೌಡ-ಕಮ್ಮರಚೇಡು

And

ಪ್ರತಿವಾದಿಗಳು :— 1) ಗಾಜುಲ ವೆಂಕಟರಮಣಪ್ಪ
ತಂದೆ ಅಂಜಿನಪ್ಪ
2) ಗಂಡನು ವೆಂಕಟರಮಣಪ್ಪ
ತಂದೆ ವೆಂಕಟರವ.ಣಪ್ಪ
3) ಜಕಾರಿ ತಿಮ್ಮಗ,(ಯನ್ನಗನ ಮೊಮ್ಮಗ)
4) ಜಕಾರಿ ಬಂಜೆಮರದ ದುಗ್ಗ,
ತಂದೆ – ಭೀಮ

[ಪ್ರತಿವಾದಿಗಳೆಲ್ಲ ಬಳ್ಳಾರಿ ತಾಲ್ಲೂಕು ರೂಪನಗುಡಿ ನಿವಾಸಿಗಳು]

ಮೇಲೆಕಾಣಿಸಿದ ವಾದಿಯು ನಿಮ್ಮಿಂದ 249/- ರೂಪಾಯಿ ಮತ್ತು ಹಣಸಂದಾಯ ನಾಗುವವರೆಗಿನ ಬಡ್ಡಿಯನ್ನು ವಸೂಲಿ ಮಾಡಿಕೊಳ್ಳಲು ಮೇಲಿನ ವಾನೆ ಹೂಡಿದ್ದಾನೆ. ಸದರಿ ದಾವೆಯು 3—6—1957 ಕ್ಕೆ ಪಾಲ್ಗೊಳ್ಳಲಾಗಿದೆ. ಅಂದು ನೀವು ಹಾಜರಾಗಿ ನಿಮ್ಮ ಆಕ್ಷೇಪಣೆಗಳೇನಾದರೂ ತಿಳಿಸದಿದ್ದಲ್ಲಿ ವಿಚಾರಣೆಯು ಏಕಪಕ್ಷೀಯವಾಗಿ ಸಾಗಿ ನಿರ್ಣಯಿಸಲ್ಪಡುವುದೆಂದು ಈ ಮೂಲಕ ತಿಳಿಸಲಾಗಿದೆ.

D. ಪರಿಮಳಾಚಾರ್
ವಾದಿಯ ಅಡ್ವೋಕೇಟ್

ಕರಣ ಪ್ರಸರಣವು ಮಾನವ ಜನಾಂಗಕ್ಕೇ ವಿನಾಶಕಾರಿ.

(ಹಿಂದಿನ ಪುಟದಿಂದ)

ಈ ಪರೀಕ್ಷಾ ಪ್ರಯೋಗಗಳಿಲ್ಲದರ ದುಷ್ಪರಿಣಾಮಗಳಿಂದ ಜಪಾನಿನ ಜನತೆಯ ಸ್ವಲ್ಪ-ಸ್ವಲ್ಪವಾಗಿ ಪಟ್ಟು ಬೀಳುತ್ತಾ ಬಂದಿದೆ. ಇದ್ದರಿಂದಲೇ ಜಪಾನಿನ ಜನತೆಯು ಅವಕ್ಕೆ ವಿರುದ್ಧವಾಗಿ ಅಭಿಪ್ರಾಯ ಹೊಂದಲು ಅವಕಾಶವಾಗಿದೆ.

" ಬ್ರಿಟ್, ರಷ್ಯಾ ಮತ್ತು ಅಮೆರಿಕಾಗಳು ನ್ಯೂಕ್ಲಿಯರ್ ಪರೀಕ್ಷಾ ಪ್ರಯೋಗಗಳನ್ನು ಶಡೆಗಟ್ಟಲು ಒಂದು ಒಪ್ಪಂದ ಆಗಬೇಕೆಂದೇನೋ ಹೇಳುತಿವೆ ಆದರೆ ಆ ಒಪ್ಪಂದ ಆಗದಿರುವುದಕ್ಕೆ ಮುಖ್ಯಕಾರಣವೇನೆಂದರೆ ಆ ದೇಶಗಳಲ್ಲಿ ಈ ಪರೀಕ್ಷಾ ಪ್ರಯೋಗಗಳಿಗೆ ವಿರುದ್ಧವಾಗಿ ಜನಾಭಿಪ್ರಾಯ ರೂಢಿಸಲ್ಪಟ್ಟಿಲ್ಲ" ಎಂದು ಅವರು ತಿಳಿಸಿದ್ದಾರೆ.

82 ವರ್ಷ ವಯಸ್ಸಿನವರಾದ ಡಾ|| ಆಲ್‌ಬರ್ಟ್ ಶ್ವೆತ್ಜರ್‌ರವರು ಪ್ರಮುಖ ಸಾಕ್ಷಿಕರೂ, ಡಾಕ್ಟರೂ ಮತ್ತು ಸಂಗೀತಗಾರರೂ ಆಗಿದ್ದಾರೆ.

ಉಪ್ಪಿನ ಉದ್ಯಮೆದಲ್ಲಿ ಒಟ್ಟು 8·30 ಕೋಟಿ ರೂಗಳ ಹಣವನ್ನು ಪಾಯಂ ಆಗಿ ತೊಡಿಸಲಾಗಿದೆ. ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ 1·07 ಕೋಟಿ ರೂ. ಮತ್ತು ಖಾಸಗಿ ಕ್ಷೇತ್ರದಲ್ಲಿ 7·23 ಕೋಟಿ ಹಣವನ್ನು ತೊಡಿಸಲಾಗಿದೆ.

— ಭರತ ನಾಟ್ಯ —

(ಹಿಂದಿನ ದಿನದಿಂದ)

ಭರತನು ಗಂಧರ್ವ ಮತ್ತು ಅಪ್ಸರ ಸ್ತ್ರೀಯರಿಗೆ ಕಲಿಸಿ ಶಂಭುವಿನ ಮುಂದೆ ಪ್ರದರ್ಶಿಸಿದನು. ನಾಟ್ಯ ನೃತ್ಯಗಳು ಬಹಳ ಕೋಮಲವಾದುವೆಂದು ಶಿವನು ಗಣಗಳ ಮುಖಂಡನಾದ ತಂಡುವಿಗೆ 'ತಾಂಡವ ಪದ್ಧತಿ' ಯನ್ನು ಉಪದೇಶಿಸಿದನು. ಹೀಗೆ ಮುನಿಗಳಿಂದ ಮಾನವರಿಗೆ ಈ ವಿದ್ಯೆಯು ಬಂದಿತು. ಪಾರ್ವತಿಯು ಬಾಣಾಸುರನ ಪುತ್ರಿಯಾದ ಉಷಾದೇವಿಗೆ ನಾಟ್ಯವನ್ನು ಕಲಿಸಿಕೊಟ್ಟಳು. ಅವಳಿಂದ ಗೋಪಿಕಾ ಸ್ತ್ರೀಯರಿಗೂ, ಅವರಿಂದ ಪೌರಾಣಿಕ ಮಹಿಳೆಯರಿಗೂ ಮುಂದೆ ನಾನಾ ದೇಶಗಳ ಸ್ತ್ರೀಯರಿಗೂ ಹರಡಿತು. ಹೀಗೆ ದೇವಲೋಕದಿಂದ ಭೂಲೋಕಕ್ಕೂ ನಾಟ್ಯವು ಅವತಾರ ಮಾಡಿದೆ.

ಭರತ ನಾಟ್ಯವು ಪುರಾತನ ಕಾಲದಿಂದಲೂ ಜನಾದರಣೀಯವಾಗಿತ್ತೆನ್ನುವುದಕ್ಕೆ ಭರತದ ಹಲವು ಕಡೆಗಳಲ್ಲಿರುವ ದೇವಸ್ಥಾನಗಳಲ್ಲಿಯ ಶಿಲ್ಪಕಲೆಯು ನಾಟ್ಯಭಂಗಿಯಲ್ಲಿರುವ ಸ್ತ್ರೀ-ಪುರುಷರೇ ಸಾಕ್ಷಿ. ಚಾರಿತ್ರಿಕ ಪೌರಾಣಿಕ ದೃಷ್ಟಿಯಿಂದ ನೋಡಿದರೂ ತುಂಬಾ ಉದಾಹರಣೆಗಳು ದೊರೆಯುತ್ತವೆ. ಜನರು ದೇವರಿಗಾಗಿ ದೇವಸ್ಥಾನಗಳಲ್ಲಿ ಹೆಚ್ಚಾಗಿ ಕಾಣಿಸುತ್ತಿದ್ದರು. ಈಗಲೂ ಕೆಲವು ದೇವಸ್ಥಾನಗಳಲ್ಲಿ ಈ ಸಂಪ್ರದಾಯವಿದೆ. ಹೀಗಿದ್ದ ನಾಟ್ಯಸಂಪ್ರದಾಯದಲ್ಲಿ ಕೆಲವು ಶತಮಾನಗಳ ಹಿಂದೆ ಮುಸಲ್ಮಾನರ ಅಳಿಕೆಯಿಂದಲೂ ಪಾಶ್ಚಿತ್ಯರ ಅಡಳಿತದಿಂದಲೂ ಹಲವು ಮಾರ್ಪಾಡುಗಳಾದವು. ಕೆಲವು ವಿಲಾಸಿ ರಾಜರು ಮನೋರಂಜನೆಯ ಸಾಧನವನ್ನಾಗಿ ಈ ನಾಟ್ಯವನ್ನು ಉಪಯೋಗಿಸಿಕೊಂಡರು. ಕಲಾವಂತರು ಹೊಟ್ಟೆಪಾಡಿಗಾಗಿ ಹೆಚ್ಚಾಗಿ ವೇಶ್ಯೆಯರಿಗೆ ನಾಟ್ಯವನ್ನು ಹೇಳಿಕೊಡುತ್ತಿದ್ದರು. ಹೀಗಾಗಿ ನಾಟ್ಯ ವಿಷಯದಲ್ಲಿ ಜನರಲ್ಲಿ ಅನಾದರ ಹುಟ್ಟಿತು. ಕುಲೀನ ಸ್ತ್ರೀಯರು ಇದನ್ನು ಕಲಿಯಲೂ ಹಿಂದುಳಿಯುತ್ತಿದ್ದರು. ಪ್ರದರ್ಶನಗಳು ಕಡಿಮೆಯಾದವು. ಇತ್ತೀಚೆಗೆ ಕೆಲವು ನಾಟ್ಯ ಶ್ರಮದಿಂದ ಇದು ಕುಲೀನರ ಸೊತ್ತಾಗಿ ತನ್ನ ಮೊದಲಿನ ಸ್ಥಾನವನ್ನು ಗಳಿಸಿದೆ ಮತ್ತು ಗಳಿಸುತ್ತಲೂ ಇದೆ.

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯೌಷಧ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ
ಎಲ್ಲಾ ಔಷಧಗಳಲ್ಲೂ ದೊರೆಯುತ್ತದೆ

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಎಲ್ಲವನ್ನೂ
ಶುದ್ಧಗೊಳಿಸಲು
ಉತ್ತಮವಾದುದು

ಮೈಸೂರು ಬಾಂ' ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೇರೆಯೂ, ಅಪಾಯಕರ ರಾಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.

ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.

ಮೇಜರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„,— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)
ಮಧ್ಯಮಾ ಪರೀಕ್ಷಾ ಶುಲ್ಕ 3-0-0
ಸುಗಮ ಹಿಂದಿ
ಸಚ್ಚಾ ಇನ್ಸಾನ್
ಆದರ್ಶ ಬಿನ್ದು
ಪತ್ರಿಕಾತ್ಮಕ ಕಹಾನಿ
ಹಿಂದೀರಚನೆ
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪಿನ್ನು ಅಥವಾ ರಿಪ್ಲೈಕಾರ್ಡ್ ಬರೆಯಿರಿ.

ಪ್ರಿನ್ಸಿಪಾಲ್
ಹಿಂದೀ ಮಹಾವಿದ್ಯಾಲಯ
ಬಳ್ಳಾರಿ ೩

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾವರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
ಆರುತಿಂಗಳಿಗೆ 3—0—0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B KESHAVA RAO at Nava Bharat Printing Press, Bellary.

ನವಭಾರತ

ಸೋಮವಾರ ಮೇ 20,27-ಕ್ಕೆ-1957

ವರ್ಷ 20· ಸಂಚಿಕೆ 28-29 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!! | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್

ಬ್ಯಾಂಕ್ ದರವನ್ನು ಶೇ॥ ಳ ಕ್ಕೆ ಹೆಚ್ಚಿಸಿದೆ.

ನೂರ್ ತಿಂಗಳ ಬಜೆಟ್ಟಿನಿಂದ ಹೆಚ್ಚಾಗಿ ವ್ಯತ್ಯಾಸವಿಲ್ಲ.

೯೦ ಪದಾರ್ಥಗಳ ಮೇಲೆ ಆಮದು ಸುಂಕ ಹೆಚ್ಚಿಸಿದೆ.

ಶ್ರೀ ಟಿ. ಟಿ. ಕೆ. ಯವರಿಂದ ಬಜೆಟ್ ಮಂಡನೆ.

"ನಾನು ಈಗ ಮಂಡಿಸುತ್ತಿರುವ ಖರ್ಚಿನ ಅಂದಾಜು ಹೆಚ್ಚು ಕಡಮೆ ಕಳೆದ ವರ್ಷದಷ್ಟೆ ಇದ್ದು ಅದನ್ನೇ ಮಂಡಿಸಿದಂತೆಯೇ ಇರುವುದು" ಎಂಬುದಾಗಿ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು 1957-1958ರ ಬಜೆಟ್ಟನ್ನು ಮಂಡಿಸುತ್ತಾ ತಿಳಿಸಿದರು.

ರೆವಿನ್ಯೂ ಬಾಜಿನಲ್ಲಿ ಕಳೆದ ಬಜೆಟ್‌ನಲ್ಲಿದ್ದ 26·87 ಕೋಟಿ ರೂಗಳ ಯೋಜನೆಯನ್ನು ಈಗ ಇನ್ನೂ 6 ಕೋಟಿ ರೂಗಳಷ್ಟು ಜಾಸ್ತಿಯಾಗಿದೆ ಎಂದವರು ನುಡಿದರು.

ಒಟ್ಟು ಆಯ ಮತ್ತು ಬಂಡವಾಳದ 365 ಕೋಟಿ ರೂಪಾಯಿಗಳ ಬೃಹತ್ ಯೋಜನೆಯನ್ನು ಈಗ 2·89 ಕೋಟಿಗಳಷ್ಟು ಇನ್ನೂ ಹೆಚ್ಚಿಸಿದೆ.

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರ ಹೆಚ್ಚಿದೆ

ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ ಬಡ್ಡಿ ದರವನ್ನು ಶೇ ಅರ್ಧದಷ್ಟು ಹೆಚ್ಚು ಮಾಡುವುದಾಗಿ ಶ್ರೀ ಟಿ. ಟಿ. ಕೆ. ಯವರು ತಿಳಿಸಿದರು.

ಅಲ್ಲದೆ ಶೇ॥ 4·25 ರ ಸುಸ್ತಿಬಡ್ಡಿಯ ಮೇಲೆ ಹೊಸ ರಾಷ್ಟ್ರೀಯ ಯೋಜನಾ ಸರ್ಟಿಫಿಕೇಟ್‌ಗಳನ್ನು ಕೊಡುವುದಾಗಿ ಅವರು ತಿಳಿಸಿದರು.

.... ಆಮದು ಸುಂಕ ಹೆಚ್ಚಿದೆ ....

ಸುಮಾರು 90 ಪದಾರ್ಥಗಳ ಮೇಲೆ ಆಮದು ಸುಂಕವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಲಾಗಿದೆಯೆಂದು ಸಚಿವರು ತಿಳಿಸಿದರು.

ಈ ಆಮದು ಸುಂಕ ಹೆಚ್ಚು ಮಾಡುವುದರಿಂದ 6 ಕೋಟಿ ರೂ. ಗಳ ಆದಾಯ ಹೆಚ್ಚುವುದು.

ಪೋಟಾರ್ ಸ್ಪಿರಿಟ್ ಎಣ್ಣೆಯ ಮೇಲೆ 1 ಇಂಪೀರಿಯಲ್ ಗ್ಯಾಲನ್‌ಗೆ 98 ನಯೇ ಪೈಸೆಯಿಂದ 125 ನಯೇ ಪೈಸೆಗೆ ಸುಂಕ ಹೆಚ್ಚಿಸಿದೆ.

ಸೀಮೆ ಎಣ್ಣೆ ಮೇಲಿನ ಸುಂಕವನ್ನು ಇಂಪೀರಿಯಲ್ ಗ್ಯಾಲನ್‌ಗೆ 18.75 ನಯೇ ಪೈಸೆಯಿಂದ 20 ನಯೇ ಪೈಸೆಗೆ ಹೆಚ್ಚಿಸಿದೆ.

ಸಕ್ಕರೆ ಮತ್ತು ಉಕ್ಕಿನ ಸುಂಕ ಹೆಚ್ಚಿದೆ

ಸಕ್ಕರೆ ಮೇಲಿನ ಸುಂಕವನ್ನು ಹಂ. ವೇಟಿಗೆ 5·55 ನಯೇ ಪೈಸೆಯಿಂದ 11·24 ನಯೇ ಪೈಸೆಗಳಿಗೆ ಹೆಚ್ಚಿಸಿದೆ. ಉಕ್ಕಿನ ಮೇಲಿನ ಸುಂಕವನ್ನು ಟನ್ 1 ಕ್ಕೆ 4 ರೂ. ನಿಂದ 40 ರೂಗೆ ಏರಿಸಲಾಗಿದೆ.

ಸಿಮೆಂಟ್ ಮೇಲಿನ ಸುಂಕವನ್ನು ಟನ್ 1 ಕ್ಕೆ 5 ರೂ. ನಿಂದ 20 ರೂಗಳಿಗೆ ಹೆಚ್ಚಿಸಿದೆ.

ಟೀ, ಕಾಫಿ, ತಂಬಾಕದಾಕು, ದಿಕಡ್ಡಿ ಪೆಟ್ಟಿಗೆ ಮತ್ತು ಕಾಗದದಗಳ ಮೇಲೆ ಸುಂಕವನ್ನು ಏರಿಸಲಾಗಿದೆ.

++++++++++++++++++++++++

ಭಾರತದ ಆಹಾರದ ಬಗ್ಗೆ ಹೆದರಿಕೆ ಬೇಡ

ಕೇಂದ್ರದ ಆಹಾರ ಮಂತ್ರಿಗಳಾದ ಶ್ರೀ ಎ. ಪಿ. ಜೈನರ ಭರವಸೆ

ಆಹಾರ ಸರಬರಾಜಿನ ಬಗ್ಗೆ ಪ್ರಸ್ತುತ ಪರಿಸ್ಥಿತಿಯು ಅಂತಹ ಕಠಿಣಕರವಾಗಿಲ್ಲ ಎಂಬುದಾಗಿ ಆಹಾರ ಮತ್ತು ವ್ಯವಸಾಯ ಮಂತ್ರಿ ಶ್ರೀ ಅಜಿತ್ ಪ್ರಸಾದ್ ಜೈನ್‌ರವರು ಲೋಕಸಭೆಯಲ್ಲಿ ಕೊಟ್ಟ ಹೇಳಿಕೆಯಲ್ಲಿ ತಿಳಿಸಿದರು.

ಗೋಧಿಯ ಬೆಳೆ ಕೆಟ್ಟಿರುವ ವಿವಿಧ ಪ್ರದೇಶಗಳ ಅಗತ್ಯವನ್ನು ಪೂರೈಸುವುದಕ್ಕೆ ಅನುಕೂಲವಾಗುವಂತೆ ಹೊರದೇಶಗಳಿಂದ ಗೋಧಿಯನ್ನು ಸಾಕಷ್ಟು ಆಮದು ಮಾಡಲು ಸರಕಾರ ವ್ಯವಸ್ಥೆ ಮಾಡಿದೆ ಎಂದವರು ಸ್ಪಷ್ಟಪಡಿಸಿದರು.

ಬೆಲೆ ಇಳಿಸಲು ಕ್ರಮ ಸಮಿತಿಯ ನೇಮಕ

"ಬೆಳೆ ಹೆಚ್ಚಾಗಿದ್ದರೂ ಕೂಡ ಬೆಲೆ ಮಾತ್ರ ಏರಿರುವುದಕ್ಕೆ ಕಾರಣ ನೇನೆಂದು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲು ಸರ್ಕಾರವು ನಿರ್ಧರಿಸಿದೆ."

"ಆಹಾರ ದಾಸ್ತಾನನ್ನು ಮಾಡುವುದನ್ನೂ ಬೆಲೆಯ ಏರಿಕೆಯನ್ನು ನಿಲ್ಲಿಸಲು ಈಗಾಗಲೇ ಏನು ಕ್ರಮ ಕೈಗೊಳ್ಳಬೇಕು, ಆಗಾಗ್ಗೆ ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ಸಮಿತಿಯ ಸಲಹೆ ಕೇಳುವುದು"—ಎಂದು ಸಚಿವರು ತಿಳಿಸಿದರು.

ಮೈಸೂರಿನಲ್ಲಿ ಕೆಲವು ಕಡೆ ಅಭಾವ ಸ್ಥಿತಿ

"ಮೈಸೂರಿನಲ್ಲಿಯೂ ಅಸ್ಸಾಮಿನಲ್ಲಿಯೂ ಕೆಲವು ಕಡೆಗಳಲ್ಲಿ ಅಭಾವ ಪರಿಸ್ಥಿತಿಯನ್ನು ನಿವಾರಿಸಲು ಸಹಾಯವನ್ನು ಒದಗಿಸಲಾಗುವುದು. ಇದಕ್ಕಾಗಿ ಆ ಪ್ರದೇಶಗಳಿಗೆ ಹೆಚ್ಚಿನ ಸರಬರಾಜನ್ನು ಒದಗಿಸುವ ಇಲ್ಲವಾ ಆ ಪ್ರದೇಶಗಳಲ್ಲಿ ಹೆಚ್ಚು ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯುವ ಮೂಲಕ ವ್ಯವಸ್ಥೆ ಮಾಡಲಾಗುವುದು" ಎಂದು ಸಚಿವ ಶ್ರೀ ಜೈನ್ ನುಡಿದರು.

ಬಿಹಾರದಲ್ಲಿ, ಉತ್ತರ ಪ್ರದೇಶ ರಾಜಸ್ಥಾನ, ಬೊಂಬಾಯಿ, ಪ.ಬಂಗಾಳ ಮತ್ತು ಕೇರಳ ಈ ಎಲ್ಲ ಸರ್ಕಾರಗಳ ಬೇಡಿಕೆಗಳನ್ನು ಅಂಗೀಕರಿಸಿದೆ.

ಕೇಂದ್ರ ಮಂತ್ರಿವರ್ಗದ ಉಪ ಮಂತ್ರಿಗಳು

ಭಾರತ ರಾಷ್ಟ್ರಾಧ್ಯಕ್ಷರು ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರ ಸಲಹೆ ಪಡೆದು 17-4-57 ರಂದು ಈ ಕೆಳಕಂಡ ಮಹನೀಯರನ್ನು ಭಾರತದ ಕ್ಯಾಬಿನೆಟ್‌ನ ಉಪ ಮಂತ್ರಿಗಳನ್ನಾಗಿ ನೇಮಿಸಿರುವರು.

ಎಜದಿಂದ ಬಲಕ್ಕೆ :—

1) ಸರ್ದಾರ್ ಸೂರಬಿತ್ ಸಿಂಗ್
ರಕ್ಷಣಾ ಶಾಖೆಯ ಮಂತ್ರಿ

2) ಶ್ರೀ ಆಜೀದ್ ಅಲಿ
ಕಾಮರ್ಸ್ ಶಾಖೆ ಮಂತ್ರಿ

3) ಶ್ರೀ ಎ. ಕೆ. ಚಂದಾ
ವಿದೇಶಾಂಗ ಶಾಖೆ ಮಂತ್ರಿ

4) ಶ್ರೀ ಎಂ. ವಿ. ಕೃಷ್ಣಪ್ಪ
ಆಹಾರ ಶಾಖೆ ಮಂತ್ರಿ

5) ಶ್ರೀ ಜೈರುಕ ಲಾಲ್‌ಭಾಯಿ
ನೀರಾವರಿ, ವಿದ್ಯುಚ್ಛಕ್ತಿ ಮಂತ್ರಿ

6) ಶ್ರೀ ಕೇಶ್ ಚಂದ್ರ
ವಾಣಿಜ್ಯ ಕೈಗಾರಿಕೆ ಮಂತ್ರಿ

7) ಶ್ರೀ ಎಸ್. ಎನ್. ಮಿಶ್ರ
ಯೋಜನೆ ಮಂತ್ರಿ

8) ಶ್ರೀ ಬಿ. ಆರ್. ಭಗತ್
ಹಣಕಾಸಿನ ಮಂತ್ರಿ

9) ಡಾ|| ಎಂ. ಎಂ. ಥಾಮಸ್
ಶಿಕ್ಷಣ ಮತ್ತು ವೈಜ್ಞಾನಿಕ
ಸಂಶೋಧನೆ ಮಂತ್ರಿ

10) ಶ್ರೀ ಷಾ ನವಾಜ್ ಖಾನ್
ರೈಲ್ವೆ ಮಂತ್ರಿ

11) ಶ್ರೀಮತಿ ಲಕ್ಷ್ಮಿ ಎನ್ ಮೆನನ್
ವಿದೇಶಾಂಗ ವಿಷಯಗಳ ಶಾಖೆ
ಮಂತ್ರಿ

12) ಶ್ರೀಮತಿ ವಯಲೆಟ್ ಆಲ್ವ
ಗೃಹಶಾಖೆ ಮಂತ್ರಿ

ಕಮ್ಯೂನಿಷ್ಟರ ಉಪಾಯ

ಈಗಿರುವ ರಾಜ್ಯಾಂಗ ನಿಬಂಧನೆಯ ಚೌಕಟ್ಟಿನೊಳಗೇ ಕೇರಳ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗಾಗಿ ಹಣವನ್ನು ಪಡಿಸಲು ಕಮ್ಯೂನಿಷ್ಟರ ಉಪಾಯವೇನೆಂಬುದನ್ನು ಕೇರಳದ ಮಂತ್ರಿ ಶ್ರೀ ನಂಬೂದರಿ ಪಾಡ್‌ರು ತಿಳಿಸಿದರು.

ಆ ಉಪಾಯವೇನು ಗೊತ್ತೆ ? "ಹಣ ಎಷ್ಟೆಲ್ಲೆಲ್ಲಿಂದ ಅದನ್ನು ಅಷ್ಟಲ್ಲಿಂದ ತೆಗೆದುಕೊಳ್ಳಬೇಕು" ಇದೇ ಅವರ ಉಪಾಯ. ಈ ಉಪಾಯವನ್ನು ಹೊರತು ಉಪಯೋಗಿಸಲಿಲ್ಲ ಎಂದು ಅವರು ಪೇಚಿತನವನ್ನು ತಾವು ಫಲಪ್ರದವಾಗಿ ಉಪಯೋಗಿಸುತ್ತಿದ್ದಾಗಿ ತಿಳಿಸಿದರು.

ಸಪ್ತಾಹ

ಸೋಮವಾರ ಮೇ 20,27-ಕ್ಕೆ 1957

ವರ್ಷ 20· ಸಂಚಿಕೆ 28-29 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!! | ಸಂಪಾದಕ ಮತ್ತು ಪ್ರಕಾಶಕ ಟಿ. ಜಿ. ಕೇಶವರಾವ್

ಬ್ಯಾಂಕ್ ಧಗವನ್ನು ಪೇಳಿಳಕ್ಕೆ ಹೆಚ್ಚಿಸಿದೆ.

ಮೂರ್ತಿ ತಿಂಗಳ ಬಜೆಟ್‌ಗಿಂತ ಹೆಚ್ಚು ವ್ಯತ್ಯಾಸವಿಲ್ಲ.

೯೦ ಪದಾರ್ಥಗಳ ಮೇ ಲೆ ಆಮದು ಸುಂಕ ಹೆಚ್ಚಿದೆ-

ಶ್ರೀ ಟಿ. ಟಿ. ಕೆ. ಯವರಿಂದ ಬಜೆಟ್ ಮಂಡನೆ.

"ನಾನು ಈಗ ಮಂಡಿಸುತ್ತಿರುವ ಖರ್ಚಿನ ಅಂದಾಜು ಕೆಲವು ತಿಂಗಳ ಹಿಂದೆ ಪ್ರಕಟಿಸಿದ ಮಧ್ಯಂತರ ಅಂದಾಜು ಪತ್ರಕ್ಕಿಂತ ಸುಮಾರು ಸುಂಡಿಸಿದಂತೆಯೇ ಇರುವುದು" ಎಂಬುದಾಗಿ ಹೇಳಿಕೊಂಡು ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು 1957-1958ರ ಬಜೆಟ್ಟನ್ನು ಮಂಡಿಸುತ್ತಾ ತಿಳಿಸಿದರು.

ರೆವಿನ್ಯೂ ಬಾಬಿನಲ್ಲಿ ಕಳೆದ ಬಜೆಟ್‌ನಲ್ಲಿದ್ದ 26·87 ಕೋಟಿ ರೂಗಳ ಮೊತ್ತವು ಈಗ ಇನ್ನೂ 6 ಕೋಟಿ ರೂಗಳಷ್ಟು ಜಾಸ್ತಿಯಾಗಿದೆ ಎಂದವರು ನುಡಿದರು.

ಒಟ್ಟು ಆಯ ಮತ್ತು ಬಂಡವಾಳದ ಖರ್ಚಿನ ಮೊತ್ತವು ಈಗ 2·89 ಕೋಟಿಗಳಷ್ಟು ಇನ್ನೂ ಹೆಚ್ಚಿದೆ.

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರ ಹೆಚ್ಚಿದೆ

ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ ಬಡ್ಡಿ ದರವನ್ನು ಶೇ ಅರ್ಧದಷ್ಟು ಹೆಚ್ಚು ಮಾಡುವುದಾಗಿ ಶ್ರೀ ಟಿ. ಟಿ. ಕೆ. ಯವರು ತಿಳಿಸಿದರು.

ಅಲ್ಲದೆ ಶೇ 4·25 ರ ಸುಸ್ತಿಬಡ್ಡಿಯ ಮೇಲೆ ಹೊಸ ರಾಷ್ಟ್ರೀಯ ಯೋಜನಾ ಸರ್ಟಿಫಿಕೇಟ್‌ಗಳನ್ನು ಕೊಡುವುದಾಗಿ ಅವರು ತಿಳಿಸಿದರು.

.... ಆಮದು ಸುಂಕ ಹೆಚ್ಚಿದೆ ....

ಸುಮಾರು 90 ಪದಾರ್ಥಗಳ ಮೇಲೆ ಆಮದು ಸುಂಕವನ್ನು ಸ್ವಲ್ಪವು ಟ್ಟಿಗೆ ಹೆಚ್ಚಿಸಲಾಗಿದೆಯೆಂದು ಸಚಿವರು ತಿಳಿಸಿದರು.

ಈ ಆಮದು ಸುಂಕ ಹೆಚ್ಚು ಮಾಡುವುದರಿಂದ 6 ಕೋಟಿ ರೂ. ಗಳ ಆದಾಯ ಹೆಚ್ಚುವುದು.

ನೋಟಾರ್ ಸ್ಪಿರಿಟ್ ಎಣ್ಣೆಯ ಮೇಲೆ 1 ಇಂಪೀರಿಯಲ್ ಗ್ಯಾಲನ್‌ಗೆ 98 ನಯೇ ಪೈಸೆಯಿಂದ 125 ನಯೇ ಪೈಸೆಗೆ ಸುಂಕ ಹೆಚ್ಚಿಸಿದೆ.

ಸೀಮೆ ಎಣ್ಣೆ ಮೇಲಿನ ಸುಂಕವನ್ನು ಇಂಪೀರಿಯಲ್ ಗ್ಯಾಲನ್‌ಗೆ 18.75 ನಯೇ ಪೈಸೆಯಿಂದ 20 ನಯೇ ಪೈಸೆಗೆ ಹೆಚ್ಚಿಸಿದೆ.

ಸಕ್ಕರೆ ಮೆ ತ್ತು ಉಕ್ಕಿನ ಸುಂಕ ಹೆಚ್ಚಿಕೆ

ಸಕ್ಕರೆ ಮೇಲಿನ ಸುಂಕವನ್ನು ಹಂ. ನೇಟಿಗೆ 5·5೦ ನಯೇ ಪೈಸೆಯಿಂದ 31·24 ನಯೇ ಪೈಸೆಗಳಿಗೆ ಹೆಚ್ಚಿಸಿದೆ. ಉಕ್ಕಿನ ಮೇಲಿನ ಸುಂಕವನ್ನು ಟನ್ 1 ಕ್ಕೆ 4 ರೂ. ನಿಂದ 20 ರೂಗೆ ಏರಿಸಲಾಗಿದೆ.

ಸಿಮೆಂಟ್ ಮೇಲಿನ ಸುಂಕವನ್ನು ಟನ್ 1 ಕ್ಕೆ 5 ರೂ. ನಿಂದ 20 ರೂ ಗಳಿಗೆ ಹೆಚ್ಚಿಸಿದೆ.

ಟೀ, ಕಾಫಿ, ತಂಬಾಕುದಾಳು, ದಿಕಡ್ಡಿ ಪೆಟ್ರೋಲಿಗೆ ಮತ್ತು ಕಾಗದಗಳ ಮೇಲೆ ಸುಂಕವನ್ನು ಏರಿಸಲಾಗಿದೆ.

++++++++++++++++++++++++

ಭಾರತದ ಆಹಾರದ ಬಗ್ಗೆ ಹೆದರಿಕೆ ಬೇಡ

ಕೇಂದ್ರದ ಆಹಾರ ಮಂತ್ರಿಗಳಾದ ಶ್ರೀ ಎ. ಪಿ. ಜೈನರ ಭರವಸೆ

ಆಹಾರ ಸರಬರಾಜಿನ ಮೊತ್ತದ ಪರಿಸ್ಥಿತಿಯು ಅಂತಹ ಕಠಿಣಕರವಾಗಿಲ್ಲ

ಎಂಬುದಾಗಿ ಆಹಾರ ಮತ್ತು ವ್ಯವಸಾಯ ಮಂತ್ರಿ ಶ್ರೀ ಅಜಿತ್ ಪ್ರಸಾದ್ ಜೈನ್‌ರವರು ಲೋಕಸಭೆಯಲ್ಲಿ ಕೊಟ್ಟ ಹೇಳಿಕೆಯಲ್ಲಿ ತಿಳಿಸಿದರು.

ಗೋಧಿಯ ಬೆಳೆ ಕೆಟ್ಟರುವ ವಿವಿಧ ಪ್ರದೇಶಗಳ ಅಗತ್ಯವನ್ನು ಪೂರೈಸುವುದಕ್ಕೆ ಅನುಕೂಲವಾಗುವಂತೆ ಹೊರದೇಶಗಳಿಂದ ಗೋಧಿಯನ್ನು ಸಾಕಷ್ಟು ಅನುದ ಮಾಡಲು ಸರಕಾರ ವ್ಯವಸ್ಥೆ ಮಾಡಿದೆ ಎಂದವರು ಸ್ಪಷ್ಟಪಡಿಸಿದರು.

ಬೆಲೆ ಇಳಿಸಲು ಕ್ರಮ ಸಮಿತಿಯ ನೇಮಕ

"ಬೆಳೆ ಹೆಚ್ಚಾಗಿದ್ದರೂ ಕೂಡ ಬೆಲೆ ಮಾತ್ರ ಜಾಸ್ತಿಗಿರುವುದಕ್ಕೆ ಕಾರಣ ನೇನೆಂದು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲು ಸರ್ಕಾರವು ನಿರ್ಧರಿಸಿದೆ."

"ಆಹಾರ ದಾಸ್ತಾನು ಮಾಡುವುದನ್ನೂ ಬೆಲೆಯ ಏರಿಕೆಯನ್ನು ನಿಲ್ಲಿಸಲು ಈಗಾಗಲೇ ಏನು ಕ್ರಮಕೈಗೊಳ್ಳಬೇಕು, ಆಗಾಗ್ಗೆ ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ಸಮಿತಿಯು ಶಿಫಾರಸು ಈಯುವುದು"—ಎಂದು ಸಚಿವರು ತಿಳಿಸಿದರು.

ಮೈಸೂರಿನಲ್ಲಿ ಕೆಲವು ಕಡೆ ಅಭಾವ ಸ್ಥಿತಿ

"ಮೈಸೂರಿನಲ್ಲಿಯೂ ಅಸ್ಸಾಮಿನಲ್ಲಿಯೂ ಕೆಲವು ಕಡೆಗಳಲ್ಲಿ ಅಭಾವ ಪರಿಸ್ಥಿತಿಯನ್ನು ನಿವಾರಿಸಲು ಸಹಾಯವನ್ನು ಒದಗಿಸಲಾಗುವುದು. ಇದಕ್ಕಾಗಿ ಆ ಪ್ರದೇಶಗಳಿಗೆ ಹೆಚ್ಚಿನ ಸರಬರಾಜನ್ನು ಒದಗಿಸುವ ಇಥವಾ ಆ ಪ್ರದೇಶಗಳಲ್ಲಿ ಹೆಚ್ಚು ಫೇರ್‌ಪ್ರೈಸ್ ಶಿಪ್ ಗಳನ್ನು ತೆರೆಯುವ ಮೂಲಕ ವ್ಯವಸ್ಥೆ ಮಾಡಲಾಗುವುದು" ಎಂದು ಸಚಿವ ಶ್ರೀ ಜೈನ್ ನುಡಿದರು.

ಬಿಹಾರದಲ್ಲಿ, ಉತ್ತರ ಪ್ರದೇಶ ರಾಜಾಸ್ಥಾನ, ಬೊಂಬಾಯಿ, ಪಶ್ಚಿಮಬಂಗಾಳ ಮತ್ತು ಕೇರಳ ಈ ಎಲ್ಲ ಸರ್ಕಾರಗಳ ಬೇಡಿಕೆಗಳನ್ನು ಅಂಗೀಕರಿಸಿದೆ.

ಕೇಂದ್ರ ಮಂತ್ರಿವರ್ಗದ ಉಪ ಮಂತ್ರಿಗಳು

ಭಾರತ ರಾಷ್ಟ್ರಾಧ್ಯಕ್ಷರು ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರ ಸಲಹೆ ಪಡೆದು 17-4-57 ರಂದು ಈ ಕೆಳಕಂಡ ಮಹನೀಯರನ್ನು ಭಾರತದ ಕ್ಯಾಬಿನೆಟ್‌ನ ಉಪ ಮಂತ್ರಿಗಳನ್ನಾಗಿ ನೇಮಿಸಿರುವರು

ಎಡದಿಂದ ಬಲಕ್ಕೆ :—

1) ಸರ್ದಾರ್ ಸೂರಜಿತ್ ಸಿಂಗ್
ರಕ್ಷಣಾ ಶಾಖೆಯ ಮಂತ್ರಿ

2) ಶ್ರೀ ಆಜೇದ್ ಅಲಿ
ಕಾರ್ಮಿಕ ಶಾಖೆ ಮಂತ್ರಿ

ಮಿಶ್ರೀ ಎ ಕೆ ಚಂದಾ
ವಿದೇಶಾಂಗ ಶಾಖೆ ಮಂತ್ರಿ

4) ಶ್ರೀ ಎ. ವಿ ಕೃಷ್ಣಪ್ಪ
ಆಹಾರ ಕಾಖೆ ಮಂತ್ರಿ

5) ಶ್ರೀ ಜೈಪುಕ ಲಾಲ್ ಸಾಧಿ
ನೀತಾವರಿ, ವಿದ್ಯುಚ್ಛಕ್ತಿ ಮಂತ್ರಿ

6) ಶ್ರೀ ಕೃಷ್ಣ ಚಂದ್ರ
ವಾಣಿಜ್ಯ ಕೈಗಾರಿಕೆ ಮಂತ್ರಿ

7) ಶ್ರೀ ಎಸ್. ಎನ್. ಮಿಶ್ರ
ಯೋಜನೆ ಮಂತ್ರಿ

8) ಶ್ರೀ ಬಿ. ಆರ್ ಭಗತ್
ಹಣಕಾಸಿನ ಮಂತ್ರಿ

9) ಡಾ|| ಎಂ ಎಂ ಥಾಮಸ್
ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆ ಮಂತ್ರಿ

10) ಶ್ರೀ ಫಕ್ರುದ್ದೀನ್ ಅಲಿ ಅಹಮದ್
ಕೃಷಿ ಮಂತ್ರಿ

11) ಶ್ರೀಮತಿ ಲಕ್ಷ್ಮಿ ಎನ್ ಮೆನನ್
ವಿದೇಶಾಂಗ ವಿಷಯಗಳ ಶಾಖೆ ಮಂತ್ರಿ

12) ಶ್ರೀಮತಿ ನಯರ್ ಅಬ್ದುಲ್ ಕಾದರ್
ಗೃಹ ಶಾಖೆ ಮಂತ್ರಿ

ಕಮ್ಯೂನಿಸ್ಟರ ಉಪಾಯ

ಈಗಿರುವ ರಾಜ್ಯಾಂಗ ವ್ಯವಸ್ಥೆಯ ಚೌಕಟ್ಟಿನೊಳಗೇ ಕೇರಳ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗಾಗಿ ಹಣವನ್ನೊದಗಿಸಲು ಕಮ್ಯೂನಿಸ್ಟರ ಉಪಾಯವೇನೆಂಬುದನ್ನು ಕೇರಳದ ಮಂತ್ರಿ ಶ್ರೀ ನಂಬೂದರಿ ಫಾಡ್‌ರು ತಿಳಿಸಿದರು

ಆ ಉಪಾಯವೇನು ಗೊತ್ತೆ? "ಹಣ ಎಲ್ಲಿದೆಯೋ ಅಲ್ಲಿಂದ ಅದನ್ನು ಅಲ್ಲಿಂದ ತೆಗೆದುಕೊಳ್ಳಬೇಕು" ಇದೇ ಅವರ ಉಪಾಯ. ಈ ಉಪಾಯವನ್ನು ಹೇಗೂ ಉಪಯೋಗಿಸಿದರಲ್ಲಿ ಎಂದು ಅವರು ವಿವರಿಸಿಲ್ಲವಾದರೂ ಅದು ಫಲಪ್ರದವಾಗಿ ಉಪಯೋಗಿಸುವುದಾಗಿ ತಿಳಿಸಿದರು.

ಸಾಮುದಾಯಕ ಅಭಿವೃದ್ಧಿ ವಾರ್ತಾಪತ್ರ

.... ಕೈಗಾರಿಕಾ ಎಸ್ಟೇಟ್‌ಗಳು ....

ಎಲ್ಲಾ ರಾಜ್ಯಗಳ ಅಭಿವೃದ್ಧಿ ಕಮೀಷನರುಗಳು ಸಂಯುಕ್ತ ಅಭಿವೃದ್ಧಿ ಕಮಿಷನರುಗಳು, ಆಪ್ರದೇಶದ ಸಣ್ಣ ಪ್ರಮಾಣದ ಕೈಗಾರಿಕಾ ಡೈರೆಕ್ಟರುಗಳೊಡನೆ ಸಮಾಲೋಚನೆ ಮಾಡಿ, 20 ಸಣ್ಣ ಕೈಗಾರಿಕಾ ಎಸ್ಟೇಟುಗಳ ಸ್ಥಾಪನೆಗೆ ನೆರವಾಗಬೇಕೆಂದು ತಿಳಿಸಿರುವರು.

ಕೈಗಾರಿಕೆಗಳಿಗಾಗಿ ವಿದ್ಯುಚ್ಛಕ್ತಿ, ನೀರಿನ ಸರಬರಾಜು, ಮಾರುಕಟ್ಟೆಯ ದೂರ, ಸಂದರ್ಭ ಸೌಲಭ್ಯ ಇತ್ಯಾದಿಗಳನ್ನು ಪರಿಶೀಲಿಸಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುವುದು.

ಸಾಮುದಾಯಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಕೇಂದ್ರಗಳ ಪಂಚಿಕೆ

1957-58 ರಲ್ಲಿ 630 ರಾಷ್ಟ್ರೀಯ ವಿಸ್ತರಣ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಅವುಗಳಲ್ಲಿ, 1957 ರ ಏಪ್ರಿಲ್ 1 ರಿಂದೀಚೆಗೆ 300 ಕೇಂದ್ರಗಳನ್ನು ಆರಂಭಿಸಲಾಗಿದೆ. ಉಳಿದವನ್ನು ಮುಂದಿನ ಜೂನ್ ತಿಂಗಳಿನಲ್ಲಿ ಆರಂಭಿಸಲಾಗುವುದು. ಈ ಕೇಂದ್ರಗಳಲ್ಲಿ 1957 ರ ಅಕ್ಟೋಬರ್ ನಿಂದ ಕೆಲಸ ಆರಂಭವಾಗುವುದು. ಈ ಕೇಂದ್ರಗಳ ರಾಜ್ಯವಾರು ಪಂಚಿಕೆ ಈ ಕೆಳಕಂಡಂತೆ ಇರುತ್ತದೆ.

ಆಂಧ್ರ 25, ಅಸ್ಸಾಂ 8, ಬಿಹಾರ್ 38, ಮುಂಬೈ 42, ಮಧ್ಯಪ್ರದೇಶ 37, ಮದರಾಸು 19, ಮೈಸೂರು 10 ಒರಿಸ್ಸಾ 18, ಪಂಜಾಬ್ 25, ಕೇರಳ 8, ಉತ್ತರಪ್ರದೇಶ 18, ಪಶ್ಚಿಮ ಬಂಗಾಳ 20, ರಾಜಾಸ್ಥಾನ 14, ಜಮ್ಮು ಮತ್ತು ಕಾಶ್ಮೀರ 10, ಮಣಿಪುರ 1, ತ್ರಿಪುರ 1, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು 2 ಮತ್ತು ಈಶಾನ್ಯ ಭಾರತ 4.

1957-58 ರಲ್ಲಿ 200 ರಾಷ್ಟ್ರೀಯ ವಿಸ್ತರಣ ಕೇಂದ್ರಗಳನ್ನು ಸಾಮುದಾಯಕ ಅಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುವುದು. ಅವುಗಳಲ್ಲಿ 100 ನ್ನು ಈಗಾಗಲೇ ಪರಿವರ್ತಿಸಲಾಗಿದೆ. ಉಳಿದ ಕೇಂದ್ರಗಳಲ್ಲಿ 1957 ರ ಅಕ್ಟೋಬರ್ 2 ರಂದು ಪರಿವರ್ತನ ಕೆಲಸಗಳನ್ನು ಆರಂಭಿಸಲಾಗುವುದು.

ಈ ರಾಷ್ಟ್ರೀಯ ವಿಸ್ತರಣ ಸೇವೆಯಲ್ಲಿ ರಾಜ್ಯವಾರು ಹಂಚಿಕೆ ಈ ರೀತಿ ಇರುವುದು.

ಆಂಧ್ರ 16, ಅಸ್ಸಾಂ 7, ಬಿಹಾರ್ 10, ಮುಂಬೈ 17, ಒಸ್ಸಾ 7, ಮಧ್ಯಪ್ರದೇಶ 22, ಕೇರಳ 2, ಮದರಾಸು 6, ಪಂಜಾಬ್ 2, ಉತ್ತರಪ್ರದೇಶ 5, ಪಶ್ಚಿಮ ಬಂಗಾಳ 3, ಮೈಸೂರು 3 ಜಮ್ಮು ಮತ್ತು ಕಾಶ್ಮೀರ 5, ರಾಜಾಸ್ಥಾನ 2, ಮಣಿಪುರ 1 ಮತ್ತು ತ್ರಿಪುರ 1.

ಭಾರತ ಸರ್ಕಾರದ ಗೃಹ ಮಂತ್ರಿ ಶ್ರೀ ಪಂತ್‌ರವರು ಗುತ್ತಗಾಡಿನ ಜನರಿಗಾಗಿ 43 ವಿಶೇಷ ನಿವಿಧೋದ್ದೇಶ ಕೇಂದ್ರಗಳನ್ನು ಮಂಜೂರು ಮಾಡಿರುವರು. ಅವುಗಳನ್ನು ಸಾಮುದಾಯಕ ಅಭಿವೃದ್ಧಿ ಕೇಂದ್ರಗಳೆಂದು ಪರಿಗಣಿಸಲಾಗುವುದು. ಈ ವಿವಿಧೋದ್ದೇಶ ಕೇಂದ್ರಗಳಲ್ಲಿ ಬೇಸಾಯ ನೀರಾವರಿ, ಕೋಟಗಾರಿಕೆ ಗ್ರಾಮಾಂತರ ವಸತಿ, ಮತ್ತು ಕುಡಿಯುವ ನೀರಿನ ಪೂರೈಕೆ ಸಂಪರ್ಕ ವ್ಯವಸ್ಥೆ ಶಿಕ್ಷಣ, ವೈದ್ಯಕೀಯ ಮತ್ತು ಆರೋಗ್ಯ ವ್ಯವಸ್ಥೆ, ಕಲೆ ಹಾಗೂ ಕೈಕಸಬುಗಳು ಇತ್ಯಾದಿ ಯೋಜನೆಗಳೂ ಸೇರಿರುತ್ತವೆ. ಈ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯಗಳನ್ನು ತ್ವರಿತಗೊಳಿಸಲು ಕೈ ಕೊಳ್ಳುವ ಐದು ವರ್ಷಗಳ ಯೋಜನೆಗೆ 27 ಲಕ್ಷ ರೂಗಳ ನೆಚ್ಚುವಾಗುವುದು. ಭಾರತ ಸರ್ಕಾರದ ಗೃಹಮಂತ್ರಿ ಶ್ರೀಯವರು 15 ಲಕ್ಷ ರೂಗಳನ್ನೂ ಸಾಮುದಾಯಕ ಅಭಿವೃದ್ಧಿ ಮಂತ್ರಿ ಶಾಪೆಯವರು 12 ಲಕ್ಷ ರೂಗಳನ್ನೂ ಇವಕ್ಕಾಗಿ ನೀಡುವರು.

....ರಾಜ್ಯ ಸರ್ಕಾರಗಳಿಗೆ ಸಾಲ....

ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ವೆಚ್ಚದಲ್ಲಿ ಕೇಂದ್ರದ ವಾಲಿಗಾಗಿ ನೋರ್ಮ್ ತಿಂಗಳ ಪ್ರಥಮಾರ್ಧದಲ್ಲಿ ವಿವಿಧ ರಾಜ್ಯಗಳಿಗೆ 276·50 ಲಕ್ಷ ರೂಗಳನ್ನು ಸಾಲವನ್ನಾಗಿಯೂ, 275·36 ಲಕ್ಷ ರೂಗಳನ್ನು ಸಹಾಯಧನವನ್ನಾಗಿಯೂ ನೀಡಲಾಗಿದೆ ಈ ಹಣದ ರಾಜ್ಯವಾರು ಹಂಚಿಕೆ ಈ ಕೆಳಕಂಡಂತಿರುವುದು.

ಆಂಧ್ರಪ್ರದೇಶ 10·45 ಲಕ್ಷ ಬಿಹಾರ್ 8·43 ಲಕ್ಷ, ಮುಂಬೈ 3·00 ಲಕ್ಷ ಮಧ್ಯಪ್ರದೇಶ 3·87 ಲಕ್ಷ ಮದರಾಸ್ 11·52 ಲಕ್ಷ, ಒರಿಸ್ಸಾ 6·91 ಲಕ್ಷ, ಉತ್ತರ ಪ್ರದೇಶ 7·47 ಲಕ್ಷ, ಪಶ್ಚಿಮ ಬಂಗಾಳ 3·00 ಲಕ್ಷ, ಮೈಸೂರು 2·55 ಲಕ್ಷ, ರಾಜಾಸ್ಥಾನ 7·58 ಲಕ್ಷ, ಕೇರಳ 1·38 ಲಕ್ಷ.

ರಾಷ್ಟ್ರೀಯ ವಿಸ್ತರಣ ಸೇವೆಗೆ ಸಹಾಯ ಧನ ಈ ರೀತಿ ಇದೆ. ಆಂಧ್ರ 14·61 ಲಕ್ಷ, ಅಸ್ಸಾಂ 2.72 ಲಕ್ಷ ಬಿಹಾರ್ 14·84 ಲಕ್ಷ, ಮುಂಬೈ 17·19 ಲಕ್ಷ, ಮಧ್ಯಪ್ರದೇಶ 16·80 ಮದರಾಸ್ 6·99 ಲಕ್ಷ, ಒರಿಸ್ಸಾ 11·28 ಲಕ್ಷ ಮತ್ತು ಪಂಜಾಬ್ 7·71 ಲಕ್ಷ.

ಸಾಮುದಾಯಕ ಅಭಿವೃದ್ಧಿ ಕೇಂದ್ರ ಬ್ಲಾಕ್‌ಗಳ ಸಲುವಾಗಿ ಕೊಟ್ಟಿರುವುದು. ಆಂಧ್ರಪ್ರದೇಶ 7·27 ಲಕ್ಷ ಬಿಹಾರ್ 14·84 ಲಕ್ಷ, ಮುಂಬೈ 24·00 ಲಕ್ಷ, ಮಧ್ಯಪ್ರದೇಶ 22ಲಕ್ಷ ಮದರಾಸ್ 14·47 ಲಕ್ಷ, ಒರಿಸ್ಸಾ 30·30 ಲಕ್ಷ, ಉತ್ತರ ಪ್ರದೇಶ 9·71 ಲಕ್ಷ, ರಾಜಾಸ್ಥಾನ್ 14·10 ಲಕ್ಷ ಕೇರಳ 9·47 ಲಕ್ಷ, ಪಶ್ಚಿಮ ಬಂಗಾಳ 45·00 ಲಕ್ಷ, ಮೈಸೂರು 2·14 ಲಕ್ಷ.

ರಾಷ್ಟ್ರೀಯ ವಿಸ್ತರಣ ಸೇವಾ ಆಂಧ್ರ ಪ್ರದೇಶ 6·25 ಲಕ್ಷ, ಅಸ್ಸಾಂ 1·28 ಬಿಹಾರ್ 6·08 ಲಕ್ಷ, ಮುಂಬೈ 9·41 ಮಧ್ಯಪ್ರದೇಶ 6·73 ಲಕ್ಷ, ಮದರಾಸ್ 3·30 ಲಕ್ಷ, ಒರಿಸ್ಸಾ 5·78 ಲಕ್ಷ ಮತ್ತು ಪಂಜಾಬ್ 3·26 ಲಕ್ಷ.

(3ನೇ ಪುಟದಿಂದ)

ಭಾರತದ ಕೈಗಾರಿಕೆ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತ ಕೈಗಾರಿಕೆ ವಾರ್ತೆ ಕ್ರಮಗಳಿಗೆ ಹಣ ಒದಗಿಸಲು ವಿನೇಶಿ ನಿನಿಮಯ ಬೊರಕಿಸಿಕೊಳ್ಳುವುದರಲ್ಲಿ ಭಾರತಕ್ಕೆ ತೊಂದರೆಯಾಗಿದೆಯೆಂದು ಹೇಳಿದರು.

ಭಾರತ ಇನ್ನು ಹತ್ತು ವರ್ಷದಲ್ಲಿ ಕಮ್ಯೂನಿಸ್ಟ್ ರಾಜ್ಯವಾಗುವುದೇ ಎಂಬ ಸಂಭವನೀಯತೆಯನ್ನು ಚರ್ಚಿಸುತ್ತ ಅಂಥ ಸಂಭವ ತಲೆದೋರಲಾರದೆಂದೂ ಅಷ್ಟರೊಳಗೆ ಕಮ್ಯೂನಿಸಂನ ರೂಪರೇಷೆ ಬದಲಾಯಿಸುವುದೆಂಬುದು ತಮ್ಮ ನಿರೀಕ್ಷೆಯೆಂದೂ ಶ್ರೀ ಆಶೋಕ ಮೆಹತ ನುಡಿದರು.

ಹಿಂದೀ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—„— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)

ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಆಧವಾ
ರಿಪ್ಲೈಕಾರ್ಡು ಬರೆಯಿರಿ.
ಶ್ರೀ ಶಿ ಪಾಲ್
ಹಿಂದೀ ವಿಶ್ವವಿದ್ಯಾಲಯ
ಧಾರವಾಡ 2

— ನೋಟೀಸು —

— ಬಳ್ಳಾರಿ ಮುನ್ಸಿಫರ ಕೋರ್ಟಿನಲ್ಲಿ —

O. S. 642 / 56

ವಾದಿ :— ಸಜ್ಜನರ ಈರಣ್ಣ, ತಂದೆ ಬಸಿಟ್ಟಪ್ಪ
ಸಜ್ಜನ ಗಾಣಿಗ, ವ್ಯಾಪಾರಿ, ಗುಂಡ್ಲಹಳ್ಳಿ-ಬಸಾಪುರ

Vs

ಪ್ರತಿವಾದಿ :— ರಾಮಯ್ಯ - ತಂದೆ- ಚಿಕ್ಕರಾಮಯ್ಯ
ನಾಯಕರು — ಜರಾಯ್ತಿ — ಗುಂಡ್ಲಹಳ್ಳಿ - ಬಸಾಪುರ

— ಪ್ರತಿವಾದಿಗೆ ದಾವೆಯ ಸೂಚನೆ —

ನೀವು ಪ್ರೋನೋಟಿನ ಮೂಲಕ ಬರೆದುಕೊಟ್ಟ ರೂ. 126—11—6 ಗಳನ್ನು ವಸೂಲಿ ಮಾಡಿಕೊಳ್ಳಲು ವಾದಿಯು ದಾವೆ ಹೂಡಿ ಅದರ ವಾಯ್ದೆಯು ನಿಮ್ಮ ಹಾಜರಿಗಾಗಿ 4—6—1957 ಕ್ಕೆ ಹಾಕಲಾಗಿದೆ. ಆ ದಿನ ನೀವು ಖುದ್ದಾಗಲಿ, ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸದಿದ್ದಲ್ಲಿ ಅದರ ವಿಚಾರಣೆಯು ಏಕಪಕ್ಷೀಯನಾಗಿ ಸಾಗಿ ನಿರ್ಣಯಿಸುವುದರಲ್ಲಿ ಬರುವುದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ
25—5—57

ಯಸ್. ಗುರುರಾಜರಾವ್
ವಾದಿಯ ಅಡ್ವೊಕೇಟ್

ನೆಗಡಿ, ಕೆಮ್ಮು, ದಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎಂಡೂ ಸಾಧ್ಯ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6ತಿಂಗಳಿಗೆ 3—0—0	Six months 3—0—0
ಅರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ಸಾಮುದಾಯಕ ಅಭಿವೃದ್ಧಿ ವಾರ್ತಾಪತ್ರ

.... ಕೈಗಾರಿಕಾ ಎಸ್ಟೇಟುಗಳು ....

ಎಲ್ಲಾ ರಾಜ್ಯಗಳ ಅಭಿವೃದ್ಧಿ ಕಮೀಷನರುಗಳು ಸಂಯುಕ್ತ ಅಭಿವೃದ್ಧಿ ಕಮೀಷನರುಗಳು, ಆಂಧ್ರಪ್ರದೇಶದ ಸಣ್ಣ ಪ್ರಮಾಣದ ಕೈಗಾರಿಕಾ ಡೈರೆಕ್ಟರುಗಳೊಡನೆ ಸಮಾಲೋಚನೆ ಮಾಡಿ, 20 ಸಣ್ಣ ಕೈಗಾರಿಕಾ ಎಸ್ಟೇಟುಗಳ ಸ್ಥಾಪನೆಗೆ ನೆರವಾಗಬೇಕೆಂದು ತಿಳಿಸಿರುವರು.

ಕೈಗಾರಿಕೆಗಳಿಗಾಗಿ ವಿದ್ಯುಚ್ಛಕ್ತಿ ನೀರಿನ ಸರಬರಾಜು, ಮಾರುಕಟ್ಟೆಯ ದೂರ, ಸಂಪರ್ಕ ಸೌಲಭ್ಯ ಇತ್ಯಾದಿಗಳನ್ನು ಪರಿತೀಲಿಸಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುವುದು.

ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಕೇಂದ್ರಗಳ ಪಂಚಿಕೆ

1956–57 ರಲ್ಲಿ, 650 ರಾಷ್ಟ್ರೀಯ ವಿಸ್ತರಣ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಅವುಗಳಲ್ಲಿ, 1957 ರ ಏಪ್ರಿಲ್ 1 ರಿಂದೀಚೆಗೆ 300 ಕೇಂದ್ರಗಳನ್ನು ಆರಂಭಿಸಲಾಗಿದೆ. ಉಳಿದವುಗಳನ್ನು ಮುಂದಿನ ಜೂನ್ ತಿಂಗಳಲ್ಲಿ ಆರಂಭಿಸಲಾಗುವುದು. ಈ ಕೇಂದ್ರಗಳಲ್ಲಿ 1957 ರ ಅಕ್ಟೋಬರ್ ನಿಂದ ಕೆಲಸ ಆರಂಭವಾಗುವುದು. ಈ ಕೇಂದ್ರಗಳ ರಾಜ್ಯವಾರು ಹಂಚಿಕೆ ಈ ಕೆಳಕಂಡಂತೆ ಇರುವುದು.

ಆಂಧ್ರ 25, ಅಸ್ಸಾಂ 8, ಬಿಹಾರ್ 38, ಮುಂಬೈ 42, ಮಧ್ಯಪ್ರದೇಶ 37, ಮದರಾಸು 19, ಮೈಸೂರು 10 ಒರಿಸ್ಸಾ 18, ಪಂಜಾಬ್ 25, ಕೇರಳ 8, ಉತ್ತರಪ್ರದೇಶ 18, ಪಶ್ಚಿಮ ಬಂಗಾಳ 20, ರಾಜಾಸ್ಥಾನ 14, ಜಮ್ಮು ಮತ್ತು ಕಾಶ್ಮೀರ 10, ಮಣಿಪುರ 1, ತ್ರಿಪುರ 1, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು 2 ಮತ್ತು ಈಶಾನ್ಯ ಭಾರತ 4.

1957–58 ರಲ್ಲಿ 200 ರಾಷ್ಟ್ರೀಯ ವಿಸ್ತರಣ ಕೇಂದ್ರಗಳನ್ನು ಸಾಮುದಾಯಕ ಅಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುವುದು. ಅವುಗಳಲ್ಲಿ 100 ನ್ನು ಈಗಾಗಲೇ ಪರಿವರ್ತಿಸಲಾಗಿದೆ. ಉಳಿದ ಕೇಂದ್ರಗಳಲ್ಲಿ 1957 ರ ಅಕ್ಟೋಬರ್ 2 ರಂದು ಪರಿವರ್ತನ ಕೆಲಸಗಳನ್ನು ಆರಂಭಿಸಲಾಗುವುದು.

ಈ ರಾಷ್ಟ್ರೀಯ ವಿಸ್ತರಣ ಸೇವೆಯಲ್ಲಿ ರಾಜ್ಯವಾರು ಹಂಚಿಕೆ ಈ ರೀತಿ ಇರುವುದು.

ಆಂಧ್ರ 16, ಅಸ್ಸಾಂ 7, ಬಿಹಾರ್ 10, ಮುಂಬೈ 17, ಒಸ್ಸಾ 7, ಮಧ್ಯಪ್ರದೇಶ 22, ಕೇರಳ 2, ಮದರಾಸು 6, ಪಂಜಾಬ್ 2, ಉತ್ತರಪ್ರದೇಶ 5, ಪಶ್ಚಿಮ ಬಂಗಾಳ 3, ಮೈಸೂರು 3 ಜಮ್ಮು ಮತ್ತು ಕಾಶ್ಮೀರ, ರಾಜಾಸ್ಥಾನ 2, ಮಣಿಪುರ 1 ಮತ್ತು ತ್ರಿಪುರ 1.

ಭಾರತ ಸರ್ಕಾರದ ಗೃಹ ಮಂತ್ರಿ ಶಾಸ್ತ್ರಿಯವರು ಗುಡ್ಡಗಾಡಿನ ಜನರಿಗಾಗಿ 43 ವಿಶೇಷ ವಿವಿಧೋದ್ದೇಶ ಕೇಂದ್ರಗಳನ್ನು ಮಂಜೂರು ಮಾಡಿರುವರು. ಅವುಗಳನ್ನು ಸಾಮುದಾಯಕ ಅಭಿವೃದ್ಧಿ ಕೇಂದ್ರಗಳೆಂದು ಪರಿಗಣಿಸಲಾಗುವುದು. ಈ ವಿವಿಧೋದ್ದೇಶ ಕೇಂದ್ರಗಳಲ್ಲಿ ಬೇಸಾಯ ನೀರಾವರಿ, ತೋಟಗಾರಿಕೆ ಗ್ರಾಮಾಂತರ ವಸತಿ, ಮತ್ತು ಕುಡಿಯುವ ನೀರಿನ ಪೂರೈಕೆ ಸಂಪರ್ಕ ವ್ಯವಸ್ಥೆ ಶಿಕ್ಷಣ, ವೈದ್ಯಕೀಯ ಮತ್ತು ಆರೋಗ್ಯ ವ್ಯವಸ್ಥೆ, ಕಲೆ ಹಾಗೂ ಕೈಕಸಬುಗಳು ಇತ್ಯಾದಿ ಯೋಜನೆಗಳೂ ಸೇರಿರುತ್ತವೆ. ಈ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯಗಳನ್ನು ತ್ವರಿತಗೊಳಿಸಲು ಕೈ ಕೊಳ್ಳುವ ಐದು ವರ್ಷಗಳ ಯೋಜನೆಗೆ 27 ಲಕ್ಷ ರೂಗಳ ವೆಚ್ಚವಾಗುವುದು. ಭಾರತ ಸರ್ಕಾರದ ಗೃಹಮಂತ್ರಿ ಶಾಸ್ತ್ರಿಯವರು 15 ಲಕ್ಷ ರೂಗಳನ್ನೂ ಸಾಮುದಾಯಕ ಅಭಿವೃದ್ಧಿ ಮಂತ್ರಿ ಶಾಪೆಯವರು 12 ಲಕ್ಷ ರೂಗಳನ್ನೂ ಇದಕ್ಕಾಗಿ ನೀಡುವರು.

....ರಾಜ್ಯ ಸರ್ಕಾರಗಳಿಗೆ ಸಾಲ....

ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ವೆಚ್ಚದಲ್ಲಿ ಕೇಂದ್ರದ ಪಾಲಿಗಾಗಿ ಮೊದಲ ತಿಂಗಳ ಪ್ರಥಮಾರ್ಧದಲ್ಲಿ ವಿವಿಧ ರಾಜ್ಯಗಳಿಗೆ 276·50 ಲಕ್ಷ ರೂಗಳನ್ನು ಸಾಲವನ್ನಾಗಿಯೂ, 275·36 ಲಕ್ಷ ರೂಗಳನ್ನು ಸಹಾಯಧನವನ್ನಾಗಿಯೂ ನೀಡಲಾಗಿದೆ ಈ ಹಣದ ರಾಜ್ಯವಾರು ಹಂಚಿಕೆ ಈ ಕೆಳಕಂಡಂತಿರುವುದು.

ಆಂಧ್ರಪ್ರದೇಶ 10·45 ಲಕ್ಷ ಬಿಹಾರ್ 8·48 ಲಕ್ಷ, ಮುಂಬೈ 3·00 ಲಕ್ಷ ಮಧ್ಯಪ್ರದೇಶ 3·87 ಲಕ್ಷ ಮದರಾಸ್ 11·52 ಲಕ್ಷ, ಒರಿಸ್ಸಾ 6·91 ಲಕ್ಷ, ಉತ್ತರ ಪ್ರದೇಶ 7·47 ಲಕ್ಷ, ಪಶ್ಚಿಮ ಬಂಗಾಳ 3·00 ಲಕ್ಷ, ಮೈಸೂರು 2·55 ಲಕ್ಷ, ರಾಜಾಸ್ಥಾನ 7·58 ಲಕ್ಷ, ಕೇರಳ 1·38 ಲಕ್ಷ.

ರಾಷ್ಟ್ರೀಯ ವಿಸ್ತರಣ ಸೇವೆಗೆ ಸಹಾಯ ಧನ ಈ ರೀತಿ ಇದೆ. ಆಂಧ್ರ 14·61 ಲಕ್ಷ, ಅಸ್ಸಾಂ 2.72 ಲಕ್ಷ ಬಿಹಾರ್ 14·84 ಲಕ್ಷ, ಮುಂಬೈ 17·19 ಲಕ್ಷ, ಮಧ್ಯಪ್ರದೇಶ 16·80 ಮದರಾಸ್ 6·99 ಲಕ್ಷ, ಒರಿಸ್ಸಾ 11·28 ಲಕ್ಷ ಮತ್ತು ಪಂಜಾಬ್ 7 71 ಲಕ್ಷ.

ಸಾಮುದಾಯಕ ಅಭಿವೃದ್ಧಿ ಕೇಂದ್ರ ಬ್ಲಾಕ್‌ಗಳ ಸಲುವಾಗಿ ಕೊಟ್ಟಿರುವುದು. ಆಂಧ್ರಪ್ರದೇಶ 7·27 ಲಕ್ಷ ಬಿಹಾರ್ 14 84 ಲಕ್ಷ, ಮುಂಬೈ 24·00 ಲಕ್ಷ, ಮಧ್ಯಪ್ರದೇಶ .22ಲಕ್ಷ ಮದರಾಸ್ 14·47 ಲಕ್ಷ, ಒರಿಸ್ಸಾ 30·30 ಲಕ್ಷ, ಉತ್ತರ ಪ್ರದೇಶ 9 71 ಲಕ್ಷ, ರಾಜಾಸ್ಥಾನ್ 14·10 ಲಕ್ಷ ಕೇರಳ 9·47 ಲಕ್ಷ, ಪಶ್ಚಿಮ ಬಂಗಾಳ 45·00 ಲಕ್ಷ, ಮೈಸೂರು 2·14 ಲಕ್ಷ.

ರಾಷ್ಟ್ರೀಯ ವಿಸ್ತರಣ ಸಾಲ ಆಂಧ್ರಪ್ರದೇಶ 6·25 ಲಕ್ಷ, ಅಸ್ಸಾಂ 1·28 ಬಿಹಾರ್ 6·08 ಲಕ್ಷ, ಮುಂಬೈ 9·41 ಮಧ್ಯಪ್ರದೇಶ 6·73 ಲಕ್ಷ, ಮದರಾಸ್ 3·30 ಲಕ್ಷ, ಒರಿಸ್ಸಾ 5·78 ಲಕ್ಷ ಮತ್ತು ಪಂಜಾಬ್ 3·26 ಲಕ್ಷ.

(3ನೇ ಪುಟದಿಂದ)

ಭಾರತದ ಕೈಗಾರಿಕೆ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತ ಕೈಗಾರಿಕೆ ಕಾರ್ಯಕ್ರಮಗಳಿಗೆ ಹಣ ಒದಗಿಸಲು ವಿದೇಶಿ ವಿನಿಮಯ ಮೊರೆಹೊಕ್ಕಿಕೊಳ್ಳುವುದರಲ್ಲಿ ಭಾರತಕ್ಕೆ ತೊಂಗರೆಯಾಗಿದೆಯೆಂದು ಹೇಳಿದರು.

ಭಾರತ ಇನ್ನು ಹತ್ತು ವರ್ಷದಲ್ಲಿ ಕಮ್ಯೂನಿಸ್ಟ್ ರಾಜ್ಯವಾಗುವುದೇ ಎಂಬ ಸಂಭವನೀಯತೆಯನ್ನು ಚರ್ಚಿಸುತ್ತ ಅಂಥ ಸಂಭವ ತಲೆದೋರಲಾರದೆಂದೂ ಅಷ್ಟರೊಳಗೆ ಕಮ್ಯೂನಿಸಂನ ರೂಪರೇಷೆ ಬದಲಾಯಿಸುವುದೆಂಬುದು ತಮ್ಮ ನಿರೀಕ್ಷೆಯೆಂದೂ ಶ್ರೀ ಅಶೋಕ ಮೆಹತ ನುಡಿದರು.

ಮುಂದೇ ಪರೀಕ್ಷೆಗಳು

ಪ್ರಾಥಮಿಕ

ಪರೀಕ್ಷಾ ಶುಲ್ಕ 1-8-0
ಸುಗಮ ಹಿಂದೀ ಬೋಧಿನಿ
ಸುಗಮ ಹಿಂದಿ I
—,— II
ಕಥಾಕುಂಜ
ಹಿಂದೀ ರಚನೆ
(ಸೆಟ್ ಬೆಲೆ 2-8-0)

ಮಧ್ಯಮಾ ಪರೀಕ್ಷಾ ಶುಲ್ಕ 3-0-0

ಸುಗಮ ಹಿಂದಿ 3
ಸಚ್ಚಾ ಇನ್ ಸಾಫ್
ಆದರ್ಶ ಚರಿತ್ರ
ಐತಿಹಾಸಿಕ ಕಹಾನಿ
ಹಿಂದೀರಚನೆ 2
ಪತ್ರಲೇಖನ
(ಸೆಟ್ ಬೆಲೆ 4-4-0)

ಅಥವಾ

ರಿಪ್ಲೇಕಾರ್ಡ್ ಬರೆಯರಿ.

ಶ್ರೀ ಗಿ.ಸಾಲ್

ಹಿಂದೀ ಪ್ರಚಾರವಿದ್ಯಾಲಯ

ಬಳ್ಳಾರಿ ೩

— ನೋಟೀಸು —

— ಬಳ್ಳಾರಿ ಮುನ್ಸಿಫರ ಕೋರ್ಟಿನಲ್ಲಿ —

O. S- 642 / 56

ವಾದಿ :— ಸಜ್ಜನರ ಈರಣ್ಣ, ತಂದೆ ಬಸೆಟ್ಟೆಪ್ಪ
ಸಜ್ಜನ ಗಾಣಿಗ, ವ್ಯಾಪಾರಿ, ಗುಂಡ್ಲಹಳ್ಳಿ-ಬಸಾಪುರ

Vs

ಪ್ರತಿವಾದಿ :— ರಾಮಯ್ಯ - ತಂಪೆ- ಚಿಕ್ಕರಾಮಯ್ಯ
ನಾಯಕರು — ಜಿರಾಯ್ತಿ — ಗುಂಡ್ಲಹಳ್ಳಿ-ಬಸಾಪುರ

— ಪ್ರತಿವಾದಿಗೆ ದಾನೆಯ ಸೂಚನೆ —

ನೀವು ಪ್ರೋನೋಟಿನ ಮೂಲಕ ಬರೆದುಕೊಟ್ಟ ರೂ. 126—11—6 ಗಳನ್ನು ವಸೂಲಿ ಮಾಡಿಕೊಳ್ಳಲು ವಾದಿಯು ದಾವೆ ಹೂಡಿ ಅದರ ವಾಯ್ದೆಯು ನಿಮ್ಮ ಹಾಜರಿಗಾಗಿ 4—6—1957 ಕ್ಕೆ ಹಾಕಲಾಗಿದೆ- ಆ ದಿನ ನೀವು ಖುದ್ದಾಗಲಿ, ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಅಕ್ಷೇಪಣೆ ತಿಳಿಸದಿದ್ದಲ್ಲಿ ಅದರ ವಿಚಾರಣೆಯು ಏಕಪಕ್ಷೀಯವಾಗಿ ಸಾಗಿ ನಿರ್ಣಯಿಸುವುದರಲ್ಲಿ ಬರುವುದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ
25—5—57

ಯಸ್. ಗುರುರಾಜರಾವ್
ವಾದಿಯ ಅಡ್ವೋಕೇಟ್

ನೆಗಡಿ, ಕೆಮ್ಮು, ಜಮ್ಮು, ಉಬ್ಬಸ
ಶೀತಜ್ವರ, ಮಲೇರಿಯಾ, ಮತು
ಎಲ್ಲ ನೋವುಗಳಿಗೆ ದಿವ್ಯಾಮೃತ

ಕಾಶ್ಮೀರಿ ಆರುಕ್

ಲೇಪನೆ, ಸೇವನೆ - ಎಂದೂ ಸಾಧ್ಯ
ಎಲ್ಲಪಾಪುಗಳಲ್ಲೂ ದೊರೆಯುತ್ತದೆ.



H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

NAVA BHARAT, BELLARY.

(Regd. M. No. 4746)

To

Sri. _____

_____

_____

Edited, Printed & Published by T. B. KESHAVA RAO at Nava Bharat Printing Press, Bellary.

ಸಮಾಚಾರ

ಸೋಮವಾರ ಜೂನ್ 3,10-6-1957

ವರ್ಷ 20 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 23-31 | ಉತ್ತಿಷ್ಠತ ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ !!! | ಟಿ. ಬಿ. ಕೇಶವಮೂರ್ತಿ

J. S. S. LAW COLLEGE. DHARWAR.

The College will re-open on 15th June 1957, and will teach courses prescribed by the Karnatak University for the Law Preliminary, First & Second LL. B. Examinations. Students who have passed the Intermediate Commerce or the B. A or B. Com., or B. Sc or Law Preliminary Examinations of the Karnatak University or eqivalent Examinations are eligible for admission. Limited Hostel Accomodation. The College office is open from 8. A. M. to 12 noon, on all working days. Copies of prospectus will be supplied on demand.

Dharwar *N.R. Kulkarni*
27—5—1957 *Principal*

ರಾಷ್ಟ್ರೀಯ ವರಮಾನದ ಅಂದಾಜು !

ಭಾರತದ ರಾಷ್ಟ್ರೀಯ ವರಮಾನವು, 1948-49 ರ ಬೆಲೆಗಳಲ್ಲಿ, 1955-56 ರಲ್ಲಿ 10,420 ಕೋಟಿ ರೂಗಳೂ 54-55 ರಲ್ಲಿ 10,280 ಕೋಟಿರೂಗಳೂ 53-54 ರಲ್ಲಿ 10030 ಕೋಟಿರೂಗಳೂ ಇದ್ದಿತು. ಪ್ರತಿವ್ಯಕ್ತಿಯ ವರಮಾನವು, 48-49 ರ ಬೆಲೆಗಳಲ್ಲಿ, 1953—54 ರಲ್ಲಿ 268·7 ರೂಗಳಿಂದ ಕ್ರಮವಾಗಿ 1954—55 ರಲ್ಲಿ 271·9 ರೂಗಳಿಗೂ, 1955—56 ರಲ್ಲಿ 272·1 ರೂಗಳಿಗೂ ಏರಿತು.

ಕೇಂದ್ರ ಅಂಕಿ-ಅಂಶ ವಿಭಾಗ [ಸೆಂಟ್ರಲ್ ಸ್ಟಾಟಿಸ್ಟಿಕಲ್ ಆರ್ಗನೈಜೇಷನ್] ದವರು ಈಗ ತಾನೆ ಪ್ರಕಟಿಸಿದ ರಾಷ್ಟ್ರೀಯ ವರಮಾನದ ಮೇಲಿನ ವಾರ್ಷಿಕ ವರದಿಯ 4 ನೆಯ ಸಂಚಿಕೆಯಲ್ಲಿ ಮೇಲಿಕಂಡ ವಿವರಗಳನ್ನು ಕೊಡಲಾಗಿದೆ. ಈ ವರದಿಯಲ್ಲಿ ಸೇರಿಸಲಾಗಿರುವ 54-55 ರ ಅಂದಾಜನ್ನು ಹಿಂದಿನ ವರ್ಷಗಳಲ್ಲಿ ಅನುಸರಿಸಿದ ವಿವರವಾದ ವಿಧಾನದಿಂದ ತಯಾರಿಸಲಾಗಿದೆ. ಕಳೆದ ವರ್ಷ ಪ್ರಕಟವಾದ ಮೊದಲು ಅಂದಾಜುಗಳ ಪ್ರಕಾರ ಆವುಗಳನ್ನು ಪರಿಷ್ಕರಿಸಲಾಗಿದೆ. 1955-56 ರ ಅಂದಾಜುಗಳಲ್ಲಿ ಪರಿಷ್ಕರಣೆಯಾಗಬಹುದು. 1948-49 ರ ಬೆಲೆಗಳಲ್ಲಿ ರಾಷ್ಟ್ರೀಯ ವರಮಾನವು 48-49 ರಿಂದ ಈಚೆಗೆ ಬದಲಾವಣೆಯಾಗಿರುವುದನ್ನು ಈ ಕೆಳಗಿನ ಪಟ್ಟಿಯು ತೋರಿಸುತ್ತದೆ.

1) ವರ್ಷ
2) 1948—49 ರ ಬೆಲೆಗಳಲ್ಲಿ ರಾಷ್ಟ್ರೀಯ ವರಮಾನ (ಕೋಟಿ ರೂಗಳಲ್ಲಿ)
3) 1948—49 ರ ಬೆಲೆಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯ ವರಮಾನ (ರೂಗಳಲ್ಲಿ)

1	2	3
1948-49	9,750	254·1
49-50	9,852	248·6
50-51	9,[illegible]	246·3
51-52	9,[illegible]	250·1
52-53	9,460	256·6
53-54	10,030	268·7
54-55	10,280	271·9
55-56	10,420	272·1

[ಮುಂದಿನವಾರ]

ಒಟ್ಟಿನಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (1951-51 ರಿಂದ 1955-56) ರಾಷ್ಟ್ರೀಯ ವರಮಾನವು ಶೇ. 17·7 ರಷ್ಟು ಹೆಚ್ಚಾಗಿದೆ. ಪ್ರಥಮ ಯೋಜನೆಯಲ್ಲಿ ರಾಷ್ಟ್ರೀಯ ವರಮಾನವನ್ನು ಶೇ. 11 ರಷ್ಟು ಹೆಚ್ಚು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಆದೇರೀತಿ ಪ್ರತಿಯೊಬ್ಬ ವ್ಯಕ್ತಿಯ ವರಮಾನದಲ್ಲಿಯೂ, ಶೇ. 10·5 ರಷ್ಟು ಹೆಚ್ಚುವರಿಯಾಗಿದೆ. ರಾಷ್ಟ್ರೀಯ ವರಮಾನವು 1955—56 ರಲ್ಲಿ, 1954-55 ರಲ್ಲಿದ್ದುದಕ್ಕಿಂತ ಯಾವೀತಿಯಲ್ಲೂ ಹೆಚ್ಚುವರಿಯನ್ನು ತೋರಿಸುವುದಕ್ಕೆ ಮುಖ್ಯ ಕಾರಣವೇನೆಂದರೆ :—

—ಇತ್ತೀಚೆಗೆ ಮೊರೆತ ಬೆಳೆಗಳ ಅಂಕಿ-ಅಂಶಗಳು, ಬೇಸಾಯ ಉತ್ಪಾದನೆಯಲ್ಲಿ ಸೂಚಿಸಿರುವ ಇಳುವರಿ, 1948-49 ರ ಬೆಲೆಗಳಲ್ಲಿ, 1954—55 ರಲ್ಲಿ ರಾಷ್ಟ್ರೀಯ ವರಮಾನಕ್ಕೆ ಬೇಸಾಯದಿಂದ ಬಂದ ಹಣಕ್ಕಿಂತ 55-56 ರಲ್ಲಿ ಬಂದ ಹಣವು 50 ಕೋಟಿ ರೂಗಳಷ್ಟು ಕಡಿಮೆ ಇತ್ತು. ಇತರ ಬಾಬುಗಳಲ್ಲಿ ಮುತ್ತುವ ಗಮನಾರ್ಹವಾದ ಬದಲಾವಣೆಯೂ ಆಗಿಲ್ಲ.

ರಾಷ್ಟ್ರೀಯ ವರಮಾನದ ಅಂದಾಜು

(1 ನೇ ಪುಟದಿಂದ)

ಪ್ರಚಲಿತ ಬೆಲೆಗಳಲ್ಲಿ ಹೇಳುವುದಾದರೆ, ರಾಷ್ಟ್ರೀಯ ವರಮಾನವು 55–56 ರಲ್ಲಿ 9,651 ಕೋಟಿ ರೂಗಳೂ 1954—55 ರಲ್ಲಿ 9,620 ಕೋಟಿ ರೂಗಳೂ ಇರುವುವು. ಅಂದರೆ 1953–54 ಕ್ಕೆ ಹೋಲಿಸಿದರೆ ಕ್ರಮವಾಗಿ 830 ಕೋಟಿ ರೂಗಳಷ್ಟು ಕಡಿಮೆ ಇರುವುದು. ಪ್ರಚಲಿತ ಬೆಲೆಗಳಲ್ಲಿ ವ್ಯಕ್ತಿಯ ವರಮಾನವು 54–55 ರಲ್ಲಿ 280·7 ರೂಗಳಿದ್ದುದು, 55–56 ರಲ್ಲಿ 255·0 ರೂಗಳಿಗೂ ಇಳಿದಿದೆ.

ಈ ಇಳುವರಿಗೆ ಮುಖ್ಯವಾಗಿ ಪದಾರ್ಥಗಳ ಬೆಲೆಯಲ್ಲಾದ ಬದಲಾವಣೆಯೇ ಕಾರಣ. 55–56 ಮತ್ತು 54–55 ರಲ್ಲಿ ಬೇಸಾಯ ವಸ್ತುಗಳ ಬೆಲೆಯು ಮಟ್ಟವು 53–54 ರಲ್ಲಿದ್ದುದಕ್ಕಿಂತಲೂ ಕಡಮೆಯಾಗಿರುವುದು ವರಮಾನದಲ್ಲಿ ಕಡಮೆಯಾಗುವುದಕ್ಕೆ ಇದೂ ಕಾರಣವಾಗಿದೆ.

ಈ ವರದಿಯಲ್ಲಿ ಮಾಡಲಾಗಿರುವ ಅಂದಾಜುಗಳನ್ನು 1 ದಶಮಾನಕ್ಕೆ ಸರಿಪಡಿಸಲಾದ, ನೂರು ಕೋಟಿ ರೂಗಳ ಮಾನವಲ್ಲಿ ಸೂಚಿಸಲಾಗಿದೆ. 5 ಕೋಟಿ ರೂಗಳಿಗಿಂತ ಕಡಮೆಯಾದುದನ್ನು ಬಿಟ್ಟು ಬಿಡಲಾಗಿದೆ 1955—56 ರಲ್ಲಿ ಗಣಿಕೆಲಸ, ವ್ಯವಸ್ಥಿತ ಬ್ಯಾಂಕಿಂಗ್ ಮತ್ತು ವಿಮೆ ಇಂತಹ್ಯದಿ ಕ್ಷೇತ್ರಗಳಲ್ಲಿ ಕೊಂಚವು ಪ್ರಗತಿಯಾಗದಿದ್ದರೂ ಈ ಸಾಧಿಯಲ್ಲಿ ಸೇರಿರುವಂತಹ ಪ್ರವಸಣದಲ್ಲಿ ಅವು ಇರಲಿಲ್ಲ.

ನಿಮಗಿದು ಗೊತ್ತೆ?

1) ಸಮರ ಕಾಲದಲ್ಲಿ ಕಿತ್ತುಹಾಕಲಾಗಿದ್ದ 430 ಮೈಲಿಗಳಷ್ಟು ರೈಲು ಮಾರ್ಗಗಳನ್ನು ಪ್ರಥಮ ಯೋಜನಾವಧಿಯಲ್ಲಿ ಪುನಃ ಹಾಕಲಾಯಿತು. 380 ಮೈಲಿಗಳಷ್ಟು ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. 46 ಮೈಲಿಗಳಷ್ಟು ನ್ಯಾರೋಗೇಜ್ ರೈಲು ಮಾರ್ಗವನ್ನು ಬ್ರಾಡ್ ಗೇಜ್‌ಗೆ ಪರಿವರ್ತಿಸಲಾಯಿತು.

2) ಯೋಜನೆಯ ಅಂತ್ಯದವೇಳೆಗೆ ಒಟ್ಟು 453 ಮೈಲಿಗಳಷ್ಟು, 10 ಹೊಸ ರೈಲು ಮಾರ್ಗಗಳು ನಿರ್ಮಾಣದಲ್ಲಿದ್ದವು 52 ಮೈಲಿಗಳಷ್ಟು ರೈಲು ಮಾರ್ಗಗಳು ಬ್ರಾಡ್‌ಗೇಜ್‌ಗೆ ಪರಿವರ್ತನೆಗೊಳ್ಳುತ್ತಿದ್ದವು, ಮತ್ತು 2,000 ಮೈಲಿಗಳಷ್ಟು ಹೊಸ ರೈಲು ಮಾರ್ಗಗಳ ಬಗ್ಗೆ ಸಮೀಕ್ಷೆ ನಡೆಯುತ್ತಿತ್ತು.

ಸ್ವಾತಂತ್ರ್ಯ ಬಂದನಂತರ ಸಂಚಾರಕ್ಕಾಗಿ ತೆರೆಯಲಾದ ಒಟ್ಟು 758·92 ಮೈಲಿಗಳ 19 ಹೊಸ ರೈಲು ಮಾರ್ಗಗಳಲ್ಲಿ ಪ್ರಥಮ ಯೋಜನಾವಧಿಯಲ್ಲಿಯೇ 12 ರೈಲು ಮಾರ್ಗಗಳನ್ನು ಮುಗಿಸಲಾಯಿತು.

4) ಈ ಹೊಸ ರೈಲು ಮಾರ್ಗಗಳಲ್ಲಿ ಅತಿಮುಖ್ಯವಾದುದು 142 ಮೈಲಿಗಳ ಉದ್ದದ ಅಸ್ಸಾಂ ರೈಲು ಮಾರ್ಗ. ವಿಷಮ ಪರಿಸ್ಥಿತಿಗಳಿದ್ದರೂ ಸಹ, ಈ ಯೋಜನೆಯನ್ನು ನಿರ್ದಿಷ್ಟ ಅವಧಿಗೆ ಮೊದಲೇ ಮುಗಿಸಲಾಯಿತು.

5) ಮುಕರಿಯನ್ ಪತಾಣಕೋಟೆ ರೈಲುಮಾರ್ಗದಲ್ಲಿ ಕೆಲಸವನ್ನು 1949 ರ ಸೆಪ್ಟೆಂಬರ್‌ನಲ್ಲಿ ಪ್ರಾರಂಭಿಸಲಾಯಿತು. ಈ ರೈಲುಮಾರ್ಗವನ್ನು ಸಂಚಾರಕ್ಕಾಗಿ 1952 ರ ಏಪ್ರಿಲ್ 7 ರಂದು ವಿದ್ಯುಕ್ತವಾಗಿ ತೆರೆಯಲಾಯಿತು. ಈ 27 ಮೈಲಿಗಳ ಉದ್ದದ ರೈಲು ಮಾರ್ಗವನ್ನು ನಿರ್ಮಿಸಿದ್ದರಿಂದ, ಪಹಿಲೆ ಮತ್ತು ಪರಾನ ಕೋಟೆಗಳ ನಡುವೆ ಆಂತರವು 44 ಮೈಲಿಗಳಷ್ಟು ಕಡಮೆಯಾಯಿತು.

6) 170 ಮೈಲಿಗಳ ಅಂತರದ ಕಾಂಡ್ಲಾದ್ವೀಪದ (ಗಾಂಧಿಧಾಮ್) ರೈಲು ಮಾರ್ಗವನ್ನು 1952 ಫೆಬ್ರುವರಿ 2 ರಂದು ಸಂಚಾರಕ್ಕಾಗಿ ತೆರೆಯಲಾಯಿತು. ಇದರಿಂದ ಸ್ವಾಮಿ ಸಮುದ್ರ ತೀರದಲ್ಲಿರುವ ಕಾಂಡ್ಲಾ ಬಂದರು ತೀರದ ಹಿಂದಿರುವ ಪ್ರದೇಶಗಳೊಡನೆ ಸಂಬಂಧ ಪಡೆಯಿತು.

7) ದ್ವಿತೀಯ ಯೋಜನೆಯಲ್ಲಿ ಮುಖ್ಯ ಅಭಿವೃದ್ಧಿ ಕಾರ್ಯಗಳೆಂದರೆ 1607 ಮೈಲಿಗಳಷ್ಟು ರೈಲು ಮಾರ್ಗದಲ್ಲಿ ಎರಡೆರಡು ರೈಲು ಮಾರ್ಗಗಳನ್ನು ನಿರ್ಮಿಸುವುದು, 265 ಮೈಲಿಗಳಷ್ಟು ನ್ಯಾರೋಗೇಜ್ ರೈಲು ಮಾರ್ಗಗಳನ್ನು ಬ್ರಾಡ್ ಗೇಜ್‌ಗೆ ಪರಿವರ್ತಿಸುವುದು. ಕೆಲವು ಭಾಗಗಳಲ್ಲಿ 892 ಮೈಲಿಗಳಷ್ಟು ದೂರ ರೈಲುಗಳನ್ನು ವಿದ್ಯುಚ್ಛಕ್ತಿ ಸಹಾಯದಿಂದ ಓಡಿಸಲಾಗುವುದು. 1293 ಮೈಲಿಗಳಷ್ಟು ದೂರ ಡೀಸೆಲ್ ಎಂಜಿನ್‌ಗಳಿಂದ ಓಡಿಸಲಾಗುವುದು 842 ಮೈಲಿಗಳಷ್ಟು ಹೊಸ ರೈಲುಮಾರ್ಗಗಳನ್ನು ನಿರ್ಮಿಸುವುದು ಮತ್ತು 5,000 ಮೈಲಿಗಳಷ್ಟು ದೂರ ರೈಲು ಮಾರ್ಗಗಳನ್ನು ಹೊಸದಾಗಿ ಮಾಡಲಾಗುವುದು.

ಜನತೆಗೆ ಪೂರ್ಣ ಸಹಾಯ ಒದಗಿಸ ಬೇಕೆಂದು ನೆಹ್ರೂ ಅಭಿಪ್ರಾಯ

ಆರ್ಥಿಕ ಮತ್ತು ಇತರ ಕಷ್ಟನಿಷ್ಠುರಗಳೇನೇ ಇರಲಿ ಭಾರತ ಸರ್ಕಾರ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ನಿರ್ವಹಿಸಬೇಕೆಂದು ದೃಢಸಂಕಲ್ಪದಿಂದ ಕೂಡಿದೆಯೆಂದು ಪ್ರಧಾನಿ ನೆಹ್ರೂರವರು 4—6—57 ರಂದು ತಿಳಿಸಿದರು.

ಎರಡು ದಿನ ಚರ್ಚೆ ನಡೆಸಿ ಈ ನಿರ್ಣಯವನ್ನು ಮುಕ್ತಾಯಗೊಂಡ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲ್ ಅಧಿವೇಶನದಲ್ಲಿ ಮಾತ್ರ ನಾಡಿದ ಸಂದರ್ಭದಲ್ಲಿ ನೆಹ್ರೂ ಈ ರೀತಿ ತಿಳಿಸಿದರು.

"ಆರ್ಥಿಕವಾಗಿಯೂ ಮತ್ತು ಇತರ ಹಲವು ರೀತಿಗಳಲ್ಲಿಯೂ, ತೊಡಕಾದ ಪರಿಸ್ಥಿತಿಯನ್ನು ಎದುರಿಸುವ ಸಂದರ್ಭದಲ್ಲಿ ನಾವು ಇಲ್ಲಿರುವಿದ್ದೇವೆ. ಈ ತೊಡಕುಗಳನ್ನು ನಾವು ಎದುರಿಸಿರುವುದನ್ನು ನೆನೆದು ಸಂತೋಷವೆನಿಸಿದರೂ ಕಷ್ಟ-ನಿಷ್ಠುರಗಳನ್ನು ಎದುರಿಸಬೇಕಾದ ಸಂಘರ್ಷ ಜನತೆ ಮತ್ತು ಸರ್ಕಾರ ಇವರ ಕರ್ತವ್ಯ ಜಾಗೃತವಾಗುವುದಿಲ್ಲ.

ಸಂಧಿಗ್ಧ ಕಾಲ

ಮುಂದಿನ ಎರಡು ವರ್ಷಗಳು ನಿಜವಾಗಿ ಬಹು ಸಂದಿಗ್ಧಕಾಲ ಆಮೇಲೆ ಪರಿಸ್ಥಿತಿ ಬದಲಾಗಬಹುದೆಂದೂ ಜನತೆಯ ಶ್ರಮಕ್ಕೆ ಅಧಿಕವಾದ ಫಲ ಕಂಡುಬರುವುದೆಂದೂ ನನ್ನ ನಂಬಿಕೆ. ಕಷ್ಟಕ್ಕೆ ದುರಿಗೆ ಹಿಮ್ಮೆಟ್ಟುವ ಮಾತೇ ಇಲ್ಲ. ಅವುಗಳನ್ನೆದುರಿಸಬೇಕಾದರೆ ಇದೊಂದೇ ಮಾರ್ಗ" ಎಂದು ನೆಹ್ರೂ ತಿಳಿಸಿದರು. ಯೋಜನೆಯ ಜಾರಿಯಾಗುವಿಕೆಗೆ ಜನತೆಯ ಸಕ್ರಿಯವಾದ ಸಹಕಾರ ಅಗತ್ಯವೆಂದರು ಈ ಕಷ್ಟ-ನಿಷ್ಠುರಗಳನ್ನು ಜನತೆಗೆ ಮನವರಿಕೆ ಮಾಡಿಕೊಡಬೇಕೆಂದೂ ಅವನ್ನು ಅವರಿಗೆ ಸರಿಯಾಗಿ ತಿಳಿಯ ಹೇಳಿದರೆ ಅವರು ಗ್ರಹಿಸುವರೆಂದೂ ಹೇಳಿದರು.

(5 ನೇ ಪುಟಕ್ಕೆ)

NOTIFICATION.

Bellary City Municipality, Bellary

"This to inform the public that, 45 plots developed and provided with amenities lying in survey Numbers 851, 435 & 942, of Satyanarayana pet- Town planning Scheme area, will be auctioned in public by the undersigned on 29-6-1957, Subject to the Auction Conditions which can be had from the undersigned on any working day.

The lay out and other details are open to the public perusal in the office between 3 P. M. and 5 P. M. during working days.

SD. T. K. Karnan
Commissoiner

Date: 8-6-57

(2 ನೇ ಪುಟದಿಂದ)

ಜನತೆಗೆ ಪೂರ್ಣ ಸಹಾಯ ಒದಗಿಸಬೇಕೆಂದು ಶ್ರೀ ನೆಹ್ರೂ ಅಭಿಪ್ರಾಯ

ಸಮಿತಿ ದೇಶದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಪರ್ಯಾಲೋಚಿಸಿತು. ಯೋಜನೆಯ ಸಾಧನ ಸಂಪತ್ತುಗಳನ್ನು ಕುರಿತು ಚರ್ಚಿಸಿತು. ಕುಟುಂಬಯೋಜನೆಯ ಬಗ್ಗೆ ಪರಿಶೀಲನೆ ನಡೆಸಿತು; 1956 ವರ್ಷಾಟ ತೆರಿಗೆ ಮುಸೂದೆಯ. ಘೋಷಿತ ವಸ್ತುಗಳ ಪಟ್ಟಿಯಲ್ಲಿ ಆಹಾರ ಧಾನ್ಯಗಳನ್ನು ಸೇರಿಸುವ ವಿಷಯವನ್ನು ಪರ್ಯಾಲೋಚಿಸಿತು.

ಆಹಾರ ಶಾಖಾ ಮಂತ್ರಿ ಶ್ರೀ ಎ. ಪಿ. ಜೈನರು ಮಾತನಾಡಿ ಧಾನ್ಯಗಳ ಬೆಲೆ ಏರಿರುವಾಗ ಪ್ರತಿಯೊಂದು ತೆರಿಗೆಯೂ ಧಾರಣೆಯ ವಿಸ್ತಾರವನ್ನು ಹೆಚ್ಚಿಸಿ ಹೆಚ್ಚಿಸಿ ಬಹುದೆಂದೂ ಧಾರಣೆ ಇಳಿಯುವವರೆಗೂ ಅಂಥ ತೆರಿಗೆಗಳನ್ನು ಕೈಬಿಡಬೇಕೆಂದೂ ಹೇಳಿದರು.

ಕೌನ್ಸಿಲ್‌ನ ನಿರ್ಧಾರಗಳು

ಪುಸ್ತಕಗಳಿಗೆ ಮಾರಾಟ ತೆರಿಗೆಯ ವಿನಾಯಿತಿ ಕೊಡಬೇಕೆಂದೂ ಕೌನ್ಸಿಲು ನಿರ್ಧರಿಸಿತು.

14 ಪ್ರಾಂತಗಳ ಮುಖ್ಯ ಮಂತ್ರಿಗಳನ್ನೂ ಯೋಜನಾಸಮಿತಿಯ ಸದಸ್ಯರನ್ನೂ ಉಳ್ಳ ಒಂದು ಸ್ಥಾಯಿ ಸಮಿತಿಯನ್ನು ನೇಮಿಸಿಬೇಕೆಂದೂ ಕೌನ್ಸಿಲ್ ನಿರ್ಧರಿಸಿತು. ಈ ಸಮಿತಿ ಕೌನ್ಸಿಲ್ ಸಭೆಗಳ ಮಧ್ಯಕಾಲದಲ್ಲಿ ಆಗಾಗ ಸಭೆ ಸೇರುತ್ತಿರುವುದು.

ಪರವಾನಗಿ ಪಂಚಿಕೆ

ಗಿರಣಿಬಟ್ಟೆ, ಹೊಗೆಸೊಪ್ಪು ಮತ್ತು ಪುತ್ತು ಸಕ್ಕರೆಯ ಮೇಲೆ ಪ್ರಾಂತಗಳು ಹಾಕಿರುವ ಮಾರಾಟ ತೆರಿಗೆಯ ಬದಲು ಈ ವಸ್ತುಗಳ ಮೇಲಿನ ಕೇಂದ್ರ ಅಬ್ಕಾರಿ ತೆರಿಗೆಯ ಮೇಲೆ ಸರ್‌ಚಾರ್ಜ್ ವಿಧಿಸುವ ವಿಚಾರವನ್ನು ಕೌನ್ಸಿಲ್ಲು ಚರ್ಚಿಸಿತು. (ಈ ವಿಷಯ ತತ್ಕ್ಷಣ ಈ ಮೊದಲೇ ಒಪ್ಪಲ್ಪಟ್ಟಿದೆ.) ಇದರಿಂದ ಬರುವ ಆದಾಯವನ್ನು ಪ್ರಾಂತಗಳಿಗೆ ಹಂಚಲಾಗುವುದು. ಈ ಆದಾಯವನ್ನು ಯಾವ ರೀತಿ ಹಂಚಿಕೆಯಾಗಬೇಕೆಂಬ ಬಗ್ಗೆ ಪ್ರಾಂತ ಪ್ರತಿನಿಧಿಗಳು ಬಗೆಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಫೈನಾನ್ಸ್ ಕಮಿಷನ್ನಿನ ಶಿಫಾರಸುಗಳನ್ನು ಕಾದು ನೋಡುವುದು ಯುಕ್ತವೆಂದು ಕೌನ್ಸಿಲ್ ನಿರ್ಧರಿಸಿತು. ನಾನಾ ವರ್ತಮಾನಗಳು ಕೇಂದ್ರಕ್ಕೂ ಪ್ರಾಂತಗಳಿಗೂ ನಡುವೆ ಹೇಗೆ ಹಂಚಿಕೆಯಾಗಬೇಕೆಂಬ ವಿಚಾರವನ್ನು ಫೈನಾನ್ಸ್ ಕಮಿಷನ್ ಈಗ ಪರಿಶೀಲಿಸುತ್ತದೆ.

ಪ್ರಾಂತಗಳು ಜವಾಬ್ದಾರಿ ವಹಿಸಲಿ

ಅನಂತರ ಅರ್ಥಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ದೇಶದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಮಾತನಾಡಿದರು. ಹಣ ಉಬ್ಬರದ ವಿಷಯವನ್ನು ಅವರು ಪ್ರಸ್ತಾಪಿಸಿ ಈಗ ಆಹಾರ ಧಾನ್ಯಗಳ ಬೆಲೆ ಏದ್ದು ಕಾಣುತ್ತದೆ ಎಂದರು ಅಭಿವೃದ್ಧಿ ತ್ವರಿತವಾಗಿ ನಡೆಯುತ್ತಿದ್ದರೂ ಸಾಧನ ಸಂಪತ್ತುಗಳು ಬೇಗ ಒದಗಿಬರುತ್ತಿಲ್ಲವೆಂದು ನುಡಿದರು.

ಕೇಂದ್ರವು ಪ್ರಾಂತ ಸರ್ಕಾರಗಳಿಗೆ ಸಹಾಯ ನೀಡಲು ಸಿದ್ಧವಾಗಿದ್ದರೂ ಸಾಧನ ಸಂಪತ್ತುಗಳನ್ನು ಹೆಚ್ಚಿಸುವ ಬಗ್ಗೆ ಸರ್ವತೋಮುಖವಾದ ಪ್ರಯತ್ನ ಅಗತ್ಯವೆಂದು ನುಡಿದರು. ಈ ಬಗ್ಗೆ ಪ್ರಾಂತಗಳು ಸ್ವಲ್ಪ ಜವಾಬ್ದಾರಿ ವಹಿಸಬೇಕೆಂದರು. ರಾಷ್ಟ್ರೀಯ ಉಳಿತಾಯ ಯೋಜನೆ ಮೊತ್ತ ಈ ವರ್ಷದ ಉದ್ದೇಶಿತ ಯೋಜನೆಗಳು ಪ್ರಾಂತಗಳು ಜಂಬಲ ನೀಡಬೇಕೆಂದರು.

ವಿದೇಶಿ ವಿನಿಮಯದ ತೊಂದರೆ

ವಿದೇಶೀ ವಿನಿಮಯದ ಪರಿಸ್ಥಿತಿ ಈ ಬಗ್ಗೆ ಇನ್ನೂ 6 ತಿಂಗಳವರೆಗೂ ವಿದೇಶೀವಿನಿಮಯದ ವ್ಯಾಪ್ತಿಗೆ ಬರುವಂತೆ ಬಂಡವಾಳ ಹೂಡಲು ಅವಕಾಶವಿಲ್ಲವೆಂದರು. ಈ ಸಂಬಂಧದಲ್ಲಿ ರೂಪಾಯಿಯ ಮೌಲ್ಯವನ್ನು ಇಳಿಸುವ ಅಭಿಪ್ರಾಯವನ್ನು ಅವರು ಮುಂದಿಟ್ಟು ಇತರ ಮುಂದು ವರಿದ ದೇಶಗಳೊಡನೆ ಹೋಲಿಸಿದರೆ ಭಾರತದ ರೂಪಾಯಿ ಸುಭದ್ರವಾದ ಸ್ಥಾನದಲ್ಲಿರುವುದು ಸ್ಪಷ್ಟವಾಗುವುದೆಂದರು.

ದ್ವಿತೀಯ ಯೋಜನೆಯನ್ನು ಪ್ರಸ್ತಾಪಿಸಿ "ನಾವು ಅದಕ್ಕೆ ಬದ್ಧರಾಗಿದ್ದೇವೆ. ಇದರಲ್ಲಿ ಏನಾದರೂ ಕಡಮೆ ಮಾಡಬಹುದಾದರೆ ಅದು ಅತ್ಯಲ್ಪ. ವಿಶೇಷ ವಿದೇಶೀ ವಿನಿಮಯ ಅಗತ್ಯವಾದ ಕೆಲವು ಭಾರಿ ಕೈಗಾರಿಕೆಗಳ ಕೆಲಸವನ್ನು ನಿಧಾನಿಸಬಹುದು. ಇದರ ಫಲವಾಗಿ ಹುಟ್ಟು ನಿರುದ್ಯೋಗಕ್ಕೆ ಗೃಹ ಕೈಗಾರಿಕೆಯೇ ಮುಂತಾದುವುಗಳ ಅಭಿವೃದ್ಧಿ ಮಾಡೋಣ ಎಂದರು.

ಪ್ರಾಂತಗಳು ಸಾಲವಿತ್ತಲು ಅವಕಾಶವಿಲ್ಲದಿದ್ದರೆ ಸಾಧನ ಸಂಪತ್ತು ಬಹಳ ಕೃಶವಾಗುವುದೆಂದು ಹಲವು ಮುಖ್ಯ ಮಂತ್ರಿಗಳು ವಾದಿಸಿದರು. ಈ ಪ್ರಶ್ನೆಯನ್ನು ಕುರಿತು ಪ್ರಾಂತಗಳು, ರಿಜರ್ವ್ ಬ್ಯಾಂಕ್ ಮತ್ತು ಕೇಂದ್ರ ಆರ್ಥಿಕ ಮಂತ್ರಿ ಶಾಖೆಗಳ ನಡುವೆ ಸಮಾಲೋಚನೆ ನಡೆಯಬೇಕೆಂದು ತೀರ್ಮಾನಿಸಲಾಯಿತು.

ಎಲ್ಲವನ್ನೂ
ಶುದ್ಧಪಡಿಸಲು
ಉತ್ತಮವಾದುದು

ಮೈಸೂರು ಬಾರ್ ಸೋಪ್

ಸಂಪೂರ್ಣವಾಗಿ ಶುದ್ಧವಾದ
ಯಾವ ಬೆರಕೆಯೂ, ಅಪಾಯಕರ ರಸಾಯನಿಕ
ದ್ರವ್ಯಗಳೂ ಇಲ್ಲದ

ಅತ್ಯುತ್ತಮವಾದ ಒಗೆಯುವ ಸಾಬೂನು

ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ.
ಗೌರ್ನಮೆಂಟ್ ಸೋಪ್‌ಫ್ಯಾಕ್ಟರಿ, ಬೆಂಗಳೂರು.
ಮೆಂಬರ್, ಐ. ಎಸ್. ಟಿ. ಎಂ. ಎ.

ಹಿಂದೀ ಪರೀಕ್ಷೆಗಳು

ಮಕ್ಕಳ ಪುಸ್ತಕಗಳು ನಮ್ಮಲ್ಲಿ ಕಡಮೆ, ಅವರಿಗಾಗಿ ಚೆಲುವಾದ ಮತ್ತು ಗೆಲುವಾದ ಪುಸ್ತಕಗಳು ಅಚ್ಚಾಗಬೇಕು. ಬಳಸುವ ಕಾಗದ, ರಟ್ಟು, ಹಾಕುವ ಚಿತ್ರಗಳು ಎಷ್ಟು ಚನ್ನಾಗಿದ್ದರೆ ಮಕ್ಕಳ ಹರ್ಷ ಅಷ್ಟು ಹೆಚ್ಚುತ್ತದೆ. ಹಾಗೆಯೇ ಬಿಡಿದ ಎಲ್ಲರ ಮನೆಯಲ್ಲಿಯೂ ಆರಿಸಿದ ಪುಸ್ತಕಗಳುಳ್ಳ ಪುಸ್ತಕ ಭಂಡಾರಗಳು ಏರ್ಪಡಬೇಕು. ಇಂಥ ಅಭ್ಯಾಸ ಬೆಳೆದರೆ ಅದೇ ಸಾಹಿತ್ಯ ಸೃಷ್ಟಿಗೂ ಪೋಷಕವಾದೀತು. ಎಂದು ಸೂಚಿಸಿದರು.

ಕನ್ನಡ ನಾಡಿನ ಶ್ರೀಮಂತ ವಿದ್ವಾಂಸರಲ್ಲೊಬ್ಬರಾದ ಶ್ರೀ ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನವು ಪೂರ್ಣ ಯಶಸ್ವಿಯಾಗುವಂತೆ ಕನ್ನಡ ನಾಡಿನ ಅಧಿದೇವತೆಯು ಕೃಪೆಮಾಡಲೆಂದು ರಾಜ್ಯಪಾಲರು ಹಾರೈಸಿದರು.

ನೇ ಕನ್ನಡ ಸಾಹಿತ್ಯ ಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು:—

ತಾರೀಖು 19-1-58 ನೇ ಭಾನುವಾರ ಸಂಜೆ 8 ಗಂಟೆಗೆ ವಿಷಯ ನಿರ್ಣಾಯಕ ಸಮಿತಿಯಲ್ಲಿ ಸ್ವೀಕೃತವಾಗಿ ತಾ 20-1-58 ರ ಸಂಜೆ 7 ಗಂಟೆಗೆ ಸೇರಿದ್ದ ಬಹಿರಂಗ ಅಧಿವೇಶನದಲ್ಲಿ ಅಂಗೀಕೃತವಾದ ನಿರ್ಣಯಗಳು:—

1) ಪರಿಷತ್ತಿನ ಸದಸ್ಯರೂ ಹಿತಚಿಂತಕರೂ ಆದ ಈ ಕೆಳಗೆ ಕಾಣಿಸಿರುವ ಮಹನೀಯರು ದೈವಾಧೀನರಾದುದಕ್ಕಾಗಿ ಸಮ್ಮೇಳನವು ದುಃಖವನ್ನು ವ್ಯಕ್ತಪಡಿಸಿ ಅವರ ಸಂಬಂಧೀಕರಿಗೆ ತನ್ನ ಅನುಕಂಪವನ್ನು ಸೂಚಿಸುತ್ತದೆ

1) ಶ್ರೀ ರಾಮಸ್ವಾಮಯ್ಯ ನ ಎಂ,
ಚಿಕ್ಕಮಗಳೂರು.

2) ಶ್ರೀ ಭೀಮರಾವ್ ಅನಂತರಾವ್
ಕುಲ್ಕರ್ಣಿ, ಯವರು, ರಾಣೆಬೆನ್ನೂರು

3) ಶ್ರೀ ಬಿ. ಎ. ಪಾಟೀಲ್ ಅವರು,
ಬೆಂಗಳೂರು.

4) ಶ್ರೀ ಕ. ಎಸ್ ಅಯ್ಯಂಗಾರ್ಯರು.

2) ಮೈಸೂರು ಸರ್ಕಾರದವರು ಹಿಂದೆ ಕೊಡುತ್ತಿದ್ದಂತೆ ಕ. ವಿ. ಕ ಪೂ ಮೂರು ಸಾವಿರ ರೂ ಪಾಯಿಗಳನ್ನು ಕನ್ನಡ ಪರಿಷತ್ತಿನ ಕಾರ್ಯಕ್ರಮಗಳಿಗೂ ಗಮಕ ತರಗತಿಗಳ ಏರ್ಪಾಟಿಗಾಗಿ ಎರಡು ಸಾವಿರ ರೂ ಗಳನ್ನು ಸೇರಿಸಿ ಒಟ್ಟು ಐದು ಸಾವಿರ ರೂ ಗಳನ್ನು ಈ ವರ್ಷಕ್ಕಾಗಿ ಈ ಸಮ್ಮೇಳನದ ವೈಶಿಷ್ಟ್ಯತೆಯನ್ನು ಆರಿಸುತ್ತದೆ, ಮತ್ತು ಕಳೆದ ಕೊಡುತ್ತಿದ್ದ ಸಂಸ್ಕೃತಿ ಪ್ರಸಾರ ಕಾರ್ಯಗಳಿಗಾಗಿ 35000/- ರೂಗಳನ್ನು ಈ ವರ್ಷಕ್ಕೂ ಇನ್ನೂ ಮುಂದೆಯೂ ಉದಾರವಾಗಿ ಕೊಡಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಆಗ್ರಹದಿಂದ ಪ್ರಾರ್ಥಿಸುತ್ತದೆ"

3) ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿರುವ ಕನ್ನಡ ನಿಘಂಟುಗಾಗಿ ಇನ್ನು ಮುಂದೆ ಏಳು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಈ ಸಮ್ಮೇಳನವು ಮೈಸೂರು ಸರ್ಕಾರವನ್ನು ಪ್ರಾರ್ಥಿಸುತ್ತದೆ.

ಸಮ್ಮೇಳನಾಧ್ಯಕ್ಷರಿಂದ

4) ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಮ್ಮ ನೆರೆಯ ಪ್ರಾಂತಗಳಿಂದ ಪಂಡಿತರುಗಳನ್ನು ಕರೆಸಿ ವಿವಿಧ ಭಾಷಾ ಭಾಂಧವ್ಯವನ್ನು ಬೆಳೆಸಲು ಅನುಕೂಲಗೊಳಿಸುವುದಕ್ಕಾಗಿ ಇಂಡಿಯಾ ಸರ್ಕಾರವನ್ನು ಪ್ರಾರ್ಥಿಸಲಾಗಿತ್ತು. ಅದನ್ನು ನಿರಾಕರಿಸಲಾಗಿ ಈ ಸಮ್ಮೇಳನವು ಚಿಂತಿಸುತ್ತದೆ. ಮತ್ತೊಮ್ಮೆ ಇಂಡಿಯಾ ಸರ್ಕಾರವನ್ನು ಈ ಸಹಾಯವನ್ನು ಒದಗಿಸಿಕೊಡಬೇಕೆಂದು ಒತ್ತಾಯ ಪಡಿಸಕ್ಕದ್ದು.

5) ಬಳ್ಳಾರಿಯ ನಲವತ್ತು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಉದಾರವಾಗಿ ಧನ ಸಹಾಯ ಮಾಡಿದ ಮೈಸೂರು ಸರ್ಕಾರಕ್ಕೂ, ಮುನಿಸಿಪಾಲಿಟಿ ಬ್ಯಾಂಕುಗಳು ಇತರ ಖಾಸಗೀ ಸಂಸ್ಥೆಗಳಿಗೂ ಮತ್ತು ಇತರ ಮಹನೀಯರುಗಳಿಗೂ ಈ ಸಮ್ಮೇಳನವು ತನ್ನ ಅನಂತ ವಂದನೆಗಳನ್ನು ಸಲ್ಲಿಸುತ್ತದೆ.

6) ಕನ್ನಡ ಗ್ರಂಥಕಾರರಿಗೆ ಪ್ರತಿವರ್ಷ ಕೇಂದ್ರ ಸರ್ಕಾರದಿಂದ ಅರ್ಪಿಸುವ ಪ್ರಶಸ್ತಿಯ ಬದಲು ಕೊಡತಕ್ಕ 5 ಸಹಸ್ರ (ಸಾವಿರ) ರೂಗಳ ಬಹುಮಾನವನ್ನು ಈ ವರ್ಷ ಕೊಡದೇ ಇದ್ದುದರ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಅಂತುಕೊಂಡು ಈ ವರ್ಷವೂ ಇನ್ನು ಮುಂದೆಯೂ ಈ ಬಗೆಯಾಗಿ ನಿಲ್ಲದೆ ಕೇಂದ್ರ ಸರ್ಕಾರದಿಂದ ಪ್ರಯತ್ನಿಸಬೇಕೆಂದು ಈ ಸಮ್ಮೇಳನ ಅಭಿಪ್ರಾಯಪಡುತ್ತದೆ.

7) ಸಾಹಿತ್ಯ ಅಕಾಡೆಮಿಯ ಕನ್ನಡ ನಲಹಾ ಸಮಿತಿಯನ್ನು ಪುನರ್ರಚಿಸಿ, ನಾಡಿನ ಎಲ್ಲ ಶ್ರೇಷ್ಠ ಸಾಹಿತಿಗಳೂ ಪ್ರಖ್ಯಾತ ವಿಮರ್ಶಕರಿಗೂ ಅದರಲ್ಲಿ ಸ್ಥಾನ ಕೊಡುವ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕೆಂದು ಈ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳುತ್ತದೆ.

8) ತೆಲುಗು ಲಿಪಿಯಲ್ಲಿ ಮತ್ತು ಕನ್ನಡ ಲಿಪಿಯಲ್ಲಿಯೂ ಬಹುಮಟ್ಟಿಗೆ ಹೋಲಿಕೆ ಯಿರುವುದರಿಂದ ಆಂಧ್ರ ಕರ್ನಾಟಕಕ್ಕೆ ಒಂದೇಲಿಪಿಯನ್ನು ಸ್ವೀಕರಿಸುವಂತೆ ಕನ್ನಡ ಪರಿಷತ್ತು ಆಂಧ್ರ ಪರಿಷತ್ತನ್ನೊಡನೆ ಸಹಕರಿಸಿ ನಿರ್ಣಯಕ್ಕೆ ಬಂದರೆ ಮುದ್ರಣಾದಿ ವ್ಯವಹಾರದಲ್ಲಿ ಇಬ್ಬರಿಗೂ ಹೆಚ್ಚಿನ ಅನುಕೂಲವಾದೀತೆಂದು ಈ ಸಭೆ ಅಭಿಪ್ರಾಯಪಡುತ್ತದೆ. ಇದನ್ನು ಕಾರ್ಯರೂಪಕ್ಕೆ ತರಲು ಆಂಧ್ರ ಪರಿಷತ್ತಿನ ಸಹಕಾರದೊಡನೆ ಒಂದು ತಜ್ಞ ಸಮಿತಿಯನ್ನು ನಿಯಮಿಸಿ ವಿಚಾರವನ್ನು ಮುಂದುವರಿಸಬೇಕೆಂದು ಈ ಸಭೆಯು ಸೂಚಿಸುತ್ತದೆ.

9) ಕರ್ನಾಟಕದಲ್ಲಿ ಒಂದು ಪ್ರಾಚ್ಯ ಸಂಶೋಧನ ಸಂಸ್ಥೆ ಆಗಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಪ್ರಾರ್ಥಿಸುತ್ತದೆ.

10) ವಿಶಾಲ ಮೈಸೂರಿನ ಗಡಿಗಳ

ಳಂ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು:—

(ಹಿಂದಿನ ಪುಟದಿಂದ)

ರುವ ಕಾಸರಗೋಡು, ತಾಳವಾಡಿ, ಹೊಸೂರು, ಮುಡಕಶಿರ, ನೀಲಗಿರಿ ಅಲೂರು, ಬೀಡರ್, ರಾಯದುರ್ಗ, ಗುಲ್ಬರ್ಗಜಿಲ್ಲೆಯ ಕೆಲವು ಭಾಗ ಆದವನಿ ಅಮ್ಲಿಕೋಟೆ, ಪತ್ತಿದ್ದಪ್ಪಂಪೊಟ್ಟಾಪುರ ಇತ್ಯಾದಿ ಕನ್ನಾಟಕಕ್ಕೆ ಸೇರಬೇಕಾದ ಭಾಗಗಳನ್ನು ಆದಷ್ಟು ಬೇಗನೆ ನಮ್ಮ ರಾಜ್ಯಕ್ಕೆ ಸೇರಿಸುವ ಕಾರ್ಯಕ್ರಮಗಳನ್ನು ಮೈಸೂರು ಸರ್ಕಾರ ಕೈಕೊಳ್ಳಬೇಕೆಂದು ಈ ಸಮ್ಮೇಳನವು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತದೆ.

11) ಕಾಸರಗೋಡು ತಾಲ್ಲೂಕಿನ ಜಂಪ್ಸಗಿರಿ ನಿವಾಸಿ ಉತ್ತರಭಾಗವನ್ನು ಮೈಸೂರು ರಾಜ್ಯಕ್ಕೆ ಸೇರಿಸಲು ಕೇಂದ್ರ ಧಾರವಾಡದಲ್ಲಿ ಸೇರಿದ 39 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯವನ್ನು ಈ ಸಮ್ಮೇಳನವು ಪುನಃ ಧೃಢೀಕರಿಸುತ್ತದೆ. ಅಲ್ಲದೆ ಈ ಕುರಿತು ಸೂಕ್ತ ಕಾರ್ಯಕ್ರಮಗಳನ್ನು ತೀವ್ರವೇ ಕೈಗೊಳ್ಳುವಂತೆ ಮೈಸೂರು ಕೇರಳೋಭಯ ಪ್ರಾಂತ ಸರಕಾರಗಳನ್ನು ಕೇಂದ್ರ ಸರ್ಕಾರವನ್ನು ಆಗ್ರಹಪೂರ್ವಕವಾಗಿ ವಾ. ವಾ. ವಿನಂತಿಸುತ್ತದೆ.

ಕನ್ನಡ ನಾಡಿಗೆ ಕನ್ನಡ ನಾಡು, ಕನ್ನಡ ಜನಾಂಗ ಕನ್ನಡ ಸಾಂಸ್ಕೃತಿಕ ದ್ಯೋತಕವಾದ ಕರ್ನಾಟಕ ಎಂಬ ಹೆಸರೇ ಇರುವಂತೆ ಮಾಡಬೇಕಾಗಿ ಕೇಂದ್ರ ಸರಕಾರವನ್ನೂ ರಾಜ್ಯಸರ್ಕಾರವನ್ನೂ ಈ ಸಮ್ಮೇಳನವು ಒತ್ತಾಯಪಡಿಸುತ್ತದೆ. ಕನ್ನಡ ಜನತೆಯ ಪ್ರತಿನಿಧಿಗಳಾದ ಈ ಸಂಸ್ಥೆಯು ಕಳೆದ ವರ್ಷವೇ ಈ ವಿಷಯವಾಗಿ ನಿರ್ಣಯ ಪಡಿಸಿದ್ದರೂ, ಆ ವಿಷಯವು ಇನ್ನೂ ಕಾರ್ಯಗತವಾಗದಿದ್ದುದರಿಂದಾಗಿ ಈ ಸಮ್ಮೇಳನವು ತನ್ನ ಕಳವಳವನ್ನು ವ್ಯಕ್ತಪಡಿಸುತ್ತ ಈ ವಿಷಯವನ್ನು ತೀವ್ರಗತಿಯ ಕಾರ್ಯಾಚರಣೆಯಲ್ಲಿ ಕೈಗೊಳ್ಳಬೇಕೆಂಬುದನ್ನೂ ಆಗ್ರಹಪೂರ್ವಕವಾಗಿ ತಿಳಿಸುತ್ತದೆ.

13) ಹಿಂದಿಯನ್ನು 1965 ರೊಳಗಾಗಿ ಭಾರತದ ಅಧಿಕೃತ ಭಾಷೆಯಾಗಿ ಮಾಡುವಂತೆ ಭಾರತೀಯ ಘಟನೆಯಲ್ಲಿರುವ ಮಾತು ಸಧ್ಯದಸ್ಥಿತಿಯಲ್ಲಿ ವ್ಯವಹಾರಿಕ ವಲ್ಲವೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

14) ಮೈಸೂರು ರಾಜ್ಯ ಸರ್ಕಾರದವರು ಬೇಗನೆ ಕನ್ನಡ ಭಾಷೆಯನ್ನು ರಾಜ್ಯ ಸರ್ಕಾರದ ಅಧಿಕೃತವಾದ ಭಾಷೆಯೆಂದೂ, ನ್ಯಾಯಾಲಯದ [ಕೋರ್ಟ್] ಭಾಷೆಯೆಂದೂ ಘೋಷಣೆಯನ್ನು ಹೊರಡಿಸಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

[illegible] ಕರ್ನಾಟಕಕ್ಕೆ ಒಂದು ಅಂಚೆ ತಂತಿ ಮಂಡಳವನ್ನು [Karnatak Post & Telegraph [illegible] ಸ್ಥಾಪಿಸಿ ಅದರ ಕೇಂದ್ರ ಕಛೇರಿಯನ್ನು ಬೆಳಗಾಂ ನಲ್ಲಿ ಕೂಡಲೇ ಸ್ಥಾಪಿಸಬೇಕೆಂಬ [illegible] ಸಮ್ಮೇಳನವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

16) [illegible] ಕೈಗಳಿಗೆ ಅನುಕೂಲವನ್ನು ಕೊಡುವ ಉದ್ದೇಶದಿಂದ [illegible] ಸರ್ಕಾರವು ಕನಿಷ್ಠ 2000 ಮತ್ತು 1000 ರೂಪಾಯಿಗಳ ಒಮ್ಮೊತ್ತಾನಗಳನ್ನು ಕೊಡುತ್ತಿದ್ದುದನ್ನು ಮುಂದುವರಿಸಿ ಕರ್ನಾಟಕದ ಸಾಹಿತ್ಯ ಕೃತಿಗಳಿಗೆ ಈ ಬಹುಮಾನಗಳು ಸಲ್ಲಿಸಿದವು. ಮದರಾಸು ಸರ್ಕಾರದವರು ಈರೀತಿ ಕೊಡುತ್ತಿದ್ದರು. ಕರ್ನಾಟಕ ನಿರ್ಮಾಣವಾದ ಬಳಿಕ ಈ ಪದ್ಧತಿಯನ್ನು ನಮ್ಮ ರಾಜ್ಯಸರ್ಕಾರದವರು ನಿಂದುನವರಿಸಿಲ್ಲ. ಈ ಯೋಜನೆಯನ್ನು ಮತ್ತೆ ಸರ್ಕಾರ ಮುಂದುವರಿಸಿ ಇಡೀ ರಾಜ್ಯಕ್ಕೆ ಅನ್ವಯಿಸಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

17) ಆಂಧ್ರ ಸರ್ಕಾರದ ಪರ್ವಿಸ್ ಕಮಿಷನ್ನಲ್ಲಿ ತೆಲುಗು ಮತ್ತು ಉರ್ದು ಭಾಷೆಗಳು ಮಾತ್ರ ಇರುವುದರಿಂದ ಆದರ—ವಾಗಿ [illegible] ಕ್ಷೇತ್ರದ 3 ತಾ. ಕನ್ನಡಿಗರಿಗೆ ಬಹಳ ತೊಂದರೆಯಾಗುವುದರಿಂದ ಸರ್ವಿಸ್ ಕಮಿಷನ್ನಿನಲ್ಲಿ ಕನ್ನಡವನ್ನು ಸೇರಿಸಿಕೊಳ್ಳಬೇಕೆಂದು ಈ ಸಭೆಯು ಆಂಧ್ರ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತದೆ.

ಇಂಗ್ಲೀಷ್ ಸಮಿತಿಯ ವರದಿ:—

ಇಂಗ್ಲೀಷ್ ಮಾಧ್ಯಮವನ್ನು ಬದಲಾಯಿಸುವುದರಲ್ಲಿ ಅತುರ ಬೇಡ

ವಿಶ್ವವಿದ್ಯಾನಿಲಯ ಶಿಕ್ಷಣ ಮಾಧ್ಯಮದ ಸಮಸ್ಯೆಯನ್ನು ಪರೀಕ್ಷಿಸಲು ಡಾ॥ ಗೂ ಇಂಗ್ಲೀಷಿನಲ್ಲಿ ಸಮರ್ಥಿಸಿಕೊಂಡ ವೈಖರಿ

ಸಾಧನೆ ವಿಧಾನಗಳನ್ನು ತಿಳಿಸಲು ಮಾಡಲು ವಿಶ್ವವಿದ್ಯಾನಿಲಯ ಗ್ರಾಂಟ್ಸ್ ಕಮಿಷನ್ನಿನವರು, ಇಂಗ್ಲೀಷ್ ಸಮಿತಿಯು ಸಲ್ಲಿಸಿರುವ ವರದಿಯಲ್ಲಿನ ಮುಖ್ಯ ಶಿಫಾರಸುಗಳನ್ನು ವಿಶ್ವವಿದ್ಯಾನಿಲಯಗಳ ಗ್ರಾಂಟ್ ಕಮಿಷನ್ ಅಂಗೀಕರಿಸಿದೆ.

ಈ ಸಮಿತಿಯು ಮಾಡಿರುವ ಶಿಫಾರಸುಗಳು:—

(1) ವಿಶ್ವವಿದ್ಯಾನಿಲಯಗಳ ಘಟ್ಟದಲ್ಲಿ ಶಿಕ್ಷಣ ಮಾಧ್ಯಮವನ್ನು ಇಂಗ್ಲೀಷಿನಿಂದ ಇತರ ದೇಶೀಯ ಭಾಷೆಗಳಿಗೆ ಬದಲಾಯಿಸುವುದರಲ್ಲಿ ಅತುರ ಮಾಡಬಾರದು.

(2) ಈ ಪರಿವರ್ತನೆಯನ್ನು, ಭಾರತೀಯ ಭಾಷೆಯನ್ನು ಉಚ್ಚ ಅಧ್ಯಯನ ಉದ್ದೇಶಗಳಿಗಾಗಿ, ಸೂಕ್ತರೀತಿಯಲ್ಲಿ ಅಭಿವೃದ್ಧಿಪಡಿಸಿ, ಎಲ್ಲಾ ಅಧ್ಯಯನಗಳಲ್ಲಿಯೂ ಆ ಭಾಷೆಯಲ್ಲಿ ಆಗಿರುವ ಸಾಹಿತ್ಯವನ್ನು ಬೆಳೆಸಿದ ನಂತರ ಕೈಗೊಳ್ಳಬೇಕು.

(3) ಇಂಗ್ಲೀಷನ್ನು, ಎಲ್ಲಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೂ, ಈ ಪರಿವರ್ತನೆಯಿಂದ ನಂತರವೂ ಅಧ್ಯಯನ ಮಾಡಲೇಬೇಕು.

ಸೆಕೆಂಡರಿ ಮಟ್ಟದಲ್ಲಿ, ಇಂಗ್ಲೀಷಿನಲ್ಲಿ ಆಗತ್ಯವಾದ ಬುನಾದಿಯನ್ನು ಹಾಕಬೇಕು.

(5) ಶಾಲೆಗಳಲ್ಲಿ ಇಂಗ್ಲೀಷ್ ಶಿಕ್ಷಣ ವಿಧಾನವನ್ನು ಕೂಲಂಕುಷವಾಗಿ ಪರಿಶೀಲಿಸಿ, ಸಂತಕ ಶಿಕ್ಷಕರಿಗೆ ತರಬೇತಿ ನೀಡಬೇಕು. ವಿದೇಶಿ ಭಾಷೆಗಳನ್ನು ಅಧ್ಯಯನ ಮಾಡುವುದಕ್ಕೆ ಇರುವ ಎಲ್ಲಾ ಆತ್ಯಾಧುನಿಕ ಸಾಧನ ಶಂತ್ರಗಳನ್ನು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಒದಗಿಸಬೇಕು.

(6) ಪ್ಲೆಜ್ಜಾನಿಕ ಶಾಲೆಗಳು ಸಾರ್ವತ್ರಿಕವಾಗಿ, ಪಠ್ಯಪುಸ್ತಕಗಳನ್ನು ಹಿಡ್ಡಗೊಳಿಸುವುದು ಆಗತ್ಯ. ಭಾರತ ಸರ್ಕಾರ ಅಥವಾ ಸೆಕೆಂಡರಿ ಶಿಕ್ಷಣ ಪರಿಷತ್ತು ಈ ಪ್ರಶ್ನೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು.

(7) ಶಾಲೆಗಳ ಮಟ್ಟದಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಬೋಧಿಸುವ ಉದ್ದೇಶ ವಿಶ್ವವಿದ್ಯಾನಿಲಯ ಶಿಕ್ಷಣಾಗಳಿಗೆ ಹೋಗುವವರಿಗೆ, ಇಂಗ್ಲೀಷಿನಲ್ಲಿ ವಿಶೇಷ ಪ್ರಾವೀಣ್ಯತೆ ಪಡೆಯಲಿಚ್ಛಿಸುವವರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕು.

(8) ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಈಗ ಮೂರು ವರ್ಷಗಳ ಪದವಿ

(4 ನೇ ಪುಟಕ್ಕೆ)

(ಹಿಂದಿನ ಪುಟದಿಂದ)

ಕನ್ನಡ ಭಾಷೆ ಮತ್ತು ಸಾಹಿತ್ಯದ ಪ್ರಾಚೀನತೆಯನ್ನೆರು ಪ್ರ ಸ್ತಾ ಪಿ ಸಿ 9 ನೆಯ ಶತಮಾನದಷ್ಟು ಹಿಂದೆಯೇ ಸಾಹಿತ್ಯ ವಿಮರ್ಶೆಯಲ್ಲಿ ಎಷ್ಟರ ಮಟ್ಟಿನ ಸಾಮರ್ಥ್ಯವಿತ್ತೆಂಬುದು 'ಕವಿರಾಜ—ಮಾರ್ಗ' ಗ್ರಂಥದಿಂದ ಗೊತ್ತಾಗುವುದೆಂದು ತಿಳಿಸಿದರು.

ಸಾಹಿತ್ಯ ಬೆಳವಣಿಗೆಗೆ ರಾಜಕೀಯದ ಗೋಜು ಏಕೆ?

ಹಿಂದೆ ರಾಜಾಶ್ರಯದಿಂದ ಕನ್ನಡ ಸಾಹಿತ್ಯ ಬೆಳೆಯಿತು ಎಂದುದನ್ನು ರಾಜ್ಯ ಪಾಲರು ವಿವರಿಸಿ, ಅರಮನೆ, ಗುರುಮನೆ ಸರ್ಕಾರಗಳ ಆಶ್ರಯವಲ್ಲಿಯೇ ಬೆಳೆಯುವುದು ಇಂತಹ ಯಾವ ಸಂಸ್ಥೆಯ ಭಾಗವಾಗಿ ಮುಂಗಿಯಬಾರದು. ಸಾಹಿತ್ಯ, ಕಲೆ ಚಿಂತನ, ವಿಜ್ಞಾನ ಇವು ಸ್ವತಂತ್ರವಾಗಿ ಬೆಳೆಯುವುದೇ ಮೇಲು. ಅವು ಬೆಳೆಯಲು ಅವಕಾಶಗಳನ್ನೂ ಏರ್ಪಡಿಸುವುದು ಸರಕಾರಗಳ ಮತ್ತು ನಾಡಿನ ನಾಯಕರ ಕರ್ತವ್ಯ. ನಿಷ್ಪಕ್ಷಪಾತ ಪ್ರಪಂಚವಾದ ಸಾಹಿತ್ಯಕ್ಕೆ ರಾಜಕೀಯದ ಗೋಜೇಕೆ? ಎಂದು ಕೇಳಿ ಇಂಥ ಸಂಸ್ಥೆ, ಸಮ್ಮೇಳನಗಳು ಸರಸ್ವತಿಯ ನಾಟ್ಯರಂಗಗಳಾಗಲಿ ಎಂದು ಕೋರಿದರು.

ಮಕ್ಕಳಿಗಾಗಿ ಪುಸ್ತಕಗಳು ಬೇಕು

ಮಕ್ಕಳ ಪುಸ್ತಕಗಳು ನಮ್ಮಲ್ಲಿ ಕಡಮೆ, ಅವರಿಗಾಗಿ ಚೆಲುವಾದ ಮತ್ತು ಗೆಲುವಾದ ಪುಸ್ತಕಗಳು ಅಚ್ಚಾಗಬೇಕು. ಬಳಸುವ ಕಾಗದ, ರಟ್ಟು ಹಾಕುವ ಚಿತ್ರಗಳು ಎಷ್ಟು ಚೆನ್ನಾಗಿದ್ದರೆ ಮಕ್ಕಳ ಹರ್ಷ ಅಷ್ಟು ಹೆಚ್ಚುತ್ತದೆ. ಹಾಗೆಯೇ ಓದಿದ ಎಲ್ಲರ ಮನೆಯಲ್ಲಿಯೂ ಅರಿಸಿದ ಪುಸ್ತಕಗಳುಳ್ಳ ಪುಸ್ತಕ ಭಂಡಾರಗಳು ಏರ್ಪಡಬೇಕು. ಇಂಥ ಅಭ್ಯಾಸ ಬೆಳೆದರೆ ಅದೇ ಸಾಹಿತ್ಯ ಸೃಷ್ಟಿಗೂ ಪೋಷಕವಾದೀತು. ಎಂದು ಸೂಚಿಸಿದರು.

ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರಲ್ಲೊಬ್ಬರಾದ ಶ್ರೀ ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನವು ಪೂರ್ಣ ಯಶಸ್ವಿಯಾಗುವಂತೆ ಕನ್ನಡ ನಾಡಿನ ಅಧಿದೇವತೆಯು ಕೃಪೆಮಾಡಲೆಂದು ರಾಜ್ಯಪಾಲರು ಹಾರೈಸಿದರು.

ಎಂ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು:—

ತಾರೀಖು 19-1-58 ನೇ ಭಾನುವಾರ ಸಂಜೆ 8 ಗಂಟೆಗೆ ವಿಷಯ ನಿಯಾಮಕ ಸಮಿತಿಯಲ್ಲಿ ಸ್ವೀಕೃತವಾಗಿ ತಾ. 20-1-58 ರ ಸಂಜೆ 7 ಗಂಟೆಗೆ ಸೇರಿದ್ದ ಬಹಿರಂಗ ಅಧಿವೇಶನದಲ್ಲಿ ಅಂಗೀಕೃತವಾದ ನಿರ್ಣಯಗಳು:—

1) ಪರಿಷತ್ತಿನ ಸದಸ್ಯರೂ ಹಿತ ಚಿಂತಕರೂ ಆದ ಈ ಕೆಳಗೆ ಕಾಣಿಸಿರುವ ಮಹನೀಯರು ದೈವಾಧೀನರಾದುದಕ್ಕಾಗಿ ಸಮ್ಮೇಳನವು ದುಃಖವನ್ನು ವ್ಯಕ್ತಪಡಿಸಿ ಅವರ ಸಂಬಂಧೀಕರಿಗೆ ತನ್ನ ಅನುಕಂಪವನ್ನು ಸೂಚಿಸುತ್ತದೆ

1) ಶ್ರೀ ರಾಮಸ್ವಾಮಯ್ಯ ನವರು, ಚಿಕ್ಕಮಗಳೂರು.
2) ಶ್ರೀ ಭೀಮರಾವ್ ಅನಂತರಾವ್ ಕುಲ್ಕರ್ಣಿ ಯವರು, ರಾಣಿಬೆನ್ನೂರು
3) ಶ್ರೀ ಬಿ. ಎ. ಪಾಟೀಲ್ ಅವರು, ಬೆಂಗಳೂರು.
4) ಶ್ರೀ ಕೆ. ಎಸ್ ಅಯ್ಯಣ್ಣಶೆಟ್ಟರು.

2) ಮೈಸೂರು ಸರ್ಕಾರದವರು ಹಿಂದೆ ಕೊಡುತ್ತಿದ್ದಂತೆ ಈ ವರ್ಷವೂ ಮೂರು ಸಾವಿರ ರೂಪಾಯಿಗಳನ್ನು ಕನ್ನಡ ಪರಿಷತ್ತಿನ ಕಾರ್ಯಕ್ರಮಗಳಿಗೂ ಗಮಕ ತರಗತಿಗಳ ವಿಶೇಷ ಪ್ರಚಾರಕ್ಕಾಗಿ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಕ್ಕಾಗಿ ಈ ಸಮ್ಮೇಳನವು ಕೃತಜ್ಞತೆಯನ್ನು ಅರ್ಪಿಸುತ್ತದೆ, ಮತ್ತು ಈ ಹಿಂದೆ ಕೊಡುತ್ತಿದ್ದ ಸಂಸ್ಕೃತಿ ಪ್ರಸಾರ ಕಾರ್ಯಗಳಿಗಾಗಿ 35000/- ರೂಪಾಯಿಗಳನ್ನು ಈ ವರ್ಷಕ್ಕೂ ಇನ್ನುಮುಂದೆಯೂ ಉದಾರವಾಗಿ ಕೊಡಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಆಗ್ರಹದಿಂದ ಪ್ರಾರ್ಥಿಸುತ್ತದೆ.

3) ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿರುವ ಕರ್ನಾಟಕಕ್ಕಾಗಿ ಇನ್ನು ಮುಂದೆ ಏಳು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಈ ಸಮ್ಮೇಳನವು ಮೈಸೂರು ಸರ್ಕಾರವನ್ನು ಪ್ರಾರ್ಥಿಸುತ್ತದೆ.

ಸಮ್ಮೇಳನಾಧ್ಯಕ್ಷರಿಂದ

4) ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಮ್ಮ ನೆರೆಯ ಪ್ರಾಂತಗಳಿಂದ ಪಂಡಿತರುಗಳನ್ನು ಕರೆಸಿ ವಿವಿಧ ಭಾಷಾ ಭಾಂಧವ್ಯವನ್ನು ಬೆಳೆಸಲು ಅನುಕೂಲಗೊಳಿಸುವುದಕ್ಕಾಗಿ ಇಂಡಿಯಾ ಸರ್ಕಾರವನ್ನು ಪ್ರಾರ್ಥಿಸಲಾಗಿತ್ತು. ಅದರು ಅದನ್ನು ನಿರಾಕರಿಸಲಾಗಿ ಈ ಸಮ್ಮೇಳನವು ಖಂಡಿಸಾದಿಸುತ್ತದೆ. ಮತ್ತೊಮ್ಮೆ ಇಂಡಿಯಾ ಸರ್ಕಾರವನ್ನು ಈ ಸಹಾಯವನ್ನು ಒದಗಿಸಿ ಕೊಡಬೇಕೆಂದು ಒತ್ತಾಯ ಪಡಿಸತಕ್ಕದ್ದು.

5) ಬಳ್ಳಾರಿಯ ನೆಲವು ಈ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಉದಾರವಾಗಿ ಧನ ಸಹಾಯ ಮಾಡಿದ ಮೈಸೂರು ಸರ್ಕಾರಕ್ಕೂ, ಮುನಿಸಿಪಾಲಿಟಿ; ಬ್ಯಾಂಕುಗಳು ಇತರ ಖಾಸಗೀ ಸಂಸ್ಥೆಗಳಿಗೂ ಮತ್ತು ಇತರ ಮಹನೀಯರುಗಳಿಗೂ ಈ ಸಮ್ಮೇಳನವು ತನ್ನ ಅನಂತ ಪ್ರಣತಿಗಳನ್ನು ಸಲ್ಲಿಸುತ್ತದೆ.

6) ಕನ್ನಡ ಗ್ರಂಥಕಾರರಿಗೆ ಪ್ರತಿವರ್ಷ ಕೇಂದ್ರ ಅಕಾಡೆಮಿಯವರು ಕೊಡತಕ್ಕ 5 ಸಹಸ್ರ (ಸಾವಿರ) ರೂಗಳ ಬಹುಮಾನವನ್ನು ಈ ವರ್ಷ ಕೊಡದೇ ಇದ್ದುದರ ಬಗ್ಗೆ ಕನ್ನಡ ಸಾಹಿತ್ಯ ಪ್ರಿಯರು ಅಂತುಕೊಂಡು ಈ ವರ್ಷವೂ ಇಷ್ಟು ಮುಂದೆಯೂ ಈ ಬಗೆಯಾಗಿ ನಿಲ್ಲದೇ ಕೇಂದ್ರ ಸರ್ಕಾರದೊಡನೆ ಪ್ರಯತ್ನ ಮಾಡತಕ್ಕದ್ದೆಂದು ಈ ಸಮ್ಮೇಳನ ಅಭಿಪ್ರಾಯ ಪಡುತ್ತದೆ.

7) ಸಾಹಿತ್ಯ ಅಕಾಡೆಮಿಯ ಕನ್ನಡದ ಸಲಹಾ ಸಮಿತಿಯನ್ನು ಪುನರ್ರಚಿಸಿ, ನಾಡಿನ ಎಲ್ಲ ಶ್ರೇಷ್ಠ ಸಾಹಿತಿಗಳಿಗೂ ಪ್ರಯೋಜನ ವಿಮರ್ಶಕರಿಗೂ ಆದರಣೀಯ ಸ್ಥಾನ ಕೊಡುವ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕೆಂದು ಈ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳುತ್ತದೆ.

8) ತೆಲುಗು ಲಿಪಿಯಲ್ಲಿಯಂತೆ ಕನ್ನಡ ಲಿಪಿಯಲ್ಲಿಯೂ ಬಹುಮಟ್ಟಿಗೆ ಹೋಲಿಕೆ ಯಿರುವುದರಿಂದ ಆಂಧ್ರ ಕರ್ನಾಟಕಕ್ಕೆ ಒಂದೇಲಿಪಿಯನ್ನು ಸ್ವೀಕರಿಸುವಂತೆ ಕನ್ನಡ ಪರಿಷತ್ತು ಆಂಧ್ರ ಪರಿಷತ್ತನ್ನೊಡನೆ ಸಹಕರಿಸಿ ನಿರ್ಣಯಕ್ಕೆ ಬಂದು ಮುದ್ರಣಾದಿ ವ್ಯವಹಾರದಲ್ಲಿ ಇಬ್ಬರಿಗೂ ಹೆಚ್ಚಿನ ಅನುಕೂಲವಾದೀತೆಂದು ಈ ಸಭೆ ಅಭಿಪ್ರಾಯಪಡುತ್ತದೆ. ಇದನ್ನು ಲಕ್ಷೀಕರಿಸಿ ಆಂಧ್ರ ಪರಿಷತ್ತಿನ ಸಹಕಾರದೊಡನೆ ಒಂದು ತಜ್ಞ ಸಮಿತಿಯನ್ನು ನಿಯಮಿಸಿ ವಿಚಾರವನ್ನು ಮುಂದುವರಿಸಬೇಕೆಂದು ಈ ಸಭೆಯು ಸೂಚಿಸುತ್ತದೆ.

9) ಕರ್ನಾಟಕದಲ್ಲಿ ಒಂದು ಪ್ರಾಚ್ಯ ಸಂಶೋಧನ ಸರ್ಕಲ್ ಆಗಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಪ್ರಾರ್ಥಿಸುತ್ತದೆ.

10) ಎಕಾಲು ಮೈಸೂರಿನ ಗಡಿಗಳ

೪೦ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು:—

(ಹಿಂದಿನ ಪುಟದಿಂದ)

ಕಾರವಾರ, ಕಾಸರಗೋಡು, ತಾಳವಾಡಿ, ಹೊಸೂರು, ಮದಕಶಿರ, ನೀಲಗಿರಿ ಅಲಮು, ಬೀದರ್, ರಾಯದುರ್ಗ, ಗುಲ್ಬರ್ಗಜಿಲ್ಲೆಯ ಕೆಲವು ಭಾಗ ಆದವಾನಿ ಆಲ್ಕಲಕೋಟೆ, ಜತ್ತ, ದಕ್ಷಿಣ ಸೊಲ್ಲಾಪುರ ಇತ್ಯಾದಿ ಕನ್ನಾಟಕಕ್ಕೆ ಸೇರಬೇಕಾದ ಭಾಗಗಳನ್ನು ಆದಷ್ಟು ಬೇಗನೆ ನಮ್ಮ ರಾಜ್ಯಕ್ಕೆ ಸೇರಿಸುವ ಕಾರ್ಯಕ್ರಮವನ್ನು ಮೈಸೂರು ಸರ್ಕಾರ ಕೈಕೊಳ್ಳಬೇಕೆಂದು ಈ ಸಮ್ಮೇಳನವು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತದೆ.

11) ಕಾಸರಗೋಡು ತಾಲ್ಲೂಕಿನ ಚಂದ್ರಗಿರಿ ನದಿಯ ಉತ್ತರ ಭಾಗವನ್ನು ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂಬ ಧಾರವಾಡದಲ್ಲಿ ನೇದ 39 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯವನ್ನು ಈ ಸಮ್ಮೇಳನವು ಪುನಃ ಧೃಢೀಕರಿಸುತ್ತದೆ. ಅಲ್ಲದೆ ಈ ಕುರಿತು ಸೂಕ್ತ ಕಾರ್ಯ ಕ್ರಮಗಳನ್ನು ತೀವ್ರವೇ ಕೈಗೊಳ್ಳುವಂತೆ ಮೈಸೂರು ಕೇರಳೋಭಯ ಪ್ರಾಂತ ಸರಕಾರಗಳನ್ನು ಕೇಂದ್ರ ಸರ್ಕಾರವನ್ನು ಆಸ್ಥಹಪೂರ್ವಕವಾಗಿ ವಿನಂತಿಸುತ್ತದೆ.

ಕನ್ನಡ ನಾಡಿಗೆ ಕನ್ನಡ ನಾಡು, ಕನ್ನಡ ಜನಾಂಗ ಕನ್ನಡ ಸಾಂಸ್ಕೃತಿಕ ದ್ಯೋತಕವಾದ ಕರ್ನಾಟಕ ಎಂಬ ಹೆಸರೇ ಇರುವಂತೆ ಮಾಡಬೇಕಾಗಿ ಕೇಂದ್ರ ಸರಕಾರವನ್ನು ಶಾಸನ ಸಭೆಗಳನ್ನೂ ಈ ಸಮ್ಮೇಳನವು ಒತ್ತಾಯಪಡಿಸುತ್ತದೆ. ಕನ್ನಡ ಜನತೆಯ ಪ್ರತಿನಿಧಿವಾದ ಈ ಸಂಸ್ಥೆಯು ಕಳೆದ ವರ್ಷವೇ ಈ ವಿಷಯವಾಗಿ ನಿರ್ಣಯವನ್ನು ಪಡಿಸಿದ್ದರೂ, ಆ ವಿಷಯವು ಇನ್ನೂ ಕಾರ್ಯಗತವಾಗದಿದ್ದುದರಿಂದಾಗಿ ಈ ಸಮ್ಮೇಳನವು ತನ್ನ ಕರ್ತವ್ಯವನ್ನು ಪೂರ್ತಿಪಡಿಸುತ್ತ ಈ ವಿಷಯವು ಇನ್ನೂ ಹೆಚ್ಚುಕಾಲ ಜನತೆಯಲಾರದೆಂಬುದನ್ನೂ ಅತ್ಯಗ್ರಹಪೂರ್ವಕವಾಗಿ ತಿಳಿಸುತ್ತದೆ

13) ಹಿಂದಿಯನ್ನು 1965 ರೊಳಗಾಗಿ ಭಾರತದ ಅಧಿಕೃತ ಭಾಷೆಯಾಗಿ ಮಾಡುವಂತೆ ಭಾರತೀಯ ಘಟನೆಯಲ್ಲಿರುವ ತೊಡಕು ಸಧ್ಯದಲ್ಲಿಯೆ ನಿವಾರಣೆಯಾಗಲಿ ವಲ್ಲವೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

14) ಮೈಸೂರು ರಾಜ್ಯ ಸರ್ಕಾರದವರು ಬೇಗನೆ ಕನ್ನಡ ಭಾಷೆಯನ್ನು ರಾಜ್ಯ ಸರ್ಕಾರದ ಅಧಿಕೃತವಾದ ಭಾಷೆಯೆಂಬೂ, ನ್ಯಾಯಾಲಯದ [ಕೋರ್ಟ್] ಭಾಷೆಯೆಂದೂ ಆಜ್ಞಾಪಿಸಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

15) ಕರ್ನಾಟಕಕ್ಕೆ ಒಂದು ಅಂಚೆ ತೆರಿ ಮಂಡಳವನ್ನು [Karnat k Post & Telegraph ( ) ಜನರಲ್ ಸಿಯಂಕ್ಷಿಂದಲ್ಲಿ ಕೂಡಲೇ ಸ್ಥಾಪಿಸಬೇಕೆಂದು ಈ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತದೆ.

16) ಕರ್ನಾಟಕದ ವೈಜ್ಞಾನಿಕರಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಸರ್ಕಾರವು ಸಂಶೋಧನೆಗಾಗಿ ವರ್ಷಕ್ಕೆ 2000 ಮತ್ತು 1000 ರೂಪಾಯಿಗಳ ಬಹುಮಾನಗಳನ್ನು ಕೊಡುತ್ತಿತ್ತು. ಮುಂಬರುವ ಕರ್ನಾಟಕದ ಸಾಹಿತ್ಯ ವೈಜ್ಞಾನಿಕ ಸಮ್ಮೇಳನಗಳಿಗೆ ಈ ಬಹುಮಾನಗಳು ಸಲ್ಲಿಸಿದವು. ಮದರಾಸು ಸರ್ಕಾರದವರು ಈರೀತಿ ಕೊಡುತ್ತಿದ್ದರು. ಕರ್ನಾಟಕ ನಿರ್ಮಾಣವಾದ ಬಳಿಕ ಈ ಪದ್ಧತಿಯನ್ನು ನಮ್ಮ ರಾಜ್ಯ ಸರ್ಕಾರದವರು ಮುಂದುವರಿಸಲಿಲ್ಲ. ಈ ಯೋಜನೆಯನ್ನು ನಮ್ಮ ಸರ್ಕಾರ ಮುಂದುವರಿಸಿ ಇಡೀ ರಾಜ್ಯಕ್ಕೆ ಅನ್ವಯಿಸಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

17) ಆಂಧ್ರ ಸರ್ಕಾರದ ಸರ್ವಿಸ್ ಕಮಿಷನ್ನಿನಲ್ಲಿ ತೆಲುಗು ಮತ್ತು ಉರ್ದು ಭಾಷೆಗಳು ಮಾತ್ರ ಇರುವುದರಿಂದ ಅದಕ್ಕಾಗಿ ತ್ರಿಕರಣ 3 ತಾ. ಕನ್ನಡಿಗರಿಗೆ ಬಹಳ ತೊಂದರೆಯಾಗುವುದರಿಂದ ಸರ್ವಿಸ್ ಕಮಿಷನ್ನಿನಲ್ಲಿ ಕನ್ನಡವನ್ನು ಸೇರಿಸಿಕೊಳ್ಳಬೇಕೆಂದು ಈ ಸಭೆಯು ಆಂಧ್ರ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತದೆ.

ಸಾಧಕ ವಿಧಾನಗಳನ್ನು ಶಿಫಾರಸು ಮಾಡಲು ವಿಶ್ವವಿದ್ಯಾನಿಲಯ ಗ್ರಾಂಟ್ಸ್ ಕಮಿಷನ್ನನ್ನು ಕೋರಿದರು, ಇಂಗ್ಲೀಷ್ ಸಮಿತಿಯು ಕಳಿಸಿಕೊಡುವ ವರದಿಯಲ್ಲಿ ಮುಖ್ಯ ಶಿಫಾರಸುಗಳನ್ನು ವಿಶ್ವವಿದ್ಯಾನಿಲಯಗಳಿಗೆ ಗ್ರಾಂಟ್ ಕಮಿಷನ್ ಅಂಗೀಕರಿಸಿದೆ.

ಈ ಸಮಿತಿಯು ಮಾಡಿರುವ ಶಿಫಾರಸುಗಳು:—

(1) ವಿಶ್ವವಿದ್ಯಾನಿಲಯಗಳ ಪಟ್ಟವಲ್ಲಿ ಶಿಕ್ಷಣ ಮಾಧ್ಯಮವನ್ನು ಇಂಗ್ಲೀಷಿನಿಂದ ಇತರ ದೇಶೀಯ ಭಾಷೆಗಳಿಗೆ ಬದಲಾಯಿಸುವುದರಲ್ಲಿ ಆತುರ ಮಾಡಬಾರದು.

(2) ಈ ಪರಿವರ್ತನೆಯನ್ನು, ಭಾರತೀಯ ಭಾಷೆಯನ್ನು ಉಚ್ಚ ಅಧ್ಯಯನ ಉದ್ದೇಶಗಳಿಗಾಗಿ, ಸೂಕ್ತರೀತಿಯಲ್ಲಿ ಅಭಿವೃದ್ಧಿಪಡಿಸಿ, ಎಲ್ಲಾ ಅಧ್ಯಯನಗಳಲ್ಲಿಯೂ ಆ ಭಾಷೆಯಲ್ಲಿ ಅಗತ್ಯ ಸಾಹಿತ್ಯವನ್ನು ಬೆಳೆಸಿದ ನಂತರ ಕೈಗೊಳ್ಳಬೇಕು.

(3) ಇಂಗ್ಲೀಷನ್ನು, ಎಲ್ಲಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೂ, ಈ ಪರಿವರ್ತನೆಯಿಂದ ನಂತರವೂ ಅಧ್ಯಯನ ಮಾಡಲೇಬೇಕು.

ಸೆಂಟರ್ ಮಟ್ಟದಲ್ಲಿ, ಇಂಗ್ಲೀಷಿನಲ್ಲಿ ಅಗತ್ಯವಾದ ಬುನಾದಿಯನ್ನು ಹಾಕಬೇಕು.

(5) ಶಾಲೆಗಳಲ್ಲಿ ಇಂಗ್ಲೀಷ್ ಶಿಕ್ಷಣ ವಿಧಾನವನ್ನು ಕೂಲಂಕುಷವಾಗಿ ಪರಿಶೀಲಿಸಿ, ನಂತರ ಶಿಕ್ಷಕರಿಗೆ ತರಬೇತಿ ನೀಡಬೇಕು. ವಿದೇಶಿ ಭಾಷೆಗಳನ್ನು ಅಧ್ಯಯನ ಮಾಡುವುದಕ್ಕೆ ಇರುವ ಎಲ್ಲಾ ಅತ್ಯಾಧುನಿಕ ಬೋಧನಾ ಶಿಕ್ಷಣ ತಂತ್ರಗಳನ್ನು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಒದಗಿಸಬೇಕು.

(6) ಪ್ರೌಢಶಾಲೆಗಳು ಬಾರಾಗಿ, ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸುವುದು ಅಗತ್ಯ. ಭಾರತ ಸರ್ಕಾರ ಅಥವಾ ಸೆಂಟರ್ ಶಿಕ್ಷಣ ಪರಿಷತ್ತು ಈ ಹೊಣೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು.

(7) ಶಾಲೆಗಳ ಮಟ್ಟದಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಬೋಧಿಸುವ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯ ಶಿಕ್ಷಣಾಧಿಕಾರಿಗಳಿಗೆ, ಇಂಗ್ಲೀಷಿನಲ್ಲಿ ವಿಶೇಷ ಪ್ರಾವೀಣ್ಯತೆ ಪಡೆಯಲಿಚ್ಛಿಸುವವರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕು.

(8) ಪ್ರಾಥಮಿಕ ವಿಶ್ವವಿದ್ಯಾನಿಲಯಗಳಲ್ಲಿ ಮೂರು ವರ್ಷಗಳ ಪದವಿ

(4 ನೇ ಪುಟಕ್ಕೆ)

ಇಂಗ್ಲೀಷ್ ಸಮಿತಿಯ ವರದಿ:—

ಇಂಗ್ಲೀಷ್ ಮಾಧ್ಯಮವನ್ನು ಬದಲಾಯಿಸುವುದರಲ್ಲಿ ಆತುರ ಬೇಡ

ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ಶಿಕ್ಷಣ ಮಾಧ್ಯಮವನ್ನು ಬದಲಾಯಿಸುವ ಸಮಸ್ಯೆಯನ್ನು ಪರಿಶೀಲಿಸಲು ರಾಷ್ಟ್ರೀಯ ಇಂಗ್ಲೀಷಿನಲ್ಲಿ ಸಮರ್ಥತೆಯಾಗಿ ಸೃಷ್ಟಿಸಿಕೊಳ್ಳುವ ಸಮಿತಿಯು

ಆಂಗ್ಲೀ ಮಾಧ್ಯಮವನ್ನು ಬದಿಗಿಟ್ಟು ಯಿಸುವುದರಲ್ಲಿ ಅರ್ಥವಿಲ್ಲ

(3 ನೇ ಪುಟದಿಂದ)

ಪರಗತಿಗಳನ್ನು ಅಭ್ಯರಣೆಗೆ ತರಲಿರುವ ದೃಷ್ಟಿಯಿಂದ, ' ಪ್ರೀ ಯೂನಿವರ್ಸಿಟಿ ತರಗತಿಯಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ವಿಶೇಷ ಗಮನವೀಯಬೇಕು.

(9) ಇಂಗ್ಲೀಷ್ ಸಾಹಿತ್ಯದ ಶಿಕ್ಷಣವನ್ನು ಭಾರತೀಯ ಸಾಹಿತ್ಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ನೀಡಬೇಕು. ಆದ್ದರಿಂದ ಅವರು ಭಾರತೀಯ ಭಾಷೆಯಲ್ಲಿಯೇ ವಿಮರ್ಶಾತ್ಮಕ ಚಿಂತನೆಯನ್ನೂ, ಬರವಣಿಗೆಯನ್ನೂ ಪ್ರಚೋದಿಸಲು ಪರಿಣಾಮಕಾರಿಯಾದ ವಿಧಾನವಾಗುವುದು.

(10) ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಇಂಗ್ಲೀಷ್ ಶಿಕ್ಷಣದ ವ್ಯಾಪಂಗ ಅವಧಿ ಮತ್ತು ವಿಧಾನಗಳ ಸಮಸ್ಯೆಯನ್ನು ತಜ್ಞರ ಸಮಿತಿಯು ಪರಿಶೀಲಿಸಿ ಶಿಫಾರಸುಗಳನ್ನು ನೀಡಲಿ, ಅವುಗಳನ್ನು ಎಲ್ಲಾ ವಿಶ್ವವಿದ್ಯಾನಿಲಯಗಳು ಅನುಸರಿಸಲಿ.

(11) ಶಿಕ್ಷಣ ಮಾಧ್ಯಮವು ಇಂಗ್ಲೀಷ್ ಆಗಿರುವ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲೀಷನ್ನು ದ್ವಿತೀಯ ಭಾಷೆಯನ್ನಾಗಿ ಅಂಗೀಕರಿಸಿ, ಆ ಭಾಷೆಯಲ್ಲಿ ಸಾಕಷ್ಟು ಪರಿಶ್ರಮವನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು.

(12) ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಶಿಕ್ಷಕರಿಗೆ ತರಬೇತಿ ನೀಡುವ ಕಾಲೇಜುಗಳಲ್ಲಿ ಭಾಷಾ ಶಾಸ್ತ್ರಕ್ಕೆ ಹೆಚ್ಚಿನ ಗಮನ ನೀಡಬೇಕು.

(13) ಶಿಕ್ಷಣ ಮಾಧ್ಯಮವು ಭಾರತೀಯ ಭಾಷೆಯೇ ಆಗಿದ್ದರೂ ವಿಶ್ವವಿದ್ಯಾನಿಲಯದಲ್ಲಿ ತಮ್ಮ ವಿಷಯದ ದೃಷ್ಟಿಯಿಂದ ಇಂಗ್ಲೀಷ್ ಪುಸ್ತಕಗಳ ಭಾಷೆಯನ್ನಾಗಿ ಉಳಸಿಕೊಳ್ಳಬೇಕು.

ನಿಮಗಿದು ಗೊತ್ತೆ?

1] 1951-52 ರಲ್ಲಿ ಬಾಲಕರು ಮತ್ತು ಬಾಲಕಿಯರಿಗಾಗಿ ಇದ್ದ ಜೂನಿಯರ್ ಬೇಸಿಕ್ ಮತ್ತು ಸೀನಿಯರ್ ಮೂಲ ಶಿಕ್ಷಣ ಶಾಲೆಗಳ ಸಂಖ್ಯೆ 34,878 ಇದ್ದು, 1955-56 ರಲ್ಲಿ 47,813 ಕ್ಕೆ ಏರಿತು.

2] ಈ ಮೂಲ ಶಿಕ್ಷಣ ಶಾಲೆಗಳಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ 1952-53 ರಲ್ಲಿ 50,60,207 ಇದ್ದುದು 55-56 ರಲ್ಲಿ 80,81,524 ಕ್ಕೆ ಏರಿತು.

3] ಭಾರತ ಸರ್ಕಾರದವರು 55 ರಲ್ಲಿ ದೇಶದಲ್ಲಿ ಮೂಲ ಶಿಕ್ಷಣದ ಅಭಿವೃದ್ಧಿಯನ್ನು ಪರಿಶೀಲನೆ ಹಾಗೂ ಅಯಾಯ ಸ್ಥಳದ ಸಮಿಕ್ಷೆ ನಡೆಸಲು ಮೌಲ್ಯ ನಿರ್ಧಾರ ಸಮಿತಿಯೊಂದನ್ನು ನೇಮಿಸಿದ್ದರು. ಈ ಸಮಿತಿಯ ವರದಿಯು ರಾಜ್ಯ ಸರ್ಕಾರಗಳ ಪರಿಶೀಲನೆಯಲ್ಲಿದೆ. ಈ ವರದಿಯಲ್ಲಿನ ಅಂಶಗಳು ಅವರಿಗೆ ಎಷ್ಟರ ಮಟ್ಟಿಗೆ ಅವುಗಳನ್ನು ಆಚರಣೆಯಲ್ಲಿ ತಂದಿವೆ ಎಂಬುದನ್ನು ರಾಜ್ಯ ಸರ್ಕಾರಗಳು ಪರಿಶೀಲಿಸುತ್ತಿವೆ.

ನೆಗಡಿ, ಕೆಮ್ಮು, ಪಮ್ಮು, ಉಬ್ಬಸ ಶೀತಜ್ವರ, ಮಲೇರಿಯಾ, ಮತ್ತು ಎಲ್ಲ ನೋವುಗಳಿಗೆ ದಿವ್ಯಾಮೃತ (ಇನ್‌ಫ್ಲುಯಂಜಾ ಜ್ವರಕ್ಕೆ ನೀರಿನಲ್ಲಿ ೩ ಹೊಟ್ಟು ಹಾಕಿ ಸೇವಿಸಿರಿ)

—ಕಾಶ್ಮೀರು ಅರುಕ್

ಲೇಪನೆ, ಸೇವನೆ - ಎರಡೂ ಸಾಧ್ಯ ಎಲ್ಲಾ ಔಷಧಗಳಲ್ಲೂ ಬೆರೆಯುತ್ತದೆ.

H. S. & Sons, Bellary. ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ನವ ಭಾರತ ಬಳ್ಳಾರಿ
(NATIONALIST WEEKLY)
ಚಂದಾದರಗಳು. Subscription Rates.

ವರ್ಷಕ್ಕೆ ೫—೦—೦ | One Year ೫—೦—೦
ಆರು ತಿಂಗಳಿಗೆ ೩—೦—೦ | Six months ೩—೦—೦
ಅಡ್ವಾನ್ಸ್ ಆಗಿ
ಚಂದಾ ಸ್ವೀಕರಿಸಲಾಗುವುದು | Subscription will not be accepted for less than 6 months

NAVA BHARAT, BELLARY.
(Regd. M. No. 4746)

Sri.

Edited, Printed & Published by T. S. KESHAVA RAO at Nava Bharat Printing Press, Bellary.

ಸಂಚಿಕೆ

ಸೋಮವಾರ, ಡಿಶಂಬರ್ 29--12--1958.

ವರ್ಷ 22
ಸಂಚಿಕೆ 13

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವು

ಗುಲಬರ್ಗಾ ಜಿಲ್ಲಾ ಹಿಂದೀ ಪ್ರಚಾರಕ ಶಿಕ್ಷಣ ಶಿಬಿರ

ಯಾದಗಿರಿ ನಗರದ ಲಿಂಗೇರಿ ಬೋರ್ಡಿಂಗ್‌ನಲ್ಲಿ ಡಿಶಂಬರ್ 13 ಮತ್ತು 14ನೆಯ ಶನಿವಾರ-ಭಾನುವಾರ ಸುಸಂಪನ್ನವಾಗಿದ್ದಿತು. ಕರ್ನಾಟಕ ಹಿಂದೀ ಪ್ರಚಾರ ಸಭೆ-ಧಾರವಾಡದ ಕಾರ್ಯದರ್ಶಿ ಶ್ರೀ ಶ್ರೀಕಂಠಮೂರ್ತಿಯವರು ಪ್ರಾರಂಭೋತ್ಸವದಲ್ಲೂ, ಸಮಾರೋಪದಲ್ಲಿಯೂ ಹಾಜರಿದ್ದು ನೆರೆದ ಹಿಂದೀ ಅಧ್ಯಾಪಕ ಮತ್ತು ಕಾರ್ಯಕರ್ತರಿಗೆ ಹಿಂದೀ ಪ್ರಚಾರದ ಬಗ್ಗೆ ಯೋಗ್ಯ ಸಲಹೆಗಳನ್ನಿತ್ತರು.

ಉದ್ಘಾಟನೆಯ ಅಧ್ಯಕ್ಷರು- ಶ್ರೀ ಸಿದ್ರಾಮರೆಡ್ಡಿ ವಕೀಲ
ಚರ್ಚಾಗೋಷ್ಠಿಯ ,, — ,, ವೈ ವಿರುಪಾಕ್ಷಪ್ಪ
ಕವಿಸಮ್ಮೇಳನ ಮತ್ತು ಭಾಷಾ ,, ಚಂದ್ರಶೇಖರ ಶಾಸ್ತ್ರಿ
ಬಾಂಧವ್ಯಗೋಷ್ಠಿ ವ್ಯಾಕರಣ ತೀರ್ಥ

ಸಮಾರೋಪ:- ,, ಬಿ. ಯಂ. ರಾಮಲಿಂಗಯ್ಯ
ಪ್ರಿನ್ಸಿಪಾಲ ಶಂಕರ ಕಾಲೇಜ

ಶಿಬಿರದಲ್ಲಿ ಭಾಗವಹಿಸಿದ ಹಿಂದೀ ಅಧ್ಯಾಪಕ, ಕಾರ್ಯಕರ್ತ ಮತ್ತು ಹಿಂದೀ ಪ್ರೇಮಿಗಳು

1 ಶ್ರೀಮತಿ ಸುವರ್ಣಾಬಾಯಿ ರಂಜೋಳಗಿ ಗುಲಬರ್ಗ
2 ,, ಜೋಷಿ ,,
3 ಶ್ರೀ ಲಕ್ಷ್ಮಿಪ್ಪ ಕಾಮಾಗಿರಿ ,,
4 ,, ಗೋವಿಂದರಾವ ಕುಲಕರ್ಣಿ ಜೇವರ್ಗಿ
5 ,, ಟಿ. ಬಸಿಸ್ಸ, ಶಹಾಪುರ
6 ,, ಸುಂದರಯ್ಯ, ಸಿಂಧನೂರ
7 ,, ವೆಂಕಪ್ಪಾಚಾರಿ ಜೋಶಿ ,,
8 ,, ಚಂದ್ರಶೇಖರಶಾಸ್ತ್ರಿ ಹುಮನಾಬಾದ
9 ,, ಕೃಷ್ಣಾಚಾರ್ಯಗುಡಿ ಸುರಪುರ
10 ,, ವಿದ್ಯಾಧರ
11 ,, ಜಿ. ಲಕ್ಷ್ಮೀನಾರಾಯಣ
12 ಶ್ರೀ ಯಸ್. ಡಿ. ಕೃಷ್ಣರಾವ್ ರಾಯಚೂರು
13 ,, ಜಿ. ಯಸ್. ಹಿರೇಮಠ ಕೊಪ್ಪಳ
14 ,, ಸರಗು ಕೃಷ್ಣಮೂರ್ತಿ ಬಳ್ಳಾರಿ
15 ,, ಟಿ. ಯಂ. ಕೇಶವನ್ ಶಹಾಬಾದ
16 ,, ಜಿ. ಯನ್ ಜೋಷಿ ಯಾದಗಿರಿ
17 ,, ವೆಂಕಟರಾವು ಸೂಗೂರ ,,
18 ,, ಯಸ್. ಯಸ್. ಕಬ್ಬಿನ್ ,,
19 ,, ರೇವಣ ಸಿದ್ದಪ್ಪ ಆರೂಣಿ ,,
20 ,, ಈಶ್ವರಪ್ಪ ,,
21 ,, ತಾನಾಜಿ ,,
22 ,, ರಂಗಸ್ವಾಮಿ ,,

ಗುಲ್ಬರ್ಗ ಜಿಲ್ಲಾ ಹಿಂದೀ ಪ್ರಚಾರ ಸಮಿತಿ ಅಧ್ಯಕ್ಷ ಶ್ರೀ ಕೋನಪ್ಪನವರು ತಮ್ಮ ಕಾರ್ಯದರ್ಶಿ ಅರುಣಿಯವರ ಕೊಂದಿಗೆ ಸ್ವಯಂಸೇವಕರ ಸಹಾಯದಿಂದ, ಸುವ್ಯವಸ್ಥೆಮಾಡಿದ್ದರು. - ಕವಿಸಮ್ಮೇಳನದಲ್ಲಿ ಅನೇಕ ವಿದ್ವಾಂಸರು ಸ್ವರಚಿತ ಮತ್ತು ಬೇರೆ ಕವಿಗಳು ರಚಿಸಿದ ಕವನಗಳನ್ನೋದಿದರು. ಹಿಂದಿಯಲ್ಲದೆ ಕನ್ನಡ, ಇಂಗ್ಲೀಷು ಸಾಹಿತ್ಯದ ವಿಷಯಕ್ಕೂ ಉಪನ್ಯಾಸಗಳಾದವು. ಪ್ರೊಫೆಸರ್ ಲೋಕೂರ್ ರವರು ಕನ್ನಡ ಸಾಹಿತ್ಯದ ಶ್ರೇಷ್ಠತೆಯನ್ನು, ಪ್ರಿನ್ಸಿಪಾಲ ರಾಮಲಿಂಗಯ್ಯನವರು ಇಂಗ್ಲೀಷು ಸಾಹಿತ್ಯ ಸಮುದ್ರಶಕದ ರತ್ನಗಳನ್ನು ಪ್ರದರ್ಶಿಸಿದರು. ಪಂಡಿತ ವಿದ್ಯಾಧರ್‌ರವರು ಕಬೀರ ಸಾಹಿತ್ಯದ ಜನಪ್ರಿಯತೆಯನ್ನು ಮಂದಟ್ಟು ಮಾಡಿದರು.

ಮುಂಜಲ ಸಂಘಟಕರ ಕಾರ್ಯಾಲಯದಲ್ಲಿ ಎರಡೂ ದಿನಗಳ ಚರ್ಚೆಯಾಗಿ ಹೈದರಾಬಾದ ಕರ್ನಾಟಕದ ವಿಶೇಷ ಪರಿಸ್ಥಿತಿಯು ನಿವೇದಿಸಲ್ಪಟ್ಟಿತು. ಸರ್ಕಾರವು ಸ್ಥಾನಿಕ ಜನರಿಗೆ ಪ್ರೋತ್ಸಾಹ ಕೊಡಬೇಕು ಯೋಗ್ಯತೆಯುಳ್ಳ (ಮಾನ್ಯವಾದ) ಅಧ್ಯಾಪಕರನ್ನೇ ನಿಯುಕ್ತಮಾಡಬೇಕು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಹೈದರಾಬಾದ ಕರ್ನಾಟಕದಲ್ಲಿನ ಬೇರೆ ಸಭೆಗಳಲ್ಲಿ ಉತ್ತೀರ್ಣರಾದವರಿಗೆ ಹೆಚ್ಚಿನ ಪರೀಕ್ಷೆಗಳಲ್ಲಿ ಕೂಡ್ರಲು ಅವಕಾಶ ಮತ್ತು ಸೌಲಭ್ಯಗಳನ್ನೊದಗಿಸಿ ಕೊಡಬೇಕು.

ಶಾಂತಿ, ಸಹನೆ, ವಿಶ್ವಭ್ರಾತೃತ್ವ ಅನುಷ್ಠಾನಕ್ಕೆ ಬರಲಿ

ಪ್ರಧಾನಿ ನೆಹ್ರೂ ಕರೆ

ವಿಶ್ವಭಾರತಿಯಲ್ಲಿ ಘಟಿಕೋತ್ಸವ

ಶಾಂತಿನಿಕೇತನ, 'ವಿಶ್ವಭಾರತಿಯ' ವಿಶ್ವಧ್ಯೇಯಗಳಾದ ಶಾಂತಿ, ಸಹನೆ ಮತ್ತು ಭ್ರಾತೃತ್ವವನ್ನು ಅಂಗೀಕರಿಸಬೇಕೆಂದು ಪ್ರಧಾನಿ ನೆಹ್ರೂರವರು ವಿಶ್ವದ ಜನತೆಗೆ ಮನವಿ ಮಾಡಿಕೊಂಡರು.

ರವೀಂದ್ರನಾಥ ಟಾಗೋರರಿಂದ ಪ್ರಾರಂಭವಾದ "ವಿಶ್ವಭಾರತಿ" ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನಿ ನೆಹ್ರೂರವರು ಭಾಷಣ ಮಾಡುತ್ತ "ಪ್ರಪಂಚವು ಯಾವುದೋ ದಿಕ್ಕಿಗೆ ಕೊಚ್ಚಿಕೊಂಡು ಹೋಗುತ್ತಿದೆ. ಕೆಲವುಬಾರಿ ಒಳ್ಳೆಯ ದಿಕ್ಕಿಗೆ ಮತ್ತೆ ಕೆಲವು ಬಾರಿ ಕೆಟ್ಟ ದಿಸ್ಸಿಗೆ'' ಎಂದರು.

ಶಾಂತಿ ನುರೀಜಿಲೆಯಾಗಿದೆ

"ಶಾಂತಿಯ ಬಗ್ಗೆ ನಾವು ಎಷ್ಟೋ ಮಾತನಾಡಿದರೂ ಸಹ ವಿಶ್ವದಲ್ಲಿ ಶಾಂತಿಯು ನುರೀಜಿಕೆಯಾಗಿದೆ. 'ಯಾರಿಗೂ ಯುದ್ಧಬೇಕಿಲ್ಲವಾದರೂ ಎಲ್ಲಿ ನೋಡಿದರೂ ಬಿಕ್ಕಟ್ಟು. ಕಪನ ಹಾಗೂ ಯುದ್ಧ ಸಿದ್ಧತೆಗಳು ಕಂಡುಬರುತ್ತಿವೆ'' ಎಂದರು.

ಧ್ಯೇಯಗಳನ್ನು ಒಪ್ಪಿಕೊಂಡರೆ

ವಿಶ್ವಭಾರತಿಯ ಧ್ಯೇಯಗಳನ್ನು ಒಪ್ಪಿಕೊಳ್ಳುವದಾದರೆ ಇಂದಿನ ಬಿಕ್ಕಟ್ಟು ಕಸಿಮೆಯಾಗಲು ಸಾಕಷ್ಟು ಸಹಾಯವಾಗುವುದು ಎಂದು ಪ್ರಧಾನಿಯವರು ಹೇಳಿದರು.

ವೈವಿಧ್ಯವೇ ಜೀವನ

"ನಮ್ಮ ಒಳನೀತಿಯ ಜೀವನದಲ್ಲಿ ಧರ್ಮ ಮತ್ತು ವಿದೇಶಾಂಗ ನೀತಿಯಲ್ಲಿಯೂ ಸಹಬಾಳ್ವೆ ಬಗ್ಗೆ ಬಹಳ ಮಾತನಾಡುತ್ತೇವೆ. ಭಾರತದಲ್ಲಿ ಹಲವು ರೀತಿಯ ಜನರಿದ್ದಾರೆ. ಆದರೂ ಸಹ ನಾವು ಒಂದೇ ರಾಷ್ಟ್ರಕ್ಕೆ ಸಂಬಂಧಪಟ್ಟವರಾಗಿದ್ದೇವೆ. ಜೀವನದಲ್ಲಿ ನಾವು ಈ ವೈವಿಧ್ಯತೆಯನ್ನು ಕಾಪಾಡಿಕೊಳ್ಳಲೇಬೇಕು. ಆದನ್ನು ನಾವು ಹಿಸುಕಿಹಾಕಬಾರದು.

"ಇತರರ ಬಗ್ಗೆ ಸಹನೆ ಜೀವನದಲ್ಲಿ ವೈವಿಧ್ಯದೆ ಇರಬೇಕೆಂಬ ವಾದ ಹಾಗೂ ತಮ್ಮ ಅಭಿಪಾತ್ರವನ್ನು ಇತರರ ಮೇಲೆ ಬಲಾತ್ಕಾರವಾಗಿ ಹೊರಿಸಬಾರದೆಂಬ ಉನ್ನತ ಆದರ್ಶದ ಫಲವಾಗಿ ಭಾರತವು ಹಿಂದೆಯೂ ಮತ್ತು ಇಂದೂ ಸಹ ಏಕ ರಾಷ್ಟ್ರವಾಗಿಯೇ ಉಳಿದಿದೆ'' ಎಂದು ತಿಳಿಸಿದ ಪ್ರಧಾನಿಯವರು "ಈ ಆದರ್ಶವು ವಿಶ್ವದ ಇತರ ಭಾಗಗಳಲ್ಲಿಯೂ ಸಹ ಇದೆ ಯಾದರೂ ಅದು ಬಳಕೆಯಲ್ಲಿರುವುದನ್ನು ನಾವು ಕಂಡಿಲ್ಲ. ಆದ್ದರಿಂದಲೇ ಸಹಬಾಳ್ವೆ ಬಗ್ಗೆ ನಾವು ಮಾತನಾಡಿದಾಗ ಅವರು ಆಶ್ಚರ್ಯದಿಂದ ನಮ್ಮೆಡೆಗೆ ನೋಡಿದರು.'' ಎಂದರು.

ಸಹಬಾಳ್ವೆ ಸಡಿಲವಾದಲ್ಲಿ ಸರ್ವನಾಶ.

"ಇತರರ ಅಭಿಪ್ರಾಯಗಳಿಗೆ ಪುರಸ್ಕಾರ ನೀಡದಿದ್ದರೆ ಸಹಬಾಳ್ವೆ ಅಸಾಧ್ಯ. ವಿಶ್ವದಲ್ಲಿ ಸಹಬಾಳ್ವೆ ನೆಲೆಸದಿದ್ದಲ್ಲಿ ಸರ್ವನಾಶ ಖಂಡಿತ ಎಂದರು.

ವಿಶ್ವಬಾಲಕರಾಗಿ

ಪ್ರಧಾನಿ ನೆಹ್ರೂರವರು "ಶರವೇಗದಲ್ಲಿ ಬದಲಾಗುತ್ತಿರುವ ವಿಶ್ವದಲ್ಲಿ ನೀವು ಜೀವಿಸುತ್ತಿರುವಿರೆಂಬುದನ್ನು ಮರೆಯಬೇಡಿ'' ಎಂದು ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡುತ್ತಾ ''ವಿಶ್ವವು ಬದಲಾಯಿಸುತ್ತಿದೆ ಎಂದ ಮೇಲೆ ನೀವೂ ಸಹ ಅದರೊಡನೆಯೇ ಸಾಗಬೇಕು. ಅದರ ದಾರಿಯನ್ನು ನೀವು ಅರಿತುಕೊಂಡು, ನಿಮಗೆ ಸರಿಕಂಡ ದಿಕ್ಕಿಗೆ ಕೆಲವು ಮೇಲೆ ಅದನ್ನು ಕೊಂಡೊಯ್ಯಬೇಕು'' ಎಂದರು.

ರೋಮಾಂಚಕ ವಿಶ್ವ

ಬದು ತುಂಬಾ ಕಷ್ಟತರವಾದ ವಿಶ್ವ. ಕೆಲವುಬಾರಿ ಅದಾಯಕಾರಿಯೂ ಹೌದು ಮೃದು ಸ್ವಭಾವದವರಲ್ಲದ ಅದರೆ ದೈಹಿಕ ಮಾನಸಿಕ, ವಯನಸಿಕ ಮತ್ತು ಆಧ್ಯಾತ್ಮಿಕವಾಗಿ ಕಷ್ಟಗಳನ್ನೂ ಸಮಸ್ಯೆಗಳನ್ನೂ ಎದುರಿಸಬಲ್ಲವರಿಗೆ ಇದು ರೋಮಾಂಚನಕಾರಿಯಾಗಿಯೂ ಇದೆ ಎಂದರು.

ನಿಮ್ಮ ಆದರ್ಶಗಳನ್ನು ಕೈಬಿಡಬೇಕು

"ಯಾವ ರೀತಿಯಲ್ಲೂ ಗೊಣಗದೆ ಭುಜಕ್ಕೆ ಭುಜ ಕೊಟ್ಟು ಕರ್ತವ್ಯಮುಖರಾಗಿ, ಈ ಸಂದರ್ಭದಲಿ ನಿಮ್ಮ ಆದರ್ಶಗಳನ್ನು ಕೈಬಿಡಬೇಡಿ. ಏಕೆಂದರೆ ನಿಮಗೆ ಆದರ್ಶ ವಿಲ್ಲದಿದ್ದಲ್ಲಿ ಧೃಡತೆ ಇಲ್ಲವಾಗುತ್ತದೆ. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದಲ್ಲಿ ವಿಶ್ವವು ತುಂಬಾ ಮುಂದುವರಿದಿದೆ. ದಾಪುವ್ಯನನ್ನು ತೊಡೆದು ಹಾಕುವ ಸಲುವಾಗಿ ಅಧುನಿಕ ವಿಜ್ಞಾನವು ನೂತನವನಿಗೆ ಹೇರಳ ಶಕ್ತಿಯನ್ನು ನೀಡಿದೆ.

ಹದನಿ ಹೊಟ್ಟೆ.....

"ಭೌತಿಕ ಸಮಸ್ಯೆಗಳನ್ನು ನಿವಾರಿಸಲು ವಿಜ್ಞಾನದ ಮತ್ತು ತಾಂತ್ರಿಕಜ್ಞಾನದ ಶಕ್ತಿಯು ಅತ್ಯಗತ್ಯ. ಏಕೆಂದರೆ ಹಸಿವ ಹೊಟ್ಟೆ ಮತ್ತು ಒಣಗಿದ ಗಂಟಲು ಸಾಂಸ್ಕೃತಿಕವಾಗಿ ಯಾಗಲೀ ಎಂದಿಗೂ ಮುಂದುವರಿಯಲಾರವು. ವಿಶ್ವದ ಸಂಪದ್ಭರಿತ ರಾಷ್ಟ್ರಗಳು ಆಧುನಿಕ ತಾಂತ್ರಿಕ ಶಾಸ್ತ್ರ ಮತ್ತು ವಿಜ್ಞಾನದ ಉಪಯೋಗದಿಂದ ತುಂಬಾ ಮುಂದುವರಿದಿವೆ" ಎಂದು ತಿಳಿಸಿದ ನೆಹ್ರೂ ಅವರು ''ಶಸ್ತ್ರ ಸಂಗ್ರಹ ಸ್ಪರ್ಧೆಯಿಂದ ವಿಶ್ವವು ತತ್ಕೆಲ್ಲಾ ಸತ್ವವನ್ನೂ ಕಳೆದು ಕೂಳ್ಳದಿದ್ದಲ್ಲಿ ಬಹುಬೇಗನೆಯಾಗಿಯೇ (೨೦-೩೦ ವರ್ಷಗಳೊಳಗೆ) ಹಿಂದುಳಿವ ರಾಷ್ಟ್ರಗಳೂ ಸಹ ಅಭಿವೃದ್ಧಿ ಹೊಂದುವುವು'' ಎಂದರು.

ಮೈಸೂರು ರಾಜ್ಯದಲ್ಲಿ ಕೈಗಾರಿಕೆ ವಿಸ್ತರಣೆ

ಗಂಧದೆಣ್ಣೆ ಕಾರ್ಖಾನೆ ಬೆಂಗಳೂರು

ಗಂಧದೆಣ್ಣೆ ಉತ್ಪಾದನೆಯನ್ನು ೯೦೦೦ ಪೌಂಡುಗಳಿಗೇರಿಸುವ ಉದ್ದೇಶದಿಂದ್ದ ಕಾರ್ಖಾನೆಯನ್ನು ವಿಸ್ತರಿಸಲು ೧.೮೫ ಲಕ್ಷ ರೂ. ಗಳನ್ನು ಮಂಜೂರು ಮಾಡಲಾಗಿದೆ. ಈ ಯೋಜನೆಯನ್ನು ಪ್ರಚಲಿತ ವರ್ಷದಲ್ಲಿ ಕೈಗೊಳ್ಳಲಾಗುತ್ತಿದ್ದು ಯಂತ್ರೋಪಕರಣಗಳನ್ನು ತರಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಭದ್ರಾವತಿ

ಇದು ದಕ್ಷಿಣ ಭಾರತದಲ್ಲಿ ಉಕ್ಕನ್ನು ತಯಾರಿಸುವ ಏಕಮಾತ್ರ ಕಾರ್ಖಾನೆ

ಆಗಿದೆ ಮತ್ತು ಈ ಪ್ರದೇಶದಲ್ಲಿ ಉಕ್ಕು ಫೌಂಡ್ರಿಕೆ ಕಾರ್ಯಾದಲ್ಲಿ ಮಹತ್ವದ ಪಾತ್ರ ವನ್ನೊಹಿಸಿದೆ.

ಫೆರ್ರೊಸಿಲಿಕಾನ್ ಉತ್ಪಾದನೆಯನ್ನು ೫ ಸಾವಿರ ಟನ್ನುಗಳಿಂದ ೨೦ ಸಾವಿರ ಟನ್ನುಗಳಿಗೆ ಹೆಚ್ಚಿಸಲು ಮಂಡಿಸಿದ ಯೋಜನೆಯನ್ನು ಕೇಂದ್ರ ಸರಕಾರವು ಮಂಜೂರು ಮಾಡಿದೆ. ಫೆರ್ರೊಸಿಲಿಕನ್ ತಯಾರಿಸುವಲ್ಲಿ ಈ ಕಾರ್ಖಾನೆಗೆ ಸಾಕಷ್ಟು ಅನುಭವವು ಮತ್ತು ಬೇಕಾಗುವ ಸೌಕರ್ಯಗಳು ಇವೆ.

ಕ್ಯಾಸ್ಟ್ ಐರನ್ ಸ್ಪನ್ ಪೈಪು ತಯಾರಿಕೆಯ ಯಂತ್ರವನ್ನು ಜೋಡಿಸುವ ಕಾರ್ಯವು ಮುಗಿದಿದೆ. ಈ ಹೊಸ ಯಂತ್ರದ ಜೋಡಣೆಯ ಕಾರ್ಯವನ್ನು ಕೇಂದ್ರ ಸರಕಾರದ ಉಕ್ಕು ಮತ್ತು ಗಣಿ ಖಾತೆ ಮಂತ್ರಿಗಳು ಕಳೆದ ಏಪ್ರಿಲ್ ತಿಂಗಳಲ್ಲಿ ಉದ್ಘಾಟಿಸಿದರು.

ರಾಜ್ಯದ ಹಣಕಾಸಿನ ಕಾರ್ಪೊರೇಷನ್

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ಲಕ್ಷ್ಯರೂ ಗಳನ್ನು ಒದಗಿಸಲಾಗಿದೆ. ಈ ಕಾರ್ಪೊರೇಷನ್ನಿನ ವಿವಿಧ ನಿಯಮುಗಳನ್ನು ಪರಿಶೀಲಿಸಲಾಗುತ್ತಿದ್ದು ಇದು ತೀವ್ರದಲ್ಲಿ ಸ್ಥಾಪಿತವಾಗುವುದೆಂದು ತಿಳಿಸಲಾಗಿದೆ

ಖನಿಜಗಳ ಯೋಜನೆಗಳು

ಕೋಲಾರ ಚಿನ್ನದ ಗಣಿಗಳು:

ರಾಜ್ಯದಲ್ಲಿ ಗಣಿ ಗಳ ಕಾರ್ಯಕ್ರಮಕ್ಕೆ ಹೆಚ್ಚಿನಲುತ್ತೇಜನ ದೊರತಿದೆ. ಕೋಲಾರ ಮತ್ತು ಹಟ್ಟಿಯ ಚಿನ್ನದ ಗಣಿಗಳು ಹೊಸ ಹೊಸ ಯೋಜನೆಗಳನ್ನು ಕೈ ಕೊಂಡು ಮುಂದುವರಿಯುತ್ತಿವೆ. ಈ ಯೋಜನೆಗಳನ್ನು ಕಾರ್ಯದಲ್ಲಿ ತರಲು ಇರುವ ಅಡ್ಡಿ ಆತಂಕಗಳ ಪರಿವೆ ಮಾಡದೆ ಮುಂದುವರೆಯಲಾಗುತ್ತಿದೆ. ಪ್ರಸಕ್ತ ವರುಷದಲ್ಲಿ ಕೋಲಾರ ಚಿನ್ನದ ಗಣಿ ವಿಸ್ತರಣೆಗಾಗಿ ೨೨ ಲಕ್ಷರೂ. ಗಳನ್ನು ಮಂಜೂರು ಮಾತಲಾಗಿದ್ದು ಕಾರ್ಯವು ಜರದಿಂದ ಮುನ್ನಡೆದಿದೆ.

ಇತರ ಖನಿಜಗಳ ಯೋಜನೆ:

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಖನಿಜಗಳ ಅಭಿವೃದ್ಧಿಗಾಗಿ ೪ ಯೋಜನೆಗಳನ್ನು ನಿರ್ಮಿಸಲಾಗಿದೆ ಮತ್ತು ಇವುಗಳಿಗಾಗಿ ೧೯.೮೮ ಲಕ್ಷರೂ. ಗಳನ್ನು ಮಂಜೂರು ಮಾಡಲಾಗಿದೆ. ಈ ಯೋಜನೆಗಳು ಮುಂದುವರೆಯುತ್ತಿವೆ. ಇವುಗಳಲ್ಲಿ ನಾಲ್ಕನ್ನು ಖನಿಜಗಳ ಅಭಿವೃದ್ಧಿ ಮಂಡಲದವರು ಮತ್ತು ಒಂದನ್ನು ಗಣಿ ಮತ್ತು ಭೂಗರ್ಭಶೋಧನೆ ಇಲಾಖೆಯವರು ಕಾರ್ಯಗತ ಮಾಡುತ್ತಿದ್ದಾರೆ.

ರಾಜ್ಯದ ಖನಿಜ ಸಂಪತ್ತಿನ ಪ್ರಮಾಣವನ್ನು ಕಂಡುಹಿಡಿಯಲು ಮತ್ತು ಖನಿಜ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯವನ್ನು ಕೈಕೊಳ್ಳಲು ಹಾಗೂ ಮುಂಬಯಿ, ಮದರಾಸ್, ಕೊಡಗು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಗಣಿಪರಿಶೀಲನೆ ಮತ್ತು ಎಕ್ಸ್‌ಪ್ಲೋರೇಷನ್ ಕಾರ್ಯವನ್ನು ಕೈಕೊಳ್ಳಲು ಧಾರವಾಡ ಮತ್ತು ಕಲಬುರ್ಗಿಗಳಲ್ಲಿ ಪ್ರಾದೇಶಿಕ ಕಚೇರಿಗಳನ್ನು ತೆರೆಯಲಾಗಿದೆ. ಮುಂದಿನ ಅವಧಿಯಲ್ಲಿ ಈ ಪ್ರದೇಶಗಳಲ್ಲಿ ನಿರ್ದಿಷ್ಟ ಯೋಜನೆ ಪ್ರಕಾರ ಕೂಲಂಕಷವಾದ ಸರ್ವೆ ನಡೆಸಲು ಆದೇಶಿಸಲಾಗಿದೆ.

ಗ್ರಾಮ ಮತ್ತು ಕೈಗಾರಿಕೆಗಳು:

ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಉದ್ಯೋಗವನ್ನು ಕಲ್ಪಿಸಿ ಅವರ ಜೀವನ ಮತ್ತು ಆರ್ಥಿಕ ಮಟ್ಟವನ್ನು ಎತ್ತರಿಸಲು ಗ್ರಾಮಾಂತರ ಮತ್ತು ಕುಟ್ಟಿರ ಕೈಗಾರಿಕೆಗಳು ಮಹತ್ವದ ಪಾತ್ರವಹಿಸಿವೆ. ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಮಂಡಳದವರು ಖಾದಿ ಕೇಂದ್ರಗಳ ಹಾಗು ಕೆಲವು ಗ್ರಾಮ ಕೈಗಾರಿಕೆ ಕೇಂದ್ರಗಳ ಜವಾಬ್ದಾರಿಯನ್ನು ನಿರ್ವಹಿಸಿಕೊಂಡಿದ್ದಾರೆ. ಈ ಮಂಡಳವನ್ನು ೧೯೫೨ರ ಸೆಪ್ಟೆಂಬರ್ ತಿಂಗಳಲ್ಲಿ ಸ್ಥಾಪಿಸಲಾಗಿದೆ. ರಾಜ್ಯ ಸರಕಾರ ಮತ್ತು ಖಾದಿ ಹಾಗ್ಯ ಗ್ರಾಮ ಕೈಗಾರಿಕೆ ಕಮೀಷನ್ನಿನ ಧನ ಸಹಾಯದಿಂದ ಈ ಮಂಡಳವು ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದಲ್ಲಿ ಎಂಟು ಕೈಗಾರಿಕಾ ಕೇಂದ್ರಗಳನು ಸ್ಥಾಪಿಸಲಾಗುವುದು. ಇದಕ್ಕೆ ೬೩ ಲಕ್ಷ ರೂ ಲಕ್ಷ ರೂ.ಗಳ ವೆಚ್ಚ ಬರುತ್ತದೆ.

೧೯೫೩–೫೪ರಲ್ಲಿ ಭಾರತ ಸರಕಾರವು ಕೈಮಗ್ಗ ಕೈಗಾರಿಕಾ ಅಭಿವೃದ್ಧಿಗಾಗಿ ೬೧.೩೨ ಲಕ್ಷ ರೂ. ಗಳನ್ನು ಮಂಜೂರು ಮಾಡಿದೆ. ಇದರ ಲಾಭ ಪಡೆದು ಧಾರವಾಡ ಜಿಲ್ಲೆಯಲ್ಲಿ ಒಂದು ಸಹಕಾರ ನೂಲುವ ಗಿರಣಿಯನ್ನು, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಕ್ಯಾಲೆಂಡರಿಂಗ್ ಹಾಗು ಫಿನಿಷಿಂಗ್ ಯಂತ್ರಗಳನ್ನು ಮತ್ತು ನೇಕಾರರ ಗೃಹ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಲಾಗುವುದು. ಈವರ್ಷದಲ್ಲಿ ೧೭ ಕುಶಲ ಕೈಗಾರಿಕೆ ಯೋಜನೆಗಳನ್ನು ಕಾರ್ಯಾಚರಣೆಯಲ್ಲಿ ತರಲಾಗುವುದು ಮತ್ತು ಈ ದಿಶೆಯಲ್ಲಿ ಶೃಷ್ಟಿಕರವಾದ ಪ್ರಗತಿಯನ್ನು ಸಾಧಿಸಲಾಗಿದೆ.

ರೇಷ್ಮೆ ಕೈಗಾರಿಕೆ

ಭಾರತದಲ್ಲಿ ರೇಷ್ಮೆಯನ್ನು ಉತ್ಪಾದಿಸುವ ರಾಜ್ಯಗಳಲ್ಲಿ ಮೈಸೂರು ರಾಜ್ಯವು ದೊಡ್ಡದಾಗಿದೆ. ಭಾರತದಲ್ಲಿ ಉತ್ಪಾದನೆಯಾಗುವ ೨೪ ಲಕ್ಷ ಪೌಂಡು ರೇಷ್ಮೆಯಲ್ಲಿ ೧೯ ಲಕ್ಷ ಪೌಂಡು ರೇಷ್ಮೆಯನ್ನು ಮೈಸೂರು ರಾಜ್ಯವೇ ಉತ್ಪಾದಿಸುತ್ತದೆ. ಮೈಸೂರು ರಾಜ್ಯದಲ್ಲಿ ಇದು ಪ್ರಮುಖ ಕುಟ್ಟೀರ ಕೈಗಾರಿಕೆಯಾಗಿದೆ ಯಲ್ಲದೆ ಸುಮಾರು ೧೦ ಲಕ್ಷಜನರ ಜೀವನೋಪಾಯವೂ ಆಗಿದೆ. ಹಿಪ್ಪಲಿ ಗಿಡ ಬೆಳೆಯುವ ಕ್ಷೇತ್ರದಲ್ಲಿ ಹೆಚ್ಚಳ ಉಂಟಾಗುತ್ತಲೇ ಇದೆ. ಇದು ೧೯೫೨ರ ಮಾರ್ಚ ತಿಂಗಳ ಕೊನೆಯ ಭಾಗದಲ್ಲಿ ೧ ಲಕ್ಷ ೬೦ ಸಾವಿರ ಎಕರೆಗಳಷ್ಟಾಗಿದೆ. ಮೈಸೂರು ಸರಕಾರವು ಈ ಪ್ರಮುಖ ಕೈಗಾರಿಕೆಯ ಅಭಿವೃದ್ಧಿಗೆ ಎಲ್ಲ ವಿಧದ ಸಹಾಯ ನೀಡುತ್ತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೈಗಾರಿಕೆ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರಚಿಸಿದೆ ಮತ್ತು ೧೫೩ ಲಕ್ಷ ರೂ. ಗಳ ವೆಚ್ಚದ ೩೩ ಯೋಜನೆಗಳಿಗೆ ಮಂಜೂರಿ ಕೊಟ್ಟಿದೆ. ಇವುಗಳಲ್ಲಿ ಹಲವಾರು ಯೋಜನೆಗಳಿಗೆ ಕೇಂದ್ರ ಸರಕಾರದ ಹಣಸಹಾಯ ದೊರತಿದೆ. ಈ ಯೋಜನೆಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಕಾರ್ಯರೂಪಕ್ಕೆ ತರಲು ಬೇಕಾಗುವ ಎಲ್ಲ ಕಾರ್ಯಕ್ರಮಗಳನ್ನು ತೀವ್ರಗತಿಯಿಂದ ಕೈಕೊಳ್ಳಲಾಗಿದೆ ಈಗಾಗಲೇ ಈ ಯೋಜನೆಗಳಿಗೆ ೩೨ ಲಕ್ಷ ರೂ. ಗಳನ್ನು ವೆಚ್ಚಮಾಡಲಾಗಿದೆ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಅದರ ಮಟ್ಟವನ್ನು ಸುಧಾರಿಸುವ ಹಾಗೂ ಉತ್ಪಾದನೆಯ ವೆಚ್ಚವು ನಾನಾ ಹಂತಗಳಲ್ಲಿ ಕಡಿಮೆ ಮಾಡುವುದೇ ಈ ಯೋಜನೆಗಳ ಮುಖ್ಯ ಗುರಿಯಾಗಿದೆ.

ಈ ಅಭಿವೃದ್ಧಿ ಯೋಜನೆಗಳಲ್ಲದೆ, ಮಳೆ ಬೀಳುವ ಪ್ರದೇಶಗಳಲ್ಲಿ ರೇಷ್ಮೆ ಕೈಗಾರಿಕೆಯಲ್ಲಿ ದುಡಿಯುವವರಿಗೆ ಹಿಪ್ಪಲಿ ಮರದ ವ್ಯವಸಾಯಕ್ಕೆ ಅನುಕೂಲವಾಗು

ನವಭಾರತ

ಸೋಮವಾರ, ಜನವರಿ 12–1–1959.

ವರ್ಷ 22
ಸಂಚಿಕೆ 14

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಶೇಷವರಾವು

ಕಾಂಗ್ರೆಸ್ ಅಧ್ಯಕ್ಷ ಶ್ರೀ ಧೇಬರ್ ರವರ

ಒಳನೇ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷ ಭಾಷಣ

ಜೀವನದ ಕೆಳ ಮಟ್ಟದಲ್ಲಿರುವವರನ್ನು ಮೇಲೆತ್ತುವ ಮಹತ್ತರ ಕಾರ್ಯ ಸಾಧನೆಯು ಕೈಚಾಚಿ ನಿಂತಿದೆ ! ಈಗಿನ ದೇಶದ ಪರಿಸ್ಥಿತಿಯ ಒತ್ತಾಸೆಯನ್ನು ಪೂರೈಸಲು ಸಿದ್ದರಾಗದಿದ್ದಲ್ಲಿ ಮುನ್ನುಗ್ಗಲು ಸಾಧ್ಯವಿಲ್ಲ. ಇಂಥ ಸಾಧನೆಯಾಗದಿದ್ದರೆ, ಒಂದಲ್ಲ ಒಂದು ರೀತಿಯ ಅಲ್ಲೋಲ ಕಲ್ಲೋಲ ಪರಿಸ್ಥಿತಿ ಸಂಭವಿಸುವುದು ಖಂಡಿತ.

—ಎಂದು, ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಧೇಬರ್‌ರವರು ಒಳನೇ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷ ಭಾಷಣ ಮಾಡುತ್ತ ಕಾಂಗ್ರೆಸ್ಸಿಗರ ಹಾಗೂ ಜನತೆಯ ಮುಂದಿರುವ ಬೃಹತ್ ಕಾರ್ಯದಬಗ್ಗೆ ತೀವ್ರ ಎಚ್ಚರಿಕೆಯನ್ನಿತ್ತರು.

ಕಾಲವು ನಮಗೆ ವ್ಯತಿರಿಕ್ತವಾಗಿ ಸಾಗುತ್ತಲಿದೆ. ನಾವು ಭಯಂಕರ ವೇಗದಲ್ಲಿ ಹಾರುತ್ತಲಿರುವ ಜಗತ್ತಿನೊಡನೆ ಸಮ ರ್ಥನೀಯವಾಗಿ ಸಾಗಬೇಕಾಗಿದೆ.

—ಎಂದು ಶ್ರೀ ಧೇಬರ್ ನುಡಿದರು.

ಟೀಕಾಕಾರರಿಗೆ ಉತ್ತರ

ಕಾಂಗ್ರೆಸ್ಸನ್ನು, ಕಾಂಗ್ರೆಸ್ ಸರಕಾರವನ್ನೂ ಟೀಕಿಸುತ್ತಿರುವವರಿಗೆ ಉತ್ತರ ಈ ಜನರು ದೇಶದಮುಂದಿರುವ ಬೃಹತ್ ಸಮಸ್ಯೆಯನ್ನು ಅರ್ಥಮಾಡಿಕೊಂಡಿದೆ ಈ ರೀತಿ ಟೀಕಿಸುತ್ತಿರಲಿಲ್ಲವೆಂದು ಸ್ಪಷ್ಟ ಪಡಿಸಿದರು 'ಈ ಜನರಿಗೆ ಈ ಬೃಹತ್ ಸಮಸ್ಯೆಯಬಗ್ಗೆ ಸರಿಯಾದ ಅರಿವಾಗಿದ್ದರೆ, ಈಗ ಮಾಡುತ್ತಿರುವ ರೀತಿಯಲ್ಲಿ ಟೀಕೆ ಮಾಡುತ್ತಲಿರಲಿಲ್ಲವೆಂದು ನಂಬುತ್ತೇನೆ.' ಎಂದು ನುಡಿದರು.

ಎಲ್ಲರ ಸಹಕಾರಬೇಕು

ಕತ್ತಿನ ಎತ್ತರ ಕಷ್ಟಗಳಲ್ಲಿ ಮುಳುಗಿ ಜೀವನರಂಗದಲ್ಲಿ ಸರ್ವರೀತಿಯ ಹೋರಾಟ ನಡೆಸುತ್ತಲಿರುವ ಜನತೆಗೆ ಎಲ್ಲ ಕ್ಷೇತ್ರಗಳ ಎಲ್ಲಬಗೆಯ ಧೀಶಕ್ತಿಗಳನ್ನೂ ಧೈರ್ಯ ಮೇಧಾವಿಗಳ ಸಹಾಯ ಸಹಕಾರಗಳು ಬೇಕಾಗಿದೆ. ಭಾರತವು ಇದನ್ನು ಅವಶ್ಯ ಕ್ಷಿಸುತ್ತದೆ.

ಖಾಸಗಿ ಕ್ಷೇತ್ರದ ಸಹಕಾರ ಬೇಕು

ಖಾಸಗಿ ಕ್ಷೇತ್ರದಿಂದ ಸರಿಯಾದ ತಿಳಿವಳಿಕೆ ಹಾಗೂ ಸಹಕಾರದ ಭಾವನೆಯನ್ನೂ ಅಪೇಕ್ಷಿಸುವುದಾಗಿ ಕೇಳಿಕೊಂಡ ಶ್ರೀ ಧೇಬರ್‌ರವರು—

"ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಯಾರೊಬ್ಬರನ್ನೂ ಕೊಂದರೆಗೀಡುಮಾಡುವ ಅಥವಾ ಹಿಂಸಿಸುವ ಇಚ್ಛೆಯಿಲ್ಲ. ಕೈಗಾರಿಕಾಕ್ಷೇತ್ರದಲ್ಲಿ ದೇಶಾಭಿಮಾನವಿಲ್ಲ ವೆಂದಾಗಲೀ ಜನತೆಯಮೇಲೆ ಪ್ರೀತಿ ಇಲ್ಲವೆಂದಾಗಲೀ ಭಾವಿಸುವುದಿಲ್ಲ.'

"ಕಾಂಗ್ರೆಸ್ಸಿನ ಮುಂದೆ ದೇಶದ ಸಮಗ್ರ ಜೀವನ ಚಿತ್ರರೂಪಿತವಾಗಿದೆ. ಈ ಜೀವನವನ್ನು, ಎಲ್ಲರ ಸಹಕಾರದಿಂದ ಉನ್ನತಗೊಳಿಸುವ ಕಾರ್ಯದಲ್ಲಿ ಭಾಗಿ ಆಗಲು ಅಪೇಕ್ಷಿಸುತ್ತದೆ"

—ಎಂದು ತಿಳಿಸಿದರು.

ಯೋಜಿತ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ

"ರಾಷ್ಟ್ರೀಕರಣದ ವಿರುದ್ಧ ಘೋಷಣೆಗಳೂ, ಖಾಸಗಿ ಕೈಗಾರಿಕಾ ಕ್ಷೇತ್ರದ ವಿರುದ್ಧ ಘೋಷಣೆಗಳೂ ಈಗ ಕಡಿಮೆಯಾಗುತ್ತಲಿರುವುದು ಸಂತೋಷದ ಸಂಗತಿ.

"ಪ್ರಜಾಪ್ರಭುತ್ವ ಹಾಗೂ ಯೋಜನೆಗಳ ಮತ್ತು ಖಾಸಗಿ ಕ್ಷೇತ್ರ ಹಾಗೂ ಸಮಾಜವಾದಿ ಮಾದರಿ ಸಮಾಜಗಳ ಪರಸ್ಪರ ವಿರೋಧನೆ ಭಾವಗಳು ಈಗ ಕಡಿಮೆಯಾಗಿ ನಮ್ಮ ಯೋಜನಾ ಧಾರೆಯನ್ನು ಕುಂಠಿತಗೊಳಿಸುವುದು ನಿಲ್ಲುತ್ತಲಿದೆ. ಭಾರತದಲ್ಲಿ ಒಂದೇ ಒಂದು ಆರ್ಥಿಕ ವ್ಯವಸ್ಥೆ ಇದೇ ಹಣದ ಪೂರೈಕೆಯು ಖಾಸಗಿಯಾಗಿಯೆ ಆಗುತ್ತಿರಲಿ, ಸಾರ್ವಜನಿಕ (ಸರ್ಕಾರ) ವಾಗಿಯೇ ಆಗುತ್ತಿರಲಿ ಆದು ಯೋಜಿತ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಾಗಿದೆ."

—ಎಂದು ಸ್ಪಷ್ಟಪಡಿಸಿದರು

ಸದ್ಯದಲ್ಲಿಯೇ ಆಧ್ಯಕ್ಷ ಗದ್ದುಗೆಯಿಂದ ಇಳಿಯಲಿರುವ ಶ್ರೀ ಧೇಬರ್‌ರವರು ತಮ್ಮ ೧೫,೦೦೦ ಶಬ್ದಗಳ ದೀರ್ಘ ಭಾಷಣದಲ್ಲಿ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿದರು. ತಮ್ಮ ಭಾಷಣದ ಬಹುಭಾಗವನ್ನು ದೇಶದ ಬೃಹತ್ ಸಮಸ್ಯೆಗಳನ್ನು ಅವುಗಳನ್ನು ಎದುರಿಸುವ ರೀತಿಯನ್ನು ವಿವರಿಸಿದರು. ದ್ವಿತೀಯ ಯೋಜನೆಯ ಉಳಿದ ಕಾಲಾವಧಿಯಲ್ಲಿ ಸಾಧಿಸಬೇಕಾದ ಪ್ರಗತಿಯನ್ನು ವಿವರಿಸಿ ವ್ಯವಸಾಯಕ್ಕೋತ್ಸವವು ಅಧಿಕಗೊಳ್ಳಬೇಕೆಂದೂ ಸಣ್ಣ ಪುಳತಾಯ ಯೋಜನೆಯುತೀವ್ರಗೊಳ್ಳಬೇಕೆಂದೂತಿಳಿಸಿದರು.

ವರ್ಗ ಮತ್ತು ಜಾತಿ ನಿರ್ನಾಮವಾಗಬೇಕು.

ನೆಹ್ರೂ ಸ್ಪಷ್ಟೋಕ್ತಿ.

ಅಭ್ಯಂಕರನಗರ,

ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳನ್ನು ನೋಡಿ, ರಾಕೆಟ್‌ಗಳು ಚಂದ್ರನತ್ತ ಹೋಗುತ್ತಿರುವುದನ್ನು ಗಮನಿಸಿ ಎಂದು ಪ್ರಧಾನಿ ನೆಹ್ರೂ ಅವರು ವಿಜ್ಞಾನ ನಿಯಾಮಕ ಸಮಿತಿಯಲ್ಲಿ ಯೋಜನೆಯ ಬಗ್ಗೆ ಮಂಡಿಸಲಾದ ನಿರ್ಣಯದ ಬಗ್ಗೆ ಮಾತನಾಡುತ್ತ ತಿಳಿಸಿದರು.

ಅಮೆರಿಕವಲ್ಲಿ ಬಂಡವಾಳ ಶಾಹಿ ಸಮಾಜ ಇದೆ ಅಲ್ಲಿಯೇ ವರ್ಗ ರಹಿತ ಸಮಾಜ ನಿರ್ಮಾಣದ ಬಗ್ಗೆ ಮಾತುಗಳು ಕೇಳ ಬರುತ್ತಿವೆ ಭಾರತದಲ್ಲಿ ಸಮತಾವಾದ ನಿಲ್ಲಬೇಕಾದರೆ ವರ್ಗ ಮತ್ತು ಜಾತಿಗಳು ನಿರ್ನಾಮವಾಗಬೇಕು ಎಂದೂ ಶ್ರೀ ನೆಹ್ರೂ ತಿಳಿಸಿದರು.

ಓಟರುಗಳಿಗೆ ಗುರುತಿನ ಚೀಟಿ

ಉದಯಪುರ ಜ. ೮

ನಗರ ಪ್ರದೇಶಗಳಲ್ಲಿ ಓಟರುಗಳಿಗೆ ಅವರ ಭಾವ ಚಿತ್ರಗಳಿರುವ ಗುರುತಿನ ಚೀಟಿಗಳನ್ನು ಕೊಡುವ ಬಗ್ಗೆ ಅಖಿಲ ಭಾರತ ಜುನಾವೆಣಾಧಿಕಾರಿಗಳ ಸಮ್ಮೇಳನ ನಿನ್ನೆ ಪರ್ಯಾಲೋಚಿಸಿತು

ಬೊಂಬಾಯಿ, ಕಲ್ಕತ್ತ ಮತ್ತು ಮದ್ರಾಸುಗಳಂತಹ ಭಾರಿ ನಗರಗಳಲ್ಲಿ ಕೆಲವು ಅರಿವಿದ ಕ್ಷೇತ್ರಗಳಲ್ಲಿ ಮೊದಲು ಈ ಗುರುತಿನ ಚೀಟಿ ಪದ್ಧತಿಯನ್ನು ಪ್ರಾಯೋಗಿಕವಾಗಿ ಜಾರಿಗೆ ತರುವ ನೋಡಬೇಕೆಂದು ಸಮ್ಮೇಳನ ಸಲಹೆ ನೀಡಿದೆ.

ದಿನಕ್ಕೆ ಸಾವಿರ ಟನ್ ಬೀಡು ಕಬ್ಬಿಣ

ಭಿಲೈ ರೂರ್ಕೆಲಾಗಳಲ್ಲಿ ಈ ತಿಂಗಳಿನಿಂದ ಉತ್ಪನ್ನ

ರಾಯಪುರ.

ಭಿಲೈ ಮತ್ತು ರೂರ್ಕೆಲಾ ಉಕ್ಕಿನ ಕಾರ್ಖಾನೆಗಳಲ್ಲಿ ಈ ತಿಂಗಳ ಕೊನೆಯ ವೇಳೆಗೆ ಪ್ರತಿ ದಿನ ಒಂದು ಸಾವಿರ ಟನ್ ಗಳಷ್ಟು ಬೀಡು ಕಬ್ಬಿಣದ ತಯಾರಿಕೆ ಆರಂಭವಾಗುವುದೆಂದು ಕೇಂದ್ರ ಕಬ್ಬಣ ಮತ್ತು ಉಕ್ಕಿನ ಶಾಖೆಯ ಪಟಿವರಾದ ಸರ್ದಾರ್ ಸ್ವರ್ಣಸಿಂಗ್ ನಿನ್ನೆ ಇಲ್ಲಿ ತಿಳಿಸಿದರು.

ರೂರ್ಕೆಲಾದಿಂದ ಇಲ್ಲಿಗೆ ಬಂದಿರುವ ಸಚಿವರು ಇಲ್ಲಿ ಪ್ರತಿಕೋದ್ಯೋಗಿಗಳೊಡನೆ ಮಾತನಾಡುತ್ತಾ ಮೇಲ್ಕಂಡಂತೆ ತಿಳಿಸಿದರು.

ಮನುಷ್ಯನಿರುವ ರಾಕೆಟ್ ಹಾರಿಸಲು ರಷ್ಯದ ಯತ್ನ

ರಾಕೆಟ್‌ನಲ್ಲಿ ಮನುಷ್ಯನನ್ನು ಕೂಡಿಸಿ ಬಾಹ್ಯಾಂತರಿಕ್ಷಕ್ಕೆ ಹಾರಿಸುವ ಪ್ರಯತ್ನವನ್ನು ರಷ್ಯವಾಡುತ್ತಿದೆ. ಈ ರೀತಿಯ ಪ್ರಯೋಗವನ್ನು ಕೈಗೊಳ್ಳಲು ಬಾಹ್ಯಾಂತರಿಕ್ಷಕ್ಕೆ ಹಾರಿಸಲ್ಪಡುವ ಮನುಷ್ಯನಿಗೆ ತರಬೇತಿಯನ್ನು ಕೊಡಲಾಗುತ್ತಿದೆ.

ಎಂದು ರಷ್ಯನ್ ವಿಜ್ಞಾನಿ ಪ್ರೊ|| ಅನಟೋಲಿ ಬಲಗೊನರೋವ್ ಅವರು ಟೆಲಿಫೋನ್ ಭೇಟಿಯ ಮೂಲಕ ತಿಳಿಸಿದ್ದಾರೆ. ಅಮೆರಿಕದ ವಾರಪತ್ರಿಕೆ ಡೈಲಿ ಮಿರರ್ ಸ್ಟೇಮ್ ಎಂಬ ಪತ್ರಿಕೆಗೆ ಕೊಟ್ಟ ಭೇಟಿಯಲ್ಲಿ ಮೇಲ್ಕಂಡಂತೆ ತಿಳಿಸಿದ್ದಾರೆ.

ತರಬೇತಿಯಾಗುತ್ತಿರುವವನ ಹೆಸರು ಐವಾನ್ ಇಗೋರ್‌ಸಿ ಎಂದು ಹೆಸರು ಈತನಿಗೆ ೩೦ ವರ್ಷ ವಯಸ್ಸಾಗಿದೆ. ಈತ ಅವಿವಾಹಿತ ಮತ್ತು ಇವನು ೬ ಅಡಿ ೩ ಅಂಗುಲ ಎತ್ತರವಿದ್ದು ೧೯೦ ಪೌಂಡು ತೂಕವಿದ್ದಾನೆ.

ಈ ವರ್ಷದ ಸೆಪ್ಟೆಂಬರ್ ತಿಂಗಳನಲ್ಲಿ ಶುಕ್ರ ಮಂಗಳ ಗ್ರಹಗಳಿಗೂ ಚಂದ್ರಗ್ರಹಕ್ಕೂ ಮನುಷ್ಯನಿರುವ ರಾಕೆಟ್ ಕಳಿಸುವ ಆಲೋಚನೆ ಇದೆ. ಎಂದು ಪ್ರೊಫೆಸರ್ ಅವರು ತಿಳಿಸಿದ್ದಾರೆ.

ನಾವು ಈಗ್ಗಾಗಲೆ ಪರೀಕ್ಷೆಗಳನ್ನಾಗಲೇ ಪ್ರಯೋಗಗಳನ್ನಾಗಲೀ ಮಾಡಬೇಕಾಗಿಲ್ಲ. ಅವಶ್ಯವಾಗಿ ಮಾಡಬೇಕಾದ್ದೆಲ್ಲ ಮಾಡಿದ್ದಾಗಿದೆ. ಜೂನ್ ತಿಂಗಳನಲ್ಲಿ ಶುಕ್ರಗ್ರಹಕ್ಕೆ ರಾಕೆಟ್ ಕಳಿಸುವ ಸಿದ್ಧತೆ ಮಾಡುತ್ತಿದ್ದೇವೆ, ಎಂದೂ ಅವರು ತಿಳಿಸಿದರು

ಗ್ರಾಮಾಂತರ ಸೌಕರ್ಯಕ್ಕೆ ಬೃಹತ್ ಯೋಜನೆ

ಮೈಸೂರು

ರಾಜ್ಯದ ಮಂತ್ರಿಮಂಡಲದಲ್ಲಿ ಪರಿಶೀಲನೆ

ಐದು ಸಹಸ್ರಕ್ಕಿಂತ ಕಡಿಮೆ ಜನ ಸಂಖ್ಯೆಯುಳ್ಳ ರಾಜ್ಯದ ಪ್ರತಿಯೊಂದು ಗ್ರಾಮಕ್ಕೂ ರಸ್ತೆ ಸೌಕರ್ಯ ಮತ್ತು ಕುಡಿಯುವ ನೀರಿನ ಅನುಕೂಲತೆಯನ್ನೊದಗಿಸುವುದಕ್ಕಾಗಿ, ಮುಖ್ಯಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ತಯಾರಿಸಿರುವ ಬೃಹತ್ ಯೋಜನೆಯು ಮಂತ್ರಿಮಂಡಲದ ಪರಿಶೀಲನೆಯಲ್ಲಿದೆಯೆಂದು ತಿಳಿದುಬಂದಿದೆ.

ಶ್ರೀ ಚನ್ನಬಸಪ್ಪನವರು ತಯಾರಿಸಿರುವ ಈ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸಲು ಸುಮಾರು ೧೪ ಕೋಟಿ ರೂ. ಗಳಷ್ಟು ವೆಚ್ಚ ತಗಲುವುದೆಂದು ಹೇಳಲಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ಸೌಕರ್ಯ ಮತ್ತು ಕುಡಿಯುವ ನೀರಿನ ಅನುಕೂಲತೆಯನ್ನೊದಗಿಸುವ ದುರಾಷ್ಟೀಯ ವಿಸ್ತರಣ ಯೋಜನೆಯ ಚಟುವಟಿಕೆಗಳಲ್ಲಿ ಸೇರಿದೆ ಯಾದ್ದರಿಂದ ಈ ಬಗ್ಗೆ ಪ್ರತ್ಯೇಕ ಯೋಜನೆ ಕೈಗೊಳ್ಳುವ ಮೊದಲು ಕೇಂದ್ರ, ಸರ್ಕಾರದೊಡನೆ ವಿಚಾರವಿನಿಮಯ ಮಾಡಿಕೊಳ್ಳುವುದು ಅಪೇಕ್ಷಣೆಯೆಂದು ಅಭಿಪ್ರಾಯ ಮಂತ್ರಿ ಮಂಡಲದಲ್ಲಿದೆಯೆನ್ನಲಾಗಿದೆ.

ಉಪಾಧ್ಯಾಯರಿಗೆ ಪ್ರಶಸ್ತಿ

ಭಾರತದ ಕೇಂದ್ರ ಶಿಕ್ಷಣ ಶಾಖೆಯಿಂದ ತಿಳಿದು ಬಂದಿರುವಂತೆ ಈ ವರ್ಷ ಪ್ರಜಾರಾಜ್ಯದಿನೋತ್ಸವದಿಂದ (ಜನವರಿ ೨೬) ಪ್ರತಿ ವರ್ಷ ಭಾರತದ ವಿವಿಧ ಭಾಗಗಳ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ನಿಷ್ಕಾಂತ ಸೇವೆಗಾಗಿ ರಾಷ್ಟ್ರಪತಿಗಳ ಪ್ರಶಸ್ತಿ ಪ್ರದಾನ ಮಾಡಲು ನಿರ್ಧರಿಸಿದ್ದಾಗಿ ವರದಿಯಾಗಿದೆ.

Nava Bharati
EDITOR—T. R. KESHAVA RAO.

ಸೋಮವಾರ 12—1—1959.

ಕೈ॥ ನಾಡಗೌಡರ ಮರಿಬಸವನಗೌಡರು

ಬಳ್ಳಾರಿ ಜಿಲ್ಲೆಯ ಸಾರ್ವಜನಿಕ ಜೀವನಕ್ಕೆ ಈವಾರ ದೊಡ್ಡ ಪೆಟ್ಟುಬಿತ್ತಗಲಿದೆ ಸಮಾಜಸೇವೆ, ಗ್ರಾಮನಿರ್ಮಾಣ ಉದ್ಧಾರ, ರೈತರ ಉನ್ನತಿಗಾಗಿ ಸುಮಾರು 40 ವರ್ಷಗಳಿಗಿಂತಲೂ ಹೆಚ್ಚಿಗೆ ಪರಿಶ್ರಮಿಸಿ, ತಮ್ಮ ಕಾರ್ಯದ ಸಾಫಲ್ಯತೆಯನ್ನು ನೋಡಿ — ಅಸುವನ್ನು ನೀಗಿದವರು ಕುರುಗೋಡಿನ ಶ್ರೀ ನಾಡಗೌಡರ ಮರಿಬಸವನಗೌಡರು.

ಕಳೆದ 30 ವರ್ಷಗಳಿಂದ ಪರಿಚಿತರಿದ್ದು, ಅವರಪ್ರತಿಯೊಂದು ಕಾರ್ಯದಲ್ಲಿ ಸಹಭಾಗಿಗಳಾಗಿ, ಅವರ ಔದಾರ್ಯದಿನ ಬಂಧುತ್ವ, ಸರಕಾರ–ಸಾರ್ವಜನಿಕರ ಅನ್ಯಾಯಗಳನ್ನು ಮುಚ್ಚು ಮರೆ ಇಲ್ಲದೆ ಪ್ರತಿಭಟಿಸುವ ಧಿಟ್ಟತನಗಳಿಂದ ಪಾತಕಲಿತು ಕೊನೆಯ ಗಳಿಗೆಯಲ್ಲಾದರೂ, ಪರ್ಸನಲ್ ಧಾರ್ಢ್ಯವು 'ನವ ಭಾರತ' ಸಂಪಾದಕರಿಗೆ ಲಭ್ಯವಾಗದೆ, ಅತೀವ ವಿಷಾದವುಂಟುಮಾಡಿದೆ.

ಶ್ರೀಯುತರು ಮನೆತನಕ್ಕೆ ಸೇರಿದ್ದರೂ, ಅವರ ಸಂಸ್ಕೃತಿಯು ಉಚ್ಚಮಟ್ಟದ್ದಾ ಕುರುಗೋಡು ಫಿರ್ಕಾದ ಗ್ರಾಮಗಳವರು ಅವರಿಗೆ ನಿರಂತರವಾಗಿ ಕೃ[illegible]ರಾಗಿರ ಬೇಕಾದರೂ, ಅವರ ಕಾ[illegible]ತೃವು ಇಡೀದೇಶದ ಕಲ್ಯಾಣವನ್ನ[illegible]ದಿ[illegible]ಂದಿ ದ್ದಿತು. 1930-31ರ ವ[illegible]ದ ಯವರ ಉಪ್ಪಿನ ಸತ್ಯ[illegible] ನಂತರ ಕುರುಗೋಡಿ ಗಳ ಮುಂದೆ ನಡೆದ ಬೆಳೆ[illegible] 1941 ಕೊನೆಯ ಅಂದೋಲನ ಇವು[illegible] ಭಾಗವಹಿಸಿದ್ದರು[illegible] ಕೈಲಾದ ಸಹಾಯ[illegible] ಜಿಲ್ಲೆಯ ರೈತರ ಸ[illegible] ಕುರುಗೋಡು ಫ[illegible] ಬಸವಪ್ರಗೌಡರ ಅ[illegible] ವಾಗಿ, ಮೊಳಕೆಯ[illegible]

ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿ ತುಂಗಭದ್ರಾ ಯೋಜನೆಯು ಕಾರ್ಯಗತವಾಗುವ ಪೂರ್ವದಲ್ಲಿ ಸಂಭವಿಸಿದ ಕ್ಷಾಮಗಳೂ ತದನಂತರ ನಿವಾರಣಾ ಕಾರ್ಯಗಳೂ ಕುರುಗೋಡಿನಿಂದಲೇ ಪ್ರಾರಂಭವಾದವು. ಬಳ್ಳಾರಿ ಜಿಲ್ಲೆಯನ್ನು ಸಂದರ್ಶಿಸಿದ ಯಾವ ದೊಡ್ಡ ಅಧಿಕಾರಿಗಳಾಗಲಿ, ಕಾಂಗ್ರೆಸ್ ನಾಯಕರಾಗಲಿ ಕುರುಗೋಡಿಗೆ ಹೋಗಿ ಶ್ರೀಗೌಡರ ಅತಿಥ್ಯವನ್ನು ಸ್ವೀಕರಿಸದೆ ಹಿಂದಿರುಗಲಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾಕ್ಟರ್ ರಾಜೇಂದ್ರ ಪ್ರಸಾದರು (ನಮ್ಮ ರಾಷ್ಟ್ರಪತಿ) ಸಹ ಕ್ಷಾಮನಿವಾರಣಾ ಕಾರ್ಯಗಳನ್ನು ಪರಿಶೀಲಿಸಲು ಕುರುಗೋಡಿಗೆ ದಯಮಾಡಿಸಿದ ಕೀರ್ತಿಯು ಗೌಡರದೇ !

ಜಾತೀಯತೆಯ ಗಂಧವನ್ನೇ ಚಿಕ್ಕಂದಿನಿಂದಲೂ ಅರಿಯದೇ, ಸಕಲ ಜಾತಿಗಳ ವರ ಹಿತಚಿಂತಕರಾದ ಕಾರಣವೇ ಇವರ ಸದನಕ್ಕೆ ಎಲ್ಲ ಜಾತಿಗಳವರೂ ಸಮಾನ ಶ್ರೇಣಿಯಲ್ಲಿ ಅಗಮಿಸಿ ಸಮಾನವಾದ ಗೌರವಾದರ ಸ[illegible]ಕೆ ಪಡೆಯುತ್ತಿದ್ದರು.

ಕಷ್ಟಕಾಲಗಳಲ್ಲಿ ರೈತವೃಂದವು ಇವರಿಗೆ ಧಾವಿಸಿ ಧನ ಧಾನ್ಯ ಸಹಾಯವನ್ನು ಪಡೆಯುತ್ತಿದ್ದಿತು. ಕುರುಗೋಡು ಭಾಗಕ್ಕೆ ಯಾವ ಪಾರ್ಟಿಯವರೇ ಹೋಗಲಿ, ಗೌಡರು ನಿರ್ದಾಕ್ಷಿಣ್ಯವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರೂ ಆತಿಥ್ಯ ಸತ್ಕಾರದಲ್ಲಿ ಕುಂದು ಮಾಡಲಿಲ್ಲ

ಕೊನೆಯವರಿಗೂ ನಿಷ್ಠಾವಂತ ಕಾಂಗ್ರೆಸಿಗರಾಗಿ, ತಮ್ಮನ್ನು ಅರಸಿದ್ದರೂ ಬೇಕೆಯವರಾಗಿ ದುಡಿದರು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅಧಿಕಾರ ಲಾಸೆಗಾಗಿ ಜಾಯಿಕೊಡೆಗಳಂತೆ ಬೆಳೆದು ಸಂಸ್ಥೆಯಲ್ಲಿ ಸೇರಿದ ಕೃತಕ ಪ್ರಾದಿಧಾರಿಗಳನ್ನು ಇವರು ನಿಷ್ಕರುಣವಾಗಿ ಟೀಕಿಸುತ್ತಿದ್ದರು ಅಧಿಕಾರ ವರ್ಗದಲ್ಲೂ ಸಮಾಜದಲ್ಲೂ ಬೆಳೆದು ಬರುತ್ತಿದ್ದ ಲಂಚಗುಳಿತನವನ್ನು ನಿರೋಧಿಸಲು ಪ್ರತಿಬಂಧಕ ಕೋಪಾಯಗಳನ್ನು ಗಂಭೀರವಾಗಿ ಆಲೋಚಿಸುತ್ತಿದ್ದರು.

ಭಗವಂತನ ಲೀಲೆ

ಮೃತರ ಆತ್ಮಕ್ಕೆ ಚಿರಶಾಂತಿಯು ಲಭಿಸಲಿ

ಬಳ್ಳಾರಿ ವಯೋವೃದ್ಧರ ಮರಣ
ಶ್ರೀ ವಡ್ಡೇ ಹುಲುಗಪ್ಪ

ಬಳ್ಳಾರಿ ನಗರದ ಅತಿವೃದ್ಧರಲ್ಲೊಬ್ಬರಾದ ಶ್ರೀ ವಡ್ಡೇ ಹುಲುಗಪ್ಪನವರು ಕಳೆದವಾರ ಸ್ವರ್ಗಸ್ಥರಾದರು. ಇವರಿಗೆ 100 ವರ್ಷಗಳ ವಯಸ್ಸಾಗಿದ್ದಿತೆಂದು ತಿಳಿದುಬಂದಿದೆ.

ದಿವಂಗತರು ಅನೇಕ ವರ್ಷಗಳ ಕಾಲ ಮುನಿಸಿಪಲ್ ಕೌನ್ಸಿಲರಾಗಿದ್ದರು. ನಗರದ ಧರ್ಮಕಾರ್ಯಗಳಲ್ಲೆಲ್ಲ ಭಾಗವಹಿಸಿ ಉತ್ಸವದ ಕಾರ್ಯಗಳಲ್ಲಿ ಮುಂದೆ ಇರುತ್ತಿದ್ದರು. ಈ ವೃದ್ಧರ ಉತ್ಸಾಹ, ದೇಹಶಕ್ತಿ ಕಾರ್ಯ ಪಟುತ್ವ ನೋಡಿ ತರುಣರೂ, ಬೆಟ್ಟು ಕಚ್ಚುತ್ತಿದ್ದರು. ದಿವಂಗತರಿಗೆ ಮಕ್ಕಳೂ, ಮೊಮ್ಮಕ್ಕಳೂ ಬೇಕಾದಂತೆ ಇದ್ದಾರೆ. ಇವರ ಆತ್ಮಕ್ಕೆ ದೇವರು ಶಾಂತಿಕೊಡಲಿ.

ಪೋಸ್ಟ್ ಆಫೀಸುಗಳಲ್ಲಿ 'ಚೆಕ್' ಮೂಲಕ ವ್ಯವಹಾರ

ಬಳ್ಳಾರಿಯ ಸಬ್ ಪೋಸ್ಟ್ ಆಫೀಸುಗಳಲ್ಲಿ ಸೇವಿಂಗ್ಸ್ ಬ್ಯಾಂಕ್ ಹಣವಿಟ್ಟವರು ತಮ್ಮ ಇನ್ನು ಮೇಲೆ 'ಚೆಕ್' ಮೂಲಕ ಹಣವನ್ನು ಹಿಂದೆ ಪಡೆಯಬಹುದಾಗಿದೆ. ಡಿಪಾಜಿಟ್ ನಲ್ಲಿರುವ ಹಣವು ಕನಿಷ್ಟಕ್ಕೆ ೨೦೦ ರೂಪಾಯಿಗಳಿರಬೇಕೆಂದು ನಿರ್ಧರಿಸಲಾಗಿದೆ ಎಂದು ಬಳ್ಳಾರಿ ಪೋಸ್ಟ್ ಮಾಸ್ಟರವರು ತಿಳಿಸುತ್ತಾರೆ.

ಹಳದಿಯ ಎರಡು ಆಣೆ, ಅರ್ಧ ಆಣೆ ಮತ್ತು ತಾಮ್ರಗಳು ಜನವರಿ ೧ ರಿಂದ ಬಳಕೆಯಲ್ಲಿ ಇರುವುದಿಲ್ಲ

ಡಿಸೆಂಬರ್ ೧೧ ರಂದು ಹೊರಬಿದ್ದ ಭಾರತ ಸರ್ಕಾರದ ಪ್ರಕಟಣೆ ಈ ರೀತಿ ತಿಳಿಸುತ್ತದೆ:—

ಕಳೆದ ಜೂನ್ ತಿಂಗಳಲ್ಲಿ ಸಾರಿದಂತೆ ೧೯೫೯ ಜನವರಿ ೧ ರಿಂದ ಹಳದಿಯ ನಿಕ್ಕಲ್ ಹಿತ್ತಾಳೆ ೩-ಆಣೆ, ಅರ್ಧ ಆಣೆ ಮತ್ತು ಒಂದು ತಾಮ್ರದ ಬಿಲ್ಲೆಗಳು ಕಾನೂನು ಸಮ್ಮತವಾದ ನಾಣ್ಯಗಳಾಗಿ

Press,

ವರ್ಗ ಮತ್ತು ಜಾತಿ ನಿರ್ನಾಮವಾಗಬೇಕು.

ನೆಹ್ರೂ ಸ್ಪಷ್ಟೋಕ್ತಿ.

ಅಭ್ಯಂಕರನಗರ,

ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳನ್ನು ನೋಡಿ, ರಾಕೆಟ್‌ಗಳು ಚಂದ್ರನತ್ತ ಹೋಗುತ್ತಿರುವುದನ್ನು ಗಮನಿಸಿ ಎಂದು ಪ್ರಧಾನಿ ನೆಹ್ರೂ ಅವರು ವಿಜ್ಞಾನ ನಿಯಾಮಕ ಸಮಿತಿಯಲ್ಲಿ ಯೋಜನೆಯ ಬಗ್ಗೆ ಮಂಡಿಸಲಾದ ನಿರ್ಣಯದ ಬಗ್ಗೆ ಮಾತನಾಡುತ್ತ ತಿಳಿಸಿದರು.

ಅವಿರಿಕದಲ್ಲಿ ಬಂಡವಾಳ ಹಾಗು ಸಮಾಜ ಇವೆ ಅಲ್ಪವೇ ವರ್ಗ ರಹಿತ ಸಮಾಜ ನಿರ್ಮಾಣದ ಬಗ್ಗೆ ಮಾತುಗಳು ಕೇಳ ಬರುತ್ತಿವೆ. ಭಾರತದಲ್ಲಿ ಸಮತಾವಾದ ನಿಲ್ಲಬೇಕಾದರೆ ವರ್ಗ ಮತ್ತು ಜಾತಿಗಳು ನಿರ್ನಾಮವಾಗಬೇಕು ಎಂದೂ ಶ್ರೀ ನೆಹ್ರೂ ತಿಳಿಸಿದರು.

ಓಟರುಗಳಿಗೆ ಗುರುತಿನ ಚೀಟಿ

ರಾಯಪುರ ಜ. ೮

ನಗರ ಪ್ರದೇಶಗಳಲ್ಲಿ ಓಟರು ಗಳಿಗೆ ಅವರ ಭಾವ ಚಿತ್ರಗಳಿರುವ ಗುರುತಿನ ಚೀಟಿಗಳನ್ನು ಕೊಡುವ ಬಗ್ಗೆ ಅಖಿಲ ಭಾರತ ಚುನಾವಣಾಧಿಕಾರಿಗಳ ಸಮ್ಮೇಳನ ನಿನ್ನೆ ಪರ್ಯಾಲೋಚಿಸಿತು

ಬೊಂಬಾಯಿ, ಕಲ್ಕತ್ತ ಮತ್ತು ಕಾನ್ಪುರಗಳಂತಹ ಭಾರಿ ನಗರಗಳಲ್ಲಿ ಕೆಲವು ಆರಿಸಿದ ಕ್ಷೇತ್ರಗಳಲ್ಲಿ ಮೊದಲು ಈ ಗುರುತಿನ ಚೀಟಿ ಪದ್ಧತಿಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದು ನೋಡಬೇಕೆಂದು ಸಮ್ಮೇಳನ ಸಲಹೆ ನೂಡಿದೆ.

ದಿನಕ್ಕೆ ಸಾವಿರ ಟನ್ ಬೀಡು ಕಬ್ಬಿಣ

ಭಿಲೈ ರೂರ್ಕೆಲಾಗಳಲ್ಲಿ ಈ ತಿಂಗಳಿನಿಂದ ಉತ್ಪತ್ತಿ

ರಾಯಪುರ.

ಭಿಲೈ ಮತ್ತು ರೂರ್ಕೆಲಾ ಉಕ್ಕಿನ ಕಾರ್ಖಾನೆಗಳಲ್ಲಿ ಈ ತಿಂಗಳ ಕೊನೆಯ

ಮನುಷ್ಯನಿರುವ ರಾಕೆಟ್ ಹಾರಿಸಲು ರಷ್ಯದ ಯತ್ನ

ರಾಕೆಟ್‌ನಲ್ಲಿ ಮನುಷ್ಯನನ್ನು ಕೂಡಿಸಿ ಬಾಹ್ಯಾಂತರಿಕ್ಷಕ್ಕೆ ಹಾರಿಸುವ ಪ್ರಯತ್ನವನ್ನು ರಷ್ಯವೂಡುತ್ತಿದೆ. ಈ ರೀತಿ ವೆ ಟೈನೊಡಲು ಬಾಹ್ಯಾಂತರಿಕ್ಷಕ್ಕೆ ಹಾರಿಸಲ್ಪಡುವ ಮನುಷ್ಯನಿಗೆ ತರಬೇತಿಯನ್ನು ಕೊಡಲಾಗುತ್ತಿದೆ.

ಎಂದು ರಷ್ಯನ್ ವಿಜ್ಞಾನಿ ಪ್ರೊ|| ಅನಟೋಲಿ ಬಲಗೊನರವೋವ್ ಅವರು ಟೆಲಿಫೋನ್ ಭೇಟಿಯು ಮಾಸ್ಕೋದಿಂದ ತಿಳಿಸಿದ್ದಾರೆ. ಆಸ್ಟ್ರಿಯ ವಾರಪತ್ರಿಕೆ ಡೈ ಲ್ಯಾಡ್‌ಸ್ಟೇನ್ ಎಂಬ ಪತ್ರಿಕೆಗೆ ಕೊಟ್ಟ ಭೇಟಿಯಲ್ಲಿ ಮೇಲ್ಕಂಡಂತೆ ತಿಳಿಸಿದ್ದಾರೆ.

ತರಬೇತಿಹೊಂದುತ್ತಿರುವನ ಹೆಸರು ಐವಾನ್ ಇಗೋರ್‌ಸಿ ಎಂದು ಹೆಸರು ಈತನಿಗೆ ೩೦ ವರ್ಷ ವಯಸ್ಸಾಗಿದೆ. ಈತ ಅವಿವಾಹಿತ ಮತ್ತು ಇವನು ೬ ಅಡಿ ೨ ಅಂಗುಲ ಎತ್ತರವಿದ್ದು ೧೬೦ ಪೌಂಡು ತೂಕವಿದ್ದಾನೆ.

ಈ ವರ್ಷದ ಸೆಪ್ಟೆಂಬರ್ ತಿಂಗಳನಲ್ಲಿ ಶುಕ್ರ ಮಂಗಳ ಗ್ರಹಗಳಿಗೂ ಚಂದ್ರಗ್ರಹಕ್ಕೂ ಮನುಷ್ಯನಿರುವ ರಾಕೆಟ್ ಕಳಿಸುವ ಆಲೋಚನೆ ಇದೆ. ಎಂದು ಪ್ರೊಫೆಸರ್ ಅವರು ತಿಳಿಸಿದ್ದಾರೆ.

ನಾವು ಇನ್ನೂ ಪರೀಕ್ಷೆಗಳನ್ನಾಗಲೀ ಪ್ರಯೋಗಗಳನ್ನಾಗಲೀ ಮಾಡಬೇಕಾಗಿಲ್ಲ. ಅವಶ್ಯವಾಗಿ ಮಾಡಬೇಕಾದ್ದೆಲ್ಲ ಮಾಡಿದ್ದಾಗಿದೆ. ಜೂನ್ ತಿಂಗಳನಲ್ಲಿ ಶುಕ್ರಗ್ರಹಕ್ಕೆ ರಾಕೆಟ್ ಕಳಿಸುವ ಪದ್ಧತಿ ಮಾಡುತ್ತಿದ್ದೇವೆ, ಎಂದೂ ಅವರು ತಿಳಿಸಿದರು

ವೇಳೆಗೆ ಪ್ರತಿ ದಿನ ಒಂದು ಸಾವಿರ ಟನ್ ಗಳಷ್ಟು ಬೀಡು ಕಬ್ಬಿಣದ ತಯಾರಿಕೆ ಆರಂಭವಾಗುವುದೆಂದು ಕೇಂದ್ರ ಕಬ್ಬಿಣ ಮತ್ತು ಉಕ್ಕಿನ ಶಾಖೆಯ ಸಚಿವರಾದ ಸರ್ದಾರ್ ಸ್ವರ್ಣಸಿಂಗ್ ನಿನ್ನೆ ಇಲ್ಲಿ ತಿಳಿಸಿದರು.

ರೂರ್ಕೆಲಾದಿಂದ ಇಲ್ಲಿಗೆ ಬಂದು ಸಚಿವರು ಇಲ್ಲಿ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಮೇಲ್ಕಂಡಂತೆ ತಿಳಿಸಿದರು.

ಗ್ರಾಮಾಂತರ ಸೌಕರ್ಯಕ್ಕೆ ಬೃಹತ್ ಯೋಜನೆ

ಮೈಸೂರು

ರಾಜ್ಯದ ಮಂತ್ರಿಮಂಡಲದಲ್ಲಿ ಪರಿಶೀಲನೆ

ಐದು ಸಹಸ್ರಕ್ಕಿಂತ ಕಡಿಮೆ ಜನ ಸಂಖ್ಯೆಯುಳ್ಳ ರಾಜ್ಯದ ಪ್ರತಿಯೊಂದು ಗ್ರಾಮಕ್ಕೂ ರಸ್ತೆ ಸೌಕರ್ಯ ಮತ್ತು ಕುಡಿಯುವ ನೀರಿನ ಅನುಕೂಲತೆಯನ್ನೊದಗಿಸುವುದಕ್ಕಾಗಿ, ಸಮಾಜ ಕಲ್ಯಾಣ ಖಾತೆಯ ಸಚಿವ ಶ್ರೀ ಹೆಚ್ ಎಂ. ಚನ್ನಬಸಪ್ಪನವರು ತಯಾರಿಸಿರುವ ಬೃಹತ್ ಯೋಜನೆಯು ಮಂತ್ರಿಮಂಡಲದ ಪರಿಶೀಲನೆಯಲ್ಲಿದೆಯೆಂದು ತಿಳಿದುಬಂದಿದೆ.

ಶ್ರೀ ಚನ್ನಬಸಪ್ಪನವರು ತಯಾರಿಸಿರುವ ಈ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸಲು ಸುಮಾರು ೧೨ ಕೋಟಿ ರೂ. ಗಳಷ್ಟು ವೆಚ್ಚ ತಗಲುವುದೆಂದು ಹೇಳಲಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ಸೌಕರ್ಯ ಮತ್ತು ಕುಡಿಯುವ ನೀರಿನ ಅನುಕೂಲತೆಯನ್ನೊದಗಿಸು ದುರಾಷ್ಟ್ರೀಯ ವಿಸ್ತರಣ ಯೋಜನೆಯ ಚಟುವಟಿಕೆಗಳಲ್ಲಿ ಸೇರಿದೆ ಯಾದ್ದರಿಂದ ಈ ಬಗ್ಗೆ ಪ್ರತ್ಯೇಕ ಯೋಜನೆ ಕೈಗೊಳ್ಳುವ ಮೊದಲು ಕೇಂದ್ರ, ಸರ್ಕಾರದೊಡನೆ ವಿಚಾರಿಸಬೇಕಾದುದು ಅಪೇಕ್ಷಣೆಯೆಂಬ ಅಭಿಪ್ರಾಯವು ಮಂತ್ರಿ ಮಂಡಲದಲ್ಲಿದೆಯೆನ್ನಲಾಗಿದೆ.

ಉಪಾಧ್ಯಾಯರಿಗೆ ಪ್ರಶಸ್ತಿ

ಭಾರತದ ಕೇಂದ್ರ ಶಿಕ್ಷಣ ಶಾಖೆಯಿಂದ ತಿಳಿದು ಬಂದಿರುವಂತೆ ಈ ವರ್ಷ ಪ್ರಜಾರಾಜ್ಯದಿನೋತ್ಸವದಿಂದ (ಜನವರಿ ೨೬) ಪ್ರತಿ ವರ್ಷ ಭಾರತದ ವಿವಿಧ ಭಾಗಗಳ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ನಿಷ್ಕಾಂತ ಸೇವೆಗೆ ರಾಷ್ಟ್ರಪತಿಗಳ ಪ್ರಶಸ್ತಿ ಪ್ರಧಾನ ಮಾಡಲು ನಿರ್ಧರಿಸಿದ್ದಾಗಿ ವರದಿಯಾಗಿದೆ.

Nava Bharati
EDITOR-T. G. KESHAVA RAO.

ಸೋಮವಾರ 12—1—1959.

ಕೈ॥ ನಾಡಗೌಡರ ಮರಿಬಸವನಗೌಡರು

ಬಳ್ಳಾರಿ ಜಿಲ್ಲೆಯು ಸಾರ್ವಜನಿಕ ಜೀವನಕ್ಕೆ ಈವಾಗ ಹೊಡ್ಡಪೆಟ್ಟುತಗಲಿದೆ ಸಮಾಜಸೇವೆ, ಗ್ರಾಮೀಣರ ಉದ್ಧಾರ, ರೈತರ ಉನ್ನತಿಗಾಗಿ ಸುಮಾರು 40 ವರ್ಷ ಗಳಿಗಿಂತಲೂ ಹೆಚ್ಚಿಗೆ ಪರಿಶ್ರಮಿಸಿ, ತಮ್ಮ ಕಾರ್ಯದ ಸಾಫಲ್ಯತೆಯನ್ನು ನೋಡಿ — ಅಸುವನ್ನು ನೀಗಿದವರು ಕುರುಗೋಡಿನ ಶ್ರೀ ನಾಡಗೌಡರ ಮರಿಬಸವನಗೌಡರು.

ಕಳೆದ 30 ವರ್ಷಗಳಿಂದ ಪರಿಚಿತರಿದ್ದು, ಅವರಶ್ರತಿಯೊಂದು ಕಾರ್ಯದಲ್ಲಿ ಸಹಧಾಗಿಗಳಾಗಿ, ಅವರ ಔದಾರ್ಯದಿನ ಬಂಧುತ್ವ, ಸರಕಾರ—ಸಾರ್ವಜನಿಕರ ಅನ್ಯಾಯಗಳನ್ನು ಮುಚ್ಚು ಮರೆ ಇಲ್ಲದೆ ಪ್ರತಿಭಟಿಸುವ ಧಿಟ್ಟತನಗಳಿಂದ ಪಾಠಕರಿಗೂ ಕೊನೆಯ ಗಳಿಗೆಯಲ್ಲಾದರೂ, ವರ್ಷನದ ಭಾಗ್ಯವು 'ನವ ಭಾರತ' ಸಂಪಾದಕರಿಗೆ ಲಭ್ಯವಾಗದೆ, ಅತೀವ ವಿಷಾದವುಂಟುಮಾಡಿದೆ.

ಶ್ರೀಮಂತ ಮನೆತನಕ್ಕೆ ಸೇರಿದ್ದರೂ, ಅವರ ಸಂಸ್ಕೃತಿಯು ಉಚ್ಚಸ್ಥಿತಿಯಲ್ಲಿದ್ದ ಕಾರಣೋದ್ಭವ ಧೀರಾವೇಶ ಗ್ರಾಮಗಳವರು ಅವರಿಗೆ ನಿರಂತರವಾಗಿ ಕೃತಜ್ಞರಾಗಿರ ಬೇಕಾದರೂ, ಅವರ ಕಾರ್ಯಕ್ಷೇತ್ರವು ಇಡೀದೇಶದ ಕಲ್ಯಾಣವನ್ನು ಒಳಗೊಂಡಿದ್ದಿತು. 1930-31ರ ಮಹಾತ್ಮ ಗಾಂಧಿಯವರ ಉಪ್ಪಿನ ಸತ್ಯಾಗ್ರಹದಲ್ಲಿ; ತದನಂತರ ಕುರುಗೋಡಿನ ಹೆಂಡದಂಗಡಿಗಳ ಮುಂದೆ ನಡೆದ ಪಿಕೆಟಿಂಗ್‌ನಲ್ಲಿ; 1932 1941 ಕೊನೆಯ 1942 ಆಗಷ್ಟು ಆಂದೋಳನ ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸದಿದ್ದರೂ, ಅದೃಶ್ಯರಾಗಿ ತಮ್ಮ ಕೈಲಾದ ಸಹಾಯ ಮಾಡಿದರು. ಬಳ್ಳಾರಿ ಜಿಲ್ಲೆಯ ರೈತರ ಏಳಿಗೆಯ ಉದ್ಯಮವು ಕುರುಗೋಡು ಧೀರಾವೇಶ ಶ್ರೀ ಮರಿಬಸವನಗೌಡರ ಉದ್ಯಮದಿಂದಲೇ ಬೀಜವಾಗಿ, ಹೊಳಕೆಯಾಗಿ ರೂಪುಗೊಂಡಿತು

ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿ ತುಂಗಭದ್ರಾ ಯೋಜನೆಯು ಕಾರ್ಯಗತವಾಗುವ ಪೂರ್ವದಲ್ಲಿ ಸಂಭವಿಸಿದ ಕ್ಷಾಮಗಳೂ ತದನಂತರ ನಿವಾರಣಾ ಕಾರ್ಯಗಳೂ ಕುರುಗೋಡಿನಿಂದಲೇ ಪ್ರಾರಂಭವಾದವು. ಬಳ್ಳಾರಿ ಜಿಲ್ಲೆಯನ್ನು ಸಂದರ್ಶಿಸಿದ ಯಾವ ದೊಡ್ಡ ಅಧಿಕಾರಿಗಳಾಗಲಿ, ಕಾಂಗ್ರೆಸ್ ನಾಯಕಂಗಾಗಲಿ ಕುರುಗೋಡಿಗೆ ಹೋಗಿ ಶ್ರೀಗೌಡರ ಆತಿಥ್ಯವನ್ನು ಸ್ವೀಕರಿಸದೆ ಹಿಂದಿರುಗಲಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾಕ್ಟರ್ ರಾಜೇಂದ್ರ ಪ್ರಸಾದರು (ನಮ್ಮ ರಾಷ್ಟ್ರಪತಿ) ಸಹ ಕ್ಷಾಮನಿವಾರಣಾ ಕಾರ್ಯಗಳನ್ನು ಪರಿಶೀಲಿಸಲು ಕುರುಗೋಡಿಗೆ ದಯಮಾಡಿಸಿದ ಕೀರ್ತಿಯು ಗೌಡರದೇ।

ಜಾತೀಯತೆಯ ಗಂಧವನ್ನೇ ಚಿಕ್ಕಂದಿನಿಂದಲೂ ತಿರಿಯದೇ, ಸಕಲ ಜಾತಿಗಳ ಪರ ಹಿತಚಿಂತಕರಾದ ಕಾರಣವೇ ಇವರ ಸದನಕ್ಕೆ ಎಲ್ಲ ಜಾತಿಗಳವರೂ ಸಮಾನ ಶ್ರೇಣಿಯಲ್ಲಿ ಆಗಮಿಸಿ ಸಮಾನವಾದ ಗೌರವಾದರ ಸೇವೆ ಪಡೆಯುತ್ತಿದ್ದರು.

ಕಷ್ಟಕಾಲಗಳಲ್ಲಿ ರೈತವೃಂದವು ಇವರಿಗೆ ಧಾವಿಸಿ ಧನ ಧಾನ್ಯ ಸಹಾಯವನ್ನು ಪಡೆಯುತ್ತಿದ್ದಿತು. ಕುರುಗೋಡು ಭಾಗಕ್ಕೆ ಯಾವ ಪಾರ್ಟಿಯವರೇ ಹೋಗಲಿ, ಗೌಡರು ನಿರ್ದಾಕ್ಷಿಣ್ಯವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರೂ ಅತಿಥಿ ಸತ್ಕಾರದಲ್ಲಿ ಕುಂದು ಮಾಡಲಿಲ್ಲ

ಕೊನೆಯವರೆವಿಗೂ ನಿಷ್ಠಾವಂತ ಕಾಂಗ್ರೆಸಿಗರಾಗಿ,ತಮ್ಮನ್ನು ಅರಿತಿದ್ದರೂ ಬೇರೆಯವರೆಗಾಗಿ ದುಡಿದರು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅಧಿಕಾರ ಲಾಸೆಗಾಗಿ ಕಾಯಿಕೊಡೆಗಳಂತೆ ಬೆಳೆದು ಸಂಸ್ಥೆಯಲ್ಲಿ ಸೇರಿದ ಕೃತಕ ಪಾದಿಧಾರಿಗಳನ್ನು ಇವರು ನಿಷ್ಠುರವಾಗಿ ಟೀಕಿಸುತ್ತಿದ್ದರು ಅಧಿಕಾರವರ್ಗದಲ್ಲೂ ಸಮಾಜದಲ್ಲೂ ಬೆಳೆದು ಬರುತ್ತಿದ್ದ ಲಂಚಗುಳಿತನವನ್ನು ನಿರೋಧಿಸಲು ಪ್ರತಿಬಂಧ ಕೋಪಾಯಗಳನ್ನು ಗಂಭೀರವಾಗಿ ಆಲೋಚಿಸುತ್ತಿದ್ದರು.

ಭಗವಂತನ ಲೀಲೆ

ಮೃತರ ಆತ್ಮಕ್ಕೆ ಚಿರಶಾಂತಿಯು ಲಭಿಸಲಿ

ಬಳ್ಳಾರಿ ವಯೋವೃದ್ಧರ ಮರಣ

ಶ್ರೀ ವಡ್ಡೇ ಹುಲುಗಪ್ಪ

ಬಳ್ಳಾರಿ ನಗರದ ಅತಿವೃದ್ಧರಲ್ಲೊಬ್ಬರಾದ ಶ್ರೀ ವಡ್ಡೇ ಹುಲುಗಪ್ಪನವರು ಕಳೆದವಾರ ಸ್ವರ್ಗಸ್ಥರಾದರು. ಇವರಿಗೆ 100 ವರ್ಷಗಳ ವಯಸ್ಸಾಗಿದ್ದಿತೆಂದು ತಿಳಿದುಬಂದಿದೆ.

ದಿವಂಗತರು ಅನೇಕ ವರ್ಷಗಳ ಕಾಲ ಮುನಿಸಿಪಲ್ ಕೌನ್ಸಿಲರಾಗಿದ್ದರು. ನಗರದ ಧರ್ಮಕಾರ್ಯಗಳಲ್ಲೆಲ್ಲ ಭಾಗವಹಿಸಿ ಉತ್ಸವದ ಆಚರ್ಯಗಳಲ್ಲಿ ಮುಂದೆ ಇರುತ್ತಿದ್ದರು. ಈ ವೃದ್ಧರ ಉತ್ಸಾಹ, ದೇಹಶಕ್ತಿ ಕಾರ್ಯ ಪಟುತ್ವ ನೋಡಿ ಕರುಣಾಂ, ಬೆಟ್ಟು ಕಚ್ಚುತ್ತಿದ್ದರು. ದಿವಂಗತರಿಗೆ ಮಕ್ಕಳೂ, ಮೊಮ್ಮಕ್ಕಳೂ ಬೇಕಾದಂತೆ ಇದ್ದಾರೆ. ಇವರ ಆತ್ಮಕ್ಕೆ ದೇವರು ಶಾಂತಿಕೊಡಲಿ.

ಪೋಸ್ಟ್ ಆಫೀಸುಗಳಲ್ಲಿ 'ಚೆಕ್' ಮೂಲಕ ವ್ಯವಹಾರ

ಬಳ್ಳಾರಿಯ ಸಬ್ ಪೋಸ್ಟ್ ಆಫೀಸು ಗಳಲ್ಲಿ ಸೇವಿಂಗ್ಸ ಬ್ಯಾಂಕ್ ಹಣವಿಟ್ಟವರು ಇವರು ಇನ್ನು ಮೇಲೆ 'ಚೆಕ್' ಮೂಲಕ ಹಣವನ್ನು ಹಿಂದೆ ಪಡೆಯಬಹುದಾಗಿದೆ. ಡಿವಾಜಿಟ್‌ನಲ್ಲಿರುವ ಹಣವು ಕನಿಷ್ಠಕ್ಕೆ 200 ರೂಪಾಯಿಗಳಿರಬೇಕೆಂದು ನಿರ್ಧರಿಸಲಾಗಿದೆ ಎಂದು ಬಳ್ಳಾರಿ ಪೋಸ್ಟ್ ಮಾಸ್ಟರ್‌ರವರು ತಿಳಿಸುತ್ತಾರೆ.

ಹಳದಿಯ ಎರಡು ಆಣೆ, ಅರ್ಧ ಆಣೆ ಮತ್ತು ಕಾಸುಗಳು ಜನವರಿ ೧ ರಿಂದ ಬಳಕೆಯಲ್ಲಿ ಇರುವುದಿಲ್ಲ

ಡಿಸೆಂಬರ್ ೧೧ ರಂದು ಹೊರಬಿದ್ದ ಭಾರತ ಸರ್ಕಾರದ ಪ್ರಕಟಣೆ ಈ ರೀತಿ ತಿಳಿಸುತ್ತದೆ:—

ಕಳೆದ ಜೂನ್ ತಿಂಗಳಲ್ಲಿ ಸಾರಿದಂತೆ ೧೯೫೯ ಜನವರಿ ೧ ರಿಂದ ಹಳದಿಯ ನಿಕ್ಕಲ್ ಹಿತ್ತಾಳೆ ೨-ಆಣೆ, ಅರ್ಧ ಆಣೆ ಮತ್ತು ಒಂದು ಕಾಸಿನ ಬಿಲ್ಲೆಗಳು ಕಾನೂನು ಸಮ್ಮತವಾದ ನಾಣ್ಯಗಳಾಗ

ವುದಿಲ್ಲ. ರಿಜರ್ವ ಬ್ಯಾಂಕ್ ಆಫ್ ಇಂಡಿಯಾದ ಎಲ್ಲಾ ಆಫೀಸುಗಳು, ಸರ್ಕಾರಿ ಕೆಲಸದ ನಿರ್ವಾಹವನ್ನು ಸಾಗಿಸುವ ಇಂಡಿಯಾ ರಿಜರ್ವ್‌ಬ್ಯಾಂಕಿನ ಎಲ್ಲಾ ಏಜನ್ಸಿ ಬ್ಯಾಂಕುಗಳು, ಎಲ್ಲಾ ಸರ್ಕಾರಿ ಟ್ರೆಜರಿಗಳು ಮತ್ತು ಸಬ್ ಟ್ರೆಜರಿಗಳು, ೧೯೫೯ ನೇ ಜೂನ್ ೩೦ ರ ವರೆಗೆ ಇವುಗಳನ್ನು ಸಾರ್ವಜನಿಕರಿಂದ ಹಿಂದಕ್ಕೆ ತೆಗೆದುಕೊಳ್ಳುವಂತೆ ಏರ್ಪಾಟಾಗಿದೆ.

ಜನರು ಕೆದರಿಕೊಂಡು ಈ ನಾಣ್ಯಗಳನ್ನು ಕಡಿಮೆ ಬೆಲೆಗೆ ಕೊಟ್ಟು ಬೇಗನೆ ಹೊರದೂಡಲು ದುಡುಕುವ ಕಾರಣವಿಲ್ಲ ಯಾಕೆಂದರೆ ೧೯೫೯ ನೇ ಜೂನ್ ೩೦ ರ ನಂತರವೂ ಪುನಃ ತಳಿಸುವವರೆಗೆ, ಬೊಂಬಾಯಿ, ಕಲ್ಕತ್ತ, ಮದ್ರಾಸು, ಕಾನ್‌ಪೂರ್, ಹೊಸದೆಹಲಿ, ಬೆಂಗಳೂರು ಮತ್ತು ನಾಗಪುರ ನಗರಗಳಲ್ಲಿರುವ ರಿಜರ್ವ್ ಬ್ಯಾಂಕಿನ ಇಶ್ಯೂ ಶಾಖೆಗಳಲ್ಲಿ ಈ ನಾಣ್ಯಗಳನ್ನು ಹಿಂದಕ್ಕೆ ತೆಗೆದು ಕೊಳ್ಳಲು ಏರ್ಪಡಿಸಿದೆ.

ಮೈಸೂರಿನಲ್ಲಿ ೪೮ ಸಹಸ್ರ ಟನ್ನು ಗಳಷ್ಟು ಕಬ್ಬಿಣದ ಅದಿರಿನ ಉತ್ಪಾದನೆ.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮೈಸೂರು ರಾಜ್ಯದಲ್ಲಿ ೪೮,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರಿನ ಉತ್ಪಾದನೆಯಾಗಿದೆ. ಆತಿಂಗಳಲ್ಲಿ ಇಡೀ ದೇಶದಲ್ಲಿ ೪,೫೩,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರಿನ ಉತ್ಪಾದನೆಯಾಗಿದೆ. ಹಿಂದಿನ ತಿಂಗಳು ದೇಶದಲ್ಲಿ ೪,೬೦,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರಿನ ಉತ್ಪಾದನೆಯಾಗಿತ್ತು. ಈ ಸಮಾಚಾರವನ್ನು ಭಾರತೀಯ ಗಣಿಗಳ ಕಾರ್ಯಾಲಯದವರು ಪ್ರಕಟಿಸಿರುವರು.

ಬಿಹಾರ್ ರಾಜ್ಯದಲ್ಲಿ ೧೯೬೬,೦೦೦ ಟನ್ನುಗಳು ಮತ್ತು ಒರಿಸ್ಸಾ ರಾಜ್ಯದಲ್ಲಿ ೧,೩೦,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರಿನ ಉತ್ಪಾದನೆಯಾಗಿತ್ತು. ಮಧ್ಯ ಪ್ರದೇಶ ಮತ್ತು ಆಂಧ್ರ ಪ್ರದೇಶಗಳಲ್ಲಿ ಕ್ರಮಶಃ ೫೩,೦೦೦ ಮತ್ತು ೧೦,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರಿನ ಉತ್ಪಾದನೆಯಾಗಿದೆ.

ಕಳೆದ ಸೆಪ್ಟೆಂಬರ್ ತಿಂಗಳು ೨,೪೪,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರನ್ನು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ೧೧೫,೦೦೦ ಟನ್ನುಗಳಷ್ಟು ಕಬ್ಬಿಣದ ಅದಿರನ್ನು ನಿರ್ಯಾತದ ಮಾರುಕಟ್ಟೆಗೂ ರವಾನಿಸಲಾಯಿತು.

ತೂಕ ಮತ್ತು ಅಳತೆಗಳ ತಯಾರಿಕೆ

ತೂಕ ಅಳತೆಗಳ ವಿಷಯದಲ್ಲಿ ಮೆಟ್ರಿಕ್ ಪದ್ಧತಿಯನ್ನು ಆಚರಣೆಯಲ್ಲಿ ತರಲು ದೇಶದಲ್ಲಿ ತೂಕ ಅಳತೆ ಪ್ರಮಾಣಗಳ ಕಾಯಿದೆ-೧೯೫೬ ಜಾರಿಯಲ್ಲಿ ಬಂದಿದೆಯಷ್ಟೆ. ನವ್ಯರಾಜ್ಯದಲ್ಲಿ ಈ ಕಾಯಿದೆಯು ಬೆಂಗಳೂರು, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ, ಎಲ್ಲ ನಿಯಮಿತ ಪೇಟೆಗಳಲ್ಲಿ ಮತ್ತು ಸರಕಾರಿ ಖಾತೆಗಳಲ್ಲಿ ಅಕ್ಟೋಬರ್ ೧, ೧೯೫೮ ರಿಂದ ಕಾರ್ಯಾಚರಣೆಗೆ ಬಂದಿದೆ. ಮೊದಮೊದಲು ಮೆಟ್ರಿಕ್ ಪದ್ಧತಿಯ ಬಳಕೆಯು ಕೇವಲ ತೂಕದ ವ್ಯವಹಾರಕ್ಕೆ ಅಂದರೆ ತೂಕದ ಬಟ್ಟುಗಳು ಮತ್ತು ತೂಕದ ಸಾಧನೆಗಳಿಗೆ ಅನ್ವಯಿಸುವುದು. ಮೊದಲಿನ ಎರಡು ವರ್ಷ ಹಳೆಯ ಮತ್ತು ಹೊಸ ಎರಡುಪದ್ಧತಿಗಳಿಗೂ ಬಳಕೆಯಲ್ಲಿ ಇರುವವು. ಮೆಟ್ರಿಕ್ ಪದ್ಧತಿಯ ತೂಕದ ಬಟ್ಟುಗಳ ಬಗ್ಗೆ ಬೇಡಿಕೆಯು ಕ್ರಮೇಣ ಹೆಚ್ಚುತ್ತ ಹೋಗುವುದು ಸಹಜವಾಗಿದೆ ಮೈಸೂರು ತೂಕ ಅಳತೆಗಳ (ಕಾರ್ಯಾಚರಣೆ) ನಿಯಮದೆಯು ಕಾಯಿದೆ ಮಂಡಳಗಳಲ್ಲಿ ಪಾಸಾಗಿದ್ದು ಬೇಗನೆ ಬಳಕೆಯಲ್ಲಿ ಬರುವುದು. ಇದರ ಮೇರೆಗೆ ಅವಶ್ಯಕ ಲೈಸನ್ಸ್ ಇಲ್ಲದೆ ತೂಕ ಅಳತೆಗಳನ್ನು ತೂಗುವ ಮತ್ತು ಅಳೆಯುವ ಸಾಧನಗಳನ್ನು ತಯಾರಿಸುವುದು ಮಾರುವದೇ ಮುಂತಾದ ಚಟುವಟಿಕೆಗಳು ಅಪರಾಧವೆನಿಸುವುವು. ಈ ಅಪರಾಧಕ್ಕೆ ಶಿಕ್ಷೆಯಿದೆ ಉತ್ಪಾದಕರಿಗೆ ಲೈಸನ್ಸ್‌ಗಳನ್ನು ರಾಜ್ಯ ಸರಕಾರವು ಕೊಡುವುದು. ಆದರೆ ಕೇಂದ್ರ ಸರಕಾರವು ತಯಾರಿಸುವ ಅಖಿಲಭಾರತ ಪಟ್ಟಿಯಿಂದ ಅವರನ್ನು ಆರಿಸಬೇಕಾಗುತ್ತದೆ. ಅದ್ದರಿಂದ ಲೈಸನ್ಸ್ ದೊರೆತೊಡನೆ ಮೆಟ್ರಿಕ್ ಪದ್ಧತಿಯ ತೂಕ ಅಳತೆಗಳ ಬಟ್ಟುಗಳನ್ನು ತಯಾರಿಸಬಲ್ಲ ಇಂಜಿನಿಯರಿಂಗ್ ಸಂಸ್ಥೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವದು ಅವಶ್ಯಕವಾಗಿದೆ. ಮೈಸೂರು ರಾಜ್ಯದಲ್ಲಿಯ ಇಂಥ ಸಂಸ್ಥೆಗಳು ಅವಶ್ಯಕ ಮಾಹಿತಿಯನ್ನು ನಿರ್ದಿಷ್ಟ ಪ್ರಶ್ನಾವಳಿಗೆ ಉತ್ತರ ರೂಪವಾಗಿ ಬರೆದು ಚೀಫ್ ಮಾರ್ಕೆಟಿಂಗ್ ಆಫೀಸರ್ ಇನ್ ಮೈಸೂರು, ಬೆಂಗಳೂರು, ಈ ವಿಳಾಸಕ್ಕೆ ಕಳುಹಿಸಬೇಕು. ಪ್ರಶ್ನಾವಳಿಯ ಉತ್ತರಗಳ ಎರಡು ಪ್ರತಿಗಳನ್ನು ಕಳುಹಿಸಬೇಕು.

ನವಭಾರತಕ್ಕೆ
ಚಂದಾದಾರರಾಗಿರಿ.

ನವ ಭಾರತ ಬಳ್ಳಾರಿ
(FORTNIGHTLY)

ಚಂದಾದರಗಳು. Subscription Rates.

ವರ್ಷಕ್ಕೆ 5—0—0 One Year 5—0—0

ತಿಂಗಳಿಗೆ 3—0—0 Six months 3—0—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ. Subscription will not be accepted for less than 6 months

Nava Bharat, Bellary.
(Regd. M. No. 4746.)

To

Sri_____

_____

_____

Edited Printed & Published by T. B. KESHAVA RAO, at Nava Bharat Press, Bellary